
# ಅಲಿಮಾರ ಅಕ್ಷರ ಕಲಿತದ್ದು

ಪಕ್ರುದ್ದೀನ್ ಇರುವೈಲ್



ನವಕರ್ನಾಟಕ ಪ್ರಕಾಶನದ ೧೨೩೪ನೇ ಪ್ರಕಟಣೆ

# ಅಲೀಮಾ ಅಕ್ಷರ ಕಲಿತದ್ದು

(ಕಥಾ ಸಂಕಲನ)

ಪಕ್ರುದ್ದೀನ್ ಇರುವೈಲ್

ALIMA AKSHARA KALITADDU
*Collection of short stories in Kannada*
*by Pakruddin Iruvail*

**First Edition : 2001** **Pages : 132** **Price : Rs. 55**

ಮೊದಲನೇ ಮುದ್ರಣ : 2001

© ಲೇಖಕರವು

**ಬೆಲೆ : ರೂ. 55**

ಮುಖಚಿತ್ರ : ರವಿಕುಮಾರ್ ಅಜ್ಜೀಪುರ

ಪ್ರಕಾಶಕರು
**ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್**
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560001
e-mail : nkp@bgl.vsnl.net.in
website : www.navakarnatakabooks.com

ಶಾಖೆಗಳು

| | | | |
|---|---|---|---|
| ಕೆಂಪೇಗೌಡ ವೃತ್ತ | ಕೆ. ಎಸ್. ರಾವ್ ರಸ್ತೆ | ರಾಮಸ್ವಾಮಿ ವೃತ್ತ | ಸ್ಟೇಷನ್ ರಸ್ತೆ |
| ಬೆಂಗಳೂರು - 9 | ಮಂಗಳೂರು - 1 | ಮೈಸೂರು - 24 | ಗುಲ್ಬರ್ಗಾ - 2 |

**0106011234** **ISBN 81-7302-476-6**

Printed by R. S. Rajaram at Navakarnataka Printers, No. 167 & 168, 10th Main, III Phase, Peenya Industrial Area, Bangalore - 560 058 and Published by him for Navakarnataka Publications (P) Ltd., Embassy Centre, Crescent Road, P. B. 5159, Bangalore-560 001 (INDIA). Typeset at Navakaranataka, Bangalore-1

# ಕಥೆಗಳನ್ನು ಓದುವ ಮುನ್ನ

ಮೇಜಿನ ಮೇಲೆ ಒಂದು ಬಿಳಿ ಹಾಳೆ. ಕೈಯಲ್ಲೊಂದು ಲೇಖನಿ ಹಿಡಿದು ನಾನು ಶಬ್ದಗಳನ್ನು ಹುಡುಕಿ ಬರೆಯಲು ಆರಂಭಿಸಿದ್ದು ೧೯೮೫ರಲ್ಲಿ. ಆ ದಿನಗಳಲ್ಲಿ ನಾನು ಓದುತ್ತಿದ್ದುದು ಭೈರಪ್ಪ, ಚಿತ್ತಾಲ, ಶಾಂತಿನಾಥ ದೇಸಾಯಿ, ಅನಂತಮೂರ್ತಿ, ವ್ಯಾಸರಾಯ ಬಲ್ಲಾಳ ಅವರ ಪುಸ್ತಕಗಳನ್ನ. ಅವರ ಪುಸ್ತಕಗಳನ್ನು ಓದುತ್ತಿದ್ದಾಗ ನನ್ನಲ್ಲೊಂದು ತುಡಿತ. ನನ್ನಲ್ಲೊಬ್ಬ ಕತೆಗಾರ ಹುಟ್ಟಿಯಾನೇ ಎಂಬ ಹಂಬಲ. ಆ ಸಮಯದಲ್ಲಿ ನನ್ನಲ್ಲೊಬ್ಬ ಕಥೆಗಾರ ಹುಟ್ಟಿದ ಅನ್ನೋದಕ್ಕಿಂತ ಬಿಳೀ ಹಾಳೆಗಳಲ್ಲಿ ಶಬ್ದಗಳು ಹುಟ್ಟತೊಡಗಿದವು. ಆದರೆ ಅದರಲ್ಲಿ ಕರಗಿ ಹೋದುದೆಷ್ಟೋ. ಪತ್ರಿಕಾ ಕಛೇರಿಗೆ ತಲುಪಿ ಅಲ್ಲೇ ಕಸದ ಬುಟ್ಟಿ ಸೇರಿದವು ಅದೆಷ್ಟೋ....

ಅನಂತರ ನನ್ನ ಮುಂದೆ ಬೊಳುವಾರು, ಕಟ್ಪಾಡಿ, ಸಾರಾ ಮುಂತಾದವರು ಹಾದುಹೋದರು. ಆ ಕ್ಷಣದಲ್ಲಿ ನನ್ನ ಕತೆಗಳು ಪ್ರಕಟವಾಗಲೇಬೇಕೆಂದು ಹಠಹಿಡಿದ ಮಗುವಿನಂತೆ ಬರೆದೆ. ಆ ಪ್ರಯತ್ನದಲ್ಲಿ ಮೊದಲ ಕತೆ ಪ್ರಕಟವಾದಾಗ ಅದೇನೋ ಸಂಭ್ರಮ. ಮೊದಲ ಮಗು ಮುಟ್ಟಿದಂತೆ, ಅಷ್ಟು ಸಂಭ್ರಮ. ಮತ್ತೆ ಮತ್ತೆ ಪುಟ ತೆರೆದು ಅದೇ ಕತೆಯನ್ನು ಓದುವುದು.

ನನ್ನ ಬರವಣಿಗೆಗೆ ಈಗ ಹದಿನಾರರ ಹರಯ. ಆದರೆ ಸಂಕಲನ ರೂಪದಲ್ಲಿ ಬರಬೇಕಾದರೆ ೨೦೦೧ರ ತನಕ ಕಾಯಬೇಕಾಯಿತು. ಮೊದಲಿನಿಂದಲೂ ನನಗೆ ನನ್ನ ಕತೆಗಳ ಒಂದು ಸಂಕಲನ ನವಕರ್ನಾಟಕ ಪ್ರಕಾಶನದಲ್ಲಿ ಮೂಡಿ ಬರಬೇಕೆಂಬ ಆಶಯ. ಅದಕ್ಕೆ ಇಂಬುಕೊಟ್ಟವರು ನವಕರ್ನಾಟಕದ ಶ್ರೀ ಆರ್. ಎಸ್. ರಾಜಾರಾಮ್. ಅವರನ್ನು ನಾನಿಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯಲೇಬೇಕು. ಹಾಗೆಯೇ ನೆನೆಯಲೇಬೇಕಾದವರು ನವಕರ್ನಾಟಕದ ಶ್ರೀ ಕೆ. ಪಿ. ಸ್ವಾಮಿ, ಎ. ಆರ್. ಉಡುಪ ಮತ್ತು ಮುಖಚಿತ್ರ ರಚಿಸಿಕೊಟ್ಟ ರವಿಕುಮಾರ್ ಅಜ್ಜೀಪುರ ಇವರುಗಳು.

ಈ 'ಅಲೀಮಾ ಅಕ್ಷರ ಕಲಿತದ್ದು' ಅಚ್ಚಿನಲ್ಲಿರುವಾಗಲೇ ನನ್ನ ಮೊದಲ ಕಥಾ ಸಂಕಲನವಾಗಿ ಹೊರಬಂದದ್ದು 'ಎಲ್ಲಿರುವೆ ನನ್ನ ಕಂದಾ' ಪುಸ್ತಕ. ಅದನ್ನು ಓದಿ ಮೆಚ್ಚಿಗೆಯ ಮಾತನ್ನಾಡಿದವರೂ ಇದ್ದಾರೆ. ಹಾಗೇ ಪುಸ್ತಕದ ಓರೆಕೋರೆಯನ್ನು ತಿದ್ದಬೇಕಾದ ರೀತಿಯನ್ನು ಹೇಳಿ, ಪುಸ್ತಕ ಎಂದರೆ ಹೇಗಿರಬೇಕೆಂದು ಆರೋಗ್ಯ ಪೂರ್ಣವಾದ ಸಲಹೆ ನೀಡಿದವರೂ ಇದ್ದಾರೆ. ಇವರೆಲ್ಲರನ್ನೂ ನಾನು ನೆನೆಯಲೇಬೇಕು.

ನಾನು ಸಮಾಜದಲ್ಲಿನ ಎಷ್ಟೋ ಅಂಕುಡೊಂಕುಗಳನ್ನು ಕಂಡಿದ್ದೇನೆ. ದೊಡ್ಡವರ ಸಣ್ಣತನವನ್ನು, ಸಣ್ಣವರ ಔದಾರ್ಯವನ್ನು ಕಂಡಿದ್ದೇನೆ. ನನ್ನ ಪರಿಸರದಲ್ಲಿ ನಡೆಯುವ ಆತಂಕಕಾರಿ ಸನ್ನಿವೇಶಗಳನ್ನು ನೋಡಿದ್ದೇನೆ. ಮಧ್ಯಮ ವರ್ಗದವರು ಪಡುವ ಬವಣೆಯನ್ನು ಅನುಭವಿಸಿದ್ದೇನೆ.

ಆಡಂಬರದ ಮದುವೆಗಳು, ತಮ್ಮ ಮಗಳಿಗೆ ಒಂದು ತೊಲ ಚಿನ್ನ ಹಾಕಲು ಸಾಧ್ಯವಿಲ್ಲದೆ ಒದ್ದಾಡುವ ಹೆಣ್ಣು ಹೆತ್ತವರನ್ನು ನೋಡಿದ್ದೇನೆ. ಸಂಪ್ರದಾಯವೆಂಬ ಕಟ್ಟುಪಾಡಿಗೆ ಸಿಕ್ಕಿ ಬಿದ್ದು ನರಳುತ್ತಿರುವ ಎಷ್ಟೋ ಹತಭಾಗ್ಯರನ್ನು ನೋಡಿದ್ದೇನೆ. ಎಷ್ಟೋ ಮಂದಿ ಉಸಿರು ಕಳಕೊಂಡವರನ್ನು ಕಂಡಿದ್ದೇನೆ. ಇಂತಹ ಕೆಲವು ನೋವಿನ ದೃಶ್ಯಗಳು ಅಚ್ಚಳಿಯದೇ ನನ್ನ ಹೃದಯದಲ್ಲಿ ನಿಂತು ಅದು ಅಕ್ಷರಗಳಾಗಿ, ಶಬ್ದಗಳಾಗಿ, ಕಥೆಯ ರೂಪ ತಾಳಿ ನಿಂತಿವೆ.

ನಾನು ನೆನೆಯಬೇಕಾದವರು ಇನ್ನೂ ಬಹಳಷ್ಟು ಮಂದಿ ಇದ್ದಾರೆ. ಎಲ್ಲರೂ ನನಗೆ ಆತ್ಮೀಯರು, ನನ್ನ ಬರವಣಿಗೆಗೆ ಉತ್ತೇಜನ ನೀಡಿ, ಇನ್ನಷ್ಟು ಬರೆಯಲು ಪ್ರೇರೇಪಿಸಿದ ಅವರೆಲ್ಲರನ್ನೂ ನಾನು ನೆನೆಯಲೇಬೇಕು. ಆದರೆ ಇಲ್ಲಿ ಯಾರ ಹೆಸರನ್ನು ಬರೆಯಲಿ, ಯಾರನ್ನು ಬಿಟ್ಟು ಬಿಡಲಿ... ಎಲ್ಲರೂ ನನಗೆ ಆತ್ಮೀಯವಾಗಿ ಸಹಕರಿಸಿದ್ದಾರೆ. ಅವರೆಲ್ಲರನ್ನೂ ನಾನು ಕೃತಜ್ಞತಾಪೂರ್ವಕವಾಗಿ ಇಲ್ಲಿ ನಾನು ನೆನೆಯುತ್ತೇನೆ. ಅವರೆಲ್ಲರೂ ನನ್ನ ಹೃದಯದಲ್ಲಿ ಅಚ್ಚಳಿಯದೇ ನಿಂತಿದ್ದಾರೆ.

ಇಲ್ಲಿರುವ ಕತೆಗಳನ್ನು ಪ್ರಕಟಿಸಿದ ಸುಧಾ, ಮಯೂರ, ಸಂಯುಕ್ತ ಕರ್ನಾಟಕ, ಜನಬಿಂಬ..... ಎಲ್ಲರನ್ನೂ ಮನದಲ್ಲಿ ತುಂಬಿಕೊಂಡು ಕೃತಜ್ಞತೆ ಅರ್ಪಿಸುತ್ತಿದ್ದೇನೆ.

**ಪಕ್ರುದ್ದೀನ್ ಇರುವೈಲ್**

## ಅರ್ಪಣೆ

ನನ್ನ ಬದುಕಿಗೆ ಸ್ಫೂರ್ತಿಯಾಗಿ
ನನ್ನ ಜೀವನದ ಚಿಲುಮೆಯಾಗಿ
ನನ್ನ ಕಣ್ಣೆದುರು ನಕ್ಕು ನಲಿಯುತ್ತಿರುವ
ನನ್ನ ಮುದ್ದು ಮೂರು ಕಂದಮ್ಮಗಳಾದ
ಸಹನಾ - ಸಲ್ಮಾ - ಸಾಜಿದಾ
ಇವರುಗಳಿಗೆ

# ಪರಿವಿಡಿ


| | | | |
|---|---|---|---|
| 1 | ಒಂದು ಹುಡುಗಿಯ ಕತೆ | ... ... | 7 |
| 2 | ಇಸ್ಲಾಮೀಪುರದಲ್ಲೊಂದು ಯಕ್ಷಗಾನ | ... ... | 19 |
| 3 | ಅಲೀಮಾ ಅಕ್ಷರ ಕಲಿತದ್ದು | ... ... | 25 |
| 4 | ಗರ್ಭ | ... ... | 30 |
| 5 | ವರದಕ್ಷಿಣೆ | ... ... | 38 |
| 6 | ತಾಯಿ | ... ... | 46 |
| 7 | ಕನಸು | ... ... | 53 |
| 8 | ವಾರಸುದಾರರು | ... ... | 58 |
| 9 | ಝುಬೇದಾ | ... ... | 68 |
| 10 | ಮಗ | ... ... | 75 |
| 11 | ಜಮೀಲಾ | ... ... | 83 |
| 12 | ದಾರಿ | ... ... | 92 |
| 13 | ವಿದಾಯ | ... ... | 102 |
| 14 | ಯಾತ್ರಿಕ | ... ... | 110 |
| 15 | ಪರಾಜಿತ | ... ... | 117 |
| 16 | ಪರಿವರ್ತನೆ | ... ... | 123 |

# 1 ಒಂದು ಹುಡುಗಿಯ ಕತೆ

ಕುರುಬಾಗಿಲಿಗೆ ಕುಳಿತು ಆ ಹುಡುಗಿ ಒಂದೇ ಸವನೆ ವಾಂತಿ ಮಾಡಿಕೊಳ್ಳುತ್ತಿತ್ತು. 'ವ್ಹಾಕ್.. ವ್ಹಾಕ್...' ಎನ್ನುವ ಆ ವಾಂತಿಯ ಸದ್ದಿಗೆ ಇಡೀ ಮನೆಯೇ ಭೀಕರ ನಿಶ್ಶಬ್ದತೆಗೆ ಸಿಲುಕಿತ್ತು. ಒಂದು ರೀತಿಯ ಅಸಹನೀಯ ಮೌನ ಮತ್ತು ಭೀಕರ ಭಯ. ಮನೆಯೊಳಗಿದ್ದ ಜನ ಯಾವುದೋ ವಿಪತ್ತಿಗೆ ಸಿಲುಕಿದಂತೆ ಮನೆಯ ಹೊರಗೆ ಬಾರದೆ ಒಳಗೆ ಅವಿತುಬಿಟ್ಟಿದ್ದರು. ವಾಂತಿ ಮಾಡುತ್ತಿರುವ ಆ ಹುಡುಗಿಯತ್ತಲೇ ಎಲ್ಲರೂ ನೆಟ್ಟ ನೋಟದಿಂದ ನೋಡುತ್ತಿದ್ದರು. ಯಾರಲ್ಲೂ ಧ್ವನಿ ಇರಲಿಲ್ಲ. ವಾಂತಿಯ ಸದ್ದನ್ನೊಂದು ಬಿಟ್ಟರೆ ಅಲ್ಲಿ ಪೂರ್ತಿ ನಿಶ್ಶಬ್ದತೆ.

ನಿಧಾನವಾಗಿ ಕತ್ತಲು ಅಡರಿಕೊಳ್ಳುವ ಸಮಯ. ಹತ್ತಿರದ ಮಸೀದಿಯಲ್ಲಿ ಗೌಜು-ಗಮ್ಮತ್ತು ಆರಂಭವಾಗುವ ದಿನದ ಸಂದರ್ಭ. ಮಕ್ಕಳ ದಪ್ಪು ಪಾಟ್, ಕೇರಳದ ಕುಟ್ಟಿ ತಂಜಲ್ ಒಬ್ಬರ ಮಾಪಿಳ್ಳೆಗಾನ, ಮತ್ತೊಂದೆರಡು ದಿನದ ವಾಝ್ ಪ್ರವಚನ. ಜಮಾತ್‌ನ ಜನ ಖುಷಿಪಡುತ್ತಿರುವ ಸಂದರ್ಭ. ನಾಲ್ಕು ದಿನಗಳು. ಇದೇ ಮೊದಲಿಗೆ ಊರ ಜನರು ಮಸೀದಿ ಕಟ್ಟಿಸಿ ಈ ಸಂತಸದ, ಖುಷಿಯ ಕಾರ್ಯಕ್ರಮ ಏರ್ಪಡಿಸಿದ್ದಾರೆ.

ಆದರೆ ಇಲ್ಲಿ ಮೈ ತುಂಬಿಕೊಂಡಿದ್ದ ಖುಷಿಯೆಲ್ಲಾ ಜರ್ರನೆ ಇಳಿದು, ಈ ವಾಂತಿಯ, 'ವ್ಹಾಕ್ ವ್ಹಾಕ್' ಸದ್ದಿಗೆ ಇಡೀ ಮನೆಯೇ ಆಳವಾದ ನಿಶ್ಶಬ್ದತೆಗೆ ಸಿಲುಕಿತ್ತು. ಹುಡುಗಿ ವಾಂತಿ ನಿಲ್ಲಿಸಿ, ಕುರುಬಾಗಿಲಿಂದ ಎದ್ದು ಬಚ್ಚಲಿಗೆ ಹೋಗುತ್ತಿದ್ದಂತೆ, ಒಳಗೆ ಹಾಸಿಗೆಯಲ್ಲಿ ಮೈ ಚಾಚಿದ್ದ ಆ ಮನೆಯ ಹಿರಿಯ ಹೆಂಗಸು ಅರವತ್ತೈದರ ಪ್ರಾಯದ ಉಮ್ಮಾತುಮ್ಮ ತನ್ನಷ್ಟಕ್ಕೆ ಲೊಚಗುಟ್ಟತೊಡಗಿತು. ''ಯಾ ಪಡಚ್ಚೋನೆ ಈ ಮನೆಯ ಮಾನ ಬೀದಿಗಿಳಿಯುವುದನ್ನು ನೀ ಅಲ್ಲಿ ಕುಳಿತುಕೊಂಡು ನೋಡುತ್ತಿದ್ದೀಯೇ.'' ಒಳಗೆ ಹುಡುಗಿಯ ಉಮ್ಮ ಅಮೀನಾ 'ಕುಸುಕುಸು' ಎಂದು ಅಳತೊಡಗಿದ್ದಳು. ಬಾಯಿಗೆ ಸೆರಗು ಮುಚ್ಚಿಕೊಂಡು ಒಂದೇ ಸಮನೆ ಅಳುವುದನ್ನು ಆಕೆಯ ಇನ್ನಿಬ್ಬರು ಮಕ್ಕಳು ಮೂಕವಾಗಿ ನೋಡುತ್ತಿದ್ದವು. ಅದರಲ್ಲಿ ಒಂದು ಇಪ್ಪತ್ತು ವರುಷದ ಹೆಣ್ಣು ಮತ್ತೊಬ್ಬ ಇಪ್ಪತ್ತೆರಡು ವರುಷದ ಯುವಕ.

ವಾಂತಿಯ ಹುಡುಗಿ ತನ್ನ ಸ್ವಲ್ಪ ತೋರವಾದ ದೇಹವನ್ನು ಆಡಿಸುತ್ತಾ ಮತಿಹೀನಳಂತೆ ಬಚ್ಚಲಿಂದ ಬಂದು ಮತ್ತೆ ತನ್ನ ಸ್ಥಾನದಲ್ಲಿ ಕುಳಿತು ತನ್ನ ಕಾಯಕದಲ್ಲಿ ತೊಡಗಿದಳು. ಅವಳ ದೃಷ್ಟಿ ಸುತ್ತಲೂ ಹರಿಯದೇ ಬೀಡಿಯ ಮೊರದಲ್ಲೇ ನೆಟ್ಟಿತ್ತು.

ಅವಳು ಹಾಗೇ ಬಂದು ಮೂಕಳಾಗಿ ತನ್ನ ಕಾಯಕದಲ್ಲಿ ತೊಡಗಿದುದನ್ನು ಸಹಿಸಲಾಗದೇ ಎದ್ದುಬಂದ ಅಮೀನಾ ಮಗಳ ಬೆನ್ನಿಗೆ ಬಲವಾಗಿ ಗುದ್ದಿದಳು. ಹುಡುಗಿಯ ಹೊಟ್ಟೆಯಲ್ಲಿ ಇನ್ನೂ ಸ್ವಲ್ಪ ವಾಂತಿ ಮಿಕ್ಕಿ ಉಳಿದಿತ್ತೋ ಏನೋ, ಅದು ಒಮ್ಮೆಲೆ 'ವ್ಹಾಕ್' ಎನ್ನುವ ಸದ್ದಿನೊಂದಿಗೆ ಹೊರಬಿದ್ದು, ಬೀಡಿಯ ಮೊರದಲ್ಲಿ ಇಷ್ಟು ಗಲೀಜಾಗಿ, ಬೀಡಿ ತಂಬಾಕೆಲ್ಲ ವಾಂತಿಯಲ್ಲಿ ಮುಳುಗಿ ಒದ್ದೆಯಾಗಿ, ಹುಡುಗಿ ಗುದ್ದಿನ ಏಟಿಗೆ ವಾಂತಿ ಮಾಡುವುದರ ಜತೆಗೆ ತೇಲುಗಣ್ಣು ಮೇಲುಗಣ್ಣಾಗಿ ಧಡಲ್ಲೆಂದು ಪ್ರಜ್ಞೆ ತಪ್ಪಿ ಬಿದ್ದುಬಿಟ್ಟಿತು. ಹುಡುಗಿ ವಾಂತಿ ಮಾಡಿಕೊಂಡದ್ದನ್ನು ಒಂದು ಕೆಟ್ಟ ಘಟನೆಯ ಸಂಕೇತವೆನ್ನುವಂತೆ ಊಹಿಸಿಕೊಂಡಿದ್ದ ಅಮೀನಾ, ಹೀಗೆ ಮಗಳು ಸತ್ತಂತೆ ಎಚ್ಚರ ತಪ್ಪಿ ಬಿದ್ದುದನ್ನು ಕಂಡು ''ಹೋ ಹ್ಹೋ'' ಎಂದು ರಾಗವಾಗಿ ಭೀತಿಯಿಂದ ಹುಯ್ಲಿಡತೊಡಗಿದಳು. ಆದರೆ ಈ ಘಟನೆಯನ್ನೆಲ್ಲಾ ನೋಡುತ್ತಿದ್ದ ಆ ಇಪ್ಪತ್ತೆರಡರ ಹುಡುಗ ಓಡಿಬಂದು, ಈ ಮನೆಯ ಸಂಗತಿಯನ್ನೆಲ್ಲಾ ಈ ಹೆಂಗಸರು ಹರಾಜಿಗಿಡುತ್ತಾರೆಂದು ತಿಳಿದು, ಅಮ್ಮನ ಬಾಯನ್ನು ಎರಡು ಕೈಗಳಿಂದ ಬಲವಾಗಿ ಮುಚ್ಚಿದ.

''ಏನು ಸ್ವಯ(ಪ್ರಜ್ಞೆ) ಇಲ್ಲದ ಉಮ್ಮ ನೀನು ? ಅಕ್ಕ ವಾಂತಿ ಮಾಡಿಕೊಂಡಷ್ಟಕ್ಕೆ ಸ್ವಯ ತಪ್ಪುವಂತೆ ಗುದ್ದಿದ ನೀನು, ಈಗ ಊರವರೆಲ್ಲಾ ಬಂದು ಈ ಮನೆಯಲ್ಲಿ ನೆರೆಯಲಿ ಎಂದು ಹುಯ್ಲಿಡುವುದೇ'' ಎಂದು ಜೋರು ಮಾಡಿದಾಗ ಆಕೆ ತನಗಿಂತಲೂ ಎತ್ತರವಾಗಿ ಬೆಳೆದು ನಿಂತಿದ್ದ ಮಗನನ್ನು ಕಂಡು ಹುಯ್ಲಿಡುವುದನ್ನು ನಿಲ್ಲಿಸಿ ಮೌನವಾದಳು.

ಅದುವರೆಗೆ ಹಾಸಿಗೆಯಲ್ಲೇ ಸಂಗತಿಗಳನ್ನೆಲ್ಲಾ ನೋಡುತ್ತಿದ್ದ ಉಮ್ಮಾತುಮ್ಮಾ ನಿಧಾನವಾಗಿ ಎದ್ದುಬಂದು, ''ಏನ್ ಮಾಡಿಬಿಟ್ಟೆ ಅಮೀನಾ ನೀನು, ಹುಡುಗಿ ಹಾಗೆ ತೀರಿಕೊಂಡುಬಿಟ್ಟರೆ ಏನು ಗತಿ. ನಿನ್ನ ಗಂಡ ಬಂದು ನಿನ್ನನ್ನು ಏನು ಮಾಡಿ ಬಿಟ್ಟಾನು ?'' ಎಂದು ಇಪ್ಪತ್ತು ವರುಷದ ಹುಡುಗಿಯೊಡನೆ, ''ಹೋಗು ತಂಬಿಗೆಯಲ್ಲಿ ಸ್ವಲ್ಪ ನೀರು ತತ್ತಾ'' ಎಂದಳು. ಆ ಹುಡುಗಿ ಸರಕ್ಕನೆ ಎದ್ದು ಜಿನ್ನ್ (ದೆವ್ವ) ಹಿಡಿದವಳಂತೆ ಒಳಹೋಗಿ ನೀರು ತಂದು ಅಕ್ಕನ ಮುಖಕ್ಕೆ ಬಲವಾಗಿ ಚೆಲ್ಲಿದಳು. ಅವಳು ಒಮ್ಮೆಲೆ ಒಂದು ತಂಬಿಗೆ ನೀರನ್ನು ಚೆಲ್ಲಿದ ರಭಸಕ್ಕೆ ಬೆದರಿ ಕೆಟ್ಟದಾಗಿ ಆ ಹುಡುಗಿ ಶಹೀದಾಳಿಗೆ, ''ಏನು ಹುಡುಗಿಯೇ ನೀನು ಹಾಗೆ ನೀರು ಎರಚೋದೇ, ದಮ್ಮು ಕಟ್ಟಿಸಿ ಅಕ್ಕನನ್ನು ಸಾಯಿಸಬೇಕೆಂದಿದ್ದೀಯೆ ?'' ಎಂದು ಉಮ್ಮಾತುಮ್ಮ ಬೈಯ್ದಾಗ, 'ಇವಳು ಸತ್ತರೇನೇ ನನಗೆ ನೆಮ್ಮದಿ. ಇವಳಿಂದಾಗಿಯೇ ನನಗೂ ಮದುವೆಯಿಲ್ಲ!' ಎಂದು ಅಂದುಕೊಳ್ಳಬೇಕಾದವಳು ಅಕ್ಕನನ್ನೇ ಸೂಕ್ಷ್ಮವಾಗಿ ನೋಡಿ, ಅವಳಿಗೆ ಅಕ್ಕ ತನ್ನನ್ನು ಬಾಲ್ಯದಿಂದಲೂ ಎತ್ತಿ ಮುದ್ದಾಡಿ,

ತನ್ನನ್ನು ಪ್ರೀತಿಯಿಂದ, ತಾನು ಊಟ ಮಾಡದಿದ್ದರೆ ಅವಳೂ ಊಟ ಮಾಡದೆ, ರಮಿಸಿ, ಮುದ್ದಿಸಿ ಊಟ ಮಾಡಿಸುತ್ತಿದ್ದುದನ್ನೆಲ್ಲಾ ಜ್ಞಾಪಿಸಿಕೊಂಡು ದುಃಖದ ಕಟ್ಟೆಯೊಡೆದು, ಛೇ, ನಾನು ಏನೋ ಕೆಟ್ಟದಾಗಿ ಯೋಚಿಸಿದೆ, ಅಕ್ಕನ ಬಗ್ಗೆ. 'ಅಕ್ಕನಿಗೆ ಏನೂ ಆಗದೆ ಇರಲಿ ಅವಳಿಗೊಂದು ಒಳ್ಳೆಯ ಗಂಡು ಸಿಗಲಿ' ಎಂದು ಅಕ್ಕಳ ಬಗ್ಗೆ ಹಾರೈಸಿ ಅಕ್ಕಳಿಗೆ ಪ್ರಜ್ಞೆ ಬರುವುದನ್ನೇ ಕಾಯತೊಡಗಿದಳು.

ವಾಂತಿ ಮಾಡಿ ಪ್ರಜ್ಞೆ ತಪ್ಪಿದ ಹುಡುಗಿ ಜಮೀಲಾಗೆ ನಿಧಾನವಾಗಿ ಪ್ರಜ್ಞೆ ಮರುಕಳಿಸಿ, ಆಕೆಯೊಮ್ಮೆ ಕಣ್ಣುತೆರೆದು ಸುತ್ತಲೂ ನೋಡಿದಳು. ಸುತ್ತಲೂ ವೃತ್ತಾಕಾರವಾಗಿ ಕುಳಿತು ತನ್ನನ್ನೇ ಭೀತಿಯಿಂದ ನೋಡುತ್ತಿರುವ ಅಜ್ಜಿ, ಅಮ್ಮ, ತಂಗಿ, ತಮ್ಮನ ಕಣ್ಣು-ಮುಖಗಳನ್ನು ದಿಟ್ಟಿಸಿ ಅಲ್ಲಿ ಒಂದು ರೀತಿಯ ದುಗುಡ-ದುಮ್ಮಾನ ಅಳುವನ್ನು ಗುರುತಿಸಿ ಎದ್ದು ಕುಳಿತಳು.

ಅವಳು ಎದ್ದು ಕುಳಿತೊಡನೆ ಅಮೀನಾಗೆ ಮತ್ತೆ ಆ ಕೆಟ್ಟ ಘಟನೆಯ ಸಂದೇಹ ಉದ್ಭವಿಸಿ, ಮಗಳ ಮುಖದ ಹತ್ತಿರ ಮುಖ ತಂದು ಹೆದರಿಕೆ ಹುಟ್ಟಿಸುವ ಧ್ವನಿಯಲ್ಲಿ, ''ನಿನಗೇನು ಬಂದಿತ್ತು ಕೇಡು, ಯಾರು ನಿನಗೆ ಹೀಗೆ ಮಾಡಿದೋರು ? ಈ ಕತ್ತಲಲ್ಲಿ ಕುಳಿತು ಯಾರ ಜೊತೆ ಮಾಡಬಾರದ್ದನ್ನು ಮಾಡಿದೆ !?'' ಎಂದು ಕೇಳಿದಾಗ ಜಮೀಲಾ ಅರ್ಥವಾಗದೇ 'ಹೋ' ಎಂದು ಅಳತೊಡಗಿದಳು.

''ಆ ಅಲ್ಲಾಹುವಿನ ಆಣೆ ಉಮ್ಮ ನಾ ಏನೂ ಮಾಡಿಲ್ಲ'' ಆಕೆ ಎದೆ ಬಡಿದುಕೊಂಡು ಹೇಳಿದಳು.

''ಥತ್... ದರಿದ್ರ, ಮಗಳೇ... ಏನೂ ಗೊತ್ತಿಲ್ಲದಂತೆ ಆಡಬೇಡ್ವೆ. ನೀನು ತಿಂಗಳಲ್ಲಿ ಸ್ನಾನ ಮಾಡಬೇಕಾದ ದಿನ ಕಳೆದು ಆಗಲೇ ಹತ್ತು ದಿವಸ ಆಯಿತಲ್ವೇ. ನಿನಗೆ ಆಗಬಾರದ್ದು ಆಗಿದೆ'' ಎಂದು ತಾಯಿಯೂ ಅಳತೊಡಗಿದಾಗ ಇದಕ್ಕೆಲ್ಲ ಕಸಿವಿಸಿಗೊಂಡ ಆ ಇಪ್ಪತೆರಡರ ಹುಡುಗ, ತನ್ನ ತಂಗಿ ಶಹೀದಾಳ ಕೈ ಹಿಡಿದು, ''ನನಗೊಂದಿಷ್ಟು ಅನ್ನ ಹಾಕು ದಪ್ಪ ಪಾಟ್‌ಗೆ ಹೋಗಬೇಕು'' ಎಂದು ಅಡಿಗೆ ಕೋಣೆಗೆ ನುಗ್ಗಿದ.

ಊಟ ಮಾಡುತ್ತಾ ಅವನಿಗೆ ಜಮಾಲ್‌ಬ್ಯಾರಿಗಳ ಹದಿನೈದರ ಹರೆಯದ ಚಂದದ ಮಗಳು ಜುಬೇದಾಳ ಮುಖ ತೇಲಿಬಂದು ಅವಳ ಬಟ್ಟಲ ಕಂಗಳು ಎಳೆಯ ಮೂಗು, ಕೆಂಪು ತುಟಿಗಳೂ ನೆನಪಾಗಿ ಇಲ್ಲಿನ ಅಸಹ್ಯ ಸಂಗತಿಗಳನ್ನೆಲ್ಲಾ ಮರೆತು ಊಟ ಮುಗಿಸಿ, ಬಿಳೀ ಶರ್ಟ್ ಬಿಳೀ ಲುಂಗಿ - ಬಿಳೀ ಟೋಪಿಯನ್ನು ಧರಿಸಿಕೊಂಡು ಮಸೀದಿಯತ್ತ ಹೆಜ್ಜೆ ಹಾಕಿದ.

ಇಲ್ಲಿ ಈ ವಾಂತಿ ಮಾಡಿದ ಹುಡುಗಿಯ ಆಣೆಗಳು, ತಾಯಿಯ ಮತ್ತು ಅಜ್ಜಿಯ

ಸಂದೇಹದ ಮಾತುಗಳು. ಬೈಯ್ಗಳ ನಡುವೆ ಬತ್ತಿಹೋಗಿ ಆ ಮನೆಯಲ್ಲಿ ಬರೇ ಮೌನವೇ ಸುಮಾರು ಹೊತ್ತು ನೆಲೆನಿಂತಿತು. ಹೀಗೆ ಮೌನವಾಗಿ ಕಾಲ ರಾತ್ರಿಯನ್ನು ಕಬಳಿಸತೊಡಗಿದಾಗ ಯಾರೊಬ್ಬರೂ ಊಟಮಾಡದೆ ಹಾಗೇ ಎಚ್ಚರ ಮತ್ತು ನಿದ್ರೆಯ ಸುಳಿವಿನಲ್ಲಿ ಬಿದ್ದು ಏಳುತ್ತಾ ಹಾಗೇ ಕುಳಿತಿದ್ದರು. ಮೊರದಲ್ಲಿ ಹರಡಿದ ವಾಂತಿಯಲ್ಲಿ ಬೀಡಿ-ಹೊಗೆಸೊಪ್ಪು ಹಾಗೇ ಇದ್ದು ಹಾಳಾಗುವ ಸ್ಥಿತಿಗೆ ಬಂದಿದ್ದುವು. ಇವರು ಹೀಗೆ ಕುಳಿತಿದ್ದಾಗ, ಅಲ್ಲಿ ಮಸೀದಿಯಲ್ಲಿ ಹಾಕಿದ ರಂಗು-ರಂಗಿನ ಚಪ್ಪರದಲ್ಲಿ ಆ ಹದಿನೆಂಟರ ಹುಡುಗ ಹುಸೇನ ದಪ್ಪನ್ನು ತಾಳವಾಗಿ ತಟ್ಟುತ್ತಾ ಅಲ್ಲೇ ದೂರದಲ್ಲಿ ಕುಳಿತಿದ್ದ ಹೆಂಗಸರ ನಡುವೆ ಕಾಣುತ್ತಿದ್ದ ಆ ಜುಬೇದಾಳನ್ನೇ ನೋಡುತ್ತಿದ್ದ.

ದಪ್ಪು ಪಾಟ್ ಒಂದು ಸಂಸ್ಕೃತಿಯ ಖುಷಿಯ ಸಂಕೇತವಾಗಿ ಅಲ್ಲಿ ಆ ಸದ್ದಿನೊಂದಿಗೆ ಸುಶ್ರಾವ್ಯವಾದ ಗಾನವೊಂದು ಹೊರಹೊಮ್ಮುತ್ತಿತ್ತು. ಬ್ಯಾರಿ ಜನರ ಜನಸಮೂಹ ಜಮಾತೀನ ಇಡೀಯಾಗಿ, ಚಂದವಾಗಿ ದಪ್ಪು ಬಾರಿಸುತ್ತಾ ಹಾಡುತ್ತಿರುವ ಆ ಹುಡುಗರ ಗುಂಪಿನಲ್ಲಿ ಮಿಂಚುತ್ತಿರುವ ಹುಸೇನನಲ್ಲಿ ಕಣ್ಣುನೆಟ್ಟು, ಅವನ ಹಾಡಿನಲ್ಲಿ ಕಿವಿ ನೆಟ್ಟು ಕೂತಿದ್ದರೆ, ಇದನ್ನೆಲ್ಲ ಕೇಳಬೇಕೆಂಬ ಕುತೂಹಲವಿದ್ದ ಅವನ ಮನೆಯ ಜನ ಅಲ್ಲಿ ಆ ಹುಡುಗಿಯ ವಾಂತಿಗೆ ಏನೇನೋ ಗ್ರಹಿಸಿಕೊಂಡು ಹಾಗೇ ಮೂಢರಾಗಿ ಕುಳಿತುಬಿಟ್ಟಿದ್ದರು. ಮಸೀದಿಗಿಂತ ಅಷ್ಟು ದೂರದಲ್ಲಿದ್ದ ಆ ಮನೆಯ ಜನರಿಗೆ ಆ ದಪ್ಪು ಪಾಟ್ ಕೇಳುವುದು ಸಾಧ್ಯವಿರಲಿಲ್ಲ.

ದಪ್ಪು ಪಾಟ್ ಮುಗಿದು ಮಧ್ಯರಾತ್ರಿಯ ವೇಳೆಗೆ ಖತೀಬರು ಹುಡುಗನನ್ನು ತಬ್ಬಿಕೊಂಡು, ಆಶೀರ್ವದಿಸಿ ''ಚೆನ್ನಾಗಿ ದಪ್ಪು ಪಾಟ್ ಮಾಡುತ್ತೀ'' ಎಂದು ಹೊಗಳುವಾಗ, ಬುರ್ಖಾದ ಹೆಂಗಸರೆಲ್ಲ ಖುಷಿಯಿಂದ ಅವನ ದಪ್ಪಿಗೆ, ಹಾಡಿಗೆ ಮೈಮರೆತಿದ್ದವರು ಅವನ ಉಮ್ಮ-ಅಜ್ಜಿಯನ್ನು ಹೊಗಳಲು ಅತ್ತಿತ್ತ ನೋಡಿದವರು, ಅಷ್ಟು ಮಂದಿ ಹೆಂಗಸರಲ್ಲಿ ಅವರಿಬ್ಬರನ್ನೂ ಕಾಣದೇ, ''ಎಂತಹ ಜನ ಈ ಉಮ್ಮಾತುಮ್ಮ, ಅಮೀನಾ. ತಮ್ಮ ಹುಡುಗನ ದಪ್ಪು ಪಾಟ್ ಕೇಳಲು ಬಾರದೆ ಇರೋದೆ'' ಎಂದು ತಮ್ಮೊಳಗೆ ಕಸಿವಿಸಿಗೊಳ್ಳತೊಡಗಿದರು. ಕಸಿವಿಸಿಗೊಂಡ ಜನ ಹಾಗೇ ಏನೋ ಮಾತಾಡುತ್ತಾ, ಅವರಲ್ಲಿ ಒಂದೆರಡು ಹೆಂಗಸರು ಹುಸೇನನ ಮನೆಗೆ ಹೋಗಿ, ಉಮ್ಮಾತುಮ್ಮಾ-ಅಮೀನಾ ಹುಡುಗನ ಪಾಟ್ಟ ಕೇಳಲು ತಪ್ಪಿಸಿಕೊಂಡಿದ್ದರ ಬಗ್ಗೆ ಚೆನ್ನಾಗಿ ದಬಾಯಿಸಬೇಕು ಎಂದುಕೊಂಡು ಆ ಮನೆಗೆ ಬಂದರು. ಅದುವರೆಗೆ ಊಟಮಾಡದೇ ಹಾಗೇ ನಿದ್ರಿಸದೇ ಕುಳಿತಿದ್ದ ಜನ ಮನೆಯ ಹೊರಗಿಂದ ಹೆಂಗಸರ ಮಾತುಗಳು ಹತ್ತಿರ ಹತ್ತಿರ ಕೇಳಿಸಿದಾಗ, ದೀಪ ಆರಿಸಿ ಒಮ್ಮೆಲೆ ಮುಸುಕೆಳೆದು ಮಲಗಿಕೊಂಡರು. ಬಂದ ಹೆಂಗಸರು ಹೊರಗಿನ

ಬಾಗಿಲನ್ನು 'ಧಡಬಡ' ಎಂದು ಬಾರಿಸಿ ಆ ಶಬ್ದಕ್ಕೆ ಇವರು ಎಚ್ಚರಗೊಳ್ಳದೆ ಇದ್ದಾಗ 'ಛೀ... ಎಂತಹ ಹಾಳು ನಿದ್ರೆಯೋ ಇವರಿಗೆ'' ಎಂದುಕೊಂಡು ಕತ್ತಲಲ್ಲಿ ಸಾಗಿ ಮಾಯವಾದರು.

ಜಮಾತರ ನಡುವೆ ಒಂದು ಸಂಭ್ರಮದ ಖುಷಿಯ ರಾತ್ರಿ ಕಳೆದು ಮತ್ತೊಂದು ಹಗಲಾಗುತ್ತಿದ್ದಂತೆ, ಆ ಮನೆಯ ಹೆಂಗಸರಿಗೆ ಒಂದು ದುಗುಡದ, ಸಂಶಯದ ನಿದ್ರೆ ಇಲ್ಲದ ರಾತ್ರಿ ಕಳೆದು ಹಗಲಾಗಿ, ಅವರು ಆ ಹಗಲಿಗೆ ಬೆಚ್ಚಿಬೀಳತೊಡಗಿದರು.

ಹಗಲಾಗುತ್ತಿದ್ದಂತೆ ವಾಂತಿ ಮಾಡಿಕೊಂಡಿದ್ದ ಹುಡುಗಿ ಎಲ್ಲರಿಗಿಂತಲೂ ಮೊದಲು ಎದ್ದು ನಮಾಜು ಮುಗಿಸಿ, ರಾತ್ರಿ ವಾಂತಿ ಮಾಡಿಕೊಂಡಿದ್ದ ಮೊರದ ಬೀಡಿಯನ್ನೆಲ್ಲಾ ನಿಧಾನವಾಗಿ ಬೇರ್ಪಡಿಸಿ ಅಂಗಳದಲ್ಲಿ ಒಣಹಾಕಿ, ಮೊರ ತೊಳೆದು ಮೊರವನ್ನು ಅಂಗಳದಲ್ಲಿಟ್ಟು ಬರುವಾಗ ಮತ್ತೊಮ್ಮೆ ಹೊಟ್ಟೆಯಲ್ಲಿ ಏರುಪೇರಾಗತೊಡಗಿತು. ಹೌದು ! ತನಗ್ಯಾಕೆ ವಾಂತಿಯಾಗುತ್ತಿದೆ ? ಈ ತಿಂಗಳೂ ತಾನು ಮುಟ್ಟಾಗಿಲ್ಲ ! ಎಷ್ಟು ದಿನಗಳಾಯಿತು ! ಒಂದು ಎರಡು ಮೂರು ಅಬ್ಬಬ್ಬಾ ಎಂಟು ದಿನಗಳು ! ಮೂವತ್ತು ಕಳೆದು ಮೂವತ್ತೆಂಟು ದಿವಸಗಳು ಅಂದರೆ ಅದರ ಅರ್ಥವೇನು ? ಉಮ್ಮ-ಅಜ್ಜಿಯ ಅರ್ಥವಲ್ಲ ? ಛೇ... ಎಂತಹಾ ಕೆಟ್ಟ ಸಂಶಯ ! ತಾನು ಇಸ್ಲಾಮ್ ಆಗಿ ಇಂತಹ ಕೆಟ್ಟ ಕೆಲಸ ಮಾಡುವುದೇ. ಕನ್ನಡಿಯಲ್ಲೊಮ್ಮೆ ಮುಖ ನೋಡಿಕೊಳ್ಳಬೇಕು. ಈ ದರಿದ್ರ ತೋರ-ದಪ್ಪಗಾದ ದೇಹಕ್ಕೆ ಯಾರು ಮರುಳಾಗುತ್ತಾರೆ. ಉಮ್ಮ-ಅಜ್ಜಿ ಇಷ್ಟು ವ್ಯಥೆಪಟ್ಟರೆ ಇನ್ನು ಬಾಪಾ ತನ್ನನ್ನು ಏನು ಮಾಡಿಬಿಟ್ಟಾರು ! ತಾನು ಮೊದಲಿಗೆ ಚೆನ್ನಾಗಿದ್ದೆ. ಮೊದಲ ಬಾರಿ ತಾನು ಯುವತಿಯಾದಾಗ ಎಷ್ಟು ಅಂದವಾಗಿದ್ದೆ. ಒಂದು ದಿನ ಜಮಾಲ-ಬ್ಯಾರಿಗಳ ಮಗ ತನ್ನನ್ನು ಕಂಡು ಅಪ್ಪಿಕೊಂಡಿದ್ದನಲ್ಲವೆ ? ಆಗ ತನಗೆ ಎಷ್ಟು ರೋಮಾಂಚನವಾಗಿತ್ತು. ಆದರೆ ದಿನ ಕಳೆದಂತೆ ತಾನು ಉಬ್ಬತೊಡಗಿದ್ದೆ. ತೋರ... ತೋರ... ನಂತರ ಆತ ಕಾಣಸಿಕ್ಕಿದರೂ ನೋಡದೇ ಓಡುತ್ತಿದ್ದ. ಈಗ ತಂಗಿ ಎಷ್ಟು ಚಂದ ಇದ್ದಾಳೆ. ಸಪೂರ ಆಗಿ ಕಣ್ಣು ಕುಕ್ಕುವಷ್ಟು. ತನ್ನನ್ನು ನೋಡಲು ಅದೆಷ್ಟು ಗಂಡುಗಳು ಬಂದರು. ಅವರು ನೋಡಲು ಬರುವುದು ತನ್ನನ್ನು. ಬಂದಮೇಲೆ ನೋಡುತ್ತ ಕೂರುವುದು ಅವಳನ್ನು. ತನ್ನನ್ನು ನೋಡಲು ಬಂದ ಗಂಡಿನ ಕಡೆಯವರೆಲ್ಲಾ 'ನಮಗೆ ಆ ಹುಡುಗಿ ಆಗಬಹುದು. ಈ ಹುಡುಗಿ ತುಂಬಾ ತೋರ ಇದ್ದಾಳೆ. ಏನೇನೂ ಚಂದವಿಲ್ಲ' ಎಂದು ಮುಖಕ್ಕೆ ಅಪ್ಪಳಿಸಿದಂತೆ ಹೇಳಿಹೋಗುತ್ತಿದ್ದರು. ತನಗೆ ವಯಸ್ಸು ಮೀರುತ್ತಾ ಬಂತು. ತಾನು ಇನ್ನಷ್ಟು ತೋರವಾಗತೊಡಗಿದೆ. ಅವಳು ಇನ್ನಷ್ಟು ಚಂದವಾಗ ತೊಡಗಿದಳು. ತನಗೆ ಮದುವೆ ಇಲ್ಲದಿದ್ದರೂ ಚಿಂತೆ ಇಲ್ಲ ಅವಳಿಗಾದರೂ ಮದುವೆಯಾಗಲಿ. ತಾನು ಉಮ್ಮ ಅಜ್ಜಿಯ ಹತ್ತಿರ ಹಾಗೇ ಹೇಳಿಯೂಬಿಟ್ಟೆ: ಆದರೆ

ಶಹೀದಾ, ''ಅಕ್ಕ ಮದುವೆಯಾದ ಮೇಲೇನೇ ನನಗೆ ಮದುವೆ'' ಎಂದು ಹೇಳಿ ಬಿಡೋದೆ. ಈಗ ತನಗೆ ಮುಟ್ಟು ನಿಂತಿದೆ ಮನೆಯವರಿಗೆ ಏನೇನೊ ಸಂಶಯ. ಹೇಗೆ ಈ ಸಂಶಯ ನಿವಾರಿಸೋದು.''

ವಾಂತಿ ಮಾಡಿಕೊಂಡಿದ್ದ ಹುಡುಗಿಯ ಬಗ್ಗೆ ಸಂಶಯ ಬೃಹದಾಕಾರವಾಗಿ ಉಮ್ಮಾತುಮ್ಮಾ -ಅಮೀನಾರ ಮನದಲ್ಲಿ ಹಾಗೇ ನೆಲೆನಿಂತು ಹೆಮ್ಮರವಾಗುತ್ತಾ, ಹುಡುಗಿಯ ಗರ್ಭದಲ್ಲಿ ಮೂಡಬಹುದಾದ ಆ ಕೆಟ್ಟ ಶಂಕೆಯನ್ನು ತೊಳೆದು ನಾಶಮಾಡುವ ನಿರ್ಧಾರದಲ್ಲಿದ್ದಾಗ, ಜಮೀಲಾಳ ಅಪ್ಪ ಎನಿಸಿಕೊಂಡಾತ ಬಹು ದೂರದ ಶಿವಮೊಗ್ಗದಾಚೆ ಇಪ್ಪತ್ತನಾಲ್ಕರ ಜಮೀಲಾಗೆ ಗಂಡು ಹುಡುಕುವ ಅಲೆದಾಟದಲ್ಲಿದ್ದ. ದಿನೇ ದಿನೇ ತೋರ ಆಗುತ್ತಿರುವ ತನ್ನ ಮಗಳು ಮರಿಯಾನೆಯಂತಾಗುವ ಮೊದಲೇ ಮದುವೆ ಮಾಡಿಬಿಡಬೇಕೆಂಬ ನಿರ್ಧಾರದಲ್ಲಿ ಆಕೆಯ ಈಗಿನ ಸ್ಥಿತಿಯನ್ನು ಒಪ್ಪಿಕೊಂಡು ಮದುವೆಯಾಗುವಂತಹ ಗಂಡನ್ನೇ ಸೂಕ್ಷ್ಮವಾಗಿ ಜಾಲಾಡತೊಡಗಿದ್ದ. ಅನೇಕ ಹೆಣ್ಣುಗಳಿಗೆ ಯೋಗ್ಯ ಗಂಡುಗಳನ್ನು, ಅನೇಕ ಗಂಡುಗಳಿಗೆ ಯೋಗ್ಯ ಹೆಣ್ಣುಗಳನ್ನು ಹುಡುಕುವ ಮದುವೆ ಕುದುರಿಸುವ ದಲ್ಲಾಳಿ ಕೆಲಸ ಮಾಡುತ್ತಿದ್ದ ತಾನು, ತನ್ನ ಮಗಳಿಗೇ ಒಂದು ಗಂಡು ಹುಡುಕಲಾಗದೇ ಸೋಲುವುದರ ಬಗ್ಗೆ ಜುಗುಪ್ಸೆಗೊಂಡು ಒಮ್ಮೆ ಮನೆಯ ಕಡೆ ಹೋಗಿಬರಬೇಕೆಂಬ ಯೋಚನೆಗೆ ತೊಡಗಿದ. ತಾನು ಮನೆ ಬಿಟ್ಟು ತಿಂಗಳಾಯ್ತು. ಈಗ ಜಮೀಲಾ ಮತ್ತಷ್ಟು ಉಬ್ಬಿಕೊಂಡಿರಬಹುದೇ ಎಂಬ ಕಲ್ಪನೆಯಲ್ಲಿ ಕಿಸೆಯಲ್ಲಿದ್ದ ಮಗಳ ಫೋಟೋವನ್ನು ತೆಗೆದು ಮತ್ತೊಮ್ಮೆ ಕಣ್ಣೆದುರು ಹಿಡಿದು ಮಗಳನ್ನು ಗುರುತಿಸಿಕೊಳ್ಳಲಾರಂಭಿಸಿದ.

ಇತ್ತ ಎಸ್. ಎಸ್. ಎಲ್. ಸಿ ತನಕ ಒಂದು ವರುಷವೂ ಫೇಲಾಗದೆ ಓದಿ ಮುಂದೆ ಓದಲಾಗದೇ ಜಮಾಲ್ ಬ್ಯಾರಿಗಳ ದೊಡ್ಡ ರೈಸ್ ಮಿಲ್‌ನಲ್ಲಿ ಕೆಲಸಕ್ಕೆ ಅಂಟಿಕೊಂಡ ಹುಸೇನ ದಿನಕ್ಕೊಮ್ಮೆ ಜಮಾಲ್ ಬ್ಯಾರಿಗಳ ಮನೆಗೆ ಹೋಗಿ ಅವರ ಮಗಳು ಜುಬೇದಾಳ ಚಂದದ ರೂಪವನ್ನು ಕಂಡು ಏನೇನೋ ಕನಸು ಕಟ್ಟಿಕೊಂಡಿದ್ದವ ದಪ್ಪು ಪಾಟಿನ ಮರುದಿನ ಜಮಾಲ್ ಬ್ಯಾರಿಗಳ ಮನೆಯತ್ತ ಬಂದ. ದೊಡ್ಡದಾದ ಮನೆಯೊಳಗೆ ಬಂದು ಹಜಾರದಲ್ಲಿ ಒಮ್ಮೆಲೇ ಸ್ತಂಭೀಭೂತನಾಗಿ ನಿಂತ. ಜುಬೇದಾ ಚಂದವಾಗಿ ಅಲಂಕರಿಸಿಕೊಂಡು ಕನ್ನಡಿಯೆದುರು ನಿಂತಿದ್ದಳು. ಆವಳಿಗೆ ಕನ್ನಡಿಯಲ್ಲಿ ಅವನ ಮುಖ ಕಂಡು ನಾಚಿ ಮೊಗ್ಗಾಗಿ ಆದರೂ ಧೈರ್ಯದಿಂದ, ''ಹುಸೇನ ನಾನು ನಿನ್ನ ದಪ್ಪು ಪಾಟ್ಟು ಕೇಳಿದೆ ತುಂಬಾ ಚಂದವಾಗಿ ರಾಗವಾಗಿತ್ತು. ಅಷ್ಟು ಹುಡುಗರಲ್ಲಿ ನೀನೇ ಇಂಪಾಗಿ ಹಾಡಿದ್ದು ಎಂದಾಗ ಅವನು ಅವಳನ್ನೇ ಕಣ್ತುಂಬಿಕೊಳ್ಳತೊಡಗಿದ. 'ಈ ಚಂದದ

ಹೆಣ್ಣು ತನ್ನವಳಾದರೆ ಬದುಕೆಷ್ಟು ಸುಂದರವಾಗಿರಬಹುದು' ಎಂದು ಭವಿಷ್ಯತ್ತಿನ ಬಗ್ಗೆ ಏನೇನೋ ಕನಸು ಕಂಡವನಿಗೆ ಒಂದು ಧ್ವನಿ ಎಚ್ಚರಿಸಿತು.

''ಹುಸೇನ, ನೀನು ಸತ್ತಾರ್ ಬ್ಯಾರಿಗಳ ಅಂಗಡಿಗೆ ಹೋಗು. ಅಲ್ಲಿ ಅವರು ಇರುತ್ತಾರೆ. ಮನೆಯಲ್ಲಿ ಇವತ್ತು ಗೌಜಿ. ಅದಕ್ಕೆ ಸಾಮಾನೆಲ್ಲಾ ಆಗಬೇಕು'' ಜುಬೇದಾಳ ಉಮ್ಮ ಹೇಳಿದರು.

''ಗೌಜಿ ? ಏನು ಅಂತಹುದ್ದು ?'' ಈತ ವಿಶೇಷ ಕುತೂಹಲದಿಂದ ಕೇಳಿದ.

''ಇಂದು ಜುಬೇದಾಳನ್ನು ನೋಡಲು ಸಿಟಿಯಿಂದ ಗಂಡಿನ ಕಡೆಯವರು ಬರುತ್ತಾರೆ.''

ಹುಸೇನ ದಿಗ್ಭ್ರಾಂತನಾಗಿ ನಿಂತ. ಜುಬೇದಾಳ ಮುಖ ಇಷ್ಟು ಕೆಂಪಾಗಿ ಅಲ್ಲಿ ಲಜ್ಜೆ ತುಂಬಿಕೊಂಡು ಅವಳು ಮದುಮಗಳಂತೆ ನಾಚಿ ಒಳ ಓಡಿದಾಗ ಆತನ ಕನಸೆಲ್ಲ ಬಿರುಗಾಳಿಗೆ ಸಿಕ್ಕಿ ನುಚ್ಚು ನೂರಾದಂತಾಗಿ ಆತ ಭಾರವಾದ ಹೃದಯ ಹೊತ್ತು ಅಂಗಡಿ ಕಡೆ ತೆರಳಿದ.

ಎರಡನೇ ರಾತ್ರಿ ಕೇರಳದ ಕುಟ್ಟಿ ತಂಜಲ್ ಅವರ ಮಾಪಿಳ್ಳೆಗಾನಕ್ಕೆ ಹೋಗಲೇಬೇಕೆಂಬ ಹಠದಲ್ಲಿ ಉಮ್ಮಾತುಮ್ಮ-ಅಮೀನಾ ನಿಶ್ಚಯಿಸಿಕೊಂಡು ರಾತ್ರಿಯಾಗುವುದನ್ನೇ ಕಾಯುತ್ತಿದ್ದರು. ವಾಂತಿ ಮಾಡಿಕೊಂಡ ಹುಡುಗಿ ಹಗಲಿಡೀ ವಾಂತಿ ಮಾಡದೇ ಒಳಗೇ ಕುಳಿತು ಬೀಡಿಕಟ್ಟುವುದರಲ್ಲೇ ತಲ್ಲೀನಳಾಗಿದ್ದಳು. ಅವಳಿಗೂ ಮಸೀದಿಯ ಬಳಿ ಹೋಗಿ, ಕುಟ್ಟಿ ತಂಜಲ್ ಅವರ ಮಾಪಿಳ್ಳೆಗಾನ ಕೇಳಬೇಕೆಂಬ ಕುತೂಹಲ ಹುಟ್ಟತೊಡಗಿ, ತಂಗಿ ನಫೀಸಾಳನ್ನು ಕರೆದು ಕೇಳಿದಳು.

''ನಫೀಸಾ, ನೀನು ಇಂದು ಮಾಪಿಳ್ಳೆಗಾನಕ್ಕೆ ಹೋಗುತ್ತಿಯೇನೊ....?''

''ನನಗೆ ಆಸೆಯೇನೋ ಇದೆ. ಆದರೆ ಅಜ್ಜಿ ಉಮ್ಮ ನಮ್ಮಿಬ್ಬರನ್ನೇ ಇಲ್ಲಿ ಕೂಡಿ ಹಾಕಿ ತಾವು ಹೋಗುವ ಹೊಂಚು ಹಾಕಿಕೊಂಡಿದ್ದಾರೆ.''

''ನನಗೆ ಹೋಗಲೇಬೇಕು. ನಫೀಸಾ.''

''ಹೇಗೆ ಹೋಗುವುದು ಅಕ್ಕ. ನಿನ್ನೆ ನೀನು ವಾಂತಿ ಮಾಡಿದ್ದರ ಬಗ್ಗೆ ಏನೋ ಕಲ್ಪಿಸಿಕೊಂಡು ನೀನು ಮನೆಯ ಹೊರಗೆ ಹೋದರೆ ಮಾನ ಹರಾಜಾಗಬಹುದೆಂಬ ಶಂಕೆಯಲ್ಲಿ ನನ್ನನ್ನು ನಿನ್ನ ಜೊತೆಯಲ್ಲಿ ಕೂಡಿ ಹಾಕುವ ಅಂದಾಜು ಅವರದ್ದು'' ಎಂದವಳು ಕುತೂಹಲದಿಂದ ಅಕ್ಕನ ಹೊಟ್ಟೆಯನ್ನು ನೋಡುತ್ತಾ ಮತ್ತೆ ಕೇಳಿದಳು, ''ಹೌದೇ ಅಕ್ಕಾ, ನೀ ಯಾರಿಗಾದರೂ ಕದ್ದು ಬಸುರಾಗಿದ್ದೀಯಾ ?''

ಜಮೀಲಾ ತಂಗಿಯ ತಲೆಯ ಮೇಲೆ ಮೊಟಕಿ, ಕಣ್ಣಲ್ಲಿ ಕಂಬನಿ ತುಳುಕಿಸುತ್ತಾ, ''ನಿನಗೂ ಸಂಶಯವೇನೇ ನನ್ನ ಮೇಲೆ ? ನನ್ನ ಈ ದೇಹವನ್ನು ಮೋಹಿಸಿ ಯಾರು ಬರುತ್ತಾರೆ ಹೇಳು ?'' ಎಂದಳು.

''ಹಾಗಾದರೆ ಮತ್ಯಾಕೆ ನೀ ಮುಟ್ಟಾಗಿಲ್ಲ?'' ಎಂದಾಗ ಈಕೆ ಬೆದರಿ ಹೊಟ್ಟೆಯಲ್ಲಿ ಮತ್ತೆ ಸಂಕಟವಾಗಿ ಓಡಿ ಕುರುಬಾಗಿಲಲ್ಲಿ 'ವ್ಯಾಕ್ ವ್ಯಾಕ್' ಎಂದು ವಾಂತಿ ಮಾಡಿಕೊಳ್ಳತೊಡಗಿದಳು.

ಆಗತಾನೇ ಕತ್ತಲಾವರಿಸಿಕೊಂಡು ಬೇಗ ಊಟಮಾಡಿ, ಕುಟ್ಟಿ ತಂಜಲ್ ಮಾಪಿಳ್ಳೆ ಪಾಟ್ಟಿಗೆ ಹೊರಟುನಿಂತಿದ್ದ ಉಮ್ಮಾತುಮ್ಮ-ಅಮೀನಾ ಕುರುಬಾಗಿಲಲ್ಲಿ ಈ ದಿನವೂ ಕೇಳಿಬಂದ, ''ವ್ಯಾಕ್ ವ್ಯಾಕ್'' ಎನ್ನುವ ವಾಂತಿಯ ಸದ್ದಿಗೆ ಶಕ್ತಿ ಕಳೆದುಕೊಂಡು ಕುಸಿದುಬಿದ್ದರು. ಮತ್ತೆ ಹೋಗಲಾರದೆ ಈ ಮನೆಯ ಮಾನವನ್ನೇ ಸರ್ವನಾಶಮಾಡಿದಳು ಎನ್ನುವಂತೆ ವಾಂತಿಯನ್ನು ಪೂರ್ತಿ ಮಾಡಲು ಬಿಡದೆ ಅಮೀನಾ ಮಗಳನ್ನು ದರದರನೆ ಎಳೆದುಕೊಂಡು ಬಂದು ಕೆಳಗೆ ತಳ್ಳಿ, ಬೆನ್ನಿಗೆ ಗುದ್ದತೊಡಗಿದಳು. ಉಮ್ಮಾತುಮ್ಮ ಏನೊಂದು ಪ್ರತಿಕ್ರಿಯಿಸದೆ ! ತನ್ನ ಸೊಸೆ ಅವಳ ಮಗಳನ್ನು ಗುದ್ದುವುದನ್ನು ಹಾಗೇ ನೋಡುತ್ತಿದ್ದರು. ಗುದ್ದಿ-ಗುದ್ದಿ ಸಾಕಾದ ಅಮೀನಾ ಉಮ್ಮಾತುಮ್ಮರ ಬಳಿ ಬಂದು, ''ಅತ್ತೇ ಇವಳ ಈ ಕೆಟ್ಟ ಶಂಕೆಯ ಹೊಟ್ಟೆ ಇಳಿಸೋದಕ್ಕೆ ಏನಾದರೂ ಮದ್ದು ಇದ್ದರೆ ಅರೆದುಕೊಡಿ, ಬಲವಂತವಾಗಿ ಕುಡಿಸಿ ಇವಳ ಗರ್ಭತೊಳೆಯಿಸಿಬಿಡೋಣ'' ಎಂದಾಗ, ವಾಂತಿ ಮಾಡಿಕೊಂಡ ಹುಡುಗಿ ಜೋರಾಗಿ ಅಳತೊಡಗಿದಳು.

ಇತ್ತ ಜಮಾಲ್ ಬ್ಯಾರಿಗಳ ಮನೆಯಿಂದ ಹೊರಬಿದ್ದ ಹುಸೇನ ಇತ್ತ ಮನೆಗೂ ಬಾರದೇ, ಅತ್ತ ರೈಸ್‌ಮಿಲ್ ಕಡೆಗೂ ಹೋಗದೆ ಮಧ್ಯಾಹ್ನ ಉಸ್ಮಾನ್ ಬ್ಯಾರಿಯ ಹೋಟೆಲ್ಲಿನಲ್ಲಿ ಊಟಮಾಡಿ ರಾತ್ರಿಯ ಹೊತ್ತಿಗೆ ಮಸೀದಿಯ ಬಳಿ ಬಂದ. ಜಮಾಲ್‌ಬ್ಯಾರಿಗಳ ಮಗಳು ಜುಬೇದಾಳನ್ನು ನೋಡಲು ಬಂದ ಸಿಟಿಯ ಗಂಡು, ಐವತ್ತು ಪವನು ಚಿನ್ನ ಮತ್ತು ಐವತ್ತು ಸಾವಿರಕ್ಕೆ ಒಪ್ಪಿಹೋದರೆಂಬ ಸುದ್ದಿ ಮಸೀದಿಯಲ್ಲಿ ಕೇಳಿ ಇನ್ನಷ್ಟು ಹತಾಶನಾಗಿ ಅಲ್ಲಿ ಕುಳಿತುಕೊಳ್ಳಲೂ ಆಗದೇ ಕುಟ್ಟಿ ತಂಜಲ್ ಅವರ ಮಾಪಿಳ್ಳೆಪಾಟನ್ನು ಕೇಳುವ ಸಂದರ್ಭವನ್ನೂ ಬಿಟ್ಟು ಹೋಗಲಾರದೆ ತೊಳಲಾಡತೊಡಗಿದ.

ರಾತ್ರಿ ಸರಿ ಒಂಭತ್ತಕ್ಕೆ ಜಮಾತರೆಲ್ಲ ಆ ಎರಡನೆ ರಾತ್ರಿಯೂ ಮಾಪಿಳ್ಳೆಗಾನದ ಇಂಪಿಗಾಗಿ ಕಾತರಿಸುತ್ತಾ ಅಲ್ಲಿ ಬಂದು ಸೇರಿದರು. ಆ ಬುರ್ಖಾದ ಹೆಂಗಸರ ನಡುವೆ ಮಿಂಚುತ್ತಿರುವ ಚಂದದ ಹುಡುಗಿ ಜುಬೇದಾಳದೇ ಅಲ್ಲಿ ಸಂಗತಿಯಾಗಿ ಎಲ್ಲರೂ ಅವಳ ನಸೀಬಿನ ಬಗ್ಗೆ ಹಾಡಿ ಹೊಗಳುತ್ತಾ ಸಿಟಿಯ ಆ ಇಂಜಿನಿಯರ್ ಗಂಡಿನ ಬಗ್ಗೆ, ಅವನ ಮಾರುತಿ ಕಾರಿನ ಬಗ್ಗೆ ಖುಷಿಯಾದ ಕತೆ ಹೇಳತೊಡಗಿದ್ದರು. ಇದೆಲ್ಲಾ ಮಾತುಗಳು ಹುಸೇನನ ಕಿವಿಯನ್ನು ಹೊಕ್ಕು ಆತ ಗಲಿಬಿಲಿಗೊಳ್ಳತೊಡಗಿದ.

ಇಷ್ಟು ಹೊತ್ತಿಗೆ ಕೇರಳದ ಕುಟ್ಟಿ ತಂಜಲ್ ಅವರ ಮಾಪಿಳ್ಳೆ ಪಾಟ್ ಆರಂಭವಾಗಿ ಆ ಪಾಟ್ಟಿನ ಮೋಡಿಗೆ ತಲೆದೂಗುತ್ತಾ ಹೆಂಗಸರು, ಗಂಡಸರು, ''ವ್ಹಾ'' ಎಂತಹಾ ಕಂಠ, ಎಂತಹಾ ಗಾಂಭೀರ್ಯ' ಎಂದು ಮೆಚ್ಚಿ ಸಮಯದ ಪರಿವೆಯೇ ಇಲ್ಲದೆ ಅದರಲ್ಲೇ ತಲ್ಲೀನರಾಗಿರುವ ವೇಳೆಯಲ್ಲಿ ಹುಸೇನ ಹೆಂಗಸರಲ್ಲಿ ಎದ್ದು ಕಾಣುವ ಜುಬೇದಳನ್ನೇ ನೋಡುತ್ತಾ ''ಛೆ ನಾನಿವಳನ್ನು ಮರೆತೇ ಬಿಡಬೇಕು. ನನ್ನದು ಏಕಮುಖ ಪ್ರೇಮ. ಅವಳಿಗೆ ನನ್ನ ಬಗ್ಗೆ ಆಕ್ಕರೆಯೇ ಇಲ್ಲ. ಹೇಗೆ ಸಿಟಿಯ ಗಂಡಿನ ಮೋಡಿಗೆ ಒಳಗಾಗಿಬಿಟ್ಟಿದ್ದಾಳೆ'' ಎಂದುಕೊಂಡು ಸಭೆಯಿಂದ ಎದ್ದು ಆ ರಾತ್ರಿಯಲ್ಲಿ ಒಬ್ಬನೇ ತನ್ನ ಮನೆಯತ್ತ ಹೆಜ್ಜೆಹಾಕಿದ.

ಕೇರಳದ ಕುಟ್ಟಿ ತಜಲ್ ಸುಮಾರು ಹೊತ್ತಿನವರೆಗೆ ಬದ್'ರ್ ಯುದ್ಧ ಕತೆ, ಬಕ್ರಿದ್ ಹಬ್ಬದ ಕತೆಯನ್ನೆಲ್ಲಾ ಪಾಟ್ಟಿನ ರೂಪದಲ್ಲಿ ಹಾಡಿ ಕೊನೆಗೆ ಹೀಗೆ ಹೇಳುವುದು ಕತ್ತಲಲ್ಲಿ ನಡೆಯುತ್ತಿರುವ ಹುಸೇನನ ಕಿವಿ ತುಂಬತೊಡಗಿತು.

''ನಾನು ಕೇರಳದಿಂದ ಇಲ್ಲಿಗೆ ಪಾಟ್ ಹಾಡಲು ಮಾತ್ರ ಬಂದಿಲ್ಲ. ನಮ್ಮ ಮುಸ್ಲಿಂ ಜನರು ಹೇಗೆ ಬದುಕಬೇಕೆಂಬುದನ್ನು ತಿಳಿಸಲು ಬಂದಿದ್ದೇನೆ. ಕೇರಳದಲ್ಲಿ ಹೆಣ್ಮಕ್ಕಳು ಲೌಕಿಕ ಶಿಕ್ಷಣವನ್ನು ಕಲಿತು ಸಾರ್ವಜನಿಕ ರಂಗದಲ್ಲಿ ಮುಂದೆ ಬರುತ್ತಿದ್ದಾರೆ. ಖುರಾನ್ ಲೌಕಿಕ ಶಿಕ್ಷಣವನ್ನೂ ಪ್ರೋತ್ಸಾಹಿಸುತ್ತದೆ. ಧಾರ್ಮಿಕ ಶಿಕ್ಷಣದಷ್ಟೇ ಮುಖ್ಯ ಲೌಕಿಕ ಶಿಕ್ಷಣ ಕೂಡ. ಖುರಾನ್ ಶಿಕ್ಷಣ ಹೇಗೆ ಜನರನ್ನು ಒಳ್ಳೆಯ ಹಾದಿಯಲ್ಲಿ ನಡೆಯುವಂತೆ ಮತ್ತು ಅವರನ್ನು ಸಚ್ಚಾರಿತ್ರ್ಯ ಮಾನವೀಯತೆ ತುಂಬಿದ ಮನುಷ್ಯರನ್ನಾಗಿ ಮಾಡುತ್ತದೋ ಹಾಗೆ ಲೌಕಿಕ ಶಿಕ್ಷಣವೂ. ಹಾಗೇ ಹುಡುಗಿಯರಿಗೆ ಎಳೆಯ ಪ್ರಾಯದಲ್ಲೇ ನಿಖಾಹ ಮಾಡುವುದನ್ನು ನಿಲ್ಲಿಸಿ ಅವಳಿಗೆ ಬುದ್ಧಿಶಕ್ತಿ ಬೆಳೆದು ದೈಹಿಕವಾಗಿ ದೃಢವಾಗುವ ಹದಿನೆಂಟು-ಇಪ್ಪತ್ತು ವರುಷಗಳ ನಂತರ ಮದುವೆ ಮಾಡುವುದು ಒಳ್ಳೆಯದು.''

ನಡೆಯುತ್ತಿದ್ದ ಹುಸೇನನಿಗೆ ಇದೆಲ್ಲಾ ಕಿವಿ ತುಂಬಿ ಆತ ಅತಿಯಾಗಿ ಸ್ಫೂರ್ತಿಗೊಂಡು ಮನೆಗೆ ಬಂದು ಬಾಗಿಲು ತಟ್ಟಿದ. ಆತ ಬಾಗಿಲು ತಟ್ಟುವುದನ್ನೇ ಕಾದುಕೊಂಡಂತಿದ್ದ ಜಮೀಲಾ ಓಡಿಬಂದು ಅವನಿಗೆ ತೆಕ್ಕೆ ಬಿದ್ದು, ''ಹುಸೇನ, ನೀನು ನನ್ನ ತಮ್ಮನೆಂಬ ಪ್ರೀತಿಯಿಂದ ಹೇಳುತ್ತಿದ್ದೇನೆ. ನಾನು ನಿಜಕ್ಕೂ ಬಸಿರಾಗಿಲ್ಲ ಕಣೋ, ಅಲ್ಲಾಹುವಿನಾಣೆ ನಿನ್ನ ಅಕ್ಕನಾಗಿ ನಾನು ಪ್ರಮಾಣ ಮಾಡುತ್ತಿದ್ದೇನೆ. ನಾನು ಈ ಮನೆಯ ಮಗಳಲ್ವೇ. ಎಂದಾದರೂ ಈ ಮನೆಗೆ ಕೆಟ್ಟ ಹೆಸರು ತರುತ್ತೇನೆಯೇ. ನನ್ನ ಈ ದೇಹಕ್ಕೆ ಯಾರು ಮರುಳಾಗುತ್ತಾರೆ. ನನಗೆ ಇಪ್ಪತ್ತನಾಲ್ಕಾಯಿತು. ನನ್ನ ಪ್ರಾಯದ ರೋಸಲೀನಾ, ಕಾವೇರಿಯರು ಇನ್ನೂ ಮದುವೆಯಾಗದೆ ಹೇಗೆ ಝುಂ ಅಂತ ಇದ್ದಾರೆ. ಆದರೆ ನನಗ್ಯಾಕೆ ಶಿಕ್ಷೆ. ನಮ್ಮಲ್ಲಿ

ಹದಿನೈದು-ಹದಿನಾರಾದಾಗ ಮದುವೆ ಮಾಡಿಬಿಡುತ್ತಾರೆ. ಇಪ್ಪತ್ತಾದ ಕೂಡಲೇ ವ್ಯಥೆ ಪಟ್ಟುಕೊಳ್ಳುತ್ತಾರೆ.''

ಹುಸೇನ ತನ್ನಲ್ಲಿ ಈಗಾಗಲೇ ಹುಟ್ಟಿಕೊಂಡ ಕಾಮವಾಂಛೆಯ ನೆನಪಾಗಿ ಜುಬೇದಾ ತನಗೆ ದಕ್ಕದೆ ಹೋದ ನೋವಿನಲ್ಲಿ ಇದ್ದವ, ಅಕ್ಕನ ಈ ಪ್ರಲಾಪಕ್ಕೆ ಬೆದರಿ, ಬೇಸತ್ತು ಅವಳ ಕಣ್ಣನ್ನೇ ಸೂಕ್ಷ್ಮವಾಗಿ ನೋಡುತ್ತಾ, ತನಗೂ ಆ ಶಂಕೆ ನಿವಾರಣೆ ಆಗದೆ, ಅಕ್ಕ ಅದನ್ನು ಗಮನಿಸಿ ತಮ್ಮನ ಕೈಯನ್ನು ಹಿಡಿದು ತನ್ನ ಹೊಟ್ಟೆಯ ಮೇಲೆ ಒತ್ತಿ, ''ನಿನಗೆ ಏನಾದರೂ ಗೊತ್ತಾಗುತ್ತಾ. ನನ್ನ ಹೊಟ್ಟೆಯಲ್ಲಿ ಏನಾದರೂ ಇರುವಂತೆ ಕಾಣುತ್ತದೆಯೇ'' ಎಂದಾಗ ಆತನಿಗೆ ಅಕ್ಕ ಸುಳ್ಳು ಹೇಳಲಿಕ್ಕಿಲ್ಲ ಎಂಬ ಭರವಸೆ ಮೂಡಿ, ''ಅಕ್ಕ ರಾತ್ರಿ, ಬೆಳಗಾಗಲಿ ಏನಾದರೂ ಮಾಡೋಣ'' ಎಂದು ಪರಿಹಾರ ಸೂಚಿಸಿದ.

ಬೆಳಗಿನ ಅಝಾನ್ ಕಿವಿ ಸೋಕಿದಾಗಲೆ ಎದ್ದ ಜಮೀಲಾ ವಝೂ ಮಾಡಿ ನಮಾಜು ಮುಗಿಸಿ 'ತಾನ್ಯಾಕೋ ಹಗುರಾಗಿದ್ದೇನೆ' ಅಂದುಕೊಂಡವಳು ಕನ್ನಡಿಯ ಎದುರು ಹೋಗಿ ನಿಂತಳು. ಅವಳಿಗೆ ಅಚ್ಚರಿಯಾಯಿತು. 'ಇಷ್ಟು ತೋರ-ತೋರ ಇದ್ದ ತಾನು ಹೇಗೆ ಇಷ್ಟು ಸಪೂರ ಆದೆ ಎಂದು ಯೋಚಿಸಿ, ಇದು ಭ್ರಮೆಯೋ ಏನೋ ಅಂದುಕೊಂಡು ತಂಗಿ ಶಹೀದಾಳನ್ನು ತಟ್ಟಿ ಎಬ್ಬಿಸಿ, ''ಲೇ ಶಹೀದಾ, ನೋಡೇ ನಾ ಎಷ್ಟು ಸಪೂರ ಆಗಿದ್ದೇನಲ್ಲವೆ'' ಎಂದಾಗ ಶಹೀದಾ ಅಕ್ಕಳನ್ನೇ ದೃಷ್ಟಿ ಕೀಳದೇ ನೋಡುತ್ತಾ, ''ಯಾ ಪಡಚ್ಯೋನೆ, ಸ್ವಲ್ಪ ಸಪೂರ ಆಗಿದ್ದಿ, ಆದರೆ ತುಂಬಾ ಏನೂ ಅಲ್ಲ. ನೀನು ಹೀಗೆ ನಾಲ್ಕು ದಿನ ನನ್ನ ಹಾಗೇ ಏನೂ ತಿನ್ನದೆ ಉಪವಾಸ'' ಮಾಡುತ್ತಿರು. ನನ್ನ ಹಾಗೇ ಆಗುತ್ತೀ'' ಎಂದಾಗ ಹಸಿವು ಹೊಟ್ಟೆಯಲ್ಲಿ ಉದ್ಭವಿಸಿ ಜಮೀಲಾ ಅಡಿಗೆ ಮನೆಗೆ ಓಡಿದಳು.

ಹಾಲಿಲ್ಲದ ಕಪ್ಪನೆಯ ಚಹಾ ಕುಡಿದು ಪೇಟೆಯ ಹಾದಿ ಹಿಡಿದ ಹುಸೇನ ವೈದ್ಯರನ್ನು ಕರೆತರಲೇಬೇಕೆಂಬ ದೃಢ ನಿರ್ಧಾರದಲ್ಲಿದ್ದಾಗ, ಇಲ್ಲಿ ಮನೇಲಿ ಉಮ್ಮಾತುಮ್ಮ ಮತ್ತು ಅಮೀನಾ ಮುಟ್ಟಾಗದೆ ವಾಂತಿ ಮಾಡಿಕೊಂಡಿರುವ ಜಮೀಲಾಳ ಹೊಟ್ಟೆಯಲ್ಲಿನ ಕೆಟ್ಟ ಪಿಂಡವನ್ನು ತೊಳೆದುಬಿಡಬೇಕೆಂಬ ನಿರ್ಧಾರದಲ್ಲಿ ಎಂತೆಂತದೋ ಕಾಯಿ ಸೊಪ್ಪುಗಳನ್ನು ತಂದು ಅರೆಯುವ ಕಲ್ಲಿನಲ್ಲಿ ಅರೆಯತೊಡಗಿದರು. ಆ ಕಲ್ಲಿನ ಅರೆಯುವ ಸದ್ದಿಗೆ ಜಮೀಲಾ ಹೊಟ್ಟೆ ಬಡಿದು ಕೊಂಡು ಅಳುತ್ತಾ, ''ಯಾ ಪಡಚ್ಯೋನೆ, ನಾನೆಂತಹ ದರಿದ್ರದವಳು, ನನಗೆ ಈಗಲಾದರೂ ಮುಟ್ಟಾಗಬಾರದೇ'' ಎಂದು ಸಂಕಟಪಡುತ್ತಿರುವಾಗ ಅವಳ ಕಣ್ಣೀರ ಪ್ರತಾಪವನ್ನು ಕಂಡ ಶಹೀದಾಳ ಎದೆ ದ್ರವಿಸಿ, ''ಏನೇ ಅಕ್ಕಾ ನೀನು, ಹಾಗೆ ಹೊಟ್ಟೆ ಬಡಿದುಕೊಳ್ಳೋದೇ, ನೀನು ಏನೂ ಮಾಡಿಕೊಂಡಿಲ್ಲವೆಂಬ ನಂಬಿಕೆ

ನಿನಗಿರುವಾಗ ನಿನಗ್ಯಾತರ ಹೆದರಿಕೆ'' ಎಂದಳು. ಅಕ್ಕ ಅವಳಿಗೆ, ''ನೋಡೇ ಅಲ್ಲಿ ಉಮ್ಮ-ಅಜ್ಜಿ ಎಂತಹುದೋ ಪಾಷಾಣ ಅರೆಯುತ್ತಿದ್ದಾರೆ. ಅದನ್ನು ಕುಡಿದರೆ ನಾನು ನಿಜಕ್ಕೂ ಸತ್ತು ಹೋಗುತ್ತೇನಲ್ವೇ'' ಎಂದಳು.

ಶಹೀದಾಳಿಗೆ ಏನೂ ಮಾಡಲಾಗದೆ ಅಕ್ಕಳನ್ನು ತಟ್ಟಿ ಸಂತೈಸುತ್ತಾ ಕುಳಿತಿರಬೇಕಾದರೆ, ಕಾಯಿ, ಎಲೆಗಳ ಮಿಶ್ರಣವನ್ನು ಅರೆದು ಒಂದು ಪಾತ್ರೆಯಲ್ಲಿ ತಂದು ಅಮೀನಾ ಮನೆಯ ಬಾಗಿಲು ಮುಚ್ಚಿ ಓಡಿಬಂದು ಜಮೀಲಾಳ ಕೈಗಳನ್ನು ಬಿಗಿಯಾಗಿ ಹಿಡಿದು ಬಾಯಿ ತೆರೆಯುವಂತೆ ಹೇಳಿ ಉಮ್ಮಾತುಮ್ಮಾರೊಡನೆ, ''ಅತ್ತೇ ಬೇಗ ಕುಡಿಸಿಬಿಡಿ. ಇವಳ ಗರ್ಭದಲ್ಲಿರುವ ಆ ಕೆಟ್ಟ ಶಂಕೆ ನಾಶವಾಗಿ ಹೋಗಲಿ'' ಎಂದಳು. ಬಾಯಿ ತೆರೆಯದೆ ಹಠಮಾಡಿ ಹುಡುಗಿಯ ಮೂಗಿಗೆ ಆ ಮದ್ದಿನ ಕೆಟ್ಟ ವಾಸನೆ ಸೋಕಿ, ಅದರಿಂದ ಹೊಟ್ಟೆತೊಳಸಿ, ಅವಳು 'ವ್ಯಾಕ್' ಎಂದು ಆ ಮದ್ದಿನ ಪಾತ್ರೆಗೆ ಮತ್ತೆ ವಾಂತಿ ಮಾಡಿದಳು. ಅಷ್ಟು ಕಷ್ಟದಲ್ಲಿ ಹುಡುಕಿ ತಂದು ಅರೆದ ಮದ್ದು ಹಾಳಾದುದಕ್ಕೆ ಸಿಟ್ಟಿಗೆದ್ದ ಅಮೀನಾ, ''ಹಾಳು ಹೆಣ್ಣೇ ಇರು ನಿಂಗೆ ಮಾಡುತ್ತೇನೆ'' ಎಂದು ಒಳ ಹೋಗುವಷ್ಟರಲ್ಲಿ ಮುಚ್ಚಿದ ಬಾಗಿಲನ್ನು ಹುಸೇನ ಬಂದು ತಟ್ಟತೊಡಗಿದ. ಶಹೀದಾ ಓಡಿ ಹೋಗಿ ಬಾಗಿಲು ತೆರೆದು ಅಲ್ಲಿ ಹುಸೇನನೊಂದಿಗೆ ಡಾಕ್ಟರರನ್ನು ಕಂಡು, ''ಅಕ್ಕಾ ಡಾಕ್ಟರು ಬಂದಿದ್ದಾರೆ'' ಎಂದು ಒಳಗೆ ಓಡಿಬಂದಳು.

ಅಲ್ಲಿ ಡಾಕ್ಟರರನ್ನು ಕಂಡು ಉಮ್ಮಾತುಮ್ಮಾ-ಅಮೀನಾ ಏನೊಂದೂ ಅರ್ಥವಾಗದೆ ಗಲಿಬಿಲಿಗೊಂಡು, ಡಾಕ್ಟರ್ ಹತ್ತಿರ ಬಂದು ಜಮೀಲಾಳನ್ನು ಪರೀಕ್ಷಿಸಲು ''ನೀವೆಲ್ಲರೂ ಹೊರಗೆ ಹೋಗಿ'' ಎಂದು, ಹುಸೇನ ''ಚೆನ್ನಾಗಿ ನೋಡಿ ಡಾಕ್ಟರೇ ಸತ್ಯವನ್ನು ಬಚ್ಚಿಡದೇ ಹೇಳಿ'' ಎಂದು ಎಲ್ಲರನ್ನೂ ಮತ್ತೊಂದು ಕೋಣೆಗೆ ಕರೆದುಕೊಂಡು ಬಂದ.

ಉಮ್ಮಾತುಮ್ಮಾ-ಅಮೀನಾ ಭೀತಿಯಿಂದ ಮುಚ್ಚಿದ ಬಾಗಿಲನ್ನೇ ನೋಡುತ್ತಾ ಆ ಕೋಣೆಯ ಒಳಗೆ ಜಮೀಲಾ ಮತ್ತು ಡಾಕ್ಟರು ಇಬ್ಬರೇ ಇರುವುದರ ಅರಿವಾಗಿ ಎದೆ 'ಲಬ್‌ಲಬ್' ಬಡಿದುಕೊಳ್ಳುತ್ತಾ ಮುಚ್ಚಿದ ಬಾಗಿಲು ತೆರೆಯುವುದನ್ನೇ ಕಾಯತೊಡಗಿದರು.

ಮುಚ್ಚಿದ ಬಾಗಿಲು ತೆರೆದು ಹೊರಬಂದ ವೈದ್ಯರು, ''ಎಂತಹಾ ಜನ ನೀವು. ಹುಡುಗಿಯನ್ನು ಕೊಂದೇ ಬಿಡುತ್ತಿದ್ದಿರಲ್ಲಾ. ಹುಡುಗಿಗೆ ನೀವು ಅಂದುಕೊಂಡಂತೆ ಏನೂ ಆಗಿಲ್ಲ. ನೀವು ಏನು ಶಂಕೆ ಪಟ್ಟಿರೋ ಅದು ಸರಿಯಲ್ಲ. ಅವಳಿಗೆ ದೇಹಾಲಸ್ಯವಾಗಿ ವಾಂತಿ ಆದದ್ದಷ್ಟೇ. ಇನ್ನು ತಿಂಗಳಿಗೆ ಸರಿ ಆಗಬೇಕಾದ ಮುಟ್ಟು ಏಕೆ ಆಗಲಿಲ್ಲ ಎಂಬ ಸಂಶಯ ದೈಹಿಕ ಅಸಮತೋಲನದಿಂದಾಗಿ ಕೆಲವೊಮ್ಮೆ

ಮುಟ್ಟು ಸರಿಯಾಗಿ ಆಗುವುದಿಲ್ಲ. ಹುಡುಗಿ ಪರಿಶುದ್ಧಳು ! ವೃಥಾ ಸಂಶಯಪಟ್ಟು ಹುಡುಗಿಯ ಬಾಳಿಗೆ ಮುಳ್ಳಾಗಬೇಡಿ !''

ಎರಡು ದಿನದಿಂದಲೂ ಬಿಗಿದುಕೊಂಡಿದ್ದ ಉಮ್ಮಾತುಮ್ಮ-ಅಮೀನಾಳ ಮುಖ ಒಮ್ಮೆಲೆ ಅರಳಿ ಅಲ್ಲಿ ಸಂತಸ ಉಕ್ಕಿ, ಆ ಸಂತಸವು ಜಮೀಲಾಳ ಮುಖದಲ್ಲಿ ಹಬ್ಬಿ ಅವಳು ನೋಡುತ್ತಿದ್ದಂತೆ ಅಮೀನಾ ಹತ್ತಿರ ಬಂದು ಅವಳನ್ನು ತಬ್ಬಿ ಹಿಡಿದು, ''ಯಾ ನಂಡೆ ಪುತ್ತುಮೋಳೇ, ನಿನಗೆ ನಾನೇ ಜನ್ಮವಿತ್ತು ನಾನೇ ಬೆಳೆಸಿ ದೊಡ್ಡವಳನ್ನಾಗಿ ಮಾಡಿ ಏನೇನೋ ಶಂಕೆಪಟ್ಟೆನಲ್ಲವೇ. ಅಯ್ಯೋ ನನ್ನ ಹಾಳು ಜನ್ಮವೇ, ಇನ್ನೆಂದೂ ನಿನ್ನನ್ನು ಹೊಡಿಯಲ್ಲ ಮೋಳೇ'' ಎಂದು ಅವಳ ಮೈ ದಡವಿ ಪ್ರಲಾಪಿಸುತ್ತಾ, ''ಇಂದು ಎಲ್ಲರೂ ಕೇರಳದ ಕುಟ್ಟಿ ತಂಜಲ್‌ಳವರ ಮಾಪಿಳ್ಳೆ ಗಾನಕ್ಕೆ ಹೋಗಬೇಕು'' ಎನ್ನುವಷ್ಟರಲ್ಲಿ ದೂರ ಹೋಗಿದ್ದ ಜಮೀಲಾಳ ಅಪ್ಪ ಒಳ ಬರುತ್ತಾ ಉಮ್ಮಾತುಮ್ಮರಲ್ಲಿ ''ಉಮ್ಮಾ ಒಂದು ಒಳ್ಳೆಯ ಸುದ್ದಿ. ಬಂಟ್ವಾಳದ ಹುಡುಗನೊಬ್ಬ ನಮ್ಮ ಹುಡಗೀನ ಫೋಟೋ ನೋಡಿ ಮದುವೆಯಾಗಲು ಒಪ್ಪಿದ್ದಾನೆ'' ಎನ್ನುವ ಶುಭ ಸುದ್ದಿ ಹೇಳುತ್ತಿದ್ದಂತೆ ಆ ಮನೆಯಲ್ಲೆಲ್ಲಾ ಖುಷಿ, ನಗು ತುಂಬಿತು. ಹುಸೇನ ದಪ್ಪನ್ನು ಎತ್ತಿಕೊಂಡು ಜೋರಾಗಿ ಬಾರಿಸುತ್ತಾ ಖುಷಿಯಿಂದ ದಪ್ಪು ಪಾಟ್ ಹಾಡುವುದನ್ನು ಜಮೀಲಾಳಾದಿಯಾಗಿ ಎಲ್ಲರೂ ಸಂಭ್ರಮದಿಂದ ನೋಡುತ್ತಿದ್ದರು.

## 2 ಇಸ್ಲಾಮೀಪುರದಲ್ಲೊಂದು ಯಕ್ಷಗಾನ

ಶಂಕರನಾರಾಯಣನ ಕಂಠಕ್ಕೆ ವಿಶಿಷ್ಟ ಶಕ್ತಿ ಇದೆ. ಆತ ಭಾಗವತಿಕೆ ನಡೆಸುತ್ತಾನೆಂದರೆ ಆ ಯಕ್ಷಗಾನಕ್ಕೆ ಏನೋ ಒಂದು ಕಳೆ. ಟೆಂಟಿನ ತುಂಬಾ ಜನ ಮುಗಿಬೀಳುತ್ತಿದ್ದರು. ಯಕ್ಷಗಾನಕ್ಕೆ ಟಿಕೇಟ್ ಸಿಗದೆ ಆತನ ಭಾಗವತಿಕೆಯನ್ನು ನೋಡಲಾಗದೇ ಎಷ್ಟೋ ಮಂದಿ ಕೈ ಕೈ ಹಿಸುಕಿಕೊಂಡು ಹಿಂದಕ್ಕೆ ಹೋಗಿ ಬಿಡುತ್ತಿದ್ದರು. ಅಂತಹವರು ಟೆಂಟಿನ ಹೊರಗೆ ಕುಳಿತು ಮೈಕಿನಲ್ಲಿ ಕೇಳಿಬರುವ ಆತನ ಹಾಡುಗಾರಿಕೆಯನ್ನು ಕೇಳಿಸಿಕೊಂಡು ಧನ್ಯರಾಗುತ್ತಿದ್ದರು. ಆತ ಭಾಗವತಿಕೆ ನಡೆಸುವಾಗ ಚಂಡೆಯವನಿಗೂ, ಮದ್ದಳೆಯವನಿಗೂ ಎಲ್ಲಿಲ್ಲದ ಹುರುಪು. ಇನ್ನು ರಂಗಮಂಟಪಕ್ಕೆ ಬಂದ ಪಾತ್ರಧಾರಿಗಳಂತೂ ಪಾತ್ರಗಳೇ ಮೈಮೇಲೆ ಬಂದಂತೆ ಕುಣಿಯುತ್ತಿದ್ದರು.

ಆದರೆ ಅಂದು,

ಇಸ್ಲಾಮೀಪುರದ ಆ ದೊಡ್ಡ ಬಯಲಿನಲ್ಲಿ ಅಂದು ಝಗ-ಝಗಿಸುವ ರಂಗ ಮಂಟಪ ಹಾಕಿದ್ದರು. ಟೆಂಟಿನೊಳಗೆಲ್ಲಾ ಜನವೋ ಜನ. ಯಾವ ಕ್ಷಣದಲ್ಲಿ ರಂಗಮಂಚದ ಮೇಲೆ ಶಂಕರನಾರಾಯಣ ಬಂದು ಭಾಗವತಿಕೆ ನಡೆಸುತ್ತಾನೋ ಎಂಬ ಕಾತರದಲ್ಲಿದ್ದರು ಜನ. ಮೇಳದ ವ್ಯವಸ್ಥಾಪಕರಿಗಂತೂ ಹೇಳಲಾರದಷ್ಟು ಖುಷಿ, ಟೆಂಟು ತುಂಬಿದೆ. ಸಾಕಷ್ಟು ಹಣದ ಗಳಿಕೆಯಾಗಿದೆ.

ಎಲ್ಲರೂ ಬಂದಿದ್ದಾರೆ. ಚಂಡೆಯವನೂ ಮದ್ದಳೆಯವನೂ ಬಂದಿದ್ದಾರೆ. ಮೇಳದ ವ್ಯವಸ್ಥಾಪಕರು, 'ಸರಿ, ಇನ್ನು ರಂಗಮಂಚಕ್ಕೆ ಹೊರಡಿ !' ಎಂದು ಅಪ್ಪಣೆ ಕೊಡುತ್ತಿದ್ದಂತೆ ಯಾರೋ ಹೇಳಿದರು,

''ಅರೇ ಶಂಕರನಾರಾಯಣ ಎಲ್ಲಿ ?''

ವ್ಯವಸ್ಥಾಪಕರಿಗೆ ಒಮ್ಮೆಲೆ ದಿಗಿಲು ಹುಟ್ಟಿತು. ಮೈಯಲ್ಲೆಲ್ಲಾ ನಡುಕ ಉಂಟಾಯಿತು. 'ಈತ ಎಲ್ಲಿ ತಪ್ಪಿಸಿಕೊಂಡಿದ್ದಾನೆ ? ಹೀಗ್ಯಾಕೆ ಮಾಡಿದ ಈತ. ಆತ ಹೀಗೆ ಕೈಕೊಟ್ಟರೆ ಹೇಗೆ ?' ಹೀಗೆ ಅಂದುಕೊಂಡು ಗಟ್ಟಿಯಾಗಿ ಹೇಳಿದರು,

''ಯಾರಲ್ಲಿ ? ಶಂಕರನಾರಾಯಣ ಎಲ್ಲಿದ್ದಾನೆ. ಹುಡುಕಿ ಬೇಗ ಕರೆತನ್ನಿ !''

ಮತ್ತೊಬ್ಬ ಹೇಳಿದ, ''ಅಲ್ಲಸ್ವಾಮಿ, ಹೀಗೆ ಆಗಿರಬಾರದೇಕೆ ?''

''ಹೀಗೆ ಅಂದರೆ ?''

''ನಿಮಗೆ ಗೊತ್ತಿಲ್ಲ ?! ಕಳೆದ ಹದಿನೈದು ದಿನಗಳ ಹಿಂದೆ ಇಲ್ಲಿ ಹಿಂದುಗಳು

ಅಂದರೆ ನಾವು ಮತ್ತು ಮುಸ್ಲಿಮರು ಪರಸ್ಪರ ಗಲಭೆ ನಡೆಸಿದ್ದು ಗೊತ್ತಲ್ಲ? ಶಂಕರ ನಾರಾಯಣನನ್ನು ಅಪಹರಿಸಿಕೊಂಡು ಹೋಗಿರಬಾರದೇಕೆ ?''

''ಹೌದಲ್ವೇ !'' ವ್ಯವಸ್ಥಾಪಕರಾದ ಅಪ್ಪಾಜಿ ಶಾಸ್ತ್ರಿಗಳು ಗಾಬರಿಗೊಂಡಿದ್ದರು. ಹದಿನೈದು ದಿನಗಳ ಹಿಂದೆ ಪರಸ್ಪರ ಸೌಹಾರ್ದತೆಯಿಂದ ಇದ್ದ ಇಸ್ಲಾಮೀಪುರ ಒಮ್ಮೆಲೆ ಭುಗಿಲೆದ್ದಿತ್ತು. ಇಸ್ಲಾಮೀಪುರ ಕೋಮುಭಾವನೆಯಿಂದ ನರಳಿತ್ತು. ಕಾರಣಗಳು ಏನೂ ಇದ್ದಿರಲಾರವು. ಆದರೆ ಯಾರೋ ಕಿಡಿಗೇಡಿ ಮಾಡಿದ ದುರಂತವೊಂದಕ್ಕೆ ಇಡೀ ಊರೇ ದ್ವೇಷಾಗ್ನಿಯಿಂದ ಬೇಯತೊಡಗಿತ್ತು. ಅನಂತರ ಈ ಹದಿನೈದು ದಿನಗಳಲ್ಲಿ ಒಬ್ಬರನ್ನೊಬ್ಬರು ಈರ್ಷೆಯಿಂದಲೇ ನೋಡ ತೊಡಗಿದರು. ಹಿಂದೂ-ಮುಸ್ಲಿಮರು ಪರಸ್ಪರ ದ್ವೇಷಿಗಳಾಗತೊಡಗಿದ್ದರು. ಇಂತಹ ಸಮಯದಲ್ಲಿಯೇ ಇಸ್ಲಾಮೀಪುರದಲ್ಲಿ ಯಕ್ಷಗಾನ ಆಡಲೇಬೇಕಾದ ಸಂದರ್ಭ ಬಂದಿತ್ತು. ಆದರೆ ಈಗ ನೋಡಿದರೆ ಭಾಗವತಿಕೆ ನಡೆಸುವ ಶಂಕರ ನಾರಾಯಣ ನಾಪತ್ತೆ. ಅಲ್ಲಿ ಗಲಿಬಿಲಿ ಉಂಟಾಯಿತು. ಶಂಕರನಾರಾಯಣ ಬರದಿದ್ದರೆ ಭಾಗವತಿಕೆ ನಡೆಸುವವರು ಯಾರು ?

ಅಷ್ಟರಲ್ಲಿ ಯಾರೋ ಓಡಿಬಂದು ಹೇಳಿದರು.

''ಶಂಕರನಾರಾಯಣ ಮನೆಯಲ್ಲಿಯೇ ಇದ್ದಾನೆ. ಅವನು ಕಂಬಳಿ ಹೊದ್ದು ಮಲಗಿದ್ದಾನೆ.''

ಅಪ್ಪಾಜಿ ಶಾಸ್ತ್ರಿಗಳು ಭಯದಿಂದ ಏದುಸಿರು ಬಿಡತೊಡಗಿದರು.

ಅವನು ಮತ್ತೆ ಹೇಳಿದ.

''ವಿಪರೀತ ಚಳಿ ಜ್ವರ. ಒಂದೇ ಸವನೆ ಕೆಮ್ಮುತ್ತಾನೆ. ಸ್ವರ ಹೊರಡುತ್ತಿಲ್ಲ ಪಾಪ !''

''ಅಂದರೆ ಶಂಕರ ಬರುವುದಿಲ್ಲವಂತೋ ?''

''ಹುಂ.. ಹೇಗೆ ಬರಲಿಕ್ಕಾಗುತ್ತೆ. ಬಂದರೂ ಅವನಿಂದ ಸ್ವರ ಹೊರಡೀತೆ ?''

ಅಪ್ಪಾಜಿ ಶಾಸ್ತ್ರಿಗಳು ಒಮ್ಮೆಲೇ ಹೆಗಲ ಮೇಲಿನ ಬೈರಾಸನ್ನು ಕೊಡವಿಕೊಂಡು ಧಿಗ್ಗನೆ ಎದ್ದುನಿಂತರು. ''ಏನಾದರೂ ಮಾಡಬೇಕಲ್ಲ ಮಾರಾಯ. ಯಕ್ಷಗಾನ ನಿಲ್ಲಿಸಲಿಕ್ಕಾಗುತ್ತೆಯೇ ?'' ಎಂದುಕೊಂಡು ಒಂದಿಬ್ಬರನ್ನು ಕರೆದುಕೊಂಡು ಶಂಕರನಾರಾಯಣನ ಮನೆಯ ಕಡೆ ಧಾವಿಸಿದರು.

ಶಂಕರನಾರಾಯಣನ ಕೆಮ್ಮು-ನರಳುವಿಕೆ ದೂರದಿಂದಲೇ ಕೇಳಿಸುತ್ತಿತ್ತು. ಅವರು ಒಳಹೊಕ್ಕು ಅವನ ಎದುರು ಧಿಗ್ಗನೆ ಕುಳಿತುಬಿಟ್ಟರು. ಉಳಿದಿಬ್ಬರು ಅವರ ಪಕ್ಕದಲ್ಲಿ ನಿಂತರು.

''ಏನಿದು ಶಂಕರ, ಒಳ್ಳೆಯ ಟೈಮಿನಲ್ಲಿ ನಿನಗೆ ಹೀಗಾಯ್ತಲ್ಲ ?''

''ಏನು ಮಾಡಲಿಕ್ಕಾಗುತ್ತೆ ಸ್ವಾಮಿ! ಒಮ್ಮೆಲೆ ಅದೇನೋ ಮೈಯೆಲ್ಲಾ ಸುಡತೊಡಗಿತ್ತು. ನಂತರ ಒಮ್ಮೆಲೆ ಕೆಮ್ಮು ಕಟ್ಟಿ-ಕಟ್ಟಿ ಬರತೊಡಗಿತು. ಈಗ ಏಳಲಾಗದಷ್ಟು ಮೈ-ಕೈ ನೋವು ಪ್ರಾರಂಭವಾಗಿದೆ. ಇಂತಹ ಅವಸ್ಥೆಯಲ್ಲಿ ನಾ ಹೇಗೆ ಬರಲಿ ಮಾರಾಯ್ರೇ ?''

''ನೀ ಹೇಗಾದರೂ ಮಾಡಿ ಭಾಗವತಿಕೆ ನಡೆಸಬೇಕಲ್ಲ ? ಭಾಗವತಿಕೆ ಇಲ್ಲದೆ ಯಕ್ಷಗಾನ ನಡೆಯೋದಾದ್ರೂ ಹೇಗೆ ? ದುಡ್ಡುಕೊಟ್ಟು ನೋಡಲು ಬಂದೋರೆಲ್ಲಾ ಯಕ್ಷಗಾನ ನಡೆಯೋದಿಲ್ಲ ಎಂದ್ರೆ ದಾಂದಲೆ ಎಬ್ಬಿಸಿಬಿಟ್ಟಾರು. ಟೆಂಟನ್ನೆಲ್ಲಾ ಸುಟ್ಟುಬಿಟ್ಟಾರು !''

''ಯಕ್ಷಗಾನ ನಡೆಯುತ್ತೆ. ಅದಕ್ಕೆ ನೀವೇನು ಭಯಪಡಬೇಕಾಗಿದ್ದಿಲ್ಲ !''

''ಅದು ಹೇಗೆ ಶಂಕರಾ ?''

''ನಿಮಗೆ ಅದ್ರಾಮ ಗೊತ್ತಿರಬೇಕಲ್ಲ ? ಅದೇ ಅಬ್ಬು ಬ್ಯಾರಿಗಳ ಮಗ. ಆತ ಬಂದು ಭಾಗವತಿಕೆ ನಡೆಸುತ್ತಾನೆ !''

ಅವರು ಮೂವರು ಒಮ್ಮೆಲೇ ಅವಕ್ಕಾದರು. ಏನು ಮಾತೂಂಥ ಹೇಳ್ತಿದ್ದಾನೆ. ಅದ್ರಾಮ ಭಾಗವತಿಕೆ ನಡೆಸುವುದು ? ಈಗಿನ ಊರಿನ ಪರಿಸ್ಥಿತಿಯಲ್ಲಿ ಅದ್ರಾಮ ರಂಗಮಂಚದ ಮೇಲೆ ಹಾಡಿದರೆ ಏನಾಗಬಹುದು ! ಮುಂದೆ ಆಗಬಹುದಾದ ಅನಾಹುತಗಳನ್ನು ಊಹಿಸಿಯೇ ಅಪ್ಪಾಜಿ ಶಾಸ್ತ್ರಿಗಳು ಹೇಳಿದರು.

''ಎಂತಹ ಮಾತಿದು ಶಂಕರಾ ? ನೀನು ಪರಿಸ್ಥಿತಿ ಗೊತ್ತಿದ್ದೂ ಹೀಗೆ ಹೇಳುವುದೇ ?''

''ಯಕ್ಷಗಾನ ನಡೆಯಬೇಕಾದ್ರೆ ಅದ್ರಾಮ ಭಾಗವತಿಕೆ ಮಾಡಲೇಬೇಕು. ಈಗ ಹೊತ್ತಿ ಉರಿಯುವ ಈ ಊರು ಅದ್ರಾಮನಿಂದ ಮತ್ತೆ ಒಂದಾಗುತ್ತೆ !''

''ಹಾಗನ್ನುತ್ತೀಯಾ ನೀನು !''

''ಹೌದು !''

''ಆದರೆ ಆತನನ್ನು ಕರೆತರುವವರು ಯಾರು ?''

''ಅದಕ್ಕೆಲ್ಲಾ ನಾ ವ್ಯವಸ್ಥೆ ಮಾಡಿದ್ದೇನೆ.''

ಅಷ್ಟರಲ್ಲಿ ಅದ್ರಾಮ ಅಲ್ಲಿ ಕಾಣಿಸಿಕೊಂಡ.

ಅದ್ರಾಮ ಶಂಕರನಾರಾಯಣನ ಒಡನಾಡಿಯಾಗೇ ಬೆಳೆದಿದ್ದವ. ಎರಡು ದೇಹ ಒಂದೇ ಜೀವ ಎನ್ನುವಂತಿದ್ದರು. ಅವರ ನಡುವೆ ಎಂದೂ ಜಾತಿಭೇದದ ಸೋಂಕು ಸುಳಿದಿರಲಿಲ್ಲ. ಶಂಕರ ಮನೆಯಲ್ಲಿ ಕುಳಿತು ಯಕ್ಷಗಾನದ ಹಾಡಿನಲ್ಲಿ ತಲ್ಲೀನನಾಗುವಾಗ, ಅವನಂತೆ ಹಾಡಲು ಕಲಿತಿದ್ದ ಅದ್ರಾಮನ ಹಠ ಮತ್ತು ಸ್ವರದಲ್ಲಿರುವ ಲಾಲಿತ್ಯ ಮತ್ತು ಭಾಷೆಯ ಮೇಲಿನ ಹಿಡಿತ ಕಂಡು ಶಂಕರ

ನಾರಾಯಣ ವಿಸ್ಮಿತನಾಗಿದ್ದ. ಎಷ್ಟು ಚೆನ್ನಾಗಿ ಹಾಡುತ್ತಾನೆ ಈತ' ಎಂದು ಅಚ್ಚರಿಪಟ್ಟು ಯಾವ ಈರ್ಷೆಯೂ ಇಲ್ಲದೆ ಅವನು ತಾಳಕ್ಕೆ ತಕ್ಕಂತೆ ಹಾಡುವುದನ್ನು ಕಲಿಸಿದ್ದ.

ಹಾಗೇ ಒಂದೊಮ್ಮೆ ಲೋಕಾಭಿರಾಮವಾಗಿ ಮಾತಾಡುತ್ತಾ ಶಂಕರ ಅವನಲ್ಲಿ ಹೇಳಿದ್ದ.

''ಅದ್ರಾಮ ನೀನು ಎಷ್ಟು ಚೆನ್ನಾಗಿ ಹಾಡಿದರೂ ಯಕ್ಷಗಾನದಲ್ಲಿ ಭಾಗವತಿಕೆ ನಡೆಸುವಂತಿಲ್ಲ!''

''ಯಾಕೆ ?'' ಕೇಳಿದ್ದ ಅದ್ರಾಮ

''ಮುಸ್ಲಿಮರು ಯಕ್ಷಗಾನ ಕ್ಷೇತ್ರಕ್ಕೆ ಪ್ರವೇಶಿಸಿಲ್ಲವಲ್ಲ.''

''ನಾನು ನನ್ನ ಖುಷಿಗಾಗಿ ಹಾಡು ಕಲಿತೆ ಅಷ್ಟೇ ಹೊರತು ಮತ್ತೇನಕ್ಕೂ ಅಲ್ಲ!'' ಅಂದಿದ್ದ.

ಆದರೆ ಈಗ ಭಾಗವತಿಕೆ ನಡೆಸುವ ಸಂದರ್ಭ ಬಂದಿತ್ತು.

ಶಂಕರ ಅದ್ರಾಮನ ಕೈ ಹಿಡಿದು ಹೇಳಿದ,

''ನೀನು ಇವತ್ತು ಭಾಗವತಿಕೆ ಮಾಡಬೇಕು !''

ಅದ್ರಾಮ ಅಚ್ಚರಿಗೊಂಡವನಂತೆ ಹೇಳಿದ, ''ಏನು ಹೇಳುತ್ತಿದ್ದಿ ಶಂಕರ ನೀನು, ಊರಿನ ಈಗಿನ ಪರಿಸ್ಥಿತಿ ನಿನಗೆ ಗೊತ್ತೇ ಇದೆ. ನಾನು ನಿನ್ನಲ್ಲಿಗೆ ಬಂದದ್ದೇ ಗೊತ್ತಾದರೆ ನನ್ನ ಬಂಧುಗಳು ಏನು ಮಾಡಿಬಿಡುತ್ತಾರೋ. ಇನ್ನು ಇಡೀ ರಾತ್ರಿ ನಿಮ್ಮ ಮೇಳಕ್ಕೆ ಭಾಗವತಿಕೆ ನಡೆಸಿದರೆ ಏನಾಗಬಹುದು ನೀನೇ ಹೇಳು !''

ಅಪ್ಪಾಜಿ ಶಾಸ್ತ್ರಿಗಳು ಅವನ ಕೈ ಹಿಡಿದು ಹೇಳಿದರು.

''ಇಡೀ ಊರು ಹೊತ್ತಿ ಉರಿಯುವ ಈ ಹೊತ್ತಿನಲ್ಲಿ ನೀವು ಭಾಗವತಿಕೆ ನಡೆಸೋದರಿಂದ ಮತ್ತೆ ಈ ಊರು ಒಂದಾಗೋದು ಸಾಧ್ಯ !''

''ಸರಿ'' ಎಂದು ಅದ್ರಾಮ ದೃಢ ನಿರ್ಧಾರ ಮಾಡಿ ಎದ್ದ.

ರಂಗಮಂಚದಲ್ಲಿ ಹಾಡು ಕೇಳಿಬರತೊಡಗಿತು. ಚಂಡೆಯವನು, ಮದ್ದಲೆಯವನು ಹುರುಪಿನಿಂದ ಬಾರಿಸತೊಡಗಿದರು. ರಂಗಸ್ಥಳಕ್ಕೆ ವೇಷಧಾರಿಗಳು ಪ್ರವೇಶಿಸತೊಡಗಿದರು. ಜನ ಬಿಟ್ಟ ಕಣ್ಣು ತೆರೆದುಕೊಂಡೇ ನೋಡುತ್ತಿದ್ದಾರೆ. 'ಏನಿದು ವಿಚಿತ್ರ ! ಹಾಡುತ್ತಿರುವವನು ಶಂಕರನಾರಾಯಣ ಅಲ್ಲ! ಅದ್ರಾಮ ! ಆದರೆ ಎಷ್ಟು ಚೆನ್ನಾಗಿ ಹಾಡುತ್ತಾನೆ. ಶಂಕರನಾರಾಯಣನೇ ಭಾಗವತಿಕೆ ನಡೆಸುತ್ತಾನೋ ಏನೋ ಅನ್ನುವಂತೆ.

ಜನ ನಿಬ್ಬೆರಗಾಗಿ ನೋಡುತ್ತಿದ್ದರು. ಪಾತ್ರಗಳು ಹುರುಪಿನಿಂದ ಕುಣಿಯುತ್ತಿದ್ದವು.

ಇತ್ತ

ಮುಸ್ಲಿಮರ ಕೇರಿಯಲ್ಲಿ ಗುಸುಗುಸು ಸುದ್ದಿ ಹರಡಿತು.

'ಅದ್ರಾಮ ಯಕ್ಷಗಾನದಲ್ಲಿ ಭಾಗವತಿಕೆ ಮಾಡುತ್ತಿದ್ದಾನೆ. ಎಂತಹ ನಾಚಿಗೆ ಕೇಡಿನ ಸಂಗತಿ ಇದು. ಅವರು ಕರೆದರೂಂತ ಇವ ಹೋಗಿಬಿಡೋದೇ. ನಾಳೆ ನಮ್ಮ ಮರ್ಯಾದೆ ಏನಾದೀತು ?' ಹೀಗೆ ಅಂದುಕೊಳ್ಳುತ್ತಿರುವಾಗ ಒಬ್ಬಾತ ಹೇಳಿದ.

''ಈಗ ನಾವು ಸುಮ್ಮನೆ ಕೈಕಟ್ಟಿ ಕುಳಿತರೆ ಇದು ಆಗೋ ಮಾತಲ್ಲ. ನಾವು ಈಗ ಎಲ್ಲಾ ಒಂದಾಗಿ ಯಾರಿಗೂ ಗೊತ್ತಾಗದಂತೆ - ಹೀಗೆ ಹಲವಾರು ಮಂದಿಯಿಂದ ಹಲವಾರು ಸಲಹೆಗಳು ಬಂದವು.

ಅಲ್ಲಿ ಕುಳಿತಿದ್ದ ಜಮಾತ್ ಪ್ರೆಸಿಡೆಂಟ್ ಅಬೂಬಕರ್ ಸಾಹೇಬರು ಹೇಳಿದರು. ''ಕೆಟ್ಟದಾಗುವಂತಹ ಕೆಲಸ ಮಾಡುವುದು ಬೇಡ. ಊರು ಹೊತ್ತಿ ಉರಿಯುವ ಸಮಯದಲ್ಲಿ ಹೀಗೆ ಮಾಡಿದರೆ ಅಲ್ಲಿ ಒಂಟಿಯಾಗಿರುವ ಅದ್ರಾಮನನ್ನು ಆ ಜನ ಕೊಂದೇಬಿಟ್ಟಾರು. ಅದ್ರಾಮನಿಂದಾಗಿ ಆ ಜನ ಮತ್ತೆ ನಮ್ಮಲ್ಲಿಗೆ ಬಂದು ಮತ್ತೆ ಊರು ಒಂದಾಗುವಂತಾದರೆ ನಮಗೆ ಒಳ್ಳೆಯದಲ್ವೇ ?''

ಅಷ್ಟರಲ್ಲಿ ಒಬ್ಬಾತ ಓಡಿಬಂದು ಹೇಳಿದ, ''ಪ್ರೆಸಿಡೆಂಟರೇ, ಅಲ್ಲಿ ನಿಮ್ಮ ಹೆಂಡತಿಗೆ ನಾಗರಹಾವು ಕಚ್ಚಿದೆ !! ಓಡಿ ಬನ್ನಿ !!''

ಒಮ್ಮೆಲೆ ಕುಳಿತಿದ್ದವರೆಲ್ಲ ಪ್ರೆಸಿಡೆಂಟರ ಮನೆಯತ್ತ ಓಡತೊಡಗಿದರು. ಓಡುತ್ತಲೇ ಅಬೂಬಕರ್ ಸಾಹೇಬರ ಕಂಗಳಲ್ಲಿ ಕಣ್ಣೀರು ಇಳಿಯತೊಡಗಿತು.

''ಇದೇನಾಗಿ ಹೋಯ್ತು. ದೇವರೇ, ನನ್ನ ಫಾತುಮಾಳಿಗೆ ಏನು ಆಗದಿರಲಿ'' ಎಂದು ದೇವರಲ್ಲಿ ಬೇಡುತ್ತಾ ಮನೆಯತ್ತ ಬಂದಾಗ ಒಳಗಿನಿಂದ ಹೆಂಗಸರ ಬೊಬ್ಬೆ ಕೇಳಿಸುತ್ತಿತ್ತು. ಅವರು ಒಳಹೊಕ್ಕು ನೋಡಿದರು. ಫಾತುಮಾ ಅಂಗಾತ ಮಲಗಿದ್ದಾಳೆ. ಪಾದಕ್ಕಿಂತ ಮೇಲೆ ಮೊಣಕಾಲಿಗಿಂತ ಕೆಳಗೆ ಹಾವು ಕಚ್ಚಿದ ಗಾಯ ವಾಗಿದೆ. ಫಾತುಮಾ ಭಯದಿಂದ ಗಂಡನನ್ನು ನೋಡಿದಳು. ಅವರು ಅವಳನ್ನು ನೋಡಿದರು. ಸಾವು ಇನ್ನೇನು ಕಬಳಿಸಿಬಿಡುತ್ತದೆಯೋ ಎನ್ನುವಂತಿತ್ತು ಅವರ ಸ್ಥಿತಿ.

''ಏನು ಮಾಡೋದು ಈಗ. ಹತ್ತಿರದಲ್ಲಿ ಎಲ್ಲೂ ಡಾಕ್ಟರರಿಲ್ಲ. ಪೇಟೆಗೆ ಡಾಕ್ಟರರ ಬಳಿ ಹೋಗಲು ನಾಲ್ಕು ಮೈಲು ದೂರ ನಡೆಯಬೇಕು. ತುರ್ತಾಗಿ ಏನು ಮಾಡೋದು ?''

ಅಷ್ಟರಲ್ಲಿ 'ದಾರಿಬಿಡಿ, ದಾರಿಬಿಡಿ !' ಎನ್ನುತ್ತಾ ಯಾರೋ ಒಳಬಂದರು. ಅವರೆಲ್ಲಾ ನೋಡುತ್ತಿದ್ದಾರೆ. ಕಂಬಳಿ ಹೊದ್ದುಕೊಂಡು ಕೆಮ್ಮುತ್ತಾ ಒಬ್ಬ ಬರುತ್ತಿದ್ದಾನೆ... 'ಶಂಕರನಾರಾಯಣ !'

ಅವನು ಆಕೆಯ ಹತ್ತಿರ ಕುಳಿತು 'ಸಾಹೇಬರೇ, ನಿಮ್ಮ ಹೆಂಡತಿ ನಿದ್ರಿಸದಂತೆ ನೋಡಿಕೊಳ್ಳಿ ಎನ್ನುತ್ತಾ ಯಾವುದೋ ಗಿಡಮೂಲಿಕೆ ಮದ್ದನ್ನು ಗಾಯಕ್ಕೆ ಹಚ್ಚಿ,

ಗಾಯದ ಮೇಲೊಂದು ಕಟ್ಟುಕಟ್ಟಿದ. ಅಬೂಬಕರ್ ಸಾಹೇಬರು ಹೆಂಡತಿ ನಿದ್ರಿಸದಂತೆ ಅವಳೊಡನೆ ಮಾತಾಡಿ ಎಚ್ಚರ ಇರುವಂತೆ ಮಾಡುತ್ತಿದ್ದರು.

ಸ್ವಲ್ಪ ಹೊತ್ತಿನಲ್ಲಿ ಮೈಗೆ ಹತ್ತಿದ ವಿಷವೆಲ್ಲಾ ಇಳಿದುಹೋದ ಮೇಲೆ ಫಾತುಮಾ ಕಣ್ಣುಬಿಟ್ಟಳು. ಅಬೂಬಕರ್ ಸಾಹೇಬರು ನಿರಾಳವಾಗಿ ಉಸಿರುಬಿಟ್ಟು ಶಂಕರ ನಾರಾಯಣ ಕೈ ಹಿಡಿದು ಕೃತಜ್ಞತೆಯಿಂದ ಹೇಳಿದರು. ''ನಿಮ್ಮಿಂದ ನನ್ನ ಹೆಂಡತಿಯ ಪ್ರಾಣ ಉಳಿಯಿತು. ನಿಮ್ಮ ಈ ಉಪಕಾರವನ್ನು ನನ್ನ ಪ್ರಾಣ ಇರೋತನಕ ಮರೆಯುವುದಿಲ್ಲ !''

''ಉಪಕಾರ ಎಲ್ಲಿ ಬಂತು ಸಾಹೇಬರೇ. ಇದು ಮನುಷ್ಯರಾದ ನಾವು ಮಾಡೋ ಕರ್ತವ್ಯ. ಮನುಷ್ಯರು ಒಬ್ಬರಿಗೆ ಒಬ್ಬರು ನೆರವಾಗಬೇಕು. ಇಲ್ಲಿ ಹಿಂದೂಗಳು-ಮುಸ್ಲಿಮರೆಂಬ ಭೇದಭಾವ ಬರಬಾರದು. ಇಲ್ಲಿ ನನ್ನಿಂದಾಗಿ ನಿಮ್ಮ ಹೆಂಡತಿಯ ಪ್ರಾಣ ಉಳಿಯಿತೆನ್ನುತ್ತೀರಿ ! ಅಲ್ಲಿ ನಿಮ್ಮ ಅದ್ರಾಮನಿಂದಾಗಿ ನಮ್ಮ ಯಕ್ಷಗಾನ ಕಾರ್ಯಕ್ರಮವೂ ನಡೆಯಿತು. ಇದೇ ರೀತಿ ಈ ಬಾಂಧವ್ಯ ಇನ್ನೂ ಮುಂದುವರಿಯಬೇಕು. ಈ ಹದಿನೈದು ದಿನಗಳಲ್ಲಿ ಇಲ್ಲಿ ಏನಾಗಿದೆ ಎಂಬುದನ್ನು ಸಂಪೂರ್ಣ ಮರೆತು ನಾವು ಮತ್ತೆ ಮೊದಲಿನಂತೆ ಒಂದಾಗೋಣ !'' ಶಂಕರ ನಾರಾಯಣ ಕೈ ಹಿಡಿದು ಹೇಳಿದಾಗ, ಅಬೂಬಕರ್ ಸಾಹೇಬರು ತುಂಬಿ ಬಂದ ಸಂತಸದೊಂದಿಗೆ ಹೇಳಿದರು.

''ಆಗಲಿ, ನಾಳೆ ಅದಕ್ಕೆ ಬೇಕಾದ ವ್ಯವಸ್ಥೆ ಮಾಡುತ್ತೇನೆ !''

ರಾತ್ರಿ ಕಳೆಯಿತು. ಸೂರ್ಯ ಮೂಡಣದಲ್ಲಿ ಹುಟ್ಟಿದ. ಯಕ್ಷಗಾನ ಅಪೂರ್ವವಾಗಿ ವಿಜೃಂಭಿಸಿತ್ತು. ಎಲ್ಲರೂ ಅದ್ರಾಮನನ್ನು ಸುತ್ತುವರಿದು ಅವನನ್ನು ಕೊಂಡಾಡುತ್ತಿದ್ದರು. ಅಪ್ಪಾಜಿ ಶಾಸ್ತ್ರಿಗಳು ಅದ್ರಾಮನನ್ನು ಅಪ್ಪಿಕೊಂಡು ಅಭಿನಂದಿಸುತ್ತಿದ್ದಂತೆಯೇ ಯಾರೋ ಕರೆದಂತಾಗಿ ಅವರು ಹಿಂತಿರುಗಿ ನೋಡಿದರು. ಅಲ್ಲಿ ಶಂಕರನಾರಾಯಣ ನಿಂತಿದ್ದ. ಅವನೊಂದಿಗೆ ಊರಿನ ಅನೇಕ ಮುಸ್ಲಿಮರು. ಅಬೂಬಕರ್ ಸಾಹೇಬರು ಹೋಗಿ ಅಪ್ಪಾಜಿ ಶಾಸ್ತ್ರಿಗಳನ್ನು ಪ್ರೀತಿಯಿಂದ ತಬ್ಬಿಕೊಂಡರು.

ಶಂಕರನಾರಾಯಣ ಅದ್ರಾಮನ ಹೆಗಲ ಮೇಲೆ ಕೈ ಹಾಕಿ ನಿಂತಿದ್ದ.

ಇಸ್ಲಾಮೀಪುರ ಮತ್ತೆ ಒಂದಾಗಿತ್ತು.

# 3 ಅಲೀಮಾ ಅಕ್ಷರ ಕಲಿತದ್ದು

ಮನೆಯ ಎದುರಿನ ಯಾಕೂಬ ಬ್ಯಾರಿಗಳ ಎರಡು ಕೋಣೆಯ ಹಳೆಯ ಕಟ್ಟಡಕ್ಕೆ ಸುಣ್ಣ ಬಣ್ಣವಾಗುವುದನ್ನೇ ಅಚ್ಚರಿಯಿಂದ ನೋಡತೊಡಗಿದ ಅಲೀಮಾ, 'ಏನಿದು ವಿಚಿತ್ರ... ಹೀಗ್ಯಾಕೆ ಸುಣ್ಣ ಬಣ್ಣ ಹಚ್ಚುತ್ತಾರೆ. ಏನಾದರೂ ಕರಾಮತ್ತು ಇರಬೇಕು. ಇಲ್ಲದಿದ್ದರೆ ಇಷ್ಟೊಂದು ವರ್ಷಗಳ ಕಾಲ ಬಾಗಿಲು ಮುಚ್ಚಿ, ಸುಣ್ಣ ಬಣ್ಣ ಕಾಣದೇ ಬಿದ್ದಿದ್ದ ಈ ಕಟ್ಟಡ ಸುಣ್ಣ ಹಚ್ಚಿಕೊಂಡು ಬೆಳ್ಳಗಾಗೋದೆಂದರೆ' ಹೀಗೆ ತನ್ನಲ್ಲೇ ಯೋಚಿಸಿಕೊಂಡು ಒಳಧಾವಿಸಿದ ಅವಳು ಬೀಡಿಯ ಮೊರವನ್ನು ಎತ್ತಿಕೊಂಡು ಬಂದು ಕಿಟಕಿಯ ಬಳಿ ಕುಳಿತು ಬೀಡಿ ಕಟ್ಟುತ್ತಾ ತನ್ನ ಹಳೆತನವನ್ನು ಕಳಕೊಂಡು ಬೆಳ್ಳಗಾಗುತ್ತಿದ್ದ ಆ ಕಟ್ಟಡವನ್ನೇ ನೋಡತೊಡಗಿದಳು.

ಸುಣ್ಣ ಬಣ್ಣ ಹಚ್ಚಿಕೊಂಡು ಬೆಳ್ಳಗಾಗಿ ಅದರ ಮುಂದೆ ದೊಡ್ಡ ಬೋರ್ಡೊಂದನ್ನು ತೂಗುಹಾಕಿದಾಗ ಎಲಾ ಇದರ ! ಇದೇನಪ್ಪಾ ಇಷ್ಟು ದೊಡ್ಡ ಬೋರ್ಡು ? ಎಂದು ತನ್ನಲ್ಲೇ ಅಂದುಕೊಂಡು ಅದರಲ್ಲಿನ ಅಕ್ಷರಗಳನ್ನು ಓದಲಾಗದೇ ತಾನು ಅಕ್ಷರ ಹೀನಳಾದುದಕ್ಕೆ ತನ್ನಲ್ಲೇ ಕಸಿವಿಸಿಗೊಂಡಳು. ತಾನು ಸ್ವಲ್ಪವಾದರೂ ಓದಬೇಕಿತ್ತು. ಆದರೆ ತನ್ನ ಬಾಪಾ-ಉಮ್ಮ ಚಿಕ್ಕಂದಿನಲ್ಲೇ ತಾನು ಓದುತ್ತೇನೆ ಅಂದಾಗ, 'ಹೆಣ್ಣು ಮಕ್ಕಳು ಓದಬಾರದು. ಶಾಲೆಗೆ ಹೋಗಿ ಕಾಫರರಾಗುವುದು ಬೇಡ. ಕುರಾನ್ ಓದಿದರಷ್ಟೇ ಸಾಕು' ಎಂದು ತನ್ನ ಓದುವ ಆಸೆಯನ್ನು ಚಿವುಟಿಹಾಕಿದಾಗ ತಾನು ಓದುವ ಆಸೆಯನ್ನು ಅಲ್ಲೇ ಸುಟ್ಟುಬಿಟ್ಟಿದ್ದೆ. ಕುರಾನ್ ಕಲಿತು ಬೀಡಿಯ ಮೊರ ಕೈಯಲ್ಲಿ ಹಿಡಿದು ಬಾಲಕಿಯಿಂದ ಬೆಳೆದು ದೊಡ್ಡವಳಾಗಿದ್ದೆ. ಮುಂದೊಂದು ದಿನ ತನಗೆ ಮದುವೆಯಾಗಿತ್ತು. ಅದೂ ಕೂಲಿ ಕೆಲಸ ಮಾಡುವ ಆದಮನೊಂದಿಗೆ. ಅವನು ಮಾಡುವ ಉದ್ಯೋಗದ ಬಗ್ಗೆ ಅವಳಿಗೆ ಬೇಸರವಿರಲಿಲ್ಲ. ಆರಾಮವಾಗಿ ಬದುಕು ಸಾಗುತ್ತಿತ್ತು. ಆದರೆ ಆತ ಒಂದಿಷ್ಟಾದರೂ ಅಕ್ಷರ ಕಲಿತಿರಲಿ ಎಂಬ ಆಸೆ ಅವಳದಾಗಿತ್ತು. ಆದರೆ ಆತ ಅವಳಂತೆಯೇ ನಿರಕ್ಷರಕುಕ್ಷಿಯಾಗಿದ್ದ. ಅದು ಅವಳಿಗೆ ಬೇಸರದ ಸಂಗತಿಯಾಗಿತ್ತು. ಅವನು ಬೆಳಿಗ್ಗೆ ಕೆಲಸಕ್ಕೆ ಹೋದರೆ ಸಾಯಂಕಾಲದ ಹೊತ್ತಿಗೆ ಬರುತ್ತಿದ್ದ. ರಾತ್ರಿ ಉಂಡ ಮೇಲೆ ಹೆಂಡತಿಯೊಡನೆ ಸುರತಸುಖವನ್ನು ಅನುಭವಿಸಿ ಮಲಗಿಬಿಡುತ್ತಿದ್ದ. ಮತ್ತೆ ಮರುದಿನ ಬೆಳಿಗ್ಗೆ ಅದೇ ಮಾಮೂಲು ಕೆಲಸದತ್ತ ಪಯಣ.

ಅವಳಿಗೆ ಆ ಬದುಕು ಯಾಂತ್ರಿಕವಾಗತೊಡಗಿತು. ನಾಲ್ಕು ವರ್ಷಗಳ ಸಂಸಾರ

ಜೀವನದಲ್ಲಿ ಒಂದು ಹೆಣ್ಣುಮಗುವಾಗಿತ್ತು. ನಾವು ಗಂಡ ಹೆಂಡತಿಯರಿಬ್ಬರೂ ಓದದಿದ್ದರೆ ಚಿಂತೆ ಇಲ್ಲ ಮುಂದೆ ಮಗಳನ್ನು ಚೆನ್ನಾಗಿ ಓದಿಸಬೇಕು. ಅವಳು ಸ್ಲೇಟಿನಲ್ಲಿ ಅಕ್ಷರ ಬರೆಯುವುದನ್ನು, ನಂತರ ಅಕ್ಷರ ಓದುವುದನ್ನು ಕಂಡು ಖುಷಿಪಡಬೇಕು ಎಂದೆಲ್ಲಾ ಯೋಚಿಸತೊಡಗಿದಳು.

ಸಾಯಂಕಾಲ ಆದಮ ಬಂದ. ಅವನು ಸ್ನಾನ ಮಾಡಿ ಮಗುವನ್ನು ಆಡಿಸುತ್ತಾ ಹೊರಗೆ ಬಂದು ಕುಳಿತಾಗ ಅವಳು ಕೇಳಿದಳು.

''ಏನೂಂದ್ರೆ ಅಲ್ಲಿ ಕಾಣುತ್ತಿದೆ ಅಲ್ಲಾ, ಯಾಕೂಬ್ ಬ್ಯಾರಿಗಳ ಕಟ್ಟಡ. ಅದಕ್ಕೆ ಸುಣ್ಣ ಬಣ್ಣ ಹಚ್ಚಿ ಬೆಳ್ಳಗಾಗಿ ಮಾಡಿ ಏನೋ ಬೋರ್ಡು ಹಚ್ಚಿ ಇಟ್ಟಿದಾರಲ್ಲ, ಅದು ಏನು ?

''ಅದು ದೊಡ್ಡವರ ಶಾಲೆ !''

''ಅಂದರೆ ?''

''ಇತ್ತೀಚೆಗೆ ಸರಕಾರದೋರು ಎಲ್ಲರೂ ಅಕ್ಷರ ಕಲಿಯಬೇಕೂಂತ ಆದೇಶ ಹೊರಡಿಸಿದ್ದಾರೆ. ಅದಕ್ಕಾಗಿ ನನ್ನ-ನಿನ್ನಂತಹ ಓದು ಬಾರದವರಿಗೆ, ಅಕ್ಷರ ಬರೆಯಲಾಗದವರಿಗೆ ಅಕ್ಷರ ಕಲಿಸೋ ಶಾಲೆ !

ಅವಳು ಮೂಗಿನ ಮೇಲೆ ಬೆರಳಿಟ್ಟುಕೊಂಡು, ''ಅಬ್ಬಾ ! ಏನಿದು ವಿಚಿತ್ರ ! ಎಂದಳು. ಹಾಗಾದರೆ ನಾನೂ ಹೋಗಿ ಕಲಿಯಬಾರದೇಕೇ. ಆದರೆ ಇವರು ಬಿಟ್ಟಾರೆಯೇ. ಒಂದು ವೇಳೆ ಇವರು ಕಲಿಯಲು ಆಸಕ್ತಿ ತೋರಿಸಿದರೆ ಆನಂತರ ತನಗೆ ಕಲಿಯಬಹುದು ಎಂದುಕೊಂಡು ಅವನಲ್ಲಿ ಮೆಲ್ಲನೆ ಕೇಳಿದಳು.

''ಹಾಗಾದರೆ ನಿಮಗೆ ಇನ್ನು ಓದು ಬರಹ ಕಲಿಯಬಹುದು ?''

ಆತ ಗೊಳ್ಳನೆ ನಕ್ಕ, ನಗುತ್ತಲೇ ಹೇಳಿದ.

''ನಿನಗೆಲ್ಲೋ ಹುಚ್ಚು. ಈ ಪ್ರಾಯದಲ್ಲಿ ನಾನು ಕಲಿಯುತ್ತೇನೆಂದರೆ ಯಾರಾದರೂ ನಕ್ಕಾರು !''

''ನಗುವುದೇಕೆ ? ನೀವೂ ಸ್ವಲ್ಪ ಓದಿ ವಿದ್ಯಾವಂತರಾಗಬಹುದು.''

''ಸುಮ್ಮನೆ ಇರು ! ಓದು ಬರಹ ಅಂತೆ. ಇನ್ನು ಓದಿ ಮಾಡಬೇಕಾದುದು ಏನಿದೆ. ದೇವರು ಕೈಕಾಲು ಕೊಟ್ಟಿದ್ದಾನೆ, ದುಡಿದು ತಿನ್ನುತ್ತಿದ್ದೇನೆ. ಅಷ್ಟೇ ಸಾಕು ! ಅವನ ಕೆಂಗಣ್ಣು ನೋಡಿ ಅವಳು ಮುಂದೆ ಮಾತಾಡಲಿಲ್ಲ.

*   *   *

ಒಂದೆರಡು ದಿನಗಳ ತನಕ ಅವಳು ಆ ಕಟ್ಟಡದ ಕಡೆಗೆ ಗಮನ ಹರಿಸತೊಡಗಿದಳು. ಅಲ್ಲಿ ಸಾಕ್ಷರತಾ ಶಾಲೆ ಆರಂಭವಾಯಿತು. ಸ್ವಲ್ಪ ಮಂದಿ ಗಂಡಸರು ಹೆಂಗಸರು ಅಲ್ಲಿಗೆ ಹೋಗುವುದನ್ನು ನೋಡಿದಳು. ಅವರೆಲ್ಲರ ಕೈಗಳಲ್ಲಿ

ಸ್ಲೇಟ್ ಪುಸ್ತಕಗಳಿದ್ದುವು ಅವಳಿಗೆ ಅದನ್ನೆಲ್ಲಾ ನೋಡಿ ಅಚ್ಚರಿಯಾಯಿತು. ಪಕ್ಕದ ಮನೆಯ ಮೀನಾಕ್ಷಿ, ಆಚೆ ಮನೆಯ ಪದ್ಮಾವತಿ, ಆದರೆ ಬುರ್ಖಾ ಹಾಕಿದ ಹೆಣ್ಣುಗಳು ಯಾರೊಬ್ಬರೂ ಅಲ್ಲಿಗೆ ಹೋಗುವುದು ಕಾಣಿಸಲಿಲ್ಲ. ತನಗೂ ಹೋಗಬೇಕು. ಹೋಗಿ ಅಕ್ಷರ ಕಲಿತು ಬರಬೇಕು ಎಂದೆಲ್ಲಾ ಯೋಚಿಸುತ್ತಿದ್ದಾಗ ಮೀನಾಕ್ಷಿ ಅಂಗಳದಲ್ಲಿ ಕಾಲಿರಿಸಿದಳು.

ಅವಳು ಜಗಲಿಯಲ್ಲಿ ಕೂರುತ್ತಾ ಹೇಳಿದಳು.

''ಅಲೀಮಾ, ನಾನು ಈಗ ನನ್ನ ಹೆಸರು ಬರೆಯಲು ಕಲಿತಿದ್ದೇನೆ.''

''ಹೌದೇ ?'' ಅಚ್ಚರಿಯಿಂದ ಕೇಳಿದಳು ಅಲೀಮಾ.

''ಹೌದು ಕಣೇ ನೋಡು ನಾನು ಬರೆಯುತ್ತೇನೆ'' ಎಂದು 'ಮೀನಾಕ್ಷಿ' ಎಂದು ಬರೆದು ತೋರಿಸಿದಳು.

ಅಲೀಮಾ ನಿಬ್ಬೆರಗಾಗಿ ನೋಡಿದಳು.

'ಎಷ್ಟು ಚಂದ ಬರೆಯುತ್ತಾಳೆ ಇವಳು. ನಾಲ್ಕೇ ದಿನಗಳಲ್ಲಿ ಇಷ್ಟೊಂದು ಕಲಿತಿದ್ದಾಳೆ ಇವಳು ? ಎಂದು ತನ್ನಲ್ಲೇ ಬೆರಗಾಗಿ ಅವಳೊಡನೆ ಹೇಳಿದಳು.

''ಹಾಗಾದರೆ ನನ್ನ ಹೆಸರು ಬರೆ ನೋಡೋಣ.''

ಅಲೀಮಾ ಖುಷಿಯಿಂದ ತನ್ನ ಹೆಸರನ್ನು ನೋಡಿ ಗೆಳತಿಯನ್ನು ತಬ್ಬಿಕೊಂಡು ಹೇಳಿದಳು.

''ನಾಳೆಯಿಂದ ನಾನೂ ಬರುತ್ತೇನೆ ಆಗದೇ ?''

''ಓ... ಖಂಡಿತಾ ಬಾ.. !''

ಮರುದಿನ ಆದಮ ಕೆಲಸಕ್ಕೆ ಹೋದಮೇಲೆ ಅವಳು ಮೀನಾಕ್ಷಿಯೊಂದಿಗೆ ಅಲ್ಲಿಗೆ ಹೋದಳು. ಸಾಯಂಕಾಲ ನಾಲ್ಕರಿಂದ ಐದೂವರೆತನಕ. ಆದಮ ಬರುವ ಮೊದಲೇ ಬಂದುಬಿಡುತ್ತಿದ್ದಳು. ಅವಳಿಗೊಂದು ಸಣ್ಣ ಚೀಲ, ಪುಸ್ತಕ, ಸ್ಲೇಟು, ಪೆನ್ ಕಡ್ಡಿ ಎಲ್ಲಾ ಸಿಕ್ಕಿತು.

'ಅ' ಬರೆದಾಗ ಅವಳ ಮೈಯೆಲ್ಲಾ ರೋಮಾಂಚನಗೊಂಡಿತು. ನಂತರ 'ಆ' ಬರೆಯುವುದನ್ನು ಕಲಿತಳು. ಅನಂತರ 'ಇ'. ಹೀಗೆ ಕೆಲವು ದಿನಗಳ ಮೇಲೆ 'ಅಲೀಮಾ' ಎಂದು ಬರೆಯುವುದನ್ನು ಕಲಿತಳು. ಒಂದು ದಿನ ಬೆಳಿಗ್ಗೆ ಕೆಲಸಕ್ಕೆ ಹೋದಮೇಲೆ ಮೆಲ್ಲನೆ 'ಆದಮ' ಎಂದು ಬರೆದು ಆ ಹೆಸರನ್ನು ಉಚ್ಚರಿಸುತ್ತಾ ಮುದಗೊಂಡಳು. ಆದಮ ಬರೆದ ಒತ್ತಿನಲ್ಲಿಯೇ ಅಲೀಮಾ ಎಂದೂ ಬರೆದಳು. ನಂತರ ಹಾಗೆ ಬರೆದುದನ್ನು ಮಗುವಿಗೆ ತೋರಿಸುತ್ತಾ .....

''ನೋಡು ನನ್ನ ಪುಟ್ಟ ಮೋಳೀ, ಇದು ನಿನ್ನ ಅಪ್ಪನ ಹೆಸರು, ಮತ್ತು ನಿನ್ನ ಅಮ್ಮನ ಹೆಸರು ! ಈಗ ನಿನ್ನ ಹೆಸರನ್ನು ಬರೆಯುತ್ತೇನೆ ಎಂದು, 'ನಸೀಮಾ' ಎಂದು

ಬರೆದಳು. ಮಗು 'ಕೇ... ಕೇ..' ಹಾಕಿತು.

ಹೀಗೆ ಅವಳ ಅಕ್ಷರಾಭ್ಯಾಸ ಗಂಡನಿಗೆ ಗೊತ್ತಾಗದಂತೆ ಸಾಗುತ್ತಿದ್ದ ಒಂದು ದಿನ ಆದಮ ಸಾಯಂಕಾಲ ಬೇಗನೆ ಬಂದ. ಆತ ಬಹಳ ಖುಷಿಯಲ್ಲಿದ್ದ ''ಅಲೀಮಾ... ಅಲೀಮಾ'' ಎಂದು ಬಂದವನಿಗೆ ಮುಚ್ಚಿದ ಬಾಗಿಲನ್ನು ಕಂಡು ಆಶ್ಚರ್ಯವಾಯಿತು. ಬಾಗಿಲು ಮುಚ್ಚಿದೆ ಅಷ್ಟೇ ಅಲ್ಲ ಅದಕ್ಕೆ ಬೀಗವೂ ಹಾಕಿದೆ.

''ಎಲಾ ಇವಳ... ಎಲ್ಲಿಗೆ ಹೋಗಿರಬಹುದು ಈಕೆ !' ಎಂದು ಅಚ್ಚರಿಪಟ್ಟು ಅಲ್ಲೇ ಜಗಲಿಯಲ್ಲಿ ಕುಳಿತವ ನಾನಾ ಬಗೆಯಾಗಿ ಯೋಚಿಸತೊಡಗಿದ. ಅವಳ ತವರಿಗೆ ಏನಾದರೂ ಹೋಗಿರಬಹುದೇ. ಆದರೆ ಅದು ಸುಮಾರು ದೂರ, ಹೇಳದೆ ಕೇಳದೇ ಹೋಗಿರಲಿಕ್ಕಿಲ್ಲ. ಇನ್ನೆಲ್ಲಿ ಹೋಗಿರಬಹುದು. ಗಂಡ ಮನೆಗೆ ಬರುವನೆಂಬ ಜ್ಞಾನವೇ ಇಲ್ಲ ಎಂದು ತನ್ನಲ್ಲೇ ರೇಗಿಕೊಂಡು ಬೀಡಿಯೊಂದನ್ನು ಹೊತ್ತಿಸಿ ಸೇದತೊಡಗಿದ.

ಅವನು ಕುಳಿತೂ... ಕುಳಿತೂ ಬೇಸತ್ತು ಹತ್ತಿರದ ಸದಾಶಿವ ಭಟ್ಟರ ಹೋಟಲಿಗೆ ಹೋಗಿ, ''ಸದಾಶಿವ ಒಂದು ಕಡಕ್ ಚಹಾ ಕೊಡು ತುಂಬಾ ಮಂಡೆ ಬಿಸಿ ಆಗಿದೆ'' ಎಂದಾಗ ಆತ ಕೇಳಿದ ''ಅಂತಾದ್ದೇನಾಯ್ತು ಮಾರಾಯ ತಲೆಬಿಸಿ ಆಗುವಂತದ್ದು ?''

''ನನ್ನ ಹೆಂಡತಿ ಮನೆಯಲ್ಲಿ ಇಲ್ಲ ಮಾರಾಯ !''

ಆತ ಗೊಳ್ಳನೆ ನಕ್ಕು ಹೇಳಿದ.

''ಹಾಗಾದರೆ ನಿನಗೆ ಗೊತ್ತಿಲ್ಲ ಅನ್ನು ?''

''ಏನು ನನಗೆ ಗೊತ್ತಿಲ್ಲದಿರುವುದು ?''

''ನಿನ್ನ ಹೆಂಡತಿ ಈಗ ಸಾಕ್ಷರತಾ ಶಾಲೆಗೆ ಹೋಗುತ್ತಾಳೆ ಮಾರಾಯ !''

ಅವನು ಚಹಾವನ್ನು ಗಟಗಟನೆ ಕುಡಿದು ಉಕ್ಕಿ ಬರುವ ಕ್ರೋಧದೊಂದಿಗೆ ಮನೆಯ ಕಡೆ ಧಾವಿಸಿದ.

ಏನು ಮಾಡುತ್ತಿದ್ದಾಳೆ ಈ ದರಿದ್ರದ ಹೆಣ್ಣು. ನನ್ನ ಮಾನವನ್ನು ಹರಾಜು ಹಾಕುತ್ತಾಳೆ. ಇವಳು ಓದು ಬರಹ ಕಲಿಯುವುದಂದ್ರೆ ಏನು ? ಇವಳಿಗೆ ತಲೆ ಸರಿ ಇದೆಯೇ ? ಎಂದೆಲ್ಲಾ ಅಂದುಕೊಳ್ಳುತ್ತಾ ಮನೆಗೆ ಬಂದ.

ಮನೆಯ ಬಾಗಿಲು ತೆರೆದಿತ್ತು.

ಸಿಡುಕುತ್ತಲೇ, ''ಅಲೀಮಾ'' ಎನ್ನುತ್ತಾ ಒಳ ಬಂದವನಿಗೆ ಅವಳು ನಮಾಜು ಮಾಡುತ್ತಿರುವುದು ಕಾಣಿಸಿತು. ಅಲ್ಲಿಂದಲೇ ಒಳಗೆ ಬಂದು ಹುಡುಕಿದಾಗ ಎದುರಿಗೆ ಕಂಡ ಚೀಲವನ್ನು ಬಿಚ್ಚಿದ. ಅದರಲ್ಲಿದ್ದ ಸ್ಲೇಟ್, ಪುಸ್ತಕ ಎಲ್ಲಾ ಕೆಳಗೆ ಬಿತ್ತು. ಸ್ಲೇಟನ್ನು ಒಡೆದು ಚೂರು ಮಾಡಬೇಕೆಂದು ಕೈಗೆತ್ತಿಕೊಂಡವನು, ಅದರಲ್ಲಿ ಏನೋ

ಸುಂದರವಾಗಿ ಬರೆದುದನ್ನು ಕಂಡು ಕೋಪ ತಗ್ಗಿ ಅದನ್ನೇ ತದೇಕ ಚಿತ್ತದಿಂದ ನೋಡತೊಡಗಿದ.

ನಮಾಜು ಮುಗಿಸಿ ಹತ್ತಿರ ಬಂದ ಅಲೀಮಾ ಅವನ ಕೈಯಲ್ಲಿದ್ದ ಸ್ಲೇಟನ್ನು ಕಂಡು ಬೆವರತೊಡಗಿದಳು. ನಮಾಜು ಮಾಡುತ್ತಿದ್ದಾಗ ಅವನು ಅಲೀಮಾ ಎಂದು ಅಬ್ಬರಿಸುತ್ತಾ ಬರುತ್ತಿದ್ದುದು ಕೇಳಿಸಿತ್ತು. ಇನ್ನು ತನ್ನನ್ನು ಕೊಂದೇಬಿಡುತ್ತಾನೆ ಎಂದು ಭಯಪಟ್ಟುಕೊಂಡಿದ್ದವಳ ಹತ್ತಿರ ಬಂದು ಆತ ಕೇಳಿದ.

''ಇದೇನು ಬರೆದಿದ್ದೀ ?''

''ನನ್ನ ಹೆಸರು.''

''ಹಾಗಾದರೆ ನನ್ನ ಹೆಸರು ಬರೆ ನೋಡೋಣ ?''

ಅವಳು ಸ್ಲೇಟ್ ಕೈಗೆತ್ತಿಕೊಂಡು ಬರೆದಳು. 'ಆದಮ.'

''ಏನು ಬರೆದಿದ್ದೀ ಓದಿ ಹೇಳು ನೋಡೋಣ ?

ಅವಳು ನಾಚಿಕೊಂಡಳು. ಅವಳ ಭಯ ಹಾರಿಹೋಗಿತ್ತು. ಮುಖ ಕೆಂಪಗಾಗಿಸಿ ಹೇಳಿದಳು.

''ಛೀ ಹೋಗೀಪ್ಪಾ, ಯಾರಾದರೂ ಗಂಡನ ಹೆಸರು ಹೇಳುತ್ತಾರೇನು ?''

ಇಲ್ಲಿ ಯಾರೂ ಇಲ್ಲ, ಹೇಳಿಬಿಡು ನೋಡೋಣ.

ಅವಳು ಮೆಲ್ಲನೆ ಓದಿ ಹೇಳಿದಳು.

''ಆ...ದ...ಮ...''

ಅವನು ನಿಬ್ಬೆರಗಾದ, ಎಷ್ಟು ಚೆನ್ನಾಗಿ ಬರೆಯುತ್ತಾಳೆ. ಎಷ್ಟು ಅಂದವಾಗಿದೆ ನನ್ನ ಹೆಸರು. ನಾನು ಇದುವರೆಗೆ ಕತ್ತಲೆಯಲ್ಲಿದ್ದೆ. ಓದು-ಬರಹ ಎಂದರೆ ಗೊತ್ತಿರಲಿಲ್ಲ. ಇದುತನಕ ನನಗೆ ಗೊತ್ತಿದ್ದದ್ದು ಹೆಬ್ಬೆಟ್ಟು ಒತ್ತುವುದು ಒಂದೇ. ನನ್ನ ಹೆಸರನ್ನು ಬರೆದಾಗಲೇ ಇಷ್ಟು ಅವ್ಯಕ್ತ ಅನುಭವವಾಗುವುದಾದರೆ ಇನ್ನು ಎಲ್ಲಾ ಕಲಿತು ಪತ್ರಿಕೆ ಓದುವಂತಾದರೆ ಸ್ವಲ್ಪ ಜ್ಞಾನವಾದರೂ ಬಂದೀತು. ಅಕ್ಷರವಿಲ್ಲದೆ ನಿರಕ್ಷರನಾಗಿ ಜೀವಿಸುವುದು ಬದುಕೇ ಅಲ್ಲ. ಇಂದು ಅಲೀಮಾ ತನ್ನ ಕಣ್ಣು ತೆರೆಸಿದಳು. ಓದು ಬರಹಕ್ಕೆ ಎಷ್ಟೊಂದು ಶಕ್ತಿ ಇದೆ ಎಂದುಕೊಂಡು ಅವಳೊಡನೆ ಹೇಳಿದ.

''ಅಲೀಮಾ.... ನಾಳೆಯಿಂದ ನಾನೂ ಓದು-ಬರಹ ಕಲಿಯಲು ಬರುತ್ತೇನೆ !''

ಅವಳು ನಿಬ್ಬೆರಗಾಗಿ ಅವನನ್ನೇ ನೋಡತೊಡಗಿದಳು.

# 4 ಗರ್ಭ

ಅವಳ ಹೆಸರು ಫಾತಿಮಾ ಎಂದು. ಅವಳು ಹೊರಗೆ ಕುಳಿತು ಹನಿ ಹನಿಯಾಗಿ ಸುರಿಯುತ್ತಿರುವ ಮಳೆಯನ್ನು ನೋಡುತ್ತಿದ್ದಾಳೆ. ಹಾಗೆಯೇ ಅವಳ ಕಂಗಳು ಅಂಗಳದ ಕುಳಿಯಲ್ಲಿ ನಿಂತ ಕೆಂಪು ನೀರನ್ನು ಗಮನಿಸುತ್ತದೆ. ಕುಳಿ ತುಂಬಿ ಕೆಂಪು ನೀರು ರಾಡಿ-ರಾಡಿಯಾಗಿ ಹೊರ ಹರಿಯುತ್ತಿದೆ. ಆದರೆ, ಯಾರಿಗೂ ಅಂಗಳದ ಈ ಕುಳಿಯನ್ನು ಮುಚ್ಚಬೇಕೆಂದು ಅನಿಸಿದ್ದಿರಲಿಲ್ಲ. ತನಗೂ ಸಹ. ತಾನು ಪ್ರತಿನಿತ್ಯವೂ ಈ ಕುಳಿಯನ್ನು ನೋಡುತ್ತಿದ್ದೇನೆ. ಆದರೆ ತನಗೆ ಆ ಕುಳಿಯನ್ನು ಮುಚ್ಚುವ ಆಸಕ್ತಿ ಇಲ್ಲ. ತನ್ನ ಬದುಕೇ ಒಂದು ಕುಳಿ ಬಿದ್ದ ಅಂಗಳವಾಗಿರುವಾಗ.

'ಅಲಿಫು... ಬಾ... ತಾ...' ಕನ್ನಡದ ಒಂದೊಂದೇ ಅಕ್ಷರದಂತೆ ಅರಬಿಕ್‌ನ ಸೋನೆ ಹಿಡಿದ ಮಳೆಯಲ್ಲೂ ಕೇಳಿಸುತ್ತಿದೆ. ಅವಳು ಕುಳಿತಲ್ಲಿಯೇ ಕತ್ತು ತಿರುಗಿಸಿ ಒಳ ನೋಡಿದಳು. ಕೆಂಪು ಬೆಳಕಿನಡಿ ಒಂದಿಷ್ಟು ಮಕ್ಕಳು. ಎಣಿಸಿದರೆ ಹನ್ನೆರಡು ಮಕ್ಕಳು. ಹಾಗೇ ರಾಗವಾಗಿ 'ಅಲಿಫು... ಬಾ... ತಾ...' ಅಕ್ಷರಭ್ಯಾಸ ಮಾಡುತ್ತಿವೆ. ಒಂದೊಂದೂ ಮುದ್ದು-ಮದ್ದಾದ ಮಕ್ಕಳು. ಹಾಗೇ ಬಾಚಿ ತಬ್ಬಿಕೊಂಡು ಕೆನ್ನೆಗೆ ಲೊಚಕ್ಕೆಂದು ಮುದ್ದಿಡಬೇಕೆನಿಸುತ್ತೆ. ತನಗೂ ಇಂತಹ ಪ್ರಾಯದ ಒಂದಾದರೂ ಮಕ್ಕಳಿರಬೇಕಿತ್ತು. ತನ್ನ ಮದುವೆಯಾದ ಈ ಏಳೆಂಟು ವರ್ಷದಲ್ಲಿ ತನ್ನ ಗರ್ಭ ಫಲಿಸದೆ ತಾನು ಬಂಜೆಯಾಗಿಯೇ ಉಳಿದಿದ್ದೆ.

ಅವಳು ದಿಟ್ಟಿ ಚಲಿಸಿ 'ಅಲಿಫು... ಬಾ...'' ಕಲಿಸುವ ಅವರನ್ನು ನೋಡಿದಳು. ಮಕ್ಕಳಿಗೆ ಅವರಿಂದ ವಿದ್ಯೆ ಕಲಿಯುವುದೆಂದರೆ ಅದೇನು ಖುಷಿಯೋ. ಅವರೂ ಎಳೆಯ ಮಗುವಿನಂತೆ. ಒಂದೊಂದೇ ಅಕ್ಷರಗಳನ್ನು ಎಳೆಯ ಮಿದುಳಿಗೆ ತಟ್ಟುವಂತೆ ಮೃದುವಾಗಿ ಅಚ್ಚೊತ್ತಿಸುತ್ತಿದ್ದರು. ದೇದೀಪ್ಯಮಾನವಾದ ಕಂಗಳು. ಬಕ್ಕತಲೆ, ಮುಖದಲ್ಲಿಷ್ಟು ಗಡ್ಡ, ಮೀಸೆ, ಉಸ್ಮಾನ್ ಮೊಯಿಲಿಯಾರ್.

ಓದು ಮುಗಿಯಿತು. ಮಕ್ಕಳೆಲ್ಲರೂ ಎದ್ದು ನಿಂತರು. ''ಅಸ್ಸಲಾಂ ಅಲೈಕುಂ'' ಮಕ್ಕಳ ವಂದನೆಗೆ ಪ್ರತಿಯಾಗಿ. ''ವ ಅಲೈಕುಂ ಸಲಾಂ'' ಪ್ರತಿವಂದಿಸಿ. ಮಕ್ಕಳೆಲ್ಲ ಬಾಗಿಲಿಗೆ ಬಂದಾಗ ಫಾತುಮಾ ಒಂದೊಂದರ ಕೆನ್ನೆ ತಟ್ಟಿ ಹಣೆಗೆ ಮುತ್ತಿಕ್ಕಿ ವಿದಾಯ ಹೇಳಿದಳು. ಕೊನೆಯಲ್ಲಿ ಉಳಿದ ಮುದ್ದಾದ ಒಂದು ಹುಡುಗಿ ಇವಳ ಕಣ್ಣಲ್ಲಾಡಿದ ಕಂಬನಿಯನ್ನು ಗುರುತಿಸಿ ''ಯಾಕೆ ಅಳುತ್ತಿದ್ದೀರಿ ?'' ಎಂದು ಮುಗ್ಧವಾಗಿ ಪ್ರಶ್ನಿಸಿತು. ಆ ಪ್ರಶ್ನೆಗೆ ತಾನು ಏನೆಂದು ಉತ್ತರಿಸಬೇಕು ? ಉತ್ತರಿಸಿದರೆ ಅದಕ್ಕೆ

ಅರ್ಥವಾದೀತೇ ? ಆ ಮಗು ಮತ್ತೆ ಅವಳನ್ನೇ ಅಂಟಿ ಕೇಳಿತು "ಯಾಕೆ ಅಳುತ್ತಿದ್ದೀರಿ ?" ಅವಳು ತನ್ನ ಬರಡು ಹೊಟ್ಟೆಯನ್ನು ತಟ್ಟಿ ಹೇಳಲಾರದೇ ಮೂಕವಾಗಿ ಅತ್ತಳು. ಹೃದಯದೊಳಗೆ ತುಂಬಿದ್ದ ವೇದನೆಯೆಲ್ಲಾ ಹುಚ್ಚು ವೇಗದಿಂದ ಹೊರ ಧುಮ್ಮಿಕ್ಕಿ ಅವಳ ಅಳು ಇನ್ನಷ್ಟು ಜಾಸ್ತಿಯಾಯಿತು. ಮಗುವನ್ನು, "ಹೋಗು ಮಗೂ.. ನಾನು ಅಳುತ್ತಿಲ್ಲ" ಎಂದು ಹೊರಡಿಸಿ, ಕಣ್ಣೊರೆಸಿ ಹೊಸಿಲ ಬಳಿಯಿಂದ ಅದರ ಬಳಿ ಬಂದಳು.

ಅವರು, ಉಸ್ಮಾನ್ ಮೊಯಿಲಿಯಾರ್ ಫಾತಿಮಾಳ ಗಂಡ. ಹತ್ತಿರ ಬಂದ ಹೆಂಡತಿಯ ಮುಖದಲ್ಲಿ ನಗುವನ್ನು ಅರಸಲು ಯತ್ನಿಸಿದವರು, ಅಲ್ಲಿ ನಗು ಕಾಣದೆ ಬೆಚ್ಚಿ ನಿಧಾನವಾಗಿ ಎದ್ದು ನಿಲ್ಲುವ ಯತ್ನ ಮಾಡಿ ಸೋತು ಹಾಗೇ ಧಿಕ್ಕನೆ ಕುಳಿತು ಬಿಟ್ಟರು. ಪೋಲಿಯೋ ಬಡಿದು ಬಲಹೀನವಾದ ತನ್ನ ಕಾಲುಗಳೆರಡನ್ನೂ ದಿಟ್ಟಿಸಿ ತನ್ನ ಅಸಹಾಯಕತೆಗೆ ತಾನೇ ಮರುಗಿ, "ಓ, ನನ್ನ ಅದೃಷ್ಟವೇ" ಎಂದು ಪೇಚಾಡಿಕೊಂಡರು. ತನಗೆ ಈ ಕಾಲುಗಳ ಬಲಹೀನತೆಯೊಂದೇ ಅಲ್ಲ, ತನ್ನವಳ ಪ್ರಕೃತಿಯಲ್ಲಿ ಬೀಜ ಬಿತ್ತಿ ಸೃಷ್ಟಿಸುವ ಸಾಧ್ಯತೆಯೂ ಇಲ್ಲವಾಗಿ ಹೋಯಿತೇ, ಎಂಬ ಸತ್ಯದ ಅರಿವಾದಾಗ ಅವರ ಕಂಗಳಲ್ಲಿ ಕಂಬನಿ ಮಡುಗಟ್ಟತೊಡಗಿತು. ಅವಳ ಬದುಕೊಂದು ಪರಿಪೂರ್ಣತೆಯನ್ನು ಹೊಂದಬೇಕಾದರೆ ಅವಳ ಬಸಿರು ಫಲವತ್ತತೆಯನ್ನು ಹೊಂದಬೇಕು. ಆದರೆ ಅದು ಹೇಗೆ ಸಾಧ್ಯ. ಈ ಕಳೆದುಹೋದ ಎಷ್ಟೋ ರಾತ್ರಿಗಳಲ್ಲಿ ಅವಳು ಹೂವಾಗಿ ಅರಳುತ್ತಿದ್ದಾಳೆ. ತಾನು ಪುರುಷನಾಗಿ ವಿಜೃಂಭಿಸುತ್ತಿದ್ದೇನೆಯೇ ? ಶಕ್ತಿಗುಂದಿದ ಕಾಲುಗಳಿದ್ದರೂ ರತಿ ಸುಖದಲ್ಲಿ ಅವಳನ್ನು ತೊಡಗಿಸಿಕೊಳ್ಳುತ್ತಿದ್ದೇನೆಯೇ. ತನಗೆ ಆ ಕ್ರಿಯೆಯೇ ಸಾಧ್ಯವಾಗುತ್ತಿಲ್ಲ. ಆದರೆ ಅವಳು ಬರಡು ಭೂಮಿಯಂತೆ ಮಳೆಗಾಗಿ ಹಾತೊರೆಯುತ್ತಿದ್ದಾಳೆ. ಆದರೆ ತಾನು ಈ ಶಕ್ತಿ ಹೀನ ಕಾಲುಗಳನ್ನು ಚೆಲ್ಲಿ ಹಾಗೇ ಬಿದ್ದುಕೊಳ್ಳುತ್ತಿದ್ದೇನೆ. ಎಷ್ಟು ದಿನಗಳು ? ಲೆಕ್ಕಕ್ಕೆ ಸಿಗದಷ್ಟು ದಿನಗಳು. ಅವಳು ಮಾಸ ಮಾಸವೂ ಸರಿಯಾಗಿ ಮುಟ್ಟಾಗುತ್ತಿದ್ದಾಳೆ. ಒಂದೊಂದು ತಿಂಗಳ ಮುಟ್ಟು ತನ್ನ ಎಡ ಹೆಗಲ ಮೇಲೆ ಹತ್ತಿ ಕೂತು ತನ್ನ ಪಾಪದ ಹೊರೆಯನ್ನು ಹೆಚ್ಚು ಮಾಡುತ್ತಲೇ ಇವೆ. ಇಂತಹ ಸುಂದರ ಹೆಣ್ಣನ್ನು ಮದುವೆಯಾಗಿ ಅವಳ ಸುಖವನ್ನು ಕಸಿದುಕೊಂಡ ತನ್ನನ್ನು ಆ ಅಲ್ಲಾಹು ಎಂದಿಗೂ ಮೆಚ್ಚಲಾರ, ಕ್ಷಮಿಸಲಾರ.

"ಏಳಿ" ಎಂದವಳು ಅವರ ತೋಳು ಹಿಡಿದು ನಿಧಾನ ಎಬ್ಬಿಸಿದಳು. ನಿಧಾನವಾಗಿ ಅವಳ ಆಸರೆಯಲ್ಲಿ ಎದ್ದು ತೆವಳುತ್ತಾ ನಡೆದಾಗ ಅವರಿಗೆ ಅಳುವೇ ಬರುತ್ತಿರುವಂತೆ ಅನಿಸಿತು. ಆದರೆ ತಾನು ಗಂಡಸು, ಮಕ್ಕಳಿಗೆ ಖುರಾನ್ ಕಲಿಸುವ ಉಸ್ಮಾನ್ ಮೊಯಿಲಿಯಾರ್. ಹೀಗೆ ಅಳಬಾರದು ಎಂದು ಏನನ್ನೋ ನಿರ್ಧರಿಸಿ

ಕೊಂಡವರು ಅವಳೊಂದಿಗೆ ನಡೆದರು. ಬಾತ್‌ಕಲ್ಲೊಂದರಲ್ಲಿ ಅವರನ್ನು ಕುಳ್ಳಿರಿಸಿ ಅವರ ಬಟ್ಟೆಯನ್ನೆಲ್ಲಾ ಕಳಚಿ ಅವರನ್ನು ಹುಟ್ಟಿನ ಸ್ಥಿತಿಗೆ ತಂದಳು. ಅವಳಿಗೆ ಗಂಡನ ಆ ನಗ್ನತೆಯನ್ನು ನೋಡುವಾಗ ಯಾವ ರೋಮಾಂಚಕ-ಉದ್ರೇಕವಾಗುವುದಿಲ್ಲ.

ಎಲ್ಲಿ ಪುರುಷ ಚಿಹ್ನೆ ಮೆರೆಯಬೇಕಿತ್ತೋ ಅಲ್ಲಿ ಪೌರುಷ ಇರಲಿಲ್ಲ. ತಲೆಗೆ ನೀರು ಸುರಿದು ಸಾಬೂನು ಹಚ್ಚಿ ದೇಹದ ಅಂಗುಲ-ಅಂಗುಲವನ್ನು ತಿಕ್ಕಿ ತೊಳೆಯ ತೊಡಗಿದಳು. ಅವರೊಂದು ಮಗುವಿನಂತೆ ಅನ್ನಿಸತೊಡಗಿತ್ತು. ಸ್ನಾನ ಮಾಡಿಸಿ ನೀರಿನ ಪಸೆಯನ್ನು ಒರೆಸಿ ಲುಂಗಿ ಸುತ್ತಿ ಮತ್ತೆ ಅವರನ್ನು ಒಳ ಕರೆತಂದಳು.

ಅವರನ್ನು ನಮಾಜಿನ ಕ್ರಿಯೆಗೆ ನಿಲ್ಲಿಸಿ (ಕುಳ್ಳಿರಿಸಿ) ಅವಳು ಕಿಟಕಿಯ ಬಳಿ ಬಂದಳು. ಕಿಟಕಿಗೆ ಮುಖ ಇರಿಸಿ ಹೊರನೋಡಿದಳು. ಹೊರಗೆ ಕತ್ತಲಾವರಿಸುತ್ತಾ ಬರುತ್ತಿದೆ. ಗಾಢ ಕತ್ತಲು. ಹತ್ತಿರದಲ್ಲಿ ಒಂದು ಮನೆಯಲ್ಲಿ ವಿದ್ಯುತ್ತಿನ ಬಲ್ಬುಗಳನ್ನು ಆಕರ್ಷಕವಾಗಿ ಸಿಂಗರಿಸಲಾಗಿದೆ. ಮನೆಯ ಹೊರಗೆ ದೊಡ್ಡ ಚಪ್ಪರ. ಮೈಕ್ ಮೇಲಾಂಜಿ ಪಾಟನ್ನು ಕಿವಿತಟ್ಟುವಂತೆ ಹಾಡುತ್ತಾ ಇದೆ. ಅವಳು ಆ ಹಾಡಿಗೆ ಹಾಗೇ ಮೈಮರೆತುಬಿಟ್ಟಳು. 'ತಾನು ಅಂದು ಎಷ್ಟು ಸಂಭ್ರಮಿಸಿದ್ದೆ. ಅದು ತನ್ನ ಮದುವೆಯ ದಿನ. ತನಗೂ ಹದವಾದ ಯೌವನ. ಮೈ ಬಿಸಿಯೇರುತ್ತಿದ್ದ ಕಾಲ. ಮದುವೆಯಾಗ ಬೇಕೆನಿಸಿತ್ತು. ತಾನು ಆ ಮನೆಯಲ್ಲಿದ್ದಾಗಲೇ ಇಲ್ಲಿ ಮದುವೆಯಾಗಿತ್ತು. ತಾನು ಗಂಡನ್ನು ನೋಡಿರಲಿಲ್ಲ. ನೋಡುವ ಕಾಲವೂ ಅಲ್ಲ ಅದು. ತಂದೆ ಅಳಿಯನಾಗು ವವನನ್ನು ನೋಡಿದ್ದರು. ದೊಡ್ಡ ಶ್ರೀಮಂತನ ಮಗನಂತೆ ಆಕರ್ಷಕವಾದ ಮುಖವಂತೆ.

ಮದುವೆ ಕಳೆದು ತಾನು ಶ್ರೀಮತಿ ಉಸ್ಮಾನ್ ಮೊಯಿಲಿಯಾರ್ ಆದ ಮೊದಲ ರಾತ್ರಿ ಬಲಹೀನವಾದ ಕಾಲುಗಳಲ್ಲಿ ತೆವಳುತ್ತಿರುವ ಒಂದು ಜೀವಿಯನ್ನು ನೋಡಿದ್ದೆ. ಮದುವೆಯ ದಿನ ಆತ ಕುದುರೆಯಲ್ಲೇ ಬಂದಿದ್ದ. ಕುದುರೆಯಲ್ಲಿ ಕುಳಿತಿದ್ದ ಹಾಗೆಯೇ ಹಾರ ಹಾಕಿದ್ದ. ತಾನು ನಾಚಿಕೆಯಿಂದ ಕತ್ತೆತ್ತಿರಲಿಲ್ಲ. ಈಗ ಮದುವೆ ಕಳೆದು ಆ ಮೊದಲ ರಾತ್ರೀಲಿ ತೆವಳುತ್ತಿರುವ ಈ ವಿಚಿತ್ರ ವ್ಯಕ್ತಿ ಯಾಕೆ ಬಂದಿದ್ದಾನೆಂದು ಅರಿವಾಗದೇ ಭಯಪಡತೊಡಗಿದೆ. ಆದರೆ ಬೊಬ್ಬಿಡಲೂ ಬಾರದಂತೆ ಧ್ವನಿ ಹೊರಡಲಿಲ್ಲ. ಆತ ಹತ್ತಿರ ಬಂದವನೇ, ''ನಾನೇ ನಿನ್ನ ಗಂಡ ಉಸ್ಮಾನ್ ಮೊಯಿಲಿಯಾರ್'' ಅಂದ. ತಾನು ಕುಸಿದಿದ್ದೆ.

ಅಂದಿನಿಂದ ತಾನು ಆ ವ್ಯಕ್ತಿಯನ್ನು ಗಂಡನೆಂದು ಒಪ್ಪಿಕೊಳ್ಳಬೇಕಿತ್ತು. ವರದಕ್ಷಿಣೆ ಕೊಡಲಾಗದ ಸ್ಥಿತಿಯಲ್ಲಿ ತನ್ನ ತಂದೆ ತನ್ನನ್ನು ಅವರಿಗೆ ಮದುವೆ ಮಾಡಿದ್ದರು. ತನ್ನ ಅತ್ತೆ ತನ್ನನ್ನು ಮನೆಯ ಭಾಗ್ಯ ಎಂದು ಅಪ್ಪಿ ಮುದ್ದಾಡ ತೊಡಗಿದ್ದರು. ಆದರೆ ತಾನು ಯಾರನ್ನು ಅಪ್ಪಿ ಮುದ್ದಾಡಲಿ ? ಅಂದಿನಿಂದ ಪ್ರತಿ

ರಾತ್ರಿಯೂ ಅವರ ಶಕ್ತಿಹೀನ ಕಾಲುಗಳಲ್ಲಿ ಶಕ್ತಿ ತುಂಬಲೆತ್ನಿಸಿದೆ. ತನ್ನ ಬಲವಾದ ತೊಡೆಗಳಿಂದ ಅವರ ಪೀಚಲು ತೊಡೆಗಳಲ್ಲಿ ಬಿಸಿ ಹುಟ್ಟಿಸಲೆತ್ನಿಸಿದೆ. ಆದರೆ ತನ್ನ ಪ್ರಯತ್ನವೆಲ್ಲಾ ನಿಷ್ಫಲವಾಗಿ ಅವರ ಪೌರುಷ ಅರಳಲಿಲ್ಲ. ತಾನು ಬರಡು ಭೂಮಿಯಾಗೇ ಉಳಿದೆ. ತನ್ನ ಬರಡು ಭೂಮಿಗೆ ಎಂದೂ ಮಳೆಯ ಹನಿ ಸುರಿಯದೆ ತಿಂಗಳು, ತಿಂಗಳೂ ಮುಟ್ಟಾಗತೊಡಗಿದೆ, ತಿಂಗಳು-ತಿಂಗಳು.

ನಮಾಜು ಮುಗಿಸಿ ಅವರು ''ಫಾತಿಮಾ'' ಎಂದು ಕರೆದಾಗ ಅವಳು ನೆನಪಿನಿಂದ ಈಚೆ ಬಂದಳು. ಅವರನ್ನು ಅಲ್ಲಿಂದ ಕರೆತಂದು ಮಣೆ ಹಾಕಿ ಕುಳ್ಳಿರಿಸಿ ತಟ್ಟೆಗೆ 'ಘಮ ಘಮ' ಅನ್ನೋ ಚಪಾತಿ-ಕೋಳಿ ಪಲ್ಯ ಹಾಕಿದಳು. ಅವಳು ಅಡಿಗೆ ಮಾಡುವುದರಲ್ಲಿ ಭಾರೀ ಹುಷಾರು. ಅವಳ ಕೈಯ ಅಡಿಗೆಗೆ ಅದೇನು ರುಚಿಯೋ. ಕೈಗುಣ ಅನ್ನುತ್ತಾರೆ. ಹಾಗೇ ಅವರು ಪೂಗದಸ್ತಾಗಿ ತಿಂದು ಡರ್ರೆಂದು ತೇಗಿ, ''ತುಂಬಾ ಪಸಂದಾಗಿದೆ'' ಎಂದು ಹೊಗಳಿದರು. ಅವಳಲ್ಲಿ ಗಂಡನ ಹೊಗಳಿಕೆಗೆ ಏನೂ ಪರಿಣಾಮ ಉಂಟುಮಾಡಲಿಲ್ಲ. ನಂತರ ಅವರ ಕೈ-ಬಾಯಿ ತೊಳೆದು ಹಾಸಿಗೆಯಲ್ಲಿ ಮಲಗಿಸಿ ಅವಳೂ ಚಪಾತಿಯೊಂದಿಗೆ ಕೋಳಿ ಪಲ್ಯ ತಿಂದು ಹಾಸಿಗೆಯಲ್ಲಿ ಅವರಿಗೆ ಒತ್ತಾದಳು. ಅವಳು ಬಿಸಿಯಾಗತೊಡಗಿದಳು. ಆದರೆ ಅವರು ಮರದ ಕೊರಡಿನಂತೆ ಬಿದ್ದುಕೊಂಡಿದ್ದರು. ಅವಳ ಕಿವಿಗಳಿಗೆ ಮತ್ತೆ ಅದೇ ಹತ್ತಿರದ ಮನೆಯಿಂದ ಮೌಲಾಂಜಿಯ ಪಾಟ್ ಕೇಳಿಸತೊಡಗಿತ್ತು. ಅವಳು ಅಸಹನೆಯಿಂದ ಗಂಡನ ಬಳಿಯಿಂದ ಎದ್ದು ಮತ್ತೆ ಹೊಸಿಲ ಬಳಿ ಬಂದಳು. ಅದೇ ಸಿಂಗರಿಸಿದ ಚಪ್ಪರ. ನಾಳೆಯ ದಿನ ಅಲ್ಲಿ ಅಲೀಮಾಳ ಮದುವೆ. ಅವಳಿಗಿಂತ ಹತ್ತು ವರುಷ ಚಿಕ್ಕವಳು. ಅಲೀಮಾಳ ಮದುವೆ ಇವಳ ಮದುವೆಯ ಹಾಗೇ ಅಲ್ಲ. ಹೈಸ್ಕೂಲು ತನಕ ಓದಿದವಳು. ತಾನು ಮದುವೆಯಾಗುವ ಗಂಡನ್ನು ಸರಿಯಾಗಿ ನೋಡಿ, ಮಾತಾಡಿ ಸಮ್ಮತದಿಂದ ಮದುವೆಯಾಗುವುದಕ್ಕೆ ಒಪ್ಪಿದ್ದಳು. ಇವಳು ಶಾಲೆಯನ್ನೇ ಹತ್ತಿರಲಿಲ್ಲ. ಅರಬಿಕ್ ಭಾಷೆಯ ಖುರಾನ್ ಓದಲು ಗೊತ್ತಿತ್ತೇ ಹೊರತು ಕನ್ನಡದ 'ಅ..ಆ..ಇ..ಈ' ಗೊತ್ತಿರಲಿಲ್ಲ. ತನಗೊಂದು ಮಗು ಹುಟ್ಟಿದರೆ ಅದಕ್ಕೆ 'ಅ..ಆ..ಇ..' ಕಲಿಸಬೇಕು. ಆದರೆ ತನಗೆ ಮಗುವೇ ಹುಟ್ಟುವುದಿಲ್ಲವೇ ?

ಅವಳು ಮರಳಿ ಬಂದು ಹಾಸಿಗೆಯಲ್ಲಿ ಬಿದ್ದುಕೊಂಡಳು. ಹತ್ತಿರದ ಮನೆಯಿಂದ ಮಾಪಿಳ್ಳೆಗಾನ ಹಾಗೇ ಸುಶ್ರಾವ್ಯವಾಗಿ ಕೇಳಿಬರುತ್ತಿತ್ತು. ಅವಳಿಗೆ ನಿದ್ದೆ ಹತ್ತಿರ ಸುಳಿಯಲಿಲ್ಲ. ನಿದ್ರೆ ಸುಳಿಯದೇ ಹಾಗೇ ಒದ್ದಾಡುತ್ತಿದ್ದಾಗ ಯಾರೋ ಬಾಗಿಲು ತಟ್ಟಿದ ಸದ್ದು ಕೇಳಿಸಿತು. ಎದ್ದು ಬಂದು ಬಾಗಿಲು ತೆರೆದಾಗ ಎದುರಲ್ಲಿ ಮುಹಮ್ಮದಾಲೀ ಮೇಸ್ತ್ರು. ಇಪ್ಪತ್ತೆರಡು ವಯಸ್ಸಿನ ತನಗಿಂತ ಪ್ರಾಯದಲ್ಲಿ ಎಷ್ಟೋ ಕಿರಿಯ ಪ್ರಾಯದ ಮುಹಮ್ಮದಾಲೀ ಮೇಸ್ತ್ರು.

''ಮೊಯಿಲಿಯಾರ್ ಮಲಗಿಬಿಟ್ಟಿದ್ದಾರೆಯೇ ?'' ಒಳಗೆ ಅಡಿಯಿಡುತ್ತಾ ಮೇಸ್ತ್ರ ಪ್ರಶ್ನೆ.

''ಮಲಗಿಬಿಟ್ಟಿದ್ದಾರೆ. ಎಬ್ಬಿಸಲೇನು ?''

''ಬೇಡ ಹಾಗೇ ಮಲಗಲಿ. ಹಾಂ ನನ್ನ ಪ್ರಶ್ನೆಗೆ ಏನು ಯೋಚನೆ ಮಾಡಿದ್ದೀರಿ ?''

''ಯಾವ ಪ್ರಶ್ನೆ ?''

''ನೆನಪಿಲ್ಲವೇ ? ಆಗಲೇ ಮರೆತುಬಿಟ್ಟಿರಾ ? ಅದೇ ಕನ್ನಡ ಅಕ್ಷರಾಭ್ಯಾಸ ಕಲಿಯುವುದು !''

''ಓ. ಈ ವಯಸ್ಸಿನಲ್ಲಿ ನಾನು ಕನ್ನಡ ಅಕ್ಷರಾಭ್ಯಾಸ ಕಲಿಯುವುದೇ ?''

''ಮೊಯಿಲಿಯಾರ್ ಒಪ್ಪಿದ್ದಾರೆ. ಮತ್ತೆ ನಿಮ್ಮದೇನು ಅಡ್ಡಿ ?''

''ಅಲ್ಲ ನನಗೆ ಯಾಕೆ ಅಂತ ಈ ಅಕ್ಷರಾಭ್ಯಾಸ ?''

''ಹಾಗೇ ಹೇಳಿದರೆ ಹೇಗೆ ? ನೀವೊಬ್ಬರೇನಾ ಕಲಿಯುವುದು. ಬಾಕಿ ಹೆಣ್ಮಕ್ಕಳು ಬರುವುದಿಲ್ಲವೇ ?''

''ನಿಮಗೆ ಪುರುಸೊತ್ತೆಲ್ಲಿದೆ ? ಇಡೀ ದಿನ ಶಾಲೆಯಾಯ್ತು !''

''ಬೆಳಿಗ್ಗೆ ಮತ್ತು ಸಾಯಂಕಾಲ. ಮೊಯಿಲಿಯಾರರು ಮಕ್ಕಳಿಗೆ ಅರಬಿಕ್ ಕಲಿಸುವಾಗ ನಾನು ನಿಮಗೆ ಕನ್ನಡ ಕಲಿಸುತ್ತೇನೆ. ಆಯಿತೇ ?''

''ಹೂಂ.. ಸರಿ.''

ಮುಹಮ್ಮದಾಲೀ ಮೇಸ್ತ್ರು ನಗುತ್ತಾ ಹೊರಟುಹೋದರು. ಅವಳು ಮತ್ತೆ ಹಾಸಿಗೆಯಲ್ಲಿ ಬಿದ್ದುಕೊಂಡಳು. ರಾತ್ರಿ ಸುಮಾರು ಹೊತ್ತಾದುದರಿಂದ ಮೌಲಾಂಜಿ ಪಾಟ್ ಕೇಳಿಬರುತ್ತಿರಲಿಲ್ಲ.

ಮುಂಜಾನೆ ಹೊಸ ಸೀರೆ, ಹೊಸ ರವಿಕೆ ಧರಿಸಿ, ಮುಡಿಗೊಂದಿಷ್ಟು ಮಲ್ಲಿಗೆಯ ಮಾಲೆ ಏರಿಸಿ ಕನ್ನಡಿಯ ಮುಂದೆ ನಿಂತು ಸಿಂಗರಿಸಿ ಈಗ ಹೋಗಬಹುದು ಎನ್ನುವ ತೃಪ್ತಿಯಾಗಿ ಗಂಡನ ಬಳಿ ಬಂದು ಒಪ್ಪಿಗೆ ಪಡೆದು ಹೊರಡುವಾಗ ಯಾರೋ ಒಬ್ಬ ಹುಡುಗ ತಂದ ಸುದ್ದಿಗೆ ದಿಕ್ಕನೆ ಕುಳಿತುಬಿಟ್ಟಳು. ಮುಡಿಗೇರಿಸಿದ್ದ ಮಲ್ಲಿಗೆಯನ್ನು ಕಿತ್ತು ಬಿಸುಟು ಧರಿಸಿದ ಹೊಸಸೀರೆ-ರವಿಕೆಯನ್ನ ಕಿತ್ತೆಸೆದು ಮತ್ತೆ ಹಳೆಯದನ್ನೇ ಏರಿಸಿಕೊಂಡು ಸುದ್ದಿ ತಂದ ಹುಡುಗ ದೂರದ ಕಾಲು ದಾರಿಯಲ್ಲಿ ಮಾಯವಾಗುವುದನ್ನು ಹತಾಶಳಾಗಿ ನೋಡತೊಡಗಿದಳು.

ನಿನ್ನೆಯ ದಿನ. 'ಯಾಕೆ ಅಳುತ್ತಿದ್ದೀರಿ ?' ಎಂದು ಕೇಳಿದ ಹುಡುಗಿಯ ತಾಯಿ ಅಮೀನಾಳ ಮರಣದ ಸುದ್ದಿ. ತನ್ನ ಬಾಲ್ಯ ಗೆಳತಿ. ಒಂದೇ ಮದರಸದಲ್ಲಿ ಕಲಿತದ್ದು. ಒಂದೇ ವರ್ಷದಲ್ಲಿ ಒಂದೇ ಊರಿನ ಗಂಡುಗಳನ್ನು ಮದುವೆಯಾದದ್ದು. ತಾನು

ಬಂಜೆಯಾಗಿಯೇ ಉಳಿದೆ. ಅವಳು ಒಂದು ಹೆಣ್ಣು ಮಗುವಿನ ತಾಯಾಗಿದ್ದಳು. ಆ ಹೆಣ್ಣು ಮಗುವಿಗೆ ತಾಯಾದ ವರ್ಷದಲ್ಲೇ ಗಂಡನನ್ನು ಕಳೆದುಕೊಂಡಿದ್ದ ಆಕೆ ಈಗ ತಾನು ತೀರಿಕೊಂಡು ಈ ಒಂಟಿ ಹೆಣ್ಣು ಮಗುವನ್ನು ಅನಾಥವಾಗಿಸಿದ್ದಳು.

ಫಾತಿಮಾ ಅಲ್ಲಿಗೆ ಬಂದಾಗ ಅಲ್ಲಿ ಮೂಕಮೌನ ನೆಲೆಸಿತ್ತು. ಮದುವೆಯ ಮನೆಯಲ್ಲಿ ಆ ಗದ್ದಲ. ಸಂಭ್ರಮ ಇರಲಿಲ್ಲ. ಸಾವಿನ ತೀವ್ರತೆ ಆ ಮನೆಯನ್ನೂ ತಟ್ಟಿತ್ತು. ಶೋಕೀ ಮನಸ್ಸಿನ ಕೆಲವರಿಗೆ ಈ ಸಾವು ಇವತ್ತೇ ಆಗಬೇಕಿತ್ತೇ ಎಂಬ ಸಂಕಟ. ಆದರೆ ಸಾವಿಗೆ ಹೊತ್ತು ಗೊತ್ತಿದೆಯೇ ?

ಸಾವು ಹೇಗಾಯಿತು ? ಅದಕ್ಕೊಂದು ಕಾರಣ ಬೇಕಿಲ್ಲ ಅಲ್ಲವೇ ? ಒಟ್ಟಿನಲ್ಲಿ ನಿನ್ನೆಯತನಕ ಚಟುವಟಿಕೆಯಿಂದ ಇದ್ದ ಒಂದು ಜೀವ ತನ್ನೆಲ್ಲ ಕ್ರಿಯೆಗಳನ್ನು ನಿಲ್ಲಿಸಿ ನಿರ್ಜೀವವಾಗಿ ಕಫನ್ ಹೊದ್ದು ಅಲ್ಲಿ ಬಿದ್ದಿತ್ತು.

ಮಯ್ಯತ್ತನ್ನು ಸ್ನಾನ ಮಾಡಿಸುತ್ತಿದ್ದಾಗ ಅವಳು ಆ ನಗ್ನತೆಯನ್ನು ನೋಡಿದಳು. ಆ ತುಂಬಿದ ಎದೆ, ಆ ಹೊಕ್ಕಳು, ಆ ತುಂಬಿದ ತೊಡೆ, ತನ್ನೊಡನೆ ಆಟವಾಡುತ್ತಾ ಬೆಳೆದ ಹುಡುಗಿ ಈಗ ನಿರ್ಜೀವವಾಗಿ. ಅವಳಿಗೆ ದುಃಖ ಒತ್ತರಿಸಿಬಂತು. ಅಮೀನಾಳ ಆ ಮಗಳು ತಾಯಿಯ ಮಯ್ಯತ್‌ನ ಬಳಿ ಮೌನವಾಗಿ ಕುಳಿತಿತ್ತು. ಫಾತಿಮಾ ಮಗುವನ್ನು ಹತ್ತಿರ ಕರೆದಳು. ಮಗು ಎದ್ದು ಬಂದು ಇವಳ ಮಡಿಲಲ್ಲಿ ಕುಳಿತು ಕೇಳಿತು ?

''ಉಮ್ಮ ಯಾಕೆ ಹಾಗೆ ಮೌನವಾಗಿ ಮಲಗಿಬಿಟ್ಟಿದ್ದಾರೆ ?''

ಇವಳಿಗೆ ಮಾತು ಕಟ್ಟಿತು. ಏನೂ ಉತ್ತರಿಸಲಾಗದೇ ಮಗುವನ್ನು ತಬ್ಬಿಕೊಂಡು ಮೂಕವಾಗಿ ಅತ್ತಳು.

ಮಯ್ಯತ್‌ನ ದಫನ ಕಾರ್ಯ ಮುಗಿದು ಇವಳು ಮನೆಗೆ ಹೊರಟಳು. ಅಮೀನಾಳ ದೂರದ ಸಂಬಂಧಿಕರಾರೋ ಅಮೀನಾಳ ಆ ಮನೆಯಲ್ಲಿ ತಾತ್ಕಾಲಿಕವಾಗಿ ನೆಲೆಸುವ ತೀರ್ಮಾನ ಮಾಡಿದರು. ಇದೆಲ್ಲದರ ನಡುವೆ ಆ ಮನೆಯಲ್ಲಿ ಅಲೀಮಾಳ ಮದುವೆ ಸದ್ದಿಲ್ಲದೆ ನಡೆದುಹೋಯಿತು.

ಫಾತಿಮ ಮನೆಗೆ ಬಂದಾಗ ಮೊಯಿಲಿಯಾರರು ಮನೆಯ ಬಾಗಿಲಲ್ಲೇ ಕುಳಿತು ಇವಳಿಗಾಗೇ ದಾರಿ ಕಾಯುತ್ತಿದ್ದರು. ಇವಳು ನಿಟ್ಟುಸಿರಿಡುತ್ತಾ ಒಳಗೆ ಬಂದಳು. ಹೊಟ್ಟೆಯಲ್ಲಿ ಹಸಿವು ತಾಳ ಹಾಕುತ್ತಿತ್ತು. ''ನೀವು ಊಟ ಮಾಡಿದಿರೇನು ?'' ಅವಳು ಗಂಡನನ್ನು ಕೇಳಿದಳು.

''ನೀನು ಹಸಿದು ಕುಳಿತಿರುವಾಗ ನಾನು ಹೇಗೆ ಊಟ ಮಾಡಲಿ ಫಾತಿಮಾ'' ಗಂಡನ ಪ್ರೀತಿಗೆ ಕೃತಜ್ಞಭಾವ ಬೀರಿದಳು.

''ಮದುವೆ ಮನೆಯಿಂದ ಊಟ ಕಳುಹಿಸಿದ್ದಾರೆ'' ಮತ್ತೆ ಅವರೇ ಹೇಳಿದರು.

ಪಾತ್ರೆಯಲ್ಲಿ ತುಪ್ಪದ ಅನ್ನ ಮತ್ತು ಮಾಂಸದ ತುಂಡುಗಳು ಇದ್ದುವು.

''ಗೆಳತಿ ತೀರಿಕೊಂಡಿರುವಾಗ ನಾನು ಹೇಗೆ ಮೃಷ್ಟಾನ್ನ ಭೋಜನ ಮಾಡಲಿ. ಇದನ್ನು ನೀವೆ ಊಟ ಮಾಡಿ. ನಾನು ಬೆಳಗ್ಗಿನ ತಂಗಳನ್ನವನ್ನೇ ಉಣ್ಣುತ್ತೇನೆ.''

''ಹಾಗಾದರೆ ತಂಗಳನ್ನ ಎರಡು ಪಾಲು ಮಾಡು. ನಿನ್ನ ಜೊತೆ ನಾನು ಅದನ್ನೇ ಉಣ್ಣುತ್ತೇನೆ.''

ಅಮೀನಾ ತೀರಿಕೊಂಡು ದಿನಗಳು ಸದ್ದಿಲ್ಲದೆ ಸಾಗಿದಾಗ ಮುಹಮ್ಮದಾಲೀ ಮೇಸ್ತ್ರು ಕನ್ನಡ ಅಕ್ಷರಾಭ್ಯಾಸ ಮಾಡತೊಡಗಿದರು.

''ಅ..ಆ..ಇ..ಈ..'' ಫಾತಿಮಾಳಿಗೆ ಬಳಪ ಹಿಡಿದು ಬರೆದಾಗ ಸೋಜಿಗ. ''ಅ..ಆ..'' ಬರೆಯಲು ಮುಹಮ್ಮದಾಲೀ ಮೇಸ್ತ್ರು ಅವಳ ಕೈ ಹಿಡಿದು ತಿದ್ದಿ ತಿದ್ದಿ ಬರೆಸಿದ್ದರು. ಹಾಗೇ ಮೇಸ್ತ್ರು ಕೈ ಹಿಡಿದು ತಿದ್ದಿ ಬರೆಸಿದಾಗ ಇವಳ ಮೈಯಲ್ಲಿ ಮಿಂಚು. ದೇಹವಿಡೀ ಏನೋ ರೋಮಾಂಚನ. ಮನದಲ್ಲಿ ಏನೋ ಬಯಕೆ. ತನಗೆ ಒಂದು ಮಗುವಾಗಬೇಕು. ತನ್ನ ಗರ್ಭದಲ್ಲೇ ಒಂದು ಮಗು ಮೂಡಬೇಕು. ಗಂಡನಿಂದ ತನಗೆ ಮಗುವಾಗುವುದಿಲ್ಲ. ತಾಯಾಗದ ಹೆಣ್ಣಿನ ಬಾಳಿಗೆ ಅರ್ಥವಿಲ್ಲ. ತನ್ನ ಕನ್ನಡ ಅಕ್ಷರಾಭ್ಯಾಸ ಪೂರ್ತಿಯಾಗುವುದರೊಳಗಾಗಿ ತನ್ನ ಗರ್ಭದಲ್ಲೊಂದು ಭ್ರೂಣ ಮೂಡಬೇಕು.

ಆ ದಿನ.

ಮುಹಮ್ಮದಾಲೀ ಮೇಸ್ತ್ರೊಂದಿಗೆ ತನ್ನ ಇಂಗಿತವನ್ನು ಹೇಳಿಬಿಡಲೇಬೇಕೆಂಬ ನಿರ್ಧಾರ ಮಾಡಿ ಮೇಸ್ತ್ರು ಬರುವುದನ್ನೇ ಕಾಯುತ್ತಿದ್ದಳು.

ಅದೇ ಸಮಯದಲ್ಲಿ ತೀರಿಕೊಂಡ ಅಮೀನಾಳ ಸಂಬಂಧಿಕರು ತಮ್ಮ ಊರಿಗೆ ಹೊರಟು ನಿಂತಾಗ ಅವರಿಗೆ ಆ ಹುಡುಗಿಯ ಸಮಸ್ಯೆಯೊಂದು ಕಾಡತೊಡಗಿತು. ಈ ಮಗುವನ್ನು ಏನು ಮಾಡುವುದೆಂದು ಚಿಂತೆ ಹತ್ತಿದಾಗ ಅವರಿಗೆ ಈ ಮಗು ಫಾತಿಮಾಳೊಡನೆ ಹೊಂದಿಕೊಳ್ಳುವುದರ ಅರಿವಿಗೆ ಬಂತು. ಹೇಗೂ ಫಾತಿಮಾಳಿಗೆ ಮಕ್ಕಳಿಲ್ಲ. ಈ ಮಗುವನ್ನು ಅವಳಿಗೆ ನೀಡುವುದು ಎಂಬ ನಿರ್ಧಾರದಲ್ಲಿ ಮಗುವನ್ನು ಕರೆದುಕೊಂಡು ಅಲ್ಲಿಗೆ ಬಂದರು.

ಮುಹಮ್ಮದಾಲೀ ಮೇಸ್ತ್ರಿಗೆ ದಾರಿ ಕಾಯುತ್ತಿದ್ದ ಫಾತಿಮಾ ಮನೆಯ ಬಳಿ ಮಗುವಿನೊಂದಿಗೆ ಬಂದ ಅಮೀನಾಳ ಸಂಬಂಧಿಕರನ್ನು ಮನೆಯ ಒಳ ಕರೆದೊಯ್ದಳು.

''ಫಾತಿಮಾ, ನಾವು ಊರಿಗೆ ಹೋಗುತ್ತಿದ್ದೇವೆ. ನಮ್ಮ ಸಂಸಾರ ದೊಡ್ಡದು. ಈ ಹುಡುಗಿ ನಮ್ಮೊಡನೆ ಅಷ್ಟು ಹೊಂದಿಕೊಳ್ಳುತ್ತಿಲ್ಲ. ಇದಕ್ಕೆ ತಾಯಾಗಲು ನೀನೇ ಸರಿಯಾದವಳು. ನಾವು ಈ ಮಗುವನ್ನು ನಿನ್ನ ಬಳಿಯೇ ಬಿಟ್ಟುಹೋಗ್ತೇವೆ''

ಅವರು ತಾವು ಬಂದ ಉದ್ದೇಶ ಮುಂದಿಟ್ಟರು.

ಫಾತಿಮಾ ಹುಡುಗಿಯನ್ನೊಮ್ಮೆ ನೋಡಿ ಗಂಡನನ್ನು ನೋಡಿದಳು. ಅವರು ಇವಳ ಮುಖದಲ್ಲೇ ಉತ್ತರ ಹುಡುಕುತ್ತಿದ್ದರು. ಫಾತಿಮಾ ಮುಹಮ್ಮದಾಲೀ ಮೇಸ್ಟ್ರೊಂದಿಗೆ ಒಂದು ಸಲ ಕೂಡಿ ಅವರಿಂದ ಗರ್ಭ ಧರಿಸಿ ತಾಯಾಗಬೇಕೆಂಬ ಯೋಚನೆಯಲ್ಲಿದ್ದವಳು. ಅನಿರೀಕ್ಷಿತವಾಗಿ ಗರ್ಭವತಿಯಾಗದೆ ತಾಯಾಗ ಬೇಕಾದ ಆ ಕೋರಿಕೆಗೆ ಮಾತು ಬಾರದೆ ದಂಗಾದ ವೇಳೆಯಲ್ಲಿ ಮುಹಮ್ಮದಾಲೀ ಮೇಸ್ಟ್ರು ಬಾಗಿಲಿಂದ ಒಳಗೆ ಬಂದರು.

''ಅಕ್ಕಾ. ನಾನು ಇಂದು ಹೆಣ್ಣನ್ನು ನೋಡಲು ಹೋಗುತ್ತಿದ್ದೇನೆ. ನನಗೆ ಒಡಹುಟ್ಟಿದವರಾರೂ ಇಲ್ಲ. ನಾನು ಈ ಊರಿಗೆ ಬಂದ ಇಷ್ಟು ದಿನಗಳಲ್ಲಿ ನಿನ್ನನ್ನೇ ಒಡಹುಟ್ಟಿದ ಸೋದರಿ ಎಂದು ತಿಳಿದಿದ್ದೇನೆ. ಈಗ ನೀನು ನನ್ನ ಅಕ್ಕಳ ಸ್ಥಾನದಲ್ಲಿ ನಿಂತು ನಿನ್ನ ಈ ತಮ್ಮನಿಗಾಗಿ ಹೆಣ್ಣು ನೋಡಲು ಬರಬೇಕು'' ಎಂದಾಗ ಮನದಲ್ಲಿ ಮೂಡಿದ ಯೋಚನೆಗಳನ್ನೆಲ್ಲಾ ತಳ್ಳಿ ಹಾಕಿ ಆ ಮಗುವನ್ನು ಬಾಚಿ ತಬ್ಬಿಕೊಂಡು ಅದರ ಕೆನ್ನೆಗೆ ಮುತ್ತಿಕ್ಕಿ ''ಈ ಮಗೂಗೆ ಇನ್ನು ಮುಂದೆ ನಾನೇ ತಾಯಿ'' ಎನ್ನುವುದನ್ನು ಅವರೆಲ್ಲರೂ ನೋಡುತ್ತಿದ್ದರು.

# 5 ವರದಕ್ಷಿಣೆ

ನೀರವ ರಾತ್ರಿ, ಗಾಢ ಕತ್ತಲು ಬೆಳಕಿರಲಿಲ್ಲ. ಕತ್ತಲಿಗೆ ಬೆಳಕು ಹುಟ್ಟಿಸಲೋ ಎನ್ನುವಂತೆ ಆಗೊಮ್ಮೆ ಈಗೊಮ್ಮೆ ಫಳ್ಳೆನಿಸುವ ಮಿಂಚು. ಅವರೆಲ್ಲ ಆ ರಾತ್ರಿಯ ಹೊತ್ತಿನಲ್ಲಿ ಬೆಳಕಿಲ್ಲದೆ ಹಾಗೆ ಕುಳಿತಿದ್ದರು.

ಅಬ್ಬು ಬ್ಯಾರಿಗಳು ಬೆವರುತ್ತಿದ್ದರು. ಅವರ ಎದೆಯಲ್ಲಿ ನಗಾರಿ ಬಾರಿಸಿದಂತಾಗುತ್ತಿತ್ತು. ಯಾವುದೋ ಅವ್ಯಕ್ತ ಭೀತಿ. ಆ ಭೀತಿ ಅವರನ್ನು ಸಾವಿನ ಕಡೆಗೆ ಕೊಂಡೊಯ್ಯುವುದೋ ಎನ್ನುವ ಆತಂಕ.

ಅವರು ಕುಳಿತಲ್ಲಿಂದ ಎದ್ದು ಒಳಬಂದರು. ಒಳಗೆ ಚಿಮಣಿಯ ಬೆಳಕಿನಲ್ಲಿ ಒಂದು ಕಡೆ ಗುಪ್ಪೆಯಾಗಿ ಕುಳಿತಿರುವ ಮಗಳು ಯಾಸೀನ್. ಮತ್ತೊಂದು ಕಡೆ ಅಳುತ್ತಿರುವ ಹೆಂಡತಿ ಮತ್ತು ಇನ್ನಿಬ್ಬರು ಮಕ್ಕಳು.

ಅವರ ಯೋಚನೆ ಹಿಂದಕ್ಕೆ ಹರಿಯಿತು.

ಅಬ್ಬು ಬ್ಯಾರಿಗಳದು ತೀರಾ ಬಡ ಸಂಸಾರ. ಬಡತನದಲ್ಲಿ ಹುಟ್ಟಿದವರು. ಕೈ ಹಿಡಿದಾಕೆ ಅಮೀನಾಳಿಗೆ ಹುಟ್ಟಿದ್ದು ಮೂರು ಹೆಣ್ಣು. ಈಗಿನ ಕಾಲದಲ್ಲಿ ಹೆಣ್ಣು ಹೆತ್ತವರ ಕಷ್ಟ ಅವರಿಗೇ ಗೊತ್ತು. ಅವರು ಹತ್ತಿರದ ಕಲ್ಲಿನ ಕೋರೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಅಮೀನಾ ಮನೆಯಲ್ಲಿಯೇ ಬೀಡಿ ಕಟ್ಟುತ್ತಿದ್ದಳು.

ಹೆಣ್ಣು ಮಕ್ಕಳು ಫಕ್ಕನೆ ಬೆಳೆದುಬಿಡುತ್ತಾರೆ, ತೆಂಗಿನ ಮರದಂಗೆ. ಬಾಲ್ಯ ಹೋಗಿ ಯೌವ್ವನ ತುಂಬಿ ಬಂತು. ಶಾಲೆಗೆ ವ್ಯಾಸಂಗಕ್ಕೆ ಕಳುಹಿಸಲಾಗದಿದ್ದರೂ ಖುರಾನ್ ಶಿಕ್ಷಣವೊಂದನ್ನು ಅಚ್ಚುಕಟ್ಟಾಗಿ ಓದಿಸಿದ್ದರು. ಮುಸ್ಲಿಂ ಹೆಣ್ಣು ಮಕ್ಕಳಿಗೆ ಲೌಕಿಕ ಶಿಕ್ಷಣವಿಲ್ಲದಿದ್ದರೂ ಖುರಾನ್ ಶಿಕ್ಷಣ ಗೊತ್ತಿದ್ದರೆ ಸಾಕು ಎಂದುಕೊಂಡ ಜನ ಅವರು. ಬೆಳೆದು ನಿಂತ ಮಕ್ಕಳನ್ನು ಕಂಡು ಇವುಗಳಿಗೆ ಯಾವಾಗ ಮದುವೆ ಮಾಡಿಯೇನೊ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು.

ಅವರ ಕೂಲಿ ಕೆಲಸ ಮತ್ತು ಹೆಂಡತಿ ಮಕ್ಕಳ ಬೀಡಿಯ ಸಂಪಾದನೆಯಿಂದ ಜೀವನವೇನೋ ಸರಾಗವಾಗಿ ಸಾಗುತ್ತಿತ್ತು.

ದೊಡ್ಡವಳು ಯಾಸೀನ್ ಇಪ್ಪತ್ತರವಳಾದಾಗ ಹೇಗಾದರೂ ಮಾಡಿ ಮದುವೆ ಮಾಡಿ ಮುಗಿಸಬೇಕೆಂಬ ಧೃಡ ನಿರ್ಧಾರದಲ್ಲಿ ಗಂಡೊಂದನ್ನು ಗೊತ್ತು ಮಾಡಿದರು. ಆತನೋ ಮೀನು ಮಾರುವ ಹುಡುಗ. ಆಧುನಿಕ ಶೋಕಿಗೆ ಒಳಗಾದವ. ಗೊತ್ತು ಮಾಡಿದ ದಿನದಂದು ಆತನ ಅಪ್ಪ-ಅಮ್ಮನೊಂದಿಗೆ ಹುಡುಗಿ ನೋಡಲು ಬಂದ.

ಯಾಸೀನ್‌ಳು ಮನೆಯ ಹಿಂದಿನ ತೆಂಗಿನ ಮಡಲಿನ ಮರೆಯಲ್ಲಿ ನಿಂತು ಅಲ್ಲಿ ಹಬ್ಬಿರುವ ದಾರಿಯುದ್ದಕ್ಕೂ ತನ್ನ ದೃಷ್ಟಿಯನ್ನು ಹರಿಯಬಿಟ್ಟಳು. ಅಲ್ಲಿ ಅಪ್ಪ-ಅಮ್ಮನೊಂದಿಗೆ ಬರುತ್ತಿರುವ ಅವನನ್ನು ನೋಡಿದಳು. ಉದ್ದನೆಯ ತೆಂಗಿನ ಮರದಂತಿರುವ ಆತ ಅಗಲ ಕಾಲಿನ ಪ್ಯಾಂಟ್ ಧರಿಸಿದ್ದ. ಕಡ್ಡಿ ಮೀಸೆಗೆ ಅಂಟಿಕೊಂಡ ಗಡ್ಡ. ಕಣ್ಣಿಗೆ ಹಾಕಿಕೊಂಡ ದೃಷ್ಟಿದೋಷದ ಕನ್ನಡಕ. ಆತ ಕಾಲು ಎತ್ತಿ ಎತ್ತಿ ಹಾಕುತ್ತಾ ನಡೆಯುತ್ತಿದ್ದ. ಅವಳಿಗೆ ಅವನನ್ನು ನೋಡಿ ಗೊಳ್ಳೆಂದು ನಗುಬಂತು. ಆದರೆ ಮರುಕ್ಷಣವೇ ಅವಳಿಗೆ ಪರಿಸ್ಥಿತಿಯ ಅರಿವಾಗಿ ಭಯವಾಯಿತು. ಅವನು ತನ್ನನ್ನು ನೋಡಲು ಬಂದಿರೋದು ಒಂದು ವೇಳೆ ಒಪ್ಪಿಬಿಟ್ಟರೇ !?

ತನ್ನನ್ನು ಒಪ್ಪದೆ ಏನು ? ತನ್ನನ್ನು ರೂಪಸಿಯೆಂದು ಎಲ್ಲಾ ಹೇಳುತ್ತಿದ್ದಾರೆ. ಅವನು ಕಣ್ಣು ಮುಚ್ಚಿ ಒಪ್ಪಬಹುದು. ಆದರೆ ತಾನು ಅವನೊಂದಿಗೆ ಬಾಳುವುದು ಸಾಧ್ಯವೇ ? ಅವನು ಒಪ್ಪಿದರೆ ತಂದೆ ತನ್ನನ್ನು ಅವನಿಗೆ ಮದುವೆ ಮಾಡಿ ಕೊಡುವುದು ಖಂಡಿತಾ ! ಆದರೆ ಅವನೆಷ್ಟು ವರದಕ್ಷಿಣೆ ಚಿನ್ನ ಕೇಳುತ್ತಾನೋ...

ಅವರು ಅಂಗಳ ದಾಟಿ ಒಳ ಬಂದರು.

ಇವಳ ಎದೆ ಹೊಡೆದುಕೊಳ್ಳತೊಡಗಿತು.

ಮತ್ತೊಂದು ಕ್ಷಣದಲ್ಲಿ ಇವಳ ಉಮ್ಮ ಇವಳನ್ನು ಕರೆಯುವುದು ಕೇಳಿಸಿತು. ಇವಳು ಒಳ ಬಂದಳು.

ಆತ ಇವಳನ್ನು ನೋಡಿ ಖುಷಿಗೊಂಡು ಹೇಳಿದ ''ಹುಡುಗಿ ನನಗೆ ಒಪ್ಪಿಗೆ !''

ಅಬ್ಬು ಬ್ಯಾರಿಗೆ ಅವರು ಎಷ್ಟು ವರದಕ್ಷಿಣೆ ಕೇಳುತ್ತಾರೆಂದು ಗೊತ್ತಿರಲಿಲ್ಲ. ಇವಳ ಕಿವಿಯಲ್ಲಿ ಹಳೆಯ ಚಿನ್ನದ ರಿಂಗೊಂದನ್ನು ಬಿಟ್ಟರೆ ಬೇರೇನೂ ಇಲ್ಲ. ಹೆಂಡತಿ ಮತ್ತು ಮೂರು ಹೆಣ್ಣು ಮಕ್ಕಳ ಬೀಡಿಯ ಪ್ರಾವಿಡೆಂಟ್ ಹಣ ಐದಾರು ಸಾವಿರ ಸಿಗಬಹುದು. ತಾನು ಕೆಲಸ ಮಾಡುವ ಕಲ್ಲಿ ಕೋರೆಯ ಯಜಮಾನ ಐದು ಸಾವಿರ ಕೊಡಬಹುದು. ಮತ್ತೆ ಸ್ವಲ್ಪ ಹಣ ಹೆಚ್ಚೆಂದರೆ ಹದಿನೈದು ಸಾವಿರ ಮಾಡಬಹುದು. ಅವರು ಕೇಳುವ ಚಿನ್ನ-ವರದಕ್ಷಿಣೆ ತನ್ನಿಂದ ಹೊಂದಿಸಿಕೊಳ್ಳಲು ಸಾಧ್ಯವೇ ?

ಅಬ್ಬು ಬ್ಯಾರಿಗಳು ಕೇಳಿದರು.

''ಹಾಗಾದರೆ ಮಾತುಕತೆ ಆಡಬಹುದಲ್ಲಾ !''

''ನಾವು ನಿಮ್ಮ ಮಗಳನ್ನು ಸೊಸೆಯಾಗಿ ಮಾಡಿಕೊಳ್ಳುತ್ತೇವೆ. ನಮ್ಮ ಹುಡುಗನ ಬಗ್ಗೆ ನಿಮಗೆ ಈ ಮೊದಲೇ ಗೊತ್ತಿದೆಯಲ್ಲ. ದೊಡ್ಡ ಉದ್ಯೋಗಸ್ಥನೇನೂ ಅಲ್ಲ. ಆದರೂ ಏನಾದರೂ ಕೇಳಲೇಬೇಕಲ್ಲವೇ.

''ನೀವು ಹತ್ತು ಪವನು ಚಿನ್ನ ಮತ್ತು ಹದಿನೈದು ಸಾವಿರ ರೂಪಾಯಿ ಕೊಟ್ಟು ಬಿಡಿ. ಜಾಸ್ತಿ ಕೇಳೊಲ್ಲ ನಾವು !''

ಅಬ್ಬು ಬ್ಯಾರಿಗಳಿಗೆ ಒಮ್ಮೆಲೆ ಎದೆ ಬಡಿತ ನಿಂತಂತಾಯಿತು. ಅವರು ಎದೆಯನ್ನು ಒತ್ತಿ ಹಿಡಿದುಕೊಂಡರು. ನಂತರ ಏದುಬ್ಬಸ ಬಿಡುತ್ತಾ ಹೇಳಿದರು.

''ತುಂಬಾ ಜಾಸ್ತಿಯಾಯ್ತು. ಅಷ್ಟನ್ನು ನೀವು ಕೇಳಿದರೆ ಹೇಗೆ ? ಇವಳ ಹಿಂದೆ ಬೆಳೆದು ನಿಂತ ಇನ್ನೂ ಮೂವರು ಮಕ್ಕಳಿದ್ದಾರೆ.''

''ಆದರೆ ಅದಕ್ಕಿಂತಲೂ ಕಡಿಮೆ ಕೇಳಿದರೆ ಹೇಗೆ, ನೀವೇ ಹೇಳಿ !''

''ಇಲ್ಲ. ಅಷ್ಟು ನಮಗೆ ಆಗೊಲ್ಲ. ನಾವು ಹನ್ನೆರಡು ಸಾವಿರ ಮತ್ತು ಎಂಟು ಪವನ ಚಿನ್ನ ಕೊಡುತ್ತೇವೆ. ಅಷ್ಟಕ್ಕಾದರೆ ಮಾತು ಮುಗಿಸೋಣ ಇಲ್ಲದಿದ್ದರೆ ಇಲ್ಲ !''

ಹುಡುಗನ ಅಪ್ಪ-ಅಮ್ಮ ಹುಡುಗನ ಮುಖ ನೋಡಿದರು. ಅವನಿಗೆ ಇಂತಹ ಚೆಂದುಳ್ಳಿ ಹುಡುಗಿಯನ್ನು ಬಿಡುವ ಮನಸ್ಸಿಲ್ಲ. ಆತ ಅಪ್ಪ-ಅಮ್ಮನ ಒಪ್ಪಿಗೆ ಕಾಯದೇ ಹೇಳಿದ. ಅಷ್ಟನ್ನು ಮಾತ್ರ ತಪ್ಪದೇ ಕೊಡಬೇಕು ಇದಕ್ಕೆ ಸ್ವಲ್ಪವೂ ತಪ್ಪಬಾರದು !

ಅಬ್ಬು ಬ್ಯಾರಿಗಳು ಮಗಳ ಮದುವೆಗೆ ದಿನ ಗೊತ್ತು ಮಾಡಿದರು. ಎಲ್ಲಾ ಕಡೆ ಸಾಲ ಬೇಡಿ ಹೇಗೂ ಚಿನ್ನ ಹೊಂದಿಸಿ ವರದಕ್ಷಿಣೆ ಕೊಡಬೇಕಾದ ಹನ್ನೆರಡು ಸಾವಿರದಲ್ಲಿ ಹತ್ತು ಸಾವಿರದ ಸಿದ್ಧತೆ ಮಾಡಿದರು. ಬಾಕಿ ಉಳಿದ ಎರಡು ಸಾವಿರಕ್ಕೆ ಸ್ವಲ್ಪ ದಿನಗಳ ಕಾಲಾವಕಾಶ ಕೇಳಬೇಕು. ಹುಡುಗ ಒಳ್ಳೆಯವನಂತೆ ಕಾಣುತ್ತಾನೆ. ಸ್ವಲ್ಪ ದಿನ ತಡೆದುಕೊಂಡಾನು ಎಂದು ನಿರ್ಧರಿಸಿ ಮದುವೆಯ ದಿನ ಹತ್ತಿರ ಬರುವುದನ್ನೇ ಕಾಯತೊಡಗಿದರು.

ಆ ರಾತ್ರಿ ಜಮಾತ್ ಕಮಿಟಿಯ ಮೀಟಿಂಗ್ ಕರೆಯಲಾಗಿತ್ತು. ಸರ್ವ ಜಮಾತರು ತಪ್ಪದೇ ಬರಬೇಕು. ಯಾರೂ ತಪ್ಪಿಸಿಕೊಳ್ಳಬಾರದು. ಊರಲ್ಲಿ ಹೊಸ ಮಸೀದಿಯೊಂದನ್ನು ಕಟ್ಟುವ ಬಗ್ಗೆ ಚರ್ಚಿಸಲಾಗುವುದು.

ಅಬ್ಬು ಬ್ಯಾರಿಗಳು ರಾತ್ರಿ ಅಲ್ಲಿಗೆ ಬಂದರು. ಅಲ್ಲಿ ಜಮಾತರು ಎಲ್ಲಾ ಒಟ್ಟು ಸೇರಿದ್ದಾರೆ. ಅವರನ್ನೆಲ್ಲಾ ನೋಡುತ್ತಾ ಅವರ ಮಾತುಗಳಿಗೆ ಕಿವಿಕೊಡುತ್ತಾ ಒಂದು ಮೂಲೆಯಲ್ಲಿ ಕುಳಿತುಬಿಟ್ಟರು.

ಜಮಾತ್ ಪ್ರೆಸಿಡೆಂಟ್ ಎದ್ದು ನಿಂತು ಹೇಳತೊಡಗಿದರು.

''ನಾವು ಇಲ್ಲಿ ಒಂದು ಮಹತ್ವದ ನಿರ್ಣಯಕ್ಕೆ ಒಟ್ಟು ಸೇರಿದ್ದೇವೆ. ನಾವು ಇಲ್ಲಿ ಐವತ್ತೆರಡು ಮನೆಯವರು ಇದ್ದೇವೆ. ನಮಗೆ ಒಂದು ಅಂದವಾದ ಮಸೀದಿಯ ಅಗತ್ಯವಿದೆ. ನಾವು ಅಂದವಾದ ಮಸೀದಿಯನ್ನು ಕಟ್ಟಿಸಿ ದೇವರ ಪ್ರೀತಿಗೆ ಒಳಗಾಗ ಬೇಕಾಗಿದೆ. ಅದಕ್ಕಾಗಿ ನೀವು ಊರವರೆಲ್ಲ ನಿಮ್ಮ ಕೈಲಾದಷ್ಟು ಧನ ಸಹಾಯವನ್ನು ಒದಗಿಸಬೇಕು. ಈಗ ಮೊದಲಿಗೆ ನಾನು ಹತ್ತು ಸಾವಿರವನ್ನು ಕೊಡುತ್ತೇನೆ.'' ಎಂದು ನೂರರ ನೋಟುಗಳಿದ್ದ ಹಣದ ಕಟ್ಟೊಂದನ್ನು ತೆಗೆದು ಮೇಜಿನ ಮೇಲಿಟ್ಟರು. ಅಬ್ಬುಬ್ಯಾರಿಗಳಿಗೆ ಹಣದ ಕಟ್ಟನ್ನು ನೋಡಿ ಒಂದು ಕ್ಷಣ ಮಗಳ ಮುಖ ಕಣ್ಮುಂದೆ

ತೇಲಿ ಬಂತು. ಈ ಹಣ ತನಗೆ ಸಿಗುವಂತಾದರೆ ತನ್ನ ಮಗಳ ಮದುವೆಯನ್ನು ಯಾವ ತಲೆಬಿಸಿಯೂ ಇಲ್ಲದೆ ಮಾಡಿ ಮುಗಿಸಬಹುದಲ್ವೇ...

ಹೀಗೆ ಅವರು ಯೋಚನೆಯಲ್ಲಿ ಕಣ್ಣುಮುಚ್ಚಿ ಕುಳಿತಿದ್ದಾಗ ಯಾರೋ ಬಂದು ಅವರ ಭುಜವನ್ನು ಅಲ್ಲಾಡಿಸಿದರು. ಕಣ್ತೆರೆದು ನೋಡುತ್ತಾರೆ ಎದುರಲ್ಲಿ ಪ್ರೆಸಿಡೆಂಟರು. ಮತ್ತಿಬ್ಬರು ಪುಸ್ತಕ ಹಿಡಿದು ನಿಂತಿದ್ದಾರೆ.

''ಎಷ್ಟು ಕೊಡುತ್ತೀರಿ ಅಬ್ಬು ಬ್ಯಾರಿಗಳೇ. ಇಂತಹ ಒಳ್ಳೆಯ ಕೆಲಸಕ್ಕೆ ಹಿಂದೆ-ಮುಂದೆ ನೋಡದೆ ಕೈ ತುಂಬಾ ನೀಡಬೇಕು.''

''ನಾನು ಎಷ್ಟು ಕೊಡಬಹುದು ? ನನ್ನ ಸ್ಥಿತಿಯ ಬಗ್ಗೆ ಯೋಚಿಸಿ ನೀವೇ ಬರೆದುಬಿಡಿ !''

''ಆಯಿತು ನಿಮಗೆ ಎಲ್ಲರಷ್ಟು ಕೊಡಬೇಕೆಂದು ಹೇಳುತ್ತಿಲ್ಲ. ನೀವು ಎರಡು ಸಾವಿರ ಕೊಡಿ.''

ಅವರಿಗೆ ಒಮ್ಮೆಲೆ ಕಣ್ಣು ಕತ್ತಲೆ ಬಂದಂತೆನಿಸಿತು. ಎರಡು ಸಾವಿರ ! ತಾನು ಹೆಚ್ಚೆಂದರೆ ನೂರು-ಇನ್ನೂರೋ ಕೊಡಬಲ್ಲೆ. ಅದಕ್ಕಿಂತ ಹೆಚ್ಚು ಸಾಧ್ಯವಾಗ ಲಾರದು. ಅದನ್ನು ಹೇಳಬೇಕೆಂದು ಬಾಯ್ತೆರೆದಾಗ ಅವರು ಇವರನ್ನು ದಾಟಿ ಮುಂದೆ ಸಾಗಿ ಹೋಗಿಯಾಗಿತ್ತು.

ಮನೆಗೆ ಬಂದಾಗ ತುಂಬಾ ಹೊತ್ತು ಮೀರಿತ್ತು. ಅವರಿಗೆ ಅನಿಸುತ್ತಿತ್ತು. ತಮ್ಮಂತಹ ಬಡವರ ಹೊಟ್ಟೆಯ ಮೇಲೆ ಹೊಡೆದು ಮಸೀದಿ ಕಟ್ಟುವ ಅವಶ್ಯಕತೆ ಏನಿದೆ ? ಈಗಿರುವ ಈ ಮಸೀದಿ ಸಾಲದೇ ? ಇದಕ್ಕಿಂತ ದೊಡ್ಡದಾಗಿ ಮಸೀದಿ ಕಟ್ಟುವುದರಿಂದ ದೇವರ ಒಲವು ಹೆಚ್ಚು ಸಿಕ್ಕೀತೆ ? ಆದರೆ ತಾನು ಬಡವ ತನಗೆ ವಿರೋಧಿಸುವ ಶಕ್ತಿ ಇಲ್ಲ. ವಿರೋಧಿಸಿದರೂ ಅದನ್ನು ಯಾರೂ ಗಣನೆಗೆ ತೆಗೆದುಕೊಳ್ಳುತ್ತಿಲ್ಲ.

ಕೆಲವು ದಿನಗಳ ಬಳಿಕ ಯಾಸೀನ್‌ಳ ಮದುವೆ ಆ ಹುಡುಗನೊಂದಿಗೆ ನಡೆಯಿತು. ವರದಕ್ಷಿಣೆ ಹಣವನ್ನು ಹುಡುಗನ ಅಪ್ಪನ ಕೈಯಲ್ಲಿ ನೀಡುತ್ತಾ ಅಬ್ಬು ಬ್ಯಾರಿಗಳು ಹೇಳಿದರು.

''ಇದರಲ್ಲಿ ಹತ್ತು ಸಾವಿರ ಇದೆ. ಇನ್ನು ಬಾಕಿ ಎರಡು ಸಾವಿರ ರೂಪಾಯಿಗಳಿಗೆ ಒಂದು ತಿಂಗಳ ಕಾಲಾವಕಾಶ ಬೇಕು.''

''ಅದು ಆಗೊಲ್ಲ ಅಬ್ಬುಬ್ಯಾರಿಗಳೇ. ನಾವು ಈ ಮೊದಲೇ ವರದಕ್ಷಿಣೆ ಮತ್ತು ಚಿನ್ನದಲ್ಲಿ ಕಡಿತ ಮಾಡಿ ಆಗಿದೆ. ಅದನ್ನು ನೀವು ಹೊಂದಿಸಲಾಗಲಿಲ್ಲವೆಂದರೆ ನಿಮ್ಮ ಸಂಬಂಧ ಮಾಡಿದ ಬಗ್ಗೆ ನನಗೆ ಹೇಸಿಗೆ ಎನಿಸುತ್ತೆ.''

''ಹಾಗೇ ಹೇಳಬೇಡಿ ನೀವು ! ನಿಮಗೆ ಕೊಡಬೇಕಾದ ಹಣವನ್ನು ನಾ ಬಾಕಿ ಉಳಿಸಿಕೊಳ್ಳಲ್ಲ !''

ಅಷ್ಟರಲ್ಲಿ ಮದುವೆಯಾಗುವ ಆ ಯುವಕ ಹೇಳಿದ,

''ನಾವು ಸ್ವಲ್ಪ ಕರುಣೆ ತೋರಿಸೋಣ ಅಪ್ಪ. ಈ ದಿನದಿಂದ ಸರಿಯಾಗಿ ಒಂದು ತಿಂಗಳ ಅವಕಾಶ ಕೊಡೋಣ. ಸರಿಯಾಗಿ ಮೂವತ್ತು ದಿವಸಕ್ಕೆ ಹಣ ಚುಕ್ತಾ ಮಾಡಬೇಕು. ಮೂವತ್ತನೆಯ ದಿನಕ್ಕೆ ತಪ್ಪಿದರೆ ಮೂವತ್ತೊಂದನೇ ದಿನಕ್ಕೆ ಇವರ ಮಗಳು ಇವರ ಮನೆಯಲ್ಲಿ. ಆ ದಿನ ನನ್ನ ಮತ್ತು ಇವರ ಮಗಳ ಸಂಬಂಧ ಕಡಿದುಹೋಗುತ್ತೆ !''

ಅಬ್ಬುಬ್ಯಾರಿಗೆ ಒಪ್ಪದೆ ಬೇರೆ ವಿಧಿಯಿರಲಿಲ್ಲ.

ಮದುವೆ ನಡೆದುಹೋಯ್ತು.

ಯಾಸೀನ್ ಅವನ ಹೆಂಡತಿಯಾದಳು. ಆದರೆ ಅವನು ಅವಳನ್ನು ತನ್ನ ಮನೆಗೆ ಕರೆದೊಯ್ಯಲಿಲ್ಲ. ದಿನಾ ಸಂಜೆ ಮಾವನ ಮನೆಗೆ ಬಂದು ಆ ರಾತ್ರಿ ಅವಳೊಂದಿಗೆ ಇದ್ದು ಮರುದಿನ ಹೊರಟುಹೋಗುತ್ತಿದ್ದ.

ಒಂದು ದಿನ ಅಬ್ಬುಬ್ಯಾರಿಗಳು ಅವನೊಡನೆ ಕೇಳಿದರು.

''ಕೆಲವು ದಿನ ಯಾಸೀನಳನ್ನು ನಿನ್ನ ಜತೆ ಕರೆದೊಯ್ಯಬಹುದಲ್ಲ !''

''ಅದು ಹೇಗಾಗುತ್ತೆ ! ವರದಕ್ಷಿಣೆ ಬಾಕಿ ಎರಡು ಸಾವಿರ ಇದೆಯೆಲ್ಲ. ಅದು ಸಿಕ್ಕಿದ ಮರುದಿನವೇ ಅವಳನ್ನು ಕರೆದೊಯ್ಯುತ್ತೇನೆ. ಅಲ್ಲೀತನಕ ಇಲ್ಲೇ ಇರುತ್ತಾಳೆ. ನಿಮಗೆ ಗಡುವಿನ ದಿನ ಗೊತ್ತಿದೆಯಲ್ಲ. ಬಹುಶಃ ಇನ್ನು ಐದು ದಿನ ಅಷ್ಟೇ ಬಾಕಿ !''

ಅವರು ನಂತರ ಸುತ್ತಾಡತೊಡಗಿದರು. ಕಂಡ ಕಂಡವರ ಕೈಯಲ್ಲಿ ಕಾಡಿ ಬೇಡಿ ಮೂವತ್ತನೆಯ ದಿನಕ್ಕೆ ಎರಡು ಸಾವಿರ ಮಾಡಿಕೊಂಡು ಮನೆಯ ಕಡೆ ಬರ ತೊಡಗಿದರು. ಅವರ ಮನಸ್ಸಿಗೆ ಸ್ವಲ್ಪ ನೆಮ್ಮದಿಯೆನಿಸಿತು. ಇನ್ನಾದರೂ ತನ್ನ ಮಗಳು ಯಾಸೀನಳ ಬದುಕು ನೆಮ್ಮದಿಯಾಗಬಹುದು. ನಂತರ ಪಡೆದ ಸಾಲಗಳನ್ನೆಲ್ಲಾ ಹೇಗಾದರೂ ಕಷ್ಟಪಟ್ಟು ತೀರಿಸಿದರಾಯ್ತು. ತಾನು ನಂಬಿದ ದೇವರು ಒಂದು ದಾರಿ ಕಾಣಿಸದೆ ಇರಲಾರ.

ದಾರಿಯಲ್ಲಿ ಬರುವಾಗ ಸಾಯಂಕಾಲದ ನಮಾಜಿನ ಅಝಾನ್ ಮಸೀದಿಯಿಂದ ಕೇಳಿಬಂತು. ಇನ್ನೇನು ನಮಾಜು ಮುಗಿಸಿಯೇ ಹೋಗೋದು ಎಂದು ಮಸೀದಿಗೆ ಬಂದರು. ಮಸೀದಿಯ ಬಳಿ ಹೊಸ ಮಸೀದಿ ಕಟ್ಟಡಕ್ಕೆ ಪಾಯ ತೋಡುತ್ತಿದ್ದರು. ಅವರು ನಮಾಜು ಮುಗಿಸಿ ಹೊರಬಂದಾಗ ಪ್ರೆಸಿಡೆಂಟರು ಉಳಿದಿನ್ನಿಬ್ಬರು ಅವರನ್ನು ನಿಲ್ಲಿಸಿ ಕೇಳಿದರು.

''ಏನು ಅಬ್ಬು ಬ್ಯಾರಿಗಳೇ ಮಸೀದಿಗೆ ಕೊಡಬೇಕಾದ ಎರಡು ಸಾವಿರ ಇನ್ನೂ ಕೊಟ್ಟಿಲ್ಲವಲ್ಲ !''

''ನನ್ನ ತಾಪತ್ರಯ ನಿಮಗೆ ಗೊತ್ತಿದೆಯಲ್ಲ. ವರದಕ್ಷಿಣೆ ಬಾಕಿಗಾಗಿ ಮದುವೆಯಾಗಿರೋ ಮಗಳು ಗಂಡನ ಮನೆ ಸೇರದೆ ಇನ್ನೂ ಮನೆಯಲ್ಲಿಯೇ ಇದ್ದಾಳೆ. ಇಂದು ಆತನ ಗಡುವಿನ ಕೊನೆಯ ದಿನ. ಯಾರನ್ನೋ ಕಾಡಿ ಬೇಡಿ ಅವನಿಗೆ ಕೊಡಬೇಕಾದ ಎರಡು ಸಾವಿರವನ್ನು ಇಂದು ಹೊಂದಿಸಿಕೊಂಡು ಹೋಗುತ್ತಿದ್ದೇನೆ. ಇಂತಹ ಸಂಕಷ್ಟ ಸಮಯದಲ್ಲಿ ನೀವು ನನ್ನನ್ನು ಹೀಗೆ ಕಾಡಿದರೆ ಹೇಗೆ ?''

''ನೋಡುವ ಎಲ್ಲಿದೆ ಆ ಎರಡು ಸಾವಿರ ?''

ಅವರು ಅದನ್ನು ತೋರಿಸಿದಾಗ ಫಕ್ಕನೆ ಕಿತ್ತುಕೊಂಡ ಪ್ರೆಸಿಡೆಂಟರು ''ನೀವು ಕೊಡಬೇಕಾದ ಹಣ ಬಂತು ! ಇನ್ನು ನೀವು ಹೋಗಬಹುದು !''

''ಪ್ರೆಸಿಡೆಂಟರೆ, ಏನು ಹೇಳ್ತಾ ಇದ್ದೀರಿ ನೀವು ? ಅದು ನನ್ನ ಮಗಳ ಬಾಳನ್ನು ಸರಿ ಮಾಡಲಿಕ್ಕೆ ಸಾಲ ಕೇಳಿ ತಂದ ಹಣ. ಅದನ್ನು ದಯವಿಟ್ಟು ಕೊಡಿ. ಮಸೀದಿಗೆ ಕೊಡಬೇಕಾದ ಹಣ ನಾನು ಹೇಗಾದರೂ ಮಾಡಿ ಕೊಡುತ್ತೇನೆ.''

''ಅದೆಲ್ಲ ಆಗೊಲ್ಲ ಮಹರಾಯ. ಇದು ದೇವರ ಕೆಲಸ. ನೀನು ಒಂದು ಕೆಲಸ ಮಾಡು. ನಿನ್ನ ಅಳಿಯ ವರದಕ್ಷಿಣೆ ಕೇಳುತ್ತಾನೆ ಎಂದು ಪೊಲೀಸ್ ಕಂಪ್ಲೆಂಟ್ ಕೊಟ್ಟುಬಿಡು !''

''ನನ್ನ ಮಗಳ ಸಂಸಾರದ ಸಂಗತಿ ನನಗೆ ಬಿಟ್ಟುಬಿಡಿ. ಈಗ ನನ್ನ ಹಣ ಮೊದಲು ಕೊಟ್ಟುಬಿಡಿ ನನಗೆ ಹೊತ್ತಾಗತ್ತೆ !''

''ಅದು ಆಗೋದಿಲ್ಲ. ಮಸೀದಿ ಕಟ್ಟಡಕ್ಕೆ ಎಲ್ಲರೂ ಹಣ ಕೊಟ್ಟಿದ್ದಾರೆ. ಬಾಕಿ ಇರೋದು ನೀನೊಬ್ಬನೇ. ನಿನ್ನ ಒಬ್ಬನಿಗೆ ವಿನಾಯತಿ ನೀಡಿದರೆ ಜಮಾತರ ಕೋಪಕ್ಕೆ ಕಾರಣನಾಗಬೇಕಾಗುತ್ತದೆ.''

ಅಬ್ಬು ಬ್ಯಾರಿಗೆ ದಿಕ್ಕೇ ತೋಚಲಿಲ್ಲ. ನಿಂತ ನೆಲವೇ ಕುಸಿಯುತ್ತಿರುವ ಅನುಭವ ವಾಯಿತು. ಜಮಾತ್ ಪ್ರೆಸಿಡೆಂಟರು ಉಳಿದಿಬ್ಬರೊಡನೆ ಇವರ ಹಣ ಇಸಿದುಕೊಂಡು ಅತ್ತ ತೆರಳಿದಾಗ, ಇವರಿಗೆ ಅದೆಲ್ಲಿತ್ತೋ ರೋಷ ನೇರವಾಗಿ ಪ್ರೆಸಿಡೆಂಟರ ಎದುರು ಬಂದು ತನ್ನ ಸೊಂಟದಲ್ಲಿ ಸಿಗಿಸುತ್ತಿದ್ದ ಚೂರಿಯನ್ನು ಎಳೆದು ಪ್ರೆಸಿಡೆಂಟರೇ ನಾನು ಕೊಡೊಲ್ಲ. ನಿಮ್ಮ ಎದೆಗೆ ಚೂರಿ ಹಾಕಿ ಆದರೂ ನಾನು ಕಿತ್ತು ಕೊಳ್ಳುತ್ತೇನೆ. ಎಂದು ಬೊಬ್ಬಿಟ್ಟಾಗ ಪ್ರೆಸಿಡೆಂಟರಿಗೆ ಭಯ ಉಕ್ಕಿ ಆ ಹಣವನ್ನು ಅವರಿಗೆ ಹಿಂತಿರುಗಿಸಿದರು.

* * *

ಕತ್ತಲು ಹರಡಿತ್ತು. ಬೆಳಕು ಬಂದಿರಲಿಲ್ಲ. ಅವರು ಯೋಚಿಸುತ್ತಲೇ ಇದ್ದರು.

ಒಳಗೆ ಹೆಂಡತಿ ಮಕ್ಕಳು ಅಳುತ್ತಲೇ ಇದ್ದರು. ಇನ್ನೊಂದು ಕ್ಷಣದಲ್ಲಿ ವರದಕ್ಷಿಣೆ ಹಣಕ್ಕಾಗಿ ಆತ ಬರುತ್ತಾನೆ. ಅದರ ಹಿಂದೆಯೇ ಪ್ರೆಸಿಡೆಂಟರು ಜಮಾತರೂ ಬರಬಹುದು. ತಾನು ಸಂಜೆ ಪ್ರೆಸಿಡೆಂಟರಿಗೆ ಚೂರಿ ತೋರಿಸಿದ್ದು ಇದೀಗ ಇಡೀ ಜಮಾತಿಗೆ ಗೊತ್ತಾಗಿ ಅವರು ಪೊಲೀಸರೊಂದಿಗೆ ಬರಬಹುದು. ಅದಕ್ಕಿಂತ ಮುಂಚೆ ಅಳಿಯನ ಕೈಯೋ ಕಾಲೋ ಹಿಡಿದು ನಡೆದ ಸಂಗತಿಯನ್ನು ಹೇಳಿ ಅವನಿಗೆ ಕೊಡಬೇಕಾದ ಹಣಕ್ಕೆ ಇನ್ನಷ್ಟು ಗಡುವು ಕೇಳಿ ನಂತರ ಪ್ರೆಸಿಡೆಂಟರ ಬಳಿ ಕ್ಷಮೆ ಕೇಳಿ, ಆ ಎರಡು ಸಾವಿರ ರೂಪಾಯಿಯನ್ನು ಮಸೀದಿ ಕಟ್ಟಡಕ್ಕೆ ವಂತಿಗೆಯಾಗಿ ಕೊಡಬೇಕು. ಒಂದು ವೇಳೆ ಇನ್ನಷ್ಟು ಕಾಲ ಗಡುವಿಗೆ ಈತ ಒಪ್ಪದೇ ವರದಕ್ಷಿಣೆ ಹಣ ಕಿತ್ತುಕೊಂಡು, ಅನಂತರ ಪ್ರೆಸಿಡೆಂಟರೊಂದಿಗೆ ಪೊಲೀಸರು ಬಂದು ತನ್ನನ್ನು ಸೆರೆಹಿಡಿದುಕೊಂಡು ಹೋದರೆ ತನ್ನ ಹೆಂಡತಿ ಮಕ್ಕಳ ಗತಿ ಏನು ?

ಅವರು ಭಯದಿಂದ ಹಾಗೇ ಕುಳಿತೇ ಇದ್ದರು. ಹೊರಗೆ ಹೆಜ್ಜೆಯ ಸಪ್ಪಳ ಕೇಳಿಸಿತು. ಅದರೊಂದಿಗೆ ಟಕಟಕ ಬೂಟಿನ ಸದ್ದು. ಆ ಬೂಟಿನ ಸದ್ದು ಪೊಲೀಸರದೇ ಇರಬೇಕು. ಇನ್ನೊಂದು ಕ್ಷಣದಲ್ಲಿ ತನಗೆ ಕೋಳ ಹಾಕಿ ಕರೆದೊಯ್ಯುತ್ತಾರೆ. ಅಬ್ಬು ಬ್ಯಾರಿಗಳು ಯೋಚಿಸಿದರು.

ಮನೆಯ ಬಾಗಿಲು ಸರಿಸಿ ಯಾರೋ ಒಳಬರುತ್ತಿದ್ದಂತೆ ಫಕ್ಕನೆ ಬೆಳಕು ಬಂತು. ಮನೆಯೊಳಗೆ ತುಂಬಿದ ವಿದ್ಯುತ್ತಿನ ಬೆಳಕಿನಲ್ಲಿ ಅವರು ನೋಡುತ್ತಾರೆ, ಎದುರಿನಲ್ಲಿ ಯಾಸೀನಳ ಗಂಡ ಮತ್ತು ಜಮಾತ್ ಪ್ರೆಸಿಡೆಂಟ್ ನಿಂತಿದ್ದಾರೆ. ಇವರು ಭಯದಿಂದ ಬಿಟ್ಟ ಕಣ್ಣು ಬಿಟ್ಟ ಹಾಗೇ ನೋಡುತ್ತಿದ್ದಂತೆ ಆತ ಹತ್ತಿರ ಬಂದು ಅವರ ಕೈ ಹಿಡಿದು ಹೇಳಿದ.

''ನನ್ನನ್ನು ಕ್ಷಮಿಸಿಬಿಡಿ ಮಾವ. ನಾನು ಹಣದ ದುರಾಶೆಗೊಳಗಾಗಿ ನಿಮ್ಮನ್ನು ನೋಯಿಸಿಬಿಟ್ಟೆ. ನೀವು ನನಗೆ ಇನ್ನು ಯಾವ ವರದಕ್ಷಿಣೆ ಬಾಕಿಯನ್ನು ಕೊಡಬೇಕಾಗಿಲ್ಲ. ನಿಮ್ಮ ಇನ್ನಿಬ್ಬರು ಹೆಣ್ಣು ಮಕ್ಕಳ ಮದುವೆ ಜವಾಬ್ದಾರಿ ನನಗಿರಲಿ. ನಾಳೆ ನಿಮ್ಮ ಮಗಳು ಯಾಸೀನಳನ್ನು ನಾ ಕರೆದೊಯ್ಯುತ್ತೇನೆ. ಅವಳಿಗೆ ಯಾವ ಕಷ್ಟವೂ ಬರದಂತೆ ಹೂವಿನಂತೆ ನೋಡಿಕೊಳ್ಳುತ್ತೇನೆ ಎಂದಾಗ ಇವರು ಬೆರಗಾಗಿ ಅವನನ್ನು ನೋಡುತ್ತಿದ್ದಂತೆ ಪ್ರೆಸಿಡೆಂಟರು ಹತ್ತಿರ ಬಂದು,

''ಅಬ್ಬು ಸಂಜೆಯ ಘಟನೆಯನ್ನು ನೀನು ಮರೆತುಬಿಡಬೇಕು. ಅದನ್ನು ನಾನೂ ಮರೆತುಬಿಡುತ್ತೇನೆ. ಮನೆಗೆ ಹೋದ ಮೇಲೆ ನಾನು ತುಂಬಾ ಹೊತ್ತು ಯೋಚಿಸಿದೆ. ಯೋಚಿಸಿದ ಮೇಲೆ ಗೊತ್ತಾಯ್ತು. ನಿನ್ನ ಸ್ಥಾನದಲ್ಲಿ ನಾನಿದ್ದರೂ ನೀನು ವರ್ತಿಸಿದ್ದನ್ನೇ ನಾನು ಮಾಡುತ್ತಿದ್ದೆ ಎಂದು. ದಯವಿಟ್ಟು ನನ್ನನ್ನು ಕ್ಷಮಿಸು !'' ಎಂದರು.

ಅಬ್ಬು ಬ್ಯಾರಿಗಳಿಗೆ ಇದು ಕನಸೋ ಅಥವಾ ನನಸೋ ಎಂದು ಗೊತ್ತಾಗಲಿಲ್ಲ. ಸ್ವಲ್ಪ ಹೊತ್ತಿನ ನಂತರ ವಾಸ್ತವಕ್ಕೆ ಬಂದ ಇವರು ಆ ಎರಡು ಸಾವಿರ ತಂದು ಪ್ರೆಸಿಡೆಂಟರ ಕೈಗಿತ್ತು. ''ನನ್ನನ್ನು ಕ್ಷಮಿಸಿ ಆ ಹೊತ್ತಿನಲ್ಲಿ ಆವೇಶದಿಂದ ನಿಮಗೆ ಚಾಕು ತೋರಿಸಿದೆ. ದಯವಿಟ್ಟು ಈ ಹಣವನ್ನು ಮಸೀದಿಯ ಕಟ್ಟಡಕ್ಕೆ ಸ್ವೀಕರಿಸಿ,'' ಎಂದಾಗ ಪ್ರೆಸಿಡೆಂಟರು ಅಂದು, ''ಅದನ್ನು ನಿಮ್ಮ ಅಳಿಯ ಅದಾಗಲೇ ಕೊಟ್ಟಿದ್ದಾನೆ.''

ಅವರು ತುಂಬಿ ಬಂದ ಹೃದಯದಿಂದ ಅವನತ್ತ ನೋಡಿದರು. ಅವನು ಅಲ್ಲಿ ಯಾಸೀನಳೊಂದಿಗೆ ನಗುತ್ತಾ ಮಾತಾಡುತ್ತಿದ್ದ. ಅಲ್ಲಿ ಅಳುವೇ ಇರಲಿಲ್ಲ ನಗುವೇ ತುಂಬಿಕೊಂಡಿತ್ತು.

# 6 ತಾಯಿ

ರಾತ್ರಿ,

ನಾನು ಒಬ್ಬನೇ ನನ್ನ ಕೋಣೆಯಲ್ಲಿ ಕುಳಿತು ಯೋಚನಾಗ್ರಸ್ಥನಾಗಿದ್ದೆ. ಕೋಣೆಯಲ್ಲಿ ಬೆಳಕಿರಲಿಲ್ಲ. ನನಗೆ ಆ ಹೊತ್ತಿನಲ್ಲಿ ಕೋಣೆಯಲ್ಲಿ ಬೆಳಕು ತುಂಬುವುದು ಇಷ್ಟವಿರಲಿಲ್ಲ. ನಾನು ಭಯಭೀತನಾಗಿದ್ದೆ. ಪಕ್ಕದ ಕೋಣೆಯಲ್ಲಿ ಮಲಗಿದ್ದ ನನ್ನ ತಂದೆ ನರಳುತ್ತಿರುವುದು ನನಗೆ ಕೇಳಿಸುತ್ತಿತ್ತು. ಸಾವಿನ ನರಳಾಟ ! ಅವರು ತನ್ನ ಬದುಕಿನ ಅಂತಿಮ ಹಾದಿಯಲ್ಲಿದ್ದರು. ಅವರಿಗೀಗ ಎಪ್ಪತ್ತು-ಎಪ್ಪತ್ತೈದು ಇರಬಹುದು. ಅವರ ನರಳುವಿಕೆ ಕೋಣೆಯ ಗೋಡೆಯನ್ನು ಭೇದಿಸಿಕೊಂಡು ನನ್ನ ಕಿವಿಗೆ ತಲುಪುತ್ತಿತ್ತು. ಆ ನರಳುವಿಕೆಯಲ್ಲಿ ಎಂತಹ ವೇದನೆ ಇರಬಹುದು ! ಸಾವು ಸನಿಹವಾದಾಗಿನ ವೇದನೆಯನ್ನು ಆ ನೋವು ಅನುಭವಿಸಿದಾತನೇ ಬಲ್ಲ.

ನಾನು ಕುಳಿತಲ್ಲಿಂದ ಎದ್ದು ತಂದೆಯ ಕೋಣೆಗೆ ಬಂದೆ. ನನ್ನ ಮಡದಿ ಅವರ ಶುಶ್ರೂಷೆಯಲ್ಲಿದ್ದಳು. ಕಳೆದ ಒಂದು ವರುಷದಿಂದೀಚೆಗೆ ಹಾಸಿಗೆ ಹಿಡಿದಿದ್ದ ತಂದೆಯನ್ನು ತನ್ನ ತಂದೆಯಂತೆ ನೋಡಿಕೊಳ್ಳುತ್ತಿದ್ದ ನನ್ನ ಮಡದಿಯ ಬಗ್ಗೆ ನನಗೆ ವಿಶೇಷ ಅಭಿಮಾನವಿತ್ತು. ನಾನು ಕೋಣೆಗೆ ಬಂದಾಗ ಆಕೆ ತಂದೆಯ ಕಾಲಿನಲ್ಲಾದ ವ್ರಣವನ್ನು ತೊಳೆದು ಅದಕ್ಕೆ ಮುಲಾಮು ಹಚ್ಚುತ್ತಿದ್ದಳು. ನಾನು ಬಾಗಿಲಲ್ಲೇ ನಿಂತು ಅವರಿಬ್ಬರನ್ನು ನೋಡುತ್ತಿದ್ದೆ. ತಂದೆಯ ಕಂಗಳಲ್ಲಿ ಕಣ್ಣೀರಿತ್ತು.

ಅವರು ಅವಳ ತಲೆ ಸವರಿ ಅನ್ನುತ್ತಿದ್ದರು, ''ಮೋಳೆ, ಎಷ್ಟು ದಿನಾಂತ ನನ್ನ ಸೇವೆ ಮಾಡುತ್ತಿದ್ದೀಯಾ ? ನಿನಗೆ ದಿನಾ ಹಿಂಸೆ ಕೊಡುವ ಈ ದೇಹದ ಉಸಿರು ಒಂದೇ ಬಾರಿಗೆ ನಿಂತು ಹೋಗಬಾರದೇ ?''

''ಹಾಗೆ ಹೇಳಬಾರದು ನೀವು. ನೀವು ಇನ್ನಷ್ಟು ಕಾಲ ಬದುಕಿರಬೇಕೆಂಬುದು ನನ್ನ ಹಾರೈಕೆ !''

''ಇನ್ನಷ್ಟು ಕಾಲ !'' ಅವರು ದೀರ್ಘ ನಿಟ್ಟುಸಿರುಬಿಟ್ಟು ಮತ್ತೆ ಹೇಳಿದರು. ''ಯಾಕೆ ಬದುಕಿರಬೇಕು ನಾನು. ಈ ಮುದಿ ನತದೃಷ್ಟ ಜೀವ ಇನ್ನಷ್ಟು ಕಾಲ ಬದುಕಿರುವುದು ಪ್ರಯೋಜನಕ್ಕಿಂತ ನಷ್ಟವೇ ಹೆಚ್ಚು...!''

ಅವಳು ಗಾಯಕ್ಕೆ ಮುಲಾಮು ಹಚ್ಚಿ ಎದ್ದು ಇತ್ತ ಬಂದು, ನನ್ನನ್ನು ನೋಡಿ ಗಕ್ಕನೆ ನಿಂತಳು.

ನಾನು ಅವಳನ್ನು ಧನ್ಯತಾ ಭಾವದಿಂದ ನೋಡಿದೆ.

ಹತ್ತಿರದ ಮಸೀದಿಯಿಂದ ರಾತ್ರಿಯ ಕೊನೆಯ ನಮಾಜಿನ ಅಝಾನ್ ಕೇಳಿಸಿತು. ಅವಳು ವಝೂ ಮಾಡಹೋದಳು. ನಾನು ತಂದೆಯ ಬಳಿ ಬಂದೆ.

ಅಪ್ಪ ಕಣ್ಣು ಮುಚ್ಚಿಕೊಂಡಿದ್ದರು. ಅವರು ಮಸೀದಿಯಿಂದ ಕೇಳುತ್ತಿದ್ದ ಅಝಾನ್‌ನ ಧ್ವನಿಗೆ ತನ್ಮಯರಾಗಿ ಮೈಮರೆತಿದ್ದರು. ತಾನು ಸಾವಿಗೆ ಹತ್ತಿರವಾಗುತ್ತಿದ್ದೇನೆ ಎಂಬ ಭಾವ ಅವರ ಮುಖದಲ್ಲಿತ್ತು. ತಾನು ಬದುಕಬೇಕೆಂಬ ಚೈತನ್ಯ ಅವರಲ್ಲಿ ಉಡುಗಿಹೋಗಿತ್ತು. ನಾನು ಅವರ ಪಕ್ಕದಲ್ಲಿ ಕೆಳಗೆ ಕುಳಿತುಕೊಂಡೆ.

ಅಝಾನ್ ನಿಂತಿತು.

ಅವರು ಕಣ್ಣು ತೆರೆದರು. ನಂತರ ನನ್ನನ್ನು ಗಮನಿಸಿ ಕೇಳಿದರು,

''ನೀನು ನನ್ನ ಒಂದು ಮಾತು ನಡೆಸಿಕೊಡುತ್ತೀಯಾ ಮೋನೇ ?''

''ಹೇಳಿ !'' ನಾನೆಂದೆ.

''ಆದರೆ ನೀ ನನ್ನ ಬಗ್ಗೆ ಅಸಹ್ಯಪಡಬಾರದು ಅಥವಾ ಭಯಪಡಬಾರದು !''
ನಾನು ಗೊಂದಲಕ್ಕೊಳಗಾದೆ, ಅವರು ನನ್ನಲ್ಲಿ ಕೇಳಬಹುದಾದ ಅಂತಹ ಮಹತ್ತರವಾದ ಸಂಗತಿ ಯಾವುದಾಗಿರಬಹುದು ? ಆ ಮಾತಿನಿಂದ ನಾನು ಅದರ ಬಗ್ಗೆ ಅಸಹ್ಯ ಪಡುವಂತಹ ತಪ್ಪು ಅವರು ಏನು ಮಾಡಿರಬಹುದು ?

''ಇಲ್ಲ... ನನಗೆ ನಿಮ್ಮ ಬಗ್ಗೆ ಅಭಿಮಾನ ಇದೆ !''

ಅವರು ನಿಟ್ಟುಸಿರುಬಿಟ್ಟರು. ನಂತರ ನನ್ನ ಕೈಯನ್ನು ತೆಗೆದುಕೊಂಡು ತನ್ನ ಎದೆಯ ಮೇಲೆ ಇರಿಸಿಕೊಂಡು ಹೇಳಿದರು.

''ನಾನು ಸಾಯುವ ಮೊದಲು ನಿನ್ನ ತಾಯಿಯನ್ನು ನೋಡುವ ಇಚ್ಛೆ ಉಂಟಾಗಿದೆ... ಅವಳನ್ನೊಮ್ಮೆ ಕರೆತಂದು ನನ್ನ ಕಣ್ಣಿಂದ ನೋಡುವಂತಾದರೆ ನಾನು ಮಾಡಿದ ಎಷ್ಟೋ ತಪ್ಪುಗಳಿಗೆ ಅವಳಿಂದ ಕ್ಷಮೆ ಕೇಳಬಹುದು !''

ನನಗೆ ಹತ್ತಿರದಲ್ಲೇ ಭೂಮಿ ಬಿರಿದಂತಾಯ್ತು.

ತಂದೆಗೆ ಈ ಕಾಯಿಲೆಯ ಜೊತೆಗೆ ಬುದ್ಧಿ ಭ್ರಮಣೆಯೂ ಆಗಿರಲಾರದು ತಾನೇ ? ನಾಲ್ಕು ವರ್ಷಗಳ ಹಿಂದೆ ಮರಣ ಹೊಂದಿ ಮಸೀದಿಯ ಹಿಂದೆ ದಫನವಾಗಿ ಹೋದ ನನ್ನ ಅಮ್ಮನನ್ನು ಈಗ ಕರೆತರಬೇಕೆನ್ನುತ್ತಾರೆ. ಅದು ಹೇಗೆ ಸಾಧ್ಯ ?

ನಾನು ಕೇಳಿದೆ.

''ಏನು ಹೇಳುತಿದ್ದೀರಿ ನೀವು !? ಮಸೀದಿಯ ಹಿಂದೆ ದಫನವಾದ ಅಮ್ಮ ಇನ್ನು ಮರಳಿ ಬರುವುದು ಸಾಧ್ಯವೇ ?''

ನಾನು ನಿನ್ನ ಹೆತ್ತ ಅಮ್ಮನ ಬಗ್ಗೆ ಹೇಳುತ್ತಿದ್ದೇನೆ !''

ನಾನು ಮತ್ತೊಮ್ಮೆ ಆಘಾತಕ್ಕೊಳಗಾದೆ. ನನ್ನ ಎದೆ ಢವಢವ ನಡುಗತೊಡಗಿತು. ನನ್ನ ಈ ಮೂವತ್ತೈದು ವರ್ಷದ ಬಾಳಿನಲ್ಲಿ ಅಡಗಿಕೊಂಡಿದ್ದ ಗುಟ್ಟೊಂದನ್ನು ನನ್ನ

ತಂದೆ ಈಗ ಬಿಚ್ಚತೊಡಗಿದ್ದರು. ಮೂವತ್ತಮೂರು ವರ್ಷಗಳಷ್ಟು ಕಾಲ ನಾನು ಯಾವ ತಾಯಿಯ ಪೋಷಣೆಯಲ್ಲಿ ಬೆಳೆದಿದ್ದೆನೋ ಆಕೆ ನನ್ನ ಹೆತ್ತ ತಾಯಿಯಲ್ಲ! ನನಗೆ ಸದಾಕಾಲ ಪ್ರೀತಿ-ವಾತ್ಸಲ್ಯವನ್ನು ಬೀರಿ, ನಾನು ಬಿದ್ದು ಪೆಟ್ಟಾದಾಗಲೆಲ್ಲಾ ಕಣ್ಣೀರು ತುಂಬಿ ನನ್ನ ನೋವಿಗೆ ಸ್ಪಂದಿಸುತ್ತಿದ್ದ ಆ ತಾಯಿ ನನ್ನ ಹೆತ್ತ ತಾಯಿಯಲ್ಲ! ನನಗೆ ಪ್ರಾಯ ಬಂದಾಗ ಒಳ್ಳೆಯ ಮನೆತನದ ಹೆಣ್ಣನ್ನು ಹುಡುಕಿ ಮದುವೆ ಮಾಡಿದ ಆ ತಾಯಿ ನನ್ನ ಹೆತ್ತ ತಾಯಿಯಲ್ಲ! ಸಾವು ಸನಿಹವಾದಾಗ ನನ್ನ ಮಡಿಲಲ್ಲಿ ತಲೆ ಇಟ್ಟು ನನ್ನನ್ನೇ ನೋಡುತ್ತಾ ಕಣ್ಣುಮುಚ್ಚಿದ ಆ ತಾಯಿ ನನ್ನ ತಾಯಿಯಲ್ಲ! ನನ್ನ ಹೆತ್ತ ತಾಯಿ ಎಲ್ಲೋ ಇದ್ದಾರೆ! ಜೀವಂತವಾಗಿದ್ದಾರೆ! ಆ ಸತ್ಯ ಹೇಳಲು ತಂದೆಗೆ ಇದೀಗ ಸಮಯವಾಯಿತೇ?

"ಯಾಕೆ ಅಪ್ಪಾ ಇಷ್ಟು ದಿನ ಈ ಸತ್ಯ ಮುಚ್ಚಿಟ್ಟುಬಿಟ್ಟಿದ್ದೀರಿ!" ನಾನು ಕಣ್ಣೀರು ತುಂಬಿ ಕೇಳಿದೆ.

"ಅದು ನಿನಗಾಗಿ ಕಣೋ. ನೀನು ನನ್ನನ್ನು ಬಿಟ್ಟು ಅವಳ ಬಳಿಗೆ ಹೊರಟು ಹೋಗುತ್ತೀಯೋ ಎಂಬ ಆತಂಕದಿಂದ. ಅಲ್ಲದೆ ನಾನು ನಿನ್ನ ಹೆತ್ತ ತಾಯಿಯನ್ನು ಬಿಟ್ಟು ಇವಳನ್ನು ಮದುವೆಯಾದ ಮೇಲೆ ಇವಳ ಬಸಿರು ಫಲಿಸದೆ, ತಾನಿನ್ನು ಬಂಜೆಯೆಂದು ಗೊತ್ತಾದಾಗ ನೀನೆಲ್ಲಿ ತನ್ನನ್ನು ಮಲತಾಯಿ ಅಂದುಕೋತಿಯೋ ಎಂಬ ಭಯದಿಂದ ನಿನ್ನಲ್ಲಿ ಹೆತ್ತ ತಾಯಿಯ ಪ್ರೀತಿ ತೋರಿಸಿದ್ದಳು."

"ನೀವು ಹೇಳುವುದು ನನಗೊಂದೂ ಅರ್ಥವಾಗುತ್ತಿಲ್ಲ..."

"ಎಲ್ಲವನ್ನೂ ಬಿಡಿಸಿ ಹೇಳುತ್ತೇನೆ... ನೀನು ನಮಾಜು ಮುಗಿಸಿ ಬಾ!"

ನಾನು ಅವರ ಬಳಿಯಿಂದ ಹೊರಬಂದೆ. ವಝೂ ಮಾಡಿ ನಮಾಜು ಮುಗಿಸಿ ಅವರ ಕೋಣೆಗೆ ಮರಳಿ ಬಂದೆ. ಅವರು ಮಲಗಿದ್ದಲ್ಲಿಯೇ ಖುರಾನ್ ಪುಸ್ತಕವನ್ನು ಹಿಡಿದುಕೊಂಡು ಅದರಲ್ಲಿ ತಲ್ಲೀನರಾಗಿದ್ದರು. ಮತ್ತೆ ಖುರಾನ್ ಗ್ರಂಥವನ್ನು ಮುಚ್ಚಿ ಹತ್ತಿರ ಕುಳ್ಳಿರಿಸಿಕೊಂಡು ಹೇಳತೊಡಗಿದರು... ನನ್ನ ಪತ್ನಿಯೂ ಸ್ವಲ್ಪ ದೂರದಲ್ಲಿ ಕುಳಿತು ಅವರ ಮಾತುಗಳನ್ನು ಕೇಳತೊಡಗಿದಳು.

ಅದೊಂದು ಕಥನ. ಗಂಟೆ ಉರುಳುತ್ತಲೇ ಇತ್ತು. ರಾತ್ರಿ ಮುಂದುವರಿಯುತ್ತಲೇ ಇತ್ತು. ಅವರು ಹೇಳುತ್ತಲೇ ಇದ್ದರು. ನಾವಿಬ್ಬರೂ ಕೇಳುತ್ತಲೇ ಇದ್ದೆವು.

ಅವರು ನನ್ನ ಹುಟ್ಟಿಗಿಂತ ಮೊದಲು ನಡೆದ ಘಟನೆಗಳನ್ನೆಲ್ಲಾ ಹೇಳಿ ಮುಗಿಸಿದಾಗ ಮಧ್ಯರಾತ್ರಿ ಮುಗಿದಿತ್ತು. ಅವರು ಹೇಳುವುದನ್ನೆಲ್ಲಾ ನಿಲ್ಲಿಸಿದಾಗ ಅವರ ಕಣ್ಣಿಂದ ದಳದಳನೆ ಕಂಬನಿ ಸುರಿಯುತ್ತಿತ್ತು. ಅದು ಪಶ್ಚಾತ್ತಾಪದ ಕಣ್ಣೀರು. ತನ್ನ ಕೈ ಹಿಡಿದಾಕೆಯನ್ನು ಬಿಟ್ಟು ಮಗುವಾಗಿದ್ದ ನನ್ನೊಂದಿಗೆ ರಾತ್ರೋ ರಾತ್ರಿ ಹೊರಟುಬಂದು ಇಲ್ಲಿ ನೆಲೆನಿಂತು ಮತ್ತೊಂದು ಮದುವೆಯಾದ ಕತೆ. ಆಕೆ ಯಾವ

ತಪ್ಪು ಮಾಡಿರಲಿಲ್ಲ. ಮೂರು ವರುಷಗಳ ಸಂಸಾರದ ನಂತರ ಆಕೆಯೊಂದಿಗೆ ಸಹಬಾಳ್ವೆ ನಡೆಸುವುದು ಸಾಧ್ಯ ಇಲ್ಲ ಅನಿಸಿತಂತೆ. ಯಾಕೆ ? ಅದು ಅವರಿಗೆ ಗೊತ್ತಿಲ್ಲ! ಆಕೆ ಅಂತಹ ಯಾವ ತಪ್ಪು ಮಾಡಿರಲಿಲ್ಲ! ಆದರೆ ಆಕೆಯೊಂದಿಗೆ ಬದುಕುವುದು ಸಾಧ್ಯ ಇಲ್ಲ ಅನಿಸಿತು. ಆಕೆ ಇವರನ್ನು ಪ್ರೀತಿಸುತ್ತಿದ್ದರು. ದೇವರಂತೆ ಆರಾಧಿಸುತ್ತಿದ್ದರು. ಆದರೆ ಆ ರಾತ್ರಿ ಮಗುವನ್ನೆತ್ತಿಕೊಂಡು ಹೊರಬಿದ್ದಿದ್ದರು. ಮುಗ್ಧವಾಗಿ ಕಣ್ಣು ಮುಚ್ಚಿ ನಿದ್ರಾಲೋಕದಲ್ಲಿದ್ದ ಹೆಂಡತಿಗೆ ಮೋಸ ಮಾಡಿ ಅವರು ಇನ್ನೊಂದು ಮದುವೆಯಾಗುವ ಭ್ರಮೆಯಲ್ಲಿದ್ದರು.

ನಾ ಕೇಳಿದೆ.

''ಬಾಪಾ.. ನೀವು ಹೊರಟು ಬಂದ ನಂತರ ಅಮ್ಮ ನಿಮ್ಮನ್ನು ಹುಡುಕುವ ಯತ್ನ ಮಾಡಲಿಲ್ಲವೇ ?''

ನನಗೆ ಗೊತ್ತು. ಅವಳೆಷ್ಟು ಹುಡುಕಾಟ ನಡೆಸಿದಳೆಂದು. ಅನ್ನ-ನೀರು ಬಿಟ್ಟು, ಆದರೆ ನಾನವಳ ಕಣ್ಣಿಗೆ ಕಾಣಿಸದಂತೆ ಮಾಯವಾಗಿ ಇಲ್ಲಿ ಐಸಿರಿಯ ಮೋಹಕ್ಕೊಳಗಾಗಿ ಇನ್ನೊಂದು ಮದುವೆಯಾದೆ. ಇಲ್ಲಿ ಇವಳು ತನ್ನ ಬಸಿರು ಫಲವತ್ತತೆಯನ್ನು ಪಡೆಯದೇ ಮಾನಸಿಕವಾಗಿ ನರಳುತ್ತಿದ್ದಾಗ, ನನಗೆ ಅನಿಸುತ್ತಿತ್ತು. ಇದು ನಾನು ನಿನ್ನ ತಾಯಿಗೆ ಮಾಡಿದ ದ್ರೋಹ ಎಂದು. ಅನಂತರ ನಾನವಳನ್ನು ಕಂಡು ಕ್ಷಮೆ ಕೇಳಬೇಕೆಂದು ಮಾಡಿದೆ. ಆದರೆ ಆಕೆ, ನಾನು ಬಿಟ್ಟು ಬಂದ ನಾಲ್ಕು ವರ್ಷಗಳ ನಂತರ ಇನ್ನೊಂದು ಮದುವೆಯಾದಳು.

ಮಧ್ಯರಾತ್ರಿ ಕಳೆದಿತ್ತು. ಅವರು ತಮ್ಮ ವೃತ್ತಾಂತವನ್ನು ಮುಗಿಸಿ ಮಲಗುವ ಯತ್ನ ಮಾಡಿದರು. ಅವರು ತುಂಬಾ ದಣಿದಿದ್ದರು. ಮೈಯಲ್ಲಿ ಬೆವರುಗಟ್ಟಿತ್ತು. ನನ್ನ ಪತ್ನಿ ತಣ್ಣೀರನ್ನು ತಂದು ಅವರಿಗೆ ಕುಡಿಸಿ, ಅವರ ಮುಖ, ಎದೆಗಳನ್ನು ಟವೆಲಿನಿಂದ ಒರೆಸಿದಳು. ಅವರು ನಂತರ ಹಾಯಾಗಿ ಮಲಗಿದರು.

ನಾವು ನಮ್ಮ ಕೋಣೆಗೆ ಬಂದೆವು.

ಬೆಳಕು ಹರಿಯಿತು. ಹೊಚ್ಚ ಹೊಸ ಮುಂಜಾವು. ರಾತ್ರಿ ಇಡೀ ನಿದ್ದೆಯಿರಲಿಲ್ಲ. ಹೊಸ ಹೊಸ ಕನಸುಗಳು. ಇದುವರೆಗೆ ಹೆತ್ತ ತಾಯಿಯೆಂದೇ ಕಲ್ಪಿಸಿಕೊಂಡು ಯಾವ ಸಾಕು ತಾಯಿಯನ್ನು ಕಳಕೊಂಡು ಇದ್ದ ನನಗೆ ಈಗ ನನ್ನ ಹೆತ್ತ ಅಮ್ಮನ ಮಡಿಲು ಸೇರುವ ಆಸೆ. ಆ ಅಮ್ಮನನ್ನು ನೋಡುವ ಆಸೆ. ಆ ಅಮ್ಮ ನನ್ನನ್ನು ಸಾಕಿಲ್ಲದಿರಬಹುದು. ಆದರೆ ಅವರ ಬಸಿರಲ್ಲಿ ನಾನು ಭ್ರೂಣವಾಗಿ, ಕೈ ಕಾಲು ಬೆಳೆದು, ಕಣ್ಣು ಮೂಗು ಹುಟ್ಟಿ, ಒಂಭತ್ತು ತಿಂಗಳ ಆ ಬೆಚ್ಚನೆಯ ಗರ್ಭದಲ್ಲಿ ಬೆಳೆದು ಹೊಕ್ಕಳ ಬಳ್ಳಿ ಕಡಿದುಕೊಂಡು ಧರೆಗೆ ಬಿದ್ದ ನನಗೆ ಒಂದು ವರ್ಷ ಮೊಲೆ ಹಾಲು ಉಣಿಸಿದ ಆ ಹೆತ್ತಾಕೆಯನ್ನು ಈ ಕ್ಷಣದಲ್ಲಿ ನೋಡುತ್ತೇನೆ ಎಂಬ ಅದಮ್ಯ ಉತ್ಸಾಹ

ನನ್ನಲ್ಲಿ ಹುಟ್ಟತೊಡಗಿತು. ಆ ಅಮ್ಮ ಹೇಗಿರಬಹುದು ? ಈಗ ಸುಮಾರು ಅರವತ್ತರ ಇಳಿಪ್ರಾಯವಾಗಿರಬಹುದು. ಚರ್ಮಗಳೆಲ್ಲಾ ಸುಕ್ಕುಗಟ್ಟಿ ಎದೆ ಬತ್ತಿ ಕಣ್ಣುಗಳಲ್ಲಿ ದೃಷ್ಟಿ ಮಂಜಾಗಿ ನನ್ನ ಗುರುತು ಹತ್ತಿ, 'ಬಾ ಮೋನೇ' ಎಂದು ಪ್ರೀತಿಯಿಂದ ನನ್ನನ್ನು ತಬ್ಬಿಕೊಳ್ಳಬಹುದೇ...

ಹೊತ್ತು ಸರಿಯಾಗಿ ಹುಟ್ಟಿ ಬೆಳೆದ ಮೇಲೆ ಅಪ್ಪನನ್ನು ವಿಚಾರಿಸಿ ಅಮ್ಮ ಇರುವ ಜಾಗವನ್ನು ಹುಡುಕಿಕೊಂಡು ಹೊರಟೆ. ದೂರ ಬಹುದೂರ, ಎಷ್ಟೋ ನೂರು ಮೈಲುಗಳಾಚೆ ನಾನು ಅಂದುಕೊಂಡದ್ದಕ್ಕಿಂತಲೂ ಹೆಚ್ಚು ದೂರ. ಬಹುಶಃ ಅಲ್ಲಿ ಸೇರುವಾಗ ಸಾಯಂಕಾಲವಾಗಬಹುದು.

ಬಸ್ಸಿನಲ್ಲಿ ಕುಳಿತು ನಾ ಯೋಚಿಸತೊಡಗಿದೆ. ನಾನು ಎರಡು ವರುಷದಷ್ಟು ಕಾಲ ಆಕೆಯ ಬಳಿ ಇದ್ದೆನಂತೆ. ಅನಂತರದ ಈ ಮೂವತ್ತೈದು ವರ್ಷಗಳಷ್ಟು ಕಾಲ ಹೆತ್ತ ತಾಯಿಯನ್ನು ನೋಡಿರದ ನಾನು ಈಗ ಹೊರಟಿದ್ದೇನೆ. ಆಕೆಯನ್ನು ನೋಡಲು ಹೋಗುವಾಗ ಮಗನಾದ ನಾನು ಏನು ಕೊಂಡೊಯ್ಯಲಿ ? ಒಂದು ಸೀರೆ-ಕುಪ್ಪಸ, ಇದು ಸಾಕಾದೀತೇ...? ಮಗನಾಗಿ ಹೆತ್ತಬ್ಬೆಗೆ ಕೊಂಡೊಯ್ಯುವ ಕಾಣಿಕೆ ಮತ್ತೇನನ್ನು ಕೊಂಡೊಯ್ಯಲಿ ? ಈ ಇಳಿವಯಸ್ಸಿನಲ್ಲಿ ಆಕೆ ನನ್ನಿಂದ ಏನು ಬಯಸಬಹುದು ? ಅಥವಾ ಆಕೆ ನನ್ನನ್ನು ಮರೆತೇಬಿಟ್ಟಿರಬಹುದೇ ? ಎಷ್ಟು ವರ್ಷಗಳ ಕಾಲ ನನ್ನನ್ನು ಜ್ಞಾಪಕದಲ್ಲಿಟ್ಟುಕೊಂಡಾರು ? ಒಂದು-ಎರಡು-ಮೂರು ವರುಷ ! ಅನಂತರ ಇನ್ನೊಂದು ಮದುವೆಯಾಗಿ ಮಕ್ಕಳನ್ನು ಹಡೆದ ಮೇಲೆ, ಆ ಮಕ್ಕಳ ಪ್ರೀತಿಯಲ್ಲಿ ನಾನು ಹೇಗೆ ನೆನಪಾಗಲು ಸಾಧ್ಯ...?

ಸಂಜೆ ನಾಲ್ಕರ ಹೊತ್ತಿಗೆ ನಾನು ತಲುಪಬೇಕಾದ ಊರನ್ನು ಸೇರಿದೆ. ಬಸ್ಸು ಇಳಿದು ಮತ್ತೆ ಅರ್ಧ ಗಂಟೆಯ ಕಾಲು ಹಾದಿ. ನಾನು ಈಗ ಆ ಮನೆಯ ಎದುರು ನಿಂತಿದ್ದೆ. ದೊಡ್ಡ ಮನೆಯದು. ವಿಶಾಲವಾದ ಹಜಾರ. ಅಂದವಾದ ಅಂಗಳ. ಹಜಾರದ ತೂಗುಮಂಚದ ಮೇಲೆ ಎಪ್ಪತ್ತರಷ್ಟು ಪ್ರಾಯದ ಬೋಳು ತಲೆಯ ಗಂಡಸೊಬ್ಬರು ಕುಳಿತಿದ್ದರು. ಮನೆಯ ಒಳಗೆ ಸ್ವಲ್ಪ ಗಡಿಬಿಡಿ. ನಾನು ಹಜಾರ ಏರಿ, ''ಅಸ್ಸಲಾಂ ಅಲೈಕುಂ'' ಅಂದೆ. ಅವರು ತೂಗುಮಂಚ ನಿಲ್ಲಿಸಿ ಪ್ರತಿವಂದಿಸಿ, ''ಬನ್ನಿ'' ಎಂದರು.

ನಾನು ಅಲ್ಲೇ ಪಕ್ಕದಲ್ಲ ಚೇರಲ್ಲಿ ಕುಳಿತೆ.

''ಎಲ್ಲಿಂದ ಬಂದಿರಿ ?'' ಅವರು ಕೇಳಿದರು.

''ಇರುವೈಲಿನಿಂದ'' ಎಂದೆ ನಾನು.

''ಉಮ್ಮಾತು !'' ಎಂದು ಕೂಗಿಕರೆದರು. ನನಗೆ ಒಮ್ಮೆಲೆ ಅದು ನನ್ನ ತಾಯಿಯೇ ಇರಬಹುದು ಅನ್ನಿಸಿತು. ನನ್ನ ಹೆತ್ತ ತಾಯಿಯ ಹೆಸರು ''ಉಮ್ಮಾ

ತುಮ್ಮಾ !'' ಎಂದು ಅಪ್ಪ ಹೇಳಿದ್ದರು. ನಾನು ಕುತೂಹಲ ನಿರೀಕ್ಷೆಯಿಂದ ಬಾಗಿಲಲ್ಲಿ ದೃಷ್ಟಿನೆಟ್ಟೆ. ಇನ್ನೊಂದು ಕ್ಷಣದಲ್ಲಿ ಬಾಗಿಲಲ್ಲಿ ಅಮ್ಮ ಕಾಣಿಸಿಕೊಳ್ಳಬಹುದು. ಹಾಗೇ ಕಾಣಿಸಿಕೊಂಡಾಗ ಕಾಲಿಗೆ ಬಿದ್ದು ಪರಿಚಯಿಸಿಕೊಂಡು, ನಂತರ ನಾನು ತಂದ ಕಾಣಿಕೆಯನ್ನು ಇತ್ತು ತಂದೆಯ ಕೊನೆಯ ಕಾಲದ ಅಪೇಕ್ಷೆಯನ್ನು ಹೇಳಿ ಅಮ್ಮನನ್ನೊಮ್ಮೆ ಕರೆದುಕೊಂಡು ಹೋಗಬೇಕು. ಆ ನಿರೀಕ್ಷೆಯಲ್ಲಿ ನಾನು ಬಾಗಿಲತ್ತ ನೋಡುತ್ತಿದ್ದಾಗ, ಬಾಗಿಲಲ್ಲಿ ಆರು ವರ್ಷದ ಹುಡುಗಿಯೊಬ್ಬಳು ಕಾಣಿಸಿಕೊಂಡು, ''ಅಜ್ಜಾ ನೀವು ನನ್ನನ್ನು ಕರೆದಿರೇನು ?'' ಎಂದು ಕೇಳಿದಳು.

''ಹೌದು ಉಮ್ಮಾತು ನೆಂಟರು ಬಂದಿದ್ದಾರೆಂದು ಹೇಳು.''

ಆ ಹುಡುಗಿ ಒಳ ಓಡಿದಳು. ನನ್ನ ಉತ್ಸಾಹವೆಲ್ಲ ಜರ್ರನೆ ಜಾರಿತು. ಮತ್ತೊಂದು ಕ್ಷಣದಲ್ಲಿ ಒಳಗಿಂದ ಒಬ್ಬ ಗಂಡಸು ಹೊರಬಂದ. ಅವನಿಗೆ ನನಗಿಂತ ಒಂದೆರಡು ವರುಷ ವಯಸ್ಸು ಕಡಿಮೆಯಾಗಿರಬಹುದು. ಆತ ನನ್ನ ಎದುರಿನಲ್ಲಿ ಕುಳಿತು ಕೇಳಿದ.

''ನಿಮ್ಮ ಪರಿಚಯವಾಗಲಿಲ್ಲ, ಏನು ಬಂದಿರಿ ?''

''ನಾನು ನನ್ನ ಉಮ್ಮನನ್ನು ಹುಡುಕಿಕೊಂಡು ಇಲ್ಲಿಗೆ ಬಂದೆ !''

''ಎಲ್ಲಿ ? ಈ ಊರಲ್ಲಿ ಎಲ್ಲಿದ್ದಾರೆ ನಿಮ್ಮ ತಾಯಿ ?''

''ಇದೇ ಮನೆಯಲ್ಲಿ !''

ಅವರಿಬ್ಬರು ಒಮ್ಮೆಲೆ ಸ್ತಂಭೀಭೂತರಾದರು. ಇಳೀ ವಯಸ್ಸಿನ ಮುದುಕ ತೂಗುಮಂಚದಿಂದ ಹಾರಿಬಿದ್ದಂತೆ ಗಾಬರಿಗೊಂಡು ಕೇಳಿದರು,

''ಈ ಮನೆಯಲ್ಲಿ ?''

''ಹೌದು ! ನಾನು ಉಮ್ಮಾತುಮ್ಮರ ಮಗ !'' ನಾನು ಗಟ್ಟಿಸ್ವರದಲ್ಲಿ ಹೇಳಿದೆ. ಸಣ್ಣಪ್ರಾಯದ ಆ ವ್ಯಕ್ತಿ ಗೊಳ್ಳೆಂದು ನಕ್ಕು ಹೇಳಿದ.

''ನಾನು ನೀವು ಹೇಳಿದ ಆ ಉಮ್ಮಾತುಮ್ಮರ ದೊಡ್ಡ ಮಗ, ನನಗೆ ಯಾರೂ ಅಣ್ಣ ತಮ್ಮಂದಿರಿಲ್ಲ. ಇಬ್ಬರು ತಂಗಿಯಂದಿರು ಮಾತ್ರ !''

ಅಷ್ಟರಲ್ಲಿ ಆ ಹಿರಿಯ ವ್ಯಕ್ತಿ ಆತನನ್ನು ತಡೆದು ಹೇಳಿದರು.

''ನಗಬೇಡ ಮಗನೇ ನೀನು. ಈತ ಹೇಳುವುದು ಸತ್ಯ ಇರಬಹುದು. ನಿನ್ನ ಅಮ್ಮ ನನ್ನ ಮದುವೆಯಾಗುವುದಕ್ಕೆ ಮೊದಲೇ ಮತ್ತೊಬ್ಬನನ್ನು ಮದುವೆಯಾಗಿ ಆತನಿಂದ ಮಗುವನ್ನು ಪಡೆದು, ಆತ ಆ ಮಗುವನ್ನು ಹೊತ್ತುಕೊಂಡು ನಾಪತ್ತೆಯಾದ ನಂತರ ಒಂಟಿಯಾಗಿದ್ದ ಆಕೆಗೆ ನಾ ಆಸರೆಯಾಗಿ ಅವಳನ್ನು ನಾ ಮದುವೆಯಾದೆ !''

ತಟಕ್ಕನೆ ನಾ ಹೇಳಿದೆ.

''ಹೌದು ! ನೀವು ಹೇಳುತ್ತಿರುವುದು ಸತ್ಯ. ಆಕೆ ಹೆತ್ತ ಮೊದಲ ಮಗನೇ ನಾನು !''

ಅವರು ನಿಟ್ಟುಸಿರುಬಿಡುವ ಹೊತ್ತಿಗೆ ಆ ಹುಡುಗಿ ಒಳಗಿನಿಂದ ನನಗೆ ಕುಡಿಯಲು ಹಾಲು ತಂದಿತ್ತಳು. ನಡೆದು ದಣಿದಿದ್ದ ನನಗೆ ಅದು ಅಮೃತ ಪಾನವಾಗಿತ್ತು. ಆದರೆ ಅಷ್ಟು ಹೊತ್ತಾದರೂ ಒಳಗಿಂದ ನನ್ನ ಅಮ್ಮ ಬರುವುದು ಕಾಣಿಸಲಿಲ್ಲ.

ನಾನು ಹೇಳಿದೆ,

''ನನ್ನ ಅಮ್ಮನನ್ನು ಒಮ್ಮೆ ಕರೆಯುತ್ತೀರಾ ?''

ಹಿರಿಯಾತ ಒಮ್ಮೆ ಗದ್ಗದಿತರಾದರು. ಅವರ ಕಣ್ಣಲ್ಲಿ ಕಂಬನಿ ಜಿನುಗಿತು. ಅವರು ಗದ್ಗದಿತರಾಗಿ ಹೇಳಿದರು.

''ನೀನು ತುಂಬಾ ತಡಮಾಡಿಬಿಟ್ಟೆ ಮೋನೆ. ನೀನು ಇಷ್ಟು ವರುಷಗಳ ನಂತರ ಆಕೆಯನ್ನು ನೋಡಲು ಬಂದೆ. ಆದರೆ ಆಕೆ ತೀರಿಕೊಂಡು ಅದಾಗಲೇ ಮೂವತ್ತು ದಿವಸಗಳಾಗಿವೆ !''

ಒಮ್ಮೆಲೆ ಸಿಡಿಲೆರಗಿದಂತಾಯ್ತು ನನಗೆ ! ನನ್ನ ಹೆತ್ತ ಅಮ್ಮ ತೀರಿಕೊಂಡಿದ್ದಾರೆ ! ನಾನು ಎಷ್ಟೋ ಆಸೆಗಳನ್ನು ಇಟ್ಟುಕೊಂಡು ಬಂದಿದ್ದೆ. ಹೆತ್ತ ಅಮ್ಮನನ್ನು ನೋಡಬೇಕು. ಅವರಿಗೆ ನಾನು ಕಾಣಿಕೆ ನೀಡಬೇಕು. ಅವರೊಡನೆ ಬಾಯ್ತುಂಬ ಮಾತಾಡಬೇಕು. ಅವರನ್ನು ಮನೆಗೆ ಕರೆದೊಯ್ದು ತಂದೆಯ ಎದುರು ನಿಲ್ಲಿಸಿ ತಂದೆಯ ಕಂಗಳಲ್ಲಿ ಕಾಣುವ ಕಾಂತಿಯನ್ನು ನೋಡಬೇಕು.

ಆದರೆ ಎಲ್ಲಾ ನಿರೀಕ್ಷೆಗಳು ನನ್ನ ತಾಯಿಯೊಂದಿಗೆ ದಫನವಾಗಿ ಹೋದುವು.

ನಾನು ತಾಯಿ ದಫನವಾದ ಮಸೀದಿಯ ಬಳಿಯ ಜಾಗಕ್ಕೆ ಬಂದು ಅಲ್ಲಿ ತಾಯಿಯ ಸಮಾಧಿಯನ್ನು ನೋಡಿದೆ. ಒಂದರಕ್ಷಣ ಆ ಸಮಾಧಿಯನ್ನು ನೋಡಿ ಕಣ್ಣೀರಿಳಿಸಿದೆ. ಕೊನೆಗೂ ನನ್ನ ಹೆತ್ತಾಕೆಯನ್ನು ನೋಡುವ ಭಾಗ್ಯ ಈಡೇರಲೇ ಇಲ್ಲ.

ನಾನು ಆ ಒಂದು ದಿನ ಅಲ್ಲೇ ಉಳಿದು ಮರುದಿನ ಊರಿಗೆ ಪಯಣ ಬೆಳೆಸಿದೆ. ನಾನು ತಾಯಿಯನ್ನು ಕರೆತ್ತರುವೆನೆಂಬ ನಿರೀಕ್ಷೆಯಲ್ಲಿರಬಹುದು ನನ್ನ ಅಪ್ಪ, ಅವರು, ನಿನ್ನ ಉಮ್ಮ ಎಲ್ಲಿ ? ಎಂದು ಕೇಳಿದರೆ ನಾನು ಏನೆಂದು ಉತ್ತರಿಸಲಿ ?

ನಾನು ಮನೆಯ ಬಳಿ ಬಂದಾಗ ಅಲ್ಲಿ ಜಮಾಯಿಸಿದ್ದ ಜನರನ್ನು ಕಂಡು ತಬ್ಬಿಬ್ಬಾದೆ. ಏನಾಗಿರಬಹುದು ಇಲ್ಲಿ! ಒಳಗಿಂದ ನನ್ನ ಹೆಂಡತಿಯ ರೋದನ ಕೇಳಿಸುತ್ತಿತ್ತು.

ನಾನು ಸರಕ್ಕನೆ ಜನಗಳ ನಡುವೆ ದಾರಿ ಮಾಡಿಕೊಂಡು ಒಳನುಗ್ಗಿದೆ. ಒಳಗಿನ ದೃಶ್ಯ ಕಂಡು ನಾನು ಅವಾಕ್ಕಾದೆ. ತಂದೆ ಮಲಗುತ್ತಿದ್ದ ಮಂಚದ ಮೇಲೆ ಬಿಳೀ ಕಫನ್ ಹೊದ್ದುಕೊಂಡ ಮೃತದೇಹ, ನಾನು ಹತ್ತಿರ ಬಂದು ಆ ಮೃತದೇಹದ ಮುಖದ ಮೇಲಿನ ಬಿಳೀ ಬಟ್ಟೆಯನ್ನು ಸರಿಸಿ ನೋಡಿದೆ.

ಮತ್ತು ಅಲ್ಲೆ ಕುಸಿದು ಕುಳಿತೆ.

# 7 ಕನಸು

ಹೊರಗಿನಿಂದ ಬಂದ ಆದಂಬ್ಯಾರಿಗಳು ಜಗಲಿಯೇರಿ ದೊಪ್ಪೆಂದು ಕುಳಿತುಬಿಟ್ಟರು. ಅವರ ಕಣ್ಣಂಚಿನಲ್ಲಿ ಕಂಬನಿ ಮಡುಗಟ್ಟಿ ನಿಂತಿತ್ತು. ಎಂದಿಗೆ ಕೊನೆಯಾಗುವುದೋ ಈ ಬಡತನದ ಬೇಗೆ. ಬಡತನ ಎಂಬುದು ತನ್ನ ಜನ್ಮಕ್ಕಂಟಿಕೊಂಡು ಬಂದಿದೆಯೋ ಹೇಗೆ. ಅವರು ಹಾಗೆ ಕಣ್ಣುಮುಚ್ಚಿ ಕುಳಿತುಬಿಟ್ಟರು.

''ಬಾಪಾ'' ಯಾರೋ ತನ್ನನ್ನು ತಟ್ಟಿ ಎಬ್ಬಿಸಿದಂತಾದಾಗ ಅವರು ಕಣ್ಣುತೆರೆದು ತಲೆ ಎತ್ತಿ ನೋಡಿದರು. ಎದುರಿನಲ್ಲಿ ಫಾತುಮಾ ನಿಂತಿದ್ದಳು. ಇನ್ನೂ ಮದುವೆಯಿಲ್ಲದೆ ಬೆಳೆದು ನಿಂತಿರುವ ಮಗಳು. ಅವಳಿಗೆ ಬರುವ ರಬಿಲವ್ವಲ್ ತಿಂಗಳಿಗೆ ಇಪ್ಪತ್ತನಾಲ್ಕು ತುಂಬುತ್ತೆ.

ಇರುವ ಒಬ್ಬ ಮಗಳಿಗೂ ತನ್ನಿಂದ ಮದುವೆ ಮಾಡಲು ಸಾಧ್ಯವಾಗುತ್ತಿಲ್ಲ. ಅವಳಿಗೆ ಸೌಂದರ್ಯ ಇದೆ. ಒಳ್ಳೆಯ ಗುಣವೂ ಇದೆ. ಅವಳನ್ನು ನೋಡಲು ಬಂದ ಅದೆಷ್ಟು ಗಂಡುಗಳು ಕೇಳುವ ಚಿನ್ನ-ವರದಕ್ಷಿಣೆ ಕೊಡಲು ಸಾಧ್ಯವಾಗದೆ ಅವಳ ಮದುವೆ ಇನ್ನೂ ಕನಸಾಗಿಯೇ ಉಳಿದಿದೆ. ಯಾವಾಗ ಇವಳು ಮದುವೆಯಾಗಿ ಗಂಡನ ಮನೆಗೆ ಹೋಗುವ ಕಾಲ ಕೂಡಿ ಬರುವುದೋ ?

'ಬಾಪಾ' ಆಕೆ ಮತ್ತೊಮ್ಮೆ ಕರೆದಳು. ''ಯಾಕೆ ಬಾಪಾ ನಿಮ್ಮ ಕಣ್ಣಲ್ಲಿ ನೀರು ?''

ಅವರು ಕಣ್ಣೊರೆಸುತ್ತಾ ಹೇಳಿದರು. ''ಅಂತಾದ್ದು ಏನೂ ಇಲ್ಲ ಮೋಳೇ.''

ಅವಳು ಒಳಗೆ ಹೊರಟುಹೋದಳು.

ಅವರು ಜಗಲಿಯಿಂದ ಕೆಳಗಿಳಿದು ಬಂದರು. ಉದ್ದಕ್ಕೂ ಕಣ್ಣಾಡಿಸಿದರು. ನಾಲ್ಕೆಕರೆಯಷ್ಟು ವಿಶಾಲವಾದ ಜಾಗ. ಆದರೆ ಅಷ್ಟು ದೊಡ್ಡ ಜಾಗವಿದ್ದರೇನು ? ಎಲ್ಲಾ ಬರಿ ಬೋಳು ಜಾಗ ! ಒಂದು ತೆಂಗಿನಗಿಡವೂ ನೆಡಲಾಗದಂತಹ ಗಟ್ಟಿಜಾಗ. ತನಗೆ ಪಿತ್ರಾರ್ಜಿತವಾಗಿ ಬಂದಂತಹ ಜಾಗ. ಇದನ್ನಾದರೂ ಮಾರಿ ಮಗಳ ಮದುವೆ ಮಾಡೋಣವೆಂದರೆ ಯಾರೂ ಈ ಜಾಗ ಕೊಂಡುಕೊಳ್ಳಲು ಮುಂದೆ ಬರುತ್ತಿಲ್ಲ.

ಅವರು ಮರಳಿ ಹಿಂದಕ್ಕೆ ಬಂದರು.

* * *

ಮರುದಿನ ಮುಂಜಾನೆ ಎದ್ದಾಗ ಅವರ ಕಿವಿಗೆ ಕೇಳಿಸಿದ ಒಂದು ಸುದ್ದಿಯಿಂದ

ಅವರಿಗೆ ಇದು ಸತ್ಯವೋ ಸುಳ್ಳೋ ಎಂದು ನಂಬಲಿಕ್ಕಾಗಲಿಲ್ಲ. ಎಂತಹಾ ಆಶ್ಚರ್ಯಕರವಾದ ಸುದ್ದಿ. ಅದು ನಿಜವಾಗಲಿ ದೇವರೇ ಅಂದುಕೊಂಡರು.

ಸರಕಾರ ಬೇರೆ ಯಾವುದೋ ಊರುಗಳ ಕೃಷಿ ನೀರಿನ ಪೂರೈಕೆಗಾಗಿ ಮೇಲ್ದಂಡೆ ಯೋಜನೆಯೊಂದನ್ನು ಕೈಗೊಂಡಿದೆ ಆ ಮೇಲ್ದಂಡೆ ಯೋಜನೆ ಕಾರ್ಯಗತವಾದರೆ ಈ ಊರು ಮುಳುಗಿಹೋಗುತ್ತದೆ. ಈ ಯೋಜನೆಯಿಂದ ಮುಳುಗಿಹೋಗುವ ಜನತೆಗೆ ಅವರ ಜಾಗದ ಎಕರೆಗನುಗುಣವಾಗಿ ಬೆಲೆ ಅಂದಾಜಿಸಿ ಪರಿಹಾರ ಕೊಡುತ್ತದೆ.

ಒಮ್ಮೆಲೆ ಅವರಲ್ಲಿ ಹೊಸ ಹುರುಪು ತುಂಬಿತು. ಮೇಲ್ದಂಡೆ ಯೋಜನೆಯಿಂದ ತನ್ನ ಜಾಗವಂತೂ ಮುಳುಗಿಹೋಗುವುದು ಖಂಡಿತ. ಎಕರೆಗೆ ಐವತ್ತು ಸಾವಿರವೆಂದರೂ ಎರಡು ಲಕ್ಷ, ಮತ್ತೆ ಮನೆಗೆ ಒಂದು ಐವತ್ತು ಸಾವಿರ ಒಟ್ಟು ಎರಡು ಲಕ್ಷಕ್ಕೆ ಮೋಸವಿಲ್ಲ. ಹೀಗೆ ಯೋಚಿಸಿಕೊಂಡ ಅವರು ದಿಗ್ಗನೆ ಎದ್ದು ಮನೆಬಿಟ್ಟು ಮಸೀದಿಯತ್ತ ನಡೆದರು.

ಅಲ್ಲಿ ತಲುಪಿದಾಗ ಅದಾಗಲೇ ಒಂದಷ್ಟು ಜಮಾತರು ಒಟ್ಟು ಸೇರಿ ಅದೇ ವಿಷಯದ ಬಗ್ಗೆ ಚರ್ಚೆ ನಡೆಸುತ್ತಿದ್ದರು. ಅವರ ಮಾತಿನಲ್ಲಿ ಮೇಲ್ದಂಡೆ ಯೋಜನೆಯಿಂದ ಅವರು ತುಂಬಾ ನೊಂದುಕೊಂಡಂತೆ ಕಾಣುತ್ತಿದ್ದರು. ಅದಾಗ ತಾನೇ ಎಷ್ಟೋ ಲಕ್ಷ ಖರ್ಚು ಮಾಡಿ ಹೊಸ ಮಸೀದಿಯೊಂದನ್ನು ಕಟ್ಟಿದ್ದರು. ಸುತ್ತಮುತ್ತಲ ಊರಿನಲ್ಲಿ ಎಲ್ಲೂ ಇಲ್ಲದಂತಹ ಮಸೀದಿ ಕಟ್ಟಿದ ಸಂಭ್ರಮ ಅವರಲ್ಲಿ ತುಂಬಿರುವಾಗ, ಇದೀಗ ಸರಕಾರದ ಮೇಲ್ದಂಡೆ ಯೋಜನೆ ಅವರಲ್ಲಿ ಆತಂಕವನ್ನುಂಟುಮಾಡಿತ್ತು. ಈ ಯೋಜನೆ ಕಾರ್ಯಗತವಾದರೆ ಈ ಮಸೀದಿ ಮುಳುಗಿಹೋಗುತ್ತದೆ. ಜತೆಗೆ ಎಷ್ಟೋ ವಿಶಾಲವಾದ ಫಲವತ್ತಾದ ಭೂಮಿ... ಸರಕಾರ ಪರಿಹಾರವೇನೋ ಕೊಡಬಹುದು. ಆದರೆ ತಾವು ಜತನದಿಂದ ಕಾಪಾಡಿಕೊಂಡು ಬಂದ ಅಂತಹ ಜಾಗ ಸಿಕ್ಕೀತೇ।

ಆದಂಬ್ಯಾರಿಗಳು ಅಲ್ಲೇ ಕುಳಿತುಕೊಂಡರು. ಅವರಿಗೆ ಅಲ್ಲಿನ ಮಾತುಗಳೆಲ್ಲಾ ಕೇಳುತ್ತಾ ಮತ್ತೆ ಭಯ ಹುಟ್ಟತೊಡಗಿತು. ಮೇಲ್ದಂಡೆ ಯೋಜನೆಯನ್ನು ಎಲ್ಲರೂ ವಿರೋಧಿಸುವವರೇ. ಯಾರೂ ಅದನ್ನು ಪುರಸ್ಕರಿಸುತ್ತಿರಲಿಲ್ಲ. ಅವರೆಲ್ಲ ಒಂದು ಸಮಿತಿಯನ್ನು ರಚಿಸಿ ಮೇಲ್ದಂಡೆ ಯೋಜನೆ ಆಗದಂತೆ ಸರಕಾರದ ಮೇಲೆ ಒತ್ತಡ ತರಬೇಕೆಂಬ ನಿರ್ಧಾರಕ್ಕೆ ತೊಡಗಿದರು. ಎಲ್ಲಾ ಜನರನ್ನು ಒಟ್ಟುಗೂಡಿಸಿ ಸರಕಾರದಲ್ಲಿ ಒತ್ತಡ ತರಬೇಕೆಂದು ಅವರು ಯತ್ನಿಸತೊಡಗಿದರು.

ಆದಂಬ್ಯಾರಿಗಳು ಅಲ್ಲಿ ಕುಳಿತೇ ಇದ್ದರು. ಅವರು ದೇವರಲ್ಲಿ ಬೇಡಿಕೊಳ್ಳತೊಡಗಿದರು.

''ಓ ದೇವರೇ ಇದು ನನ್ನ ಮಗಳ ಬದುಕಿನ ಪ್ರಶ್ನೆ. ಸರಕಾರ ಈ ಯೋಜನೆಯಿಂದ ಹಿಂದೆ ಸರಿಯದಂತೆ ಮಾಡಿ. ನನ್ನ ಜಾಗಕ್ಕೆ ಯೋಗ್ಯವಾದ ಪರಿಹಾರ ದೊರೆತು, ನನ್ನ ಮಗಳಿಗೆ ಒಳ್ಳೆಯ ಗಂಡು ದೊರೆಯುವಂತಾಗಲಿ. ಈ ಹಾಳು ಜಾಗದಿಂದ ದೂರ ಎಲ್ಲಾದ್ರೂ ಹೋಗಿ ನಾ ಬದುಕುವಂತೆ ನೀ ಕರುಣಿಸು.''

ಮುಂದೆ ಹಲವಷ್ಟು ಮಹತ್ತರ ಬದಲಾವಣೆಗಳಾದುವು. ಸರಕಾರ ಮೇಲ್ದಂಡೆ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದೆಂದು ಬಲವಾಗಿ ಸಾರಿದಾಗ ಆದಂಬ್ಯಾರಿಗಳಿಗೆ ಮತ್ತೆ ಉತ್ಸಾಹ ಗರಿಕೆದರಿತು.

ಮರುದಿನ ಆ ಊರು ತುಂಬಾ ಅಧಿಕಾರಿಗಳು ಭೇಟಿಯಿತ್ತರು. ಅಧಿಕಾರಿಗಳು ಬರುವರೆಂಬ ಸುದ್ದಿ ತಿಳಿದು ಆದಂಬ್ಯಾರಿಗಳು ಮನೆಯಲ್ಲಿಯೇ ಉಳಿದು ಕೊಂಡರು.

ಮಧ್ಯಾಹ್ನದ ಹೊತ್ತಿಗೆ ಗರಿಗರಿಯಾದ ಪ್ಯಾಂಟ್ ಶರ್ಟ್ ಧರಿಸಿದ ಇಬ್ಬರು ಚಾವಡಿಯೇರಿ ಒಳಬಂದರು. ಆದಂಬ್ಯಾರಿಗಳು ಅವರನ್ನು ಸ್ವಾಗತಿಸುತ್ತಾ ''ಬನ್ನಿ... ಬನ್ನಿ.. ಒಳಬನ್ನಿ'' ಎಂದರು. ಅವರು ಒಳಬಂದು ಕುಳಿತು ಒಮ್ಮೆ ಮನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ,

''ನಿಮಗೆ ಎಷ್ಟು ಎಕರೆ ಜಾಗ ಇದೆ ?'' ಎಂದು ಕೇಳಿದರು.

''ನಾಲ್ಕೆಕರೆ ಜಾಗ ಇದೆ.''

''ಅದರ ರೆಕಾರ್ಡ್‌ಗಳೆಲ್ಲ ಸರಿಯಾಗಿ ಇದೆಯೇ ?''

''ಹೌದು !''

''ಬ್ಯಾರಿಗಳೇ ನಿಮಗೆ ಗೊತ್ತಲ್ಲ, ಸರಕಾರ ಮೇಲ್ದಂಡೆ ಯೋಜನೆಯನ್ನು ಮಾಡಲು ಉದ್ದೇಶಿಸಿರುವುದರಿಂದ ಈ ಜಾಗ ಮುಳುಗಡೆ ಆಗಿ ಹೋಗೋದರಿಂದ ನಮ್ಮ ಜಾಗಕ್ಕೆ ಸೂಕ್ತವಾದ ಪರಿಹಾರ ಸಿಗುತ್ತದೆ.''

ಆದಂಬ್ಯಾರಿಗಳು ತಕ್ಷಣ ಕೇಳಿದರು.

''ಅಂದಾಜು ಎಷ್ಟು ಬರಬಹುದು ?''

''ನಾವು ಎಕರೆಗೆ ಅರವತ್ತು ಸಾವಿರದಂತೆ ಲೆಕ್ಕ ಹಿಡಿದು ನಿಮ್ಮ ನಾಲ್ಕೆಕರೆ ಜಾಗ ಮತ್ತು ಮನೆಗೆ ಮೂರು ಲಕ್ಷದ ಅಂದಾಜು ಪಟ್ಟಿ ಮಾಡುತ್ತೇವೆ.''

ಒಮ್ಮೆಲೆ ಆದಂಬ್ಯಾರಿಗಳಿಗೆ ಉಸಿರು ಗಂಟಲಲ್ಲಿ 'ಸಿಕ್ಕಿಹಾಕಿಕೊಂಡಂತಾಯಿತು. ಮೂರು ಲಕ್ಷ! ಅಬ್ಬಾ! ಯಾರಿಗುಂಟು, ಯಾರಿಗಿಲ್ಲ ಈ ಭಾಗ್ಯ! ಒಂದು ಲಕ್ಷದಷ್ಟು ಖರ್ಚುಮಾಡಿ ಮಗಳಿಗೆ ಒಂದು ಗಂಡು ನೋಡಿ ಮದುವೆ ಮಾಡಿ ಬಿಡಬೇಕು. ಉಳಿದ ಒಂದು ಲಕ್ಷದಲ್ಲಿ ಬೇರೊಂದು ಕಡೆ ಸಣ್ಣ ಮನೆ ಮತ್ತು ಜಾಗ

ಖರೀದಿಸಬೇಕು. ಮತ್ತೆ ಏನಿಲ್ಲ ಎಂದರೂ ಒಂದು ಲಕ್ಷ ಉಳಿಯುತ್ತೆ. ಅದರಲ್ಲಿ ಏನಾದರೂ ಒಳ್ಳೆಯ ವ್ಯಾಪಾರ ಮಾಡಬೇಕು ! ಹೀಗೆ ಅವರ ಹಗಲು ಕನಸುಗಳು ಮುಂದುವರಿದುವು.

ಅನಂತರ ಅವರು ಹುಡುಗನ ಬೇಟೆಗೆ ತೊಡಗಿದರು. ಮತ್ತೆ ಒಂದು ದಿನ ಯಾರೋ ಒಬ್ಬರು ಹುಡುಗನ ಕಡೆಯವರು ಹೆಣ್ಣು ನೋಡಲು ಬಂದರು. ಅವರು ಬರುವ ಸುದ್ದಿ ಮೊದಲೇ ತಿಳಿದಿದ್ದ ಆದಂಬ್ಯಾರಿಗಳು ಮೊದಲ ದಿನವೇ ಪಕ್ಕದ ಮನೆಯ ಅಬ್ಬೋನು ಬ್ಯಾರಿಗಳಿಂದ ಐದುನೂರು ಸಾಲ ಕೇಳಿ ತಂದಿದ್ದರು. ಪರಿಹಾರ ದೊರಕಿದ ಮೇಲೆ ಬಡ್ಡಿ ಸಮೇತ ಅದನ್ನು ಹಿಂದಿರುಗಿಸುವೆನೆಂದಿದ್ದರು.

ಪೇಟೆಯಿಂದ ಎರಡು ಕೋಳಿ ತಂದು ಚೆನ್ನಾದ ಸಾರು ಮಾಡಿಸಿ ಹುಡುಗ ಮತ್ತು ಅವನ ಪಾರ್ಟಿಯವರಿಗೆ ಉಣಬಡಿಸಿದರು. ಆತ ಹುಡುಗಿಯನ್ನು ಮನಸಾರೆ ಒಪ್ಪಿ ಹೋದಮೇಲೆ ಆದಂಬ್ಯಾರಿಗಳಿಗೆ ಸ್ವರ್ಗ ಮೂರೇ ಗೇಣು ಅನಿಸಿತು. ಹುಡುಗ ಕೇಳಿದ ಹತ್ತು ಪವನು ಚಿನ್ನ ಮತ್ತು ಇಪ್ಪತ್ತು ಸಾವಿರ ಪರಿಹಾರ ಹಣದಲ್ಲಿ ಕೊಡುವುದು ದೊಡ್ಡ ಸಂಗತಿಯೇನಲ್ಲ. ಒಂದು ಒಳ್ಳೆಯ ಮುಹೂರ್ತ ನೋಡಿ ಮದುವೆ ಮುಗಿಸಿಬಿಡಬೇಕೆಂದು ಅಂದುಕೊಂಡರು.

ಮಗಳ ಮದುವೆಯ ಚಿಂತೆಯೊಂದು ಬಗೆಹರಿಯಿತು. ಇನ್ನು ಇಲ್ಲಿನ ಜಾಗ ಮುಳುಗಿಹೋದಮೇಲೆ ಬೇರೊಂದು ಕಡೆ ಆಗಬೇಕಾದ ಮನೆಯನ್ನು ಈಗಲೇ ಹುಡುಕಬೇಕು ಎಂದು ನಿರ್ಧರಿಸಿಕೊಂಡರು.

ಹೀಗೆ ಹತ್ತು-ಹದಿನೈದು ದಿನಗಳು ಕಳೆದುಹೋದವು. ಅಂದು ಮುಂಜಾನೆ ಬೆಳಿಗ್ಗೆ ಎದ್ದು ಮಸೀದಿಯ ಕಡೆ ಬಂದ ಆದಂಬ್ಯಾರಿಗಳಿಗೆ ದಾರಿಯಲ್ಲಿ ಸಿಕ್ಕ ಒಬ್ಬಾತ ಹೇಳಿದ.

''ವಿಷಯ ಗೊತ್ತೇನು ಆದಂಬ್ಯಾರಿಗಳೇ ?''

''ಯಾವ ವಿಷಯ ?''

''ಸರಕಾರದವರು ಮೇಲ್ದಂಡೆ ಯೋಜನೆಯನ್ನು ರದ್ದುಪಡಿಸಿದ್ದಾರಂತೆ !''

ಅವರಿಗೆ ಒಮ್ಮೆಲೆ ಸಿಡಿಲೆರಗಿದಂತಾಯ್ತು. ಆದರೂ ಸಾವರಿಸಿಕೊಂಡು ಕೇಳಿದರು. ''ಅಂದರೆ ಈ ಊರು ಮುಳುಗಿಹೋಗುವುದಿಲ್ಲವೇ ?''

''ಅದು ಹೇಗೆ ಸಾಧ್ಯ ? ಆ ಯೋಜನೆಯೇ ನಿಂತುಹೋಗಿರುವಾಗ !''

ಅವರು ಸರಸರನೆ ಮಸೀದಿಗೆ ಬಂದರು. ಅಲ್ಲಿಯೂ ಅದೇ ಮಾತು. ಬೆಳಗಿನ ರೇಡಿಯೋದಲ್ಲಿ ಮೇಲ್ದಂಡೆ ಯೋಜನೆ ನಿಂತುಹೋದ ಸುದ್ದಿಯನ್ನು ಕೇಳಿದ್ದ ಅವರೆಲ್ಲ ಅದರ ಬಗ್ಗೆಯೇ ಚರ್ಚಿಸುತ್ತಿದ್ದರು.

ಆದಂಬ್ಯಾರಿಗಳ ತಲೆತಿರುಗತೊಡಗಿತು. ಎಲ್ಲಾ ತಲೆಕೆಳಗಾಗಿತ್ತು. ತನಗೆ ಸಿಗುವ

ಮೂರು ಲಕ್ಷ ಕನಸಾಗಿಯೇ ಉಳಿಯಿತೇ ? ಆ ಹಾಳು ಜಾಗದಲ್ಲೇ ತಾನು ಜೀವನ ಪರ್ಯಂತ ಬದುಕನ್ನು ಅನುಭವಿಸಬೇಕೇ ? ಹಾಗಾದರೆ ಮಗಳ ಮದುವೆ ? ಅದು ಕನಸಾಗಿಯೇ ಉಳಿಯುವುದೇ ?

ಅವರು ಮಸೀದಿಯಿಂದ ಇಳಿದು ಮನೆಯತ್ತ ಸಾಗತೊಡಗಿದರು. ಅವರಿಗೆ ದಾರಿ ಕಾಣುತ್ತಿರಲಿಲ್ಲ. ಎದುರಿನಿಂದ ಅಬ್ಬೋನುಬ್ಯಾರಿಗಳು ಬರುತ್ತಿದ್ದರು. ಮೊನ್ನೆ ಕೊಟ್ಟ ಐನೂರು ಸಾಲವನ್ನೆಲ್ಲಿ ಕೇಳುತ್ತಾರೋ ಎಂಬ ಭಯದಿಂದ ದಾರಿ ತಪ್ಪಿಸಿಕೊಂಡು ಮನೆಯ ವಿರುದ್ಧ ದಿಕ್ಕಿಗೆ ಓಡತೊಡಗಿದರು !

ಯಾವ ದಿಕ್ಕಿಗೆ ತಾನು ಓಡುತ್ತಿದ್ದೇನೆ ಎಂದು ಆದಂಬ್ಯಾರಿಗಳಿಗೆ ಅರಿವಾಗಲಿಲ್ಲ. ತನ್ನ ಹಿಂದೆ ಅಬ್ಬೋನುಬ್ಯಾರಿಗಳು, ಅವರ ಹಿಂದೆ ತನ್ನ ಮಗಳು ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದಾರೆ ಎಂಬ ಭಯದಿಂದ ಅವರು ಓಡುತ್ತಲೇ ಇದ್ದರು !

# 8 ವಾರಸುದಾರರು

ಒಂದು ದಿನ ನಸುಕಿನಲ್ಲಿ ನಿರೀಕ್ಷಿಸಿರದಿದ್ದ ರೀತಿಯಲ್ಲಿ ಅರವತ್ತೈದರ ಉಮ್ಮಾತುಮ್ಮ ತೀರಿಕೊಂಡ ಸುದ್ದಿ ಹತ್ತು ಮನೆಗಳಷ್ಟು ದೂರದ ನನ್ನ ಮನೆ ತಲುಪಿದಾಗ ನಾನು ಕೆಲವು ದಿನಗಳಲ್ಲಿ ನನ್ನ ಪತ್ನಿಯಾಗಿ ಬರುವ ಶಾಹಿದಾಳ ಸುಂದರ ನೆನಪಿನಲ್ಲಿ ಹೂತುಹೋಗಿದ್ದೆ. ಸುಂದರ ಯೋಚನೆಯನ್ನು ಬಗೆದ ನೋವಿನ ಸುದ್ದಿ ತಂದಾತ ಹೊರಗಿನ ಜಾವಡಿಯಲ್ಲಿ ಕೈ ಚೆಲ್ಲಿ ಕುಳಿತು ಉಮ್ಮಾತುಮ್ಮಾ ಸತ್ತ ಬಗೆಯನ್ನು ವಿವರವಾಗಿಸುತ್ತಿದ್ದ. ನನ್ನಷ್ಟು ದಪ್ಪವಾಗಿಲ್ಲದ ಬಹುಶಃ ಸಣಕಲನೆಂದೇ ಹೆಸರಿಸಬಹುದಾದ ಯಾರು ಸತ್ತರೂ ಮನೆ ಮನೆಗೆ ಓಡಿ ಸುದ್ದಿ ಮುಟ್ಟಿಸುತ್ತಿದ್ದ ಆತ ಕೈ ಕಾಲುಗಳನ್ನು ಆಡಿಸುತ್ತಾ ಹೇಳುತ್ತಿದ್ದ ಮಾತುಗಳಿಗೆ ಮೌನವಾಗಿ ''ಛೆ.. ಹಾಗಾಗಬಾರದಿತ್ತು'' ಪಾಪದ ಹೆಂಗಸು ಇನ್ನಷ್ಟು ಕಾಲ ಬದುಕಬೇಕಿತ್ತು'' ಎಂದು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ಕುಳಿತಿದ್ದರು ನನ್ನ ತಾಯಿ ಮತ್ತು ನನ್ನ ಅಕ್ಕ ಭೀಪಾತುಮ್ಮ...

ಹಿಂದಿನ ದಿನ ಸಂಜೆ ದಂಟೆ ಊರಿಕೊಂಡು ಬಂದು ಜಗಲಿಯೇರಿ ಕುಳಿತು ನಾನು ಮದುವೆಯಾಗಲಿರುವ ಶಾಹಿದಾಳ ಅಂದ ಚಂದದ ಕುರಿತು ಹೊಗಳಿ ನನ್ನ ಕೆನ್ನೆ ಕೆಂಪಗಾಗುವಂತೆ ಮಾಡಿ ''ನಿನ್ನ ಮದುವೆಗೆ ನನಗೊಂದು ಪಟ್ಟೆ ಸೀರೆ ಕೊಡಿಸಬೇಕು ನೀನು'' ಎಂದು ನನ್ನನ್ನು ಒಪ್ಪಿಸಿ ನಗಿಸಿದ ಈ ಅಜ್ಜಿ, 'ಅಜ್ಜಿ' ನಿನ್ನ ಮೊಮ್ಮಗ ಮದುಮಗನಾಗಿ ನಿಂತಾಗ ನೀನು ಕೊಡುವ ಉಡುಗೊರೆ ಏನು ? ಎಂದು ಪ್ರಶ್ನಿಸಿದಾಗ ''ನನ್ನಲ್ಲಿ ಕೊಡಲೇನುಂಟು ಮಗೂ, ನಾನು ಕೊಡುವುದು ಆಶೀರ್ವಾದ ಒಂದೇ'' ಎಂದು ತಮ್ಮ ದುಃಸ್ಥಿತಿಯನ್ನು ನನ್ನ ಕಣ್ಣಿಗೆ ಕಟ್ಟುವಂತೆ ಮಾಡಿದ ಅಜ್ಜಿ ಉಮ್ಮಾತುಮ್ಮ ಈ ಮುಂಜಾನೆ ಸಾವಿನ ಸುದ್ದಿಯಾಗಿ ನನ್ನೆದುರು ಸುಳಿವರೆಂದು ನಾ ಭಾವಿಸಿರಲಿಲ್ಲ.

ಸುದ್ದಿ ತಂದಾತ ಇನ್ನೊಂದು ಮನೆಗೆ ಹೊರಟುಹೋಗಿದ್ದ. ನಾನು ಅಂಗಳಕ್ಕೆ ಇಳಿದು ಬಂದಾಗ ಹತ್ತಿರದ ಮನೆಗಳಿಂದ ಜನ ಅತ್ತಕಡೆ ಧಾವಿಸುತ್ತಿದ್ದರು. ನಾನು ಲಗುಬಗನೆ ಹೆಜ್ಜೆ ಎತ್ತಿದೆ.

ದೊಡ್ಡ ಕಲ್ಲಿನ ಕಾಂಪೌಂಡ್‌ನ ಗೇಟನ್ನು ಹಾದು ಒಳಬಂದು ಆ ಮನೆಯ ಹತ್ತಿರ ನಡೆದೆ... ಬಾಗಿಲಿಗೆ ಮುತ್ತಿಕೊಂಡಿದ್ದ ಗಂಡಸರು ನಡುವೆ ಜಾಗ ಮಾಡಿಕೊಂಡು ಒಳ ಹಜಾರಕ್ಕೆ ಬಂದಾಗ ಉದ್ದಕ್ಕೂ ಪೂರ್ವ ಪಶ್ಚಿಮವಾಗಿ

ಮಲಗಿಸಿದ್ದ ಕತ್ತಿನವರೆಗೆ ಬಿಳಿ ಬಟ್ಟೆ ಹಾಸಿದ್ದ ಆ ಮಯ್ಯತ್ತನ್ನು ತಂದಾಗ ನಾನು ಅಧೀರಗೊಂಡೆ. ಬದುಕಿದ್ದಾಗ ಎಷ್ಟೋ ಸಲ ಅವರ ಪಾದ ಮುಟ್ಟಿ ಆಶೀರ್ವಾದ ಪಡೆದಿದ್ದ ನಾನು ಈ ಕ್ಷಣದಲ್ಲಿ ಏನೂ ಅಲ್ಲದ ಈ ನಿರ್ಜೀವ ದೇಹದ ಪಾದ ಮುಟ್ಟಲು ಒಂದು ರೀತಿಯ ಮುಜುಗರ ಪಟ್ಟುಕೊಂಡು ಅವರ ಕಾಲ ಬದಿಗೆ ಹೆಜ್ಜೆ ಎತ್ತಿದವನು ಸುಮ್ಮನಾದೆ. ನನಗೆ ಅಳಬೇಕೆನಿಸಿತು. ಆದರೆ ಅಳುವ ಕ್ರಿಯೆ ಒಂದು ಸಂಕೇತವಾಗಿ ಕಾಣಿಸಿದಾಗ ನಾನು ಕೈ ಕಟ್ಟಿಕೊಂಡು ನಿಂತುಕೊಂಡೆ.

ಹೆಣದ ಸುತ್ತಲೂ ಕುಳಿತಿದ್ದ ಹೆಂಗಸರು ತಲೆಗೆ ವಸ್ತ್ರ ಹಾಸಿಕೊಂಡು ಖುರಾನ್ ಪಠಣದಲ್ಲಿ ತೊಡಗಿದ್ದರು. ಹೆಣದ ಮುಖದಲ್ಲಿ ದೃಷ್ಟಿ ನೆಟ್ಟು ಸೋತು ಪಕ್ಕಕ್ಕೆ ತಿರುಗಿದಾಗ ನನ್ನ ಪಕ್ಕದಲ್ಲಿ ನಿಂತಿದ್ದವನೊಬ್ಬ ಉಡಾಫೆ ಮನಸ್ಸಿನವ ''ಈ ಮುದುಕಿ ನಾಲ್ಕು ದಿನದ ಹಿಂದೆ ರಮ್‌ಝಾನ್ ಉಪವಾಸ ಕಾಲದಲ್ಲಿ ಗೊಟಕ್ ಅಂದಿದ್ದರೆ ಯಾರ ಇನ್‌ಫ್ಲುಯೆನ್ಸ್ ಇಲ್ಲದೆ ನೇರ ಸ್ವರ್ಗಕ್ಕೆ ಹೋಗುತ್ತಿತ್ತು' ಎಂದು ಜೋಕು ಎಬ್ಬಿಸಿದಾಗ ನಾನು ನಗಲೂ ಇಲ್ಲ, ಅವನಿಗೆ ಬೇಸರ ಉಂಟುಮಾಡಲೂ ಇಲ್ಲ.

ನಾನು ಹೊರಗೆ ಬಂದು ಕುಳಿತೆ... ಉಮ್ಮಾತುಮ್ಮರ ಹಿರಿಯ ಮಗ ಅಬ್ದುಲ್ಲಾ ತಾಯಿಯ ಮರಣದಿಂದ ಮಂಕು ಹಿಡಿದವನಂತೆ ಕಂಗಾಲಾಗಿದ್ದ. ಏನೂ ಮಾಡಲಾರದವನಂತೆ ಕೈ ಚೆಲ್ಲಿ ಕುಳಿತ ಅವನ ತೊಡೆಗೆ ಅಂಟಿಕೊಂಡು ಅವನ ಎರಡು ವರ್ಷದ ಹೆಣ್ಣು ಮಗು ಈ ದೃಶ್ಯವನ್ನು ಬೆರಗು ಕಂಗಳಿಂದ ನೋಡುತ್ತಿತ್ತು. ಒಳಗೆ ಹೆಣದ ಬಳಿ ಅವನ ಹೆಂಡತಿ ಬಿದ್ದು ಬಿದ್ದು ಅಳುತ್ತಿರಬಹುದು. ಅತ್ತೆಯನ್ನು ಕೆಲವೊಮ್ಮೆ ವಿಶಿಷ್ಟ ಕೆಟ್ಟ ಶಬ್ದಗಳಿಂದ ಬೈಯುತ್ತಿದ್ದ ಆಕೆ ನಾಟಕೀಯ ಕಣ್ಣೀರಿಳಿಸಬಹುದು. ಮನದೊಳಗೇ ತೃಪ್ತಿಪಟ್ಟುಕೊಳ್ಳುತ್ತಾ ಈ ಕೆಲವು ಕ್ಷಣಗಳಲ್ಲಿ ತಾನು ಸೊಸೆಗಿಂತ ಹೆಚ್ಚಾಗಿ ಮಗಳಂತೆ ಇದ್ದೆ ಎಂದು ತೋರ್ಪಡಿಸಿಕೊಳ್ಳಬಹುದು.

ನಾನು ಅಬ್ದುಲ್ಲಾನ ಬಳಿ ಕುಳಿತಿದ್ದೆ. ಆತ ಮೆಲ್ಲನೆ ಹೇಳತೊಡಗಿದ. ನಾನು ಈ ಹದಿನೆಂಟು ವರ್ಷಗಳಲ್ಲಿ ತಾಯಿಯನ್ನು ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ನೋಡಿ ಕೊಂಡಿದ್ದೇನೆ. ಆಕೆ ಕಷ್ಟಪಟ್ಟು ದುಡಿಯುವುದನ್ನು ನನ್ನಿಂದ ನೋಡಲಾಗುತ್ತಿರಲಿಲ್ಲ. ಈ ಅರವತ್ತೈದು ವರ್ಷ ಸಾಯುವ ವಯಸ್ಸೇ ಅಲ್ಲ. ನನ್ನ ಸೇವೆ ಇನ್ನಷ್ಟು ಕಾಲ ಅವರಿಗೆ ಒದಗಬೇಕಿತ್ತು. ಈ ಸಾಯುವ ಕಾಲದಲ್ಲಿ ಅವರ ಮೈಮೇಲೆ ಏನೆಲ್ಲಾ ಒಡವೆ ಇತ್ತೋ ಅದೆಲ್ಲಾ ನಾನೇ ತರಿಸಿಕೊಟ್ಟದ್ದು. ''ಆತ ಕೊನೆಯ ಮಾತನ್ನು ಆದಷ್ಟು ಒತ್ತಿ ಹೇಳಿದ್ದ...

ನನ್ನ ಪಕ್ಕದಲ್ಲಿ ಕುಳಿತಿದ್ದ ಹಿರಿಯರಿಬ್ಬರಿಗೇ ಆತನ ಮಾತು ಕೇಳಿಸಿತೋ ಏನೋ ಅವರಲ್ಲಿ ಒಬ್ಬರು ಹೇಳಿದರು. ''ನಿನ್ನ ಸ್ವಭಾವ ನನಗೆ ಗೊತ್ತಿದೆ. ಮಯ್ಯತ್ತನ್ನು ಎದುರಿಗಿಟ್ಟುಕೊಂಡು ಒಡವೆಗಳನ್ನೆಲ್ಲಾ ದಕ್ಕಿಸಿಕೊಳ್ಳಬೇಕು ಎನ್ನುವ ಹಾಗೆ

ಹೇಳ್ತಿದಿಯಲ್ಲಾ. ಆಕೆ ನಿನ್ನೊಬ್ಬನಿಗೆ ಹೆತ್ತಬ್ಬೆ ಅಲ್ಲ.. ನಿನ್ನೊಡನೆ ಹುಟ್ಟಿದ ಇನ್ನು ಇಬ್ಬರು, ಅವರೂ ನಿನ್ನ ಹಾಗೆ ಆಸೆ ಬುರುಕರು. ಅವರೂ ಕೈ ಹಾಕದೆ ಇರ್ತಾರೆಯೇ.''

ಅವನು ಆ ಮಾತಿನಿಂದ ಅಧೀರನಾದಂತೆಯೇ ಕಂಡುಬಂದ. ತೊಡೆಗೆ ಅಂಟಿಕೊಂಡಿದ್ದ ಮಗವನ್ನು ಆಚೆ ಸರಿಸಿ ಸ್ವಲ್ಪ ಗಡುಸಾಗಿಯೇ ಹೇಳಿದ, ''ಅವರು ದಕ್ಕಿಸಿಕೊಳ್ಳೋದು ತಾಯಿಯ ಮಯ್ಯತ್ತನಷ್ಟೇ... ಆ ಒಡವೆಗಳಲ್ಲಿ ಒಂದು ತುಂಡೂ ಅವರಿಗೆ ಸಿಗದು. ಬದುಕಿದ್ದಾಗ ಚಿಕ್ಕಾಸು ತಾಯಿಗೆ ಕೊಡದ ಅವರಿಗೆ ನಾನು ಹಾಕಿದ ಒಡವೆಯ ಪಾಲು ಅದ್ಹೇಗೆ ಸಿಗುತ್ತೆ ?''

ನಾನು ವಿಕೋಪಕ್ಕೆ ಅದು ಸಮಯವಲ್ಲವೆಂದು ಸೂಚಿಸಿದೆ - ಆತ ಸುಮ್ಮನಾದ. ಹಿರಿಯರಿಬ್ಬರೂ ನನ್ನನ್ನು ನೋಡಿ ಮುಗುಳ್ನಗೆ ಚೆಲ್ಲಿದರು.

ಆತನ ಇನ್ನಿಬ್ಬರು ತಮ್ಮಂದಿರು ಎಲ್ಲೋ ದೂರದ ಪೇಟೆಗಳಲ್ಲಿ ಮನೆ ಮಾಡಿ ಕೊಂಡಿದ್ದವರು ಇನ್ನೂ ಬಂದಿರಲಿಲ್ಲ. ಅವರಿಗೆ ಸುದ್ದಿ ಮುಟ್ಟಿರಬಹುದು. ನಾನು ಕೇಳಿದೆ. ''ಸತ್ತ ಕ್ಷಣದಲ್ಲಿಯೇ, ಫೋನು ಮಾಡಿಸಿದ್ದೇನೆ'' ಎಂದು ನನಗೆ ಹದಿನೈದು ವರ್ಷಗಳಷ್ಟು ಹಿರಿಯನಾದರೂ 'ಏಕವಚನದಲ್ಲಿ ಸಂಭೋದಿಸಿ ವಾಡಿಕೆ. ನಾನು ಹಾಗೆ ಕರೆಯುವುದರಿಂದ ಆತನೇನೂ ಬೇಸರ ಪಟ್ಟುಕೊಳ್ಳುತ್ತಿರಲಿಲ್ಲ. ಆದರೆ ಆತನ ಪ್ರವೃತ್ತಿ ನನಗೆ ಮೆಚ್ಚುಗೆಯಾಗುತ್ತಿರಲಿಲ್ಲ. ಅತಿಯಾಗಿ ಲೋಭಿಯಾಗಿದ್ದ ಫಾತಿಹಾವನ್ನು ಸರಿಯಾಗಿ ಮಾಡಲಾರ ಎಂಬ ಗುಮಾನಿ ನನಗೆ.

ಹೊತ್ತು ಏರುತ್ತಿದ್ದಂತೆಯೇ ಹಜಾರದಲ್ಲಿ ಗಂಡಸರು ಒಳಗೆ ಕೋಣೆಗಳಲ್ಲಿ ಹೆಂಗಸರೂ ತುಂಬತೊಡಗಿದ್ದರು. ಅಂತಹ ಸಂದಿಗ್ಧ ನೋವಿನ ಸಮಯದಲ್ಲೂ ಹದಿ ಹರೆಯದ ಮೀಸೆ ಬಲಿತ ಕಾಲೇಜು ಯುವಕರಿಬ್ಬರು ಅರ್ಧಗಂಟೆಗೊಮ್ಮೆ ಪಕ್ಕದ ಮನೆಗೆ ನುಗ್ಗಿ ಬಂದು ಹತ್ತು ನಿಮಿಷ ಅಲ್ಲಿದ್ದು ಬರುತ್ತಿದ್ದರು. ನನಗೆ ಕುತೂಹಲ ಎನಿಸಿತ್ತು. ಉಮ್ಮಾತುಮ್ಮರ ಹೆಣ್ಮಕ್ಕಳಲ್ಲಿ ಇಬ್ಬರು ಆ ಯುವಕರ ತಾಯಂದಿರು. ನಾನು ಒಬ್ಬನನ್ನು ನಿಲ್ಲಿಸಿ ಕೇಳಿದೆ ''ಅಲ್ಲೇನಿದೆ ನಿಮ್ಮ ಕುತೂಹಲ ತಣಿಸುವಂತದ್ದು ?' ಆತ ನಿರಂಬಳವಾಗಿ ಹೇಳಿದ. ''ಟಿ.ವಿ.ಯಲ್ಲಿ ಒನ್‌ಡೇ ಕ್ರಿಕೆಟ್ ಮ್ಯಾಚ್ ಇದೆ'' ನನಗೆ ಜಿಗುಪ್ಸೆ ಹುಟ್ಟಿತು ಯುವಕರಲ್ಲಿ. ಯುವಕರ ಮನೋಭಾವನೆ ಈ ಕ್ಷಣದಲ್ಲಿ ಏನಿರಬಹುದು. ''ಯಾಕಾದರೂ ಅಜ್ಜಿ ಈ ದಿನವೇ ಸಾಯಬೇಕಿತ್ತು.'' ಎಂದಿರ ಬಹುದು. ಹಾಯಾಗಿ ಟಿ.ವಿ. ನೋಡ್ಕೊಂಡು ಮೋಜು ಅನುಭವಿಸಬಹುದಾಗಿತ್ತು.

ಹೊರಗೆ ಕಾರು ನಿಂತ ಸದ್ದು. ನಾನು ಬಂದವರ್‍ಯಾರಿಬಹುದೆಂದು ಕುತೂಹಲ ಗೊಳ್ಳುವ ವೇಳೆಗೆ ಒಬ್ಬಾತ ಹಿರಿಯರು ನನ್ನನ್ನೇ ಕರೆದುಬಿಟ್ಟರು. ''ನಿನಗೊಂದು ಸಣ್ಣ ಕೆಲಸ ಇದೆ. ಫಕ್ಕನೆ ಒಂದು ಕಫಾನ್ ಹೊಲಿಸಿಕೊಂಡು ಬಂದ್ಬಿಡು. ಹಾಗೇ

ಒಂದಷ್ಟು ಕರ್ಪೂರ''... ಅದಕ್ಕೆ ಹಣ ಯಾರಲ್ಲಿ ಕೇಳಲಿ ಎಂಬ ತಲೆನೋವು ನನಗೆ. ಒಪ್ಪಿಗೆ ನೀಡಿದ್ದೆ ಕಫಾನ್ ತರುವ ಕೆಲಸಕ್ಕೆ... ಸದ್ಯ ನನ್ನ ಹಣದಿಂದಲೇ ಹೊಲಿಸಿಕೊಂಡು ಬಂದರಾಯ್ತು. ನಂತರ ಜ್ಞಾಪಕಕ್ಕೆ ಮುಟ್ಟಿಸಿದರಾಯ್ತು ಎಂದುಕೊಂಡು ಅತ್ತ ಹೆಜ್ಜೆ ಹಾಕಿದೆ. ಕಾರಿನಲ್ಲಿ ಉಮ್ಮಾತುಮ್ಮರ ಉಳಿದಿಬ್ಬರು ಗಂಡು ಮಕ್ಕಳು ಬಂದಿದ್ದರು.

ಕೆಲವು ದಿನಗಳ ಹಿಂದೆ ನಾನೊಮ್ಮೆ ಆಕೆಯಲ್ಲಿ ಕೇಳಿದೆ. ನನ್ನ ದೃಷ್ಟಿ ಅವರ ಕಿವಿ ಮತ್ತು ಕೊರಳಲ್ಲಿ ಇದ್ದ ಚಿನ್ನದ ಒಡವೆಗಳ ಕಡೆಗೆ ಇತ್ತು.

''ಅಜ್ಜಿ... ನಿಮ್ಮ ಮೈಮೇಲೆ ಇಷ್ಟೊಂದು ಒಡವೆ ಇದೆಯಲ್ಲಾ, ಇದನ್ನೆಲ್ಲಾ ಮಾಡಿಸಿಕೊಟ್ಟವರು ನಿನ್ನ ಮಕ್ಕಳೇ !''

''ನೋಡು ಮಗೂ... ನನ್ನ ಗಂಡು ಮಕ್ಕಳನ್ನು ನಾನು ಹೆತ್ತು ಸಾಕಿ ಸಲಹಿದೆ ಅಷ್ಟೇ. ಈಗ ನನ್ನ ಮೈಮೇಲಿರುವ ಹದಿನೈದು ಪವನು ಬಂಗಾರದಲ್ಲಿ ಎಲ್ಲವೂ ನಾ ಮದುವೆಯಾಗಿ ಬಂದಾಗಲೇ ಇತ್ತು. ಈಚೆಗೆ ನನ್ನ ಮಗ ದೊಡ್ಡವ ಎಲ್ಲವನ್ನೂ ಕರಗಿಸಿ ಬೇರೆಯೇ ಹೊಸದನ್ನು ಮಾಡಿಸಿಕೊಟ್ಟ. ಹೊಸದೇನೋ ಹಿಡಿಸಿತು. ಆದರೆ ಗುಟ್ಟಿನಲ್ಲಿ ತೂಗಿ ನೋಡಿದಾಗ ಇದ್ದುದು ಹನ್ನೆರಡು ಪವನೇ.''

ಈತ ಈಗ ಸಂಭಾವಿತನಂತೆ ತನ್ನನ್ನು ತಾನೇ ಹೊಗಳಿಕೊಳ್ಳುತ್ತಿದ್ದ. ತಾಯಿಯ ಮೂರು ಪವನಿನಷ್ಟು ಚಿನ್ನವನ್ನು ಮುಕ್ಕಿದ ಈತ ಎಷ್ಟು ಉತ್ತಮ ಎಂಬುವುದು ನನಗೆ ಗೊತ್ತಿತ್ತು. ಆಕೆಯ ಮೂರು ಗಂಡು ಮಕ್ಕಳಲ್ಲಿ ಯಾರೂ ಸರಿಯಾಗಿ ಆಕೆಯನ್ನು ಆರೈಕೆ ಮಾಡಿದ್ದಿಲ್ಲ. ಈ ಮುದುಕಿ ಸತ್ತರೆ ಅದೆಷ್ಟೋ ಕ್ಷೇಮ ಎಂದು ನಂಬಿದ್ದರು.

ಆದರೆ ಈ ಅಜ್ಜಿಗೂ ನಮ್ಮ ಮನೆಗೂ ಅನ್ಯೋನ್ಯ ನಂಟು. ಮನಸ್ಸಿಗೆ ಬೇಸರವೆನಿಸಿದಾಗ ಅಥವಾ ನೋವಿನ ಮಾತುಗಳನ್ನು ಕೇಳಿದಾಗ ಈಕೆ ನಮ್ಮ ಮನೆಗೆ ಬಂದು ಒಂದಷ್ಟು ಹೊತ್ತು ಉಳಿದು ನನ್ನ ತಾಯಿ, ಅಕ್ಕಳ ಒಲ್ನುಡಿಗಳಿಂದ ಸಂತೃಪ್ತರಾಗಿ ಮರಳುತ್ತಿದ್ದರು. ನನ್ನ ಅಕ್ಕಳ ಗಂಡ ವಿದೇಶದಲ್ಲಿದ್ದ. ಉಮ್ಮಾತುಮ್ಮರಿಗೆ ಅದು ಸರಿ ಕಾಣಿಸಿರಲಿಲ್ಲ. ಆಕೆ ನನ್ನ ತಾಯಿಯೊಡನೆ ಯಾವತ್ತೋ ಒಮ್ಮೆ ಹೇಳಿದ ಮಾತಿದು. ''ಈ ಹೆಣ್ಮಕ್ಕಳನ್ನು ವಿದೇಶಕ್ಕೆ ಹೋಗುವ ಗಂಡು ಮಕ್ಕಳಿಗೆ ಮದುವೆ ಮಾಡಿಕೊಡಬಾರದು. ಆತ ಅಲ್ಲಿ, ಈಕೆ ಇಲ್ಲಿ... ಈಕೆ ಏನು ಸುಖಪಟ್ಟಾಳು ಹೇಳು.. ಗಂಜಿಯೇ, ತೆಳಿಯೇ ಇಲ್ಲೇ ನಗು ನಗುತ್ತಾ ಒಟ್ಟಾಗಿ ಇರುವುದೇ ಬದುಕು. ಹೆಂಡತಿಯನ್ನು ಇಲ್ಲಿ ಒಂಟಿಯಾಗಿಸಿ ಆತ ಅಲ್ಲಿ ಎಷ್ಟು ದುಡ್ಡು ಮಾಡಿದರೇನು ? ಆ ದುಡ್ಡು ಅವಳ ಬೆಂದ ಹೃದಯ, ಹರೆಯವನ್ನು ತಂಪುಗೊಳಿಸುವುದೇ.''

ಕಫಾನ್ ಬಟ್ಟೆಯನ್ನು ಹೊಲಿದುಕೊಟ್ಟ ದರ್ಜಿ ಹೇಳಿದ. ''ನಾನು ದುಡ್ಡು ಕೇಳುವುದಿಲ್ಲ. ಅಂತಹಾ ಒಳ್ಳೆಯ ಹೆಂಗಸು ಉಮ್ಮಾತುಮ್ಮ.. ನನ್ನ ತಾಯಿಗೂ

ಆಕೆಗೂ ಒಂದೇ ಪ್ರಾಯ. ನನ್ನ ಹೆತ್ತಮ್ಮನಂತೆಯೇ ಇದ್ದರು. ಆದರೆ ಆತನ ಆಕೆಯ ಮಕ್ಕಳ ಜಿಪುಣತನಕ್ಕಾಗಿ ನಾನು ದುಡ್ಡು ತೆಗೆದುಕೊಳ್ಳಬೇಕಾಗುತ್ತೆ.''

ನಾನು :''ಎಷ್ಟು ಕೊಡಲಿ ದುಡ್ಡು''

ಆತ : ''ಮೂವತ್ತು ರೂಪಾಯಿ''

ನಾನು ಹತ್ತರ ಮೂರು ನೋಟು ತೆಗೆದುಕೊಟ್ಟೆ.

ನಾನು ಕಫಾನ್ ಮತ್ತು ಕರ್ಪೂರದೊಂದಿಗೆ ಮರಳಿ ಬಂದಾಗ ಆಗ ತಾನೇ ಬಂದಿದ್ದ ಕೊನೆಯ ಇಬ್ಬರು ಅಳುವ ಯತ್ನ ಮಾಡುತ್ತಿದ್ದರು. ಹಸಿರು ಬಣ್ಣದ ಅಂಬಾಸಿಡರ್ ಕೆಂಪು ದೂಳನ್ನು ಮೆತ್ತಿಕೊಂಡು ನೆರಳಲ್ಲಿ ನಿಂತಿತ್ತು. ಬಿಸಿಲು ತುಂಬಾ ಪ್ರಖರವಾಗಿತ್ತು. ಕೆಲವರು ಆಗಸದ ಕಡೆ ದೃಷ್ಟಿ ನೆಟ್ಟರು. ಜೂನ್ ಆರಂಭವಾಗಿದ್ದರೂ ಇನ್ನೂ ಆಗಸದಲ್ಲಿ ಮೋಡದ ಸುಳಿವಿರಲಿಲ್ಲ. ಬಿರುಕು ಬಿಟ್ಟ ಭೂಮಿ, ಬತ್ತಿ ಹೋದ ಬಾವಿಯ ಬಗ್ಗೆ ಖೇದ ವ್ಯಕ್ತಪಡಿಸುತ್ತಾ ದಿನ ದಿನವೂ ಹದಗೆಡುವ ಬದುಕಿನ ಬಗ್ಗೆ ಮರುಕು ವ್ಯಕ್ತ ಪಡಿಸಿದಳು.

ಕೆಲವರು ಮದುವೆಯಲ್ಲಿ ತಾವು ಪಾಲ್ಗೊಳ್ಳುತ್ತಿದ್ದೇವೆ ಎನ್ನುವ ರೀತಿಯಲ್ಲಿ ಹೊಸ ಬಟ್ಟೆ ಧರಿಸಿಕೊಂಡು ಬಂದಿದ್ದರು. ಮುಂದಿನ ಏರ್ಪಾಡಿನಲ್ಲಿ ಸ್ವಲ್ಪವಾದರೂ ಪಾಲುಗೊಳ್ಳಬೇಕು ಎನ್ನುವ ಉತ್ಸಾಹದಿಂದ ಹಿತ್ತಿಲ ಕಡೆ ಬಂದೆ. ಕೆಲವು ಗಂಡಸರು ಸೋಗೆಯ ತಡಿಕೆ ನಿರ್ಮಿಸಿ ಮಯ್ಯತ್ತನ ಸ್ನಾನಕ್ಕೆ ಏರ್ಪಾಟು ಮಾಡುತ್ತಿದ್ದರು.

ನಾನು ದೃಷ್ಟಿ ಹರಿಸಿದಾಗ ನಾಲ್ಕೈದು ತರುಣಿಯರು ಕಾಣಿಸಿಕೊಂಡು ನನ್ನ ಹರೆಯದ ಕಾವು ತೀವ್ರವಾಯಿತು. ಕೆಲವೊಂದು ಕ್ಷಣಗಳಲ್ಲಿ ನಾನೂ ದೌರ್ಬಲ್ಯ ಗೊಳ್ಳುತ್ತಿದ್ದೇನೆ ಎನ್ನುವ ಭಾಸವಾಯಿತು. ಆ ತರುಣಿಯರ ಸುಪುಷ್ಟ ಆಕೃತಿ ಕಂಡು ಒಳಗೆ ಉಮ್ಮಾತುಮ್ಮ ಮಯ್ಯತ್ ಆಗಿ ಮಲಗಿದ್ದಾರೆ ಎಂಬ ನೆನಪೂ ಜಾರಿ ಶಾಹಿದಾಳ ನೆನಪು ಕಾಡತೊಡಗಿತು.

ನನ್ನ ಚಿತ್ತವನ್ನು ಸರಿಪಡಿಸಿಕೊಂಡೆ. ಹೆಂಗಸರಲ್ಲಿ ನಾಲ್ಕೈದು ಮಂದಿ ಗುಂಪಾಗಿ ತಮ್ಮ ಮೈಮೇಲಿದ್ದ ಒಡವೆಗಳ ಪ್ರದರ್ಶನದಲ್ಲಿ ತೊಡಗಿದ್ದರು.

ಬಾವಿಯಿಂದ ನೀರು ಸೇದಿ ಹಂಡೆ ತುಂಬುವ ಕೆಲಸಕ್ಕೆ ಕೈ ಹಾಕಿದೆ... ಹಂಡೆ ತುಂಬುವ ವೇಳೆಗೆ ಆಚೆ ಕಡೆ ಮಸೀದಿಯಿಂದ ಮಾಲ್ವಿಯವರ ಆಗಮನ ವಾಯಿತು. ಅವರ ಹಿಂದೆಯೇ ನಾಲ್ಕೈದು ಯುವಕರು ಶವದ ಮಂಚವನ್ನು ಹೆಗಲಲ್ಲಿ ಹೊತ್ತುಕೊಂಡು ಬಂದು ಇಳಿಸಿದರು. ಹೊತ್ತು ತಂದ ಭಾರದಿಂದ ಅವರು ವಿಪರೀತ ಏದುಸಿರುಬಿಡುತ್ತಿದ್ದರು. ಬಹಳಷ್ಟು ಭಾರವಿದ್ದ ಆ ಶವದ ಮಂಚ ಅವರ ದೇಹವಿಡೀ ಬೆವರನ್ನು ಹೊಮ್ಮಿಸುತ್ತಿತ್ತು.

ಇನ್ನು ಕೆಲವು ಕ್ಷಣಗಳಲ್ಲಿ ಉಮ್ಮಾತುಮ್ಮರ ಈ ನಿರ್ಜೀವ ದೇಹ ಕೊನೆಯ ಸ್ನಾನ

ಮುಗಿಸಿ ಮಣ್ಣಿನಡೆ ಸೇರಿ ಗೋರಿಯಾಗಿಬಿಡುತ್ತೆ. ನಂತರ ಮಾಂಸವೆಲ್ಲಾ ಕಳಚಿಕೊಂಡು ಮಣ್ಣಿನಲ್ಲಿ ಬರೀ ಅಸ್ಥಿಪಂಜರ ಗೋರಿಯೊಳಗೆ ಶಾಶ್ವತವಾಗಿ ಉಳಿದುಬಿಡುತ್ತೆ.

ನಾನು ಮತ್ತೊಮ್ಮೆ ಹೆಣದ ಬಳಿ ಸಾಗಿದೆ... ಉಮ್ಮಾತುಮ್ಮರ ಕೊನೆಯ ಸೊಸೆಯಂದಿರಿಬ್ಬರು ಶವದ ಬಳಿ ಕುಳಿತು ರೋದಿಸುತ್ತಿದ್ದರು. ಹೆಣದ ತುಟಿ ಸ್ವಲ್ಪವೇ ತೆರೆದುಕೊಂಡಿತ್ತು.

ಉಮ್ಮಾತುಮ್ಮರ ಬದುಕಿನ ಪುಟಗಳನ್ನು ತೆರೆದು ನೋಡಿದಾಗ ಹೇಳಲೇಬೇಕಾದ ಕೆಲವೊಂದು ಸಂಗತಿಗಳು ಇವೆ.

ನನ್ನ ತಾಯಿ ನನ್ನನ್ನು ಬಸಿರಲ್ಲಿ ಹೊತ್ತಿದ್ದಾಗ, ದಿನ ತುಂಬಿ ನೋವು ಕಾಣಿಸಿ ಕೊಂಡು ಆಕೆ ಕಷ್ಟಪಡುತ್ತಿದ್ದಾಗ ಉಮ್ಮಾತುಮ್ಮಗೆ ವಿಪರೀತ ಟೈಫಾಯಿಡ್ ಜ್ವರ - ಗರ್ಭಿಣಿಯರ ಪಾಲಿಗೆ ಮಾತೃ ಸ್ವರೂಪಳಾಗಿ ಹೆರುವ ಸಮಯದಲ್ಲಿ ಸುಲಭದ ಹೆರಿಗೆಯನ್ನು ನಡೆಸುತ್ತಿದ್ದರು ಉಮ್ಮಾತುಮ್ಮ... ಯಾವ ಕ್ಷಣದಲ್ಲಿ ತಾಯಿ ನೋವು ಅನುಭವಿಸುತ್ತಾ ಹೆರಲು ಕಷ್ಟಪಡುತ್ತಿದ್ದು ಸಾಯುವಂತಹ ಭೀಕರ ಸ್ಥಿತಿ ತಲುಪಿ, ಸುದ್ದಿ ತಿಳಿದ ಉಮ್ಮಾತುಮ್ಮ ತನ್ನ ಕಾಯಿಲೆಯನ್ನು ಮರೆತು ಬಹಳ ಕಷ್ಟದಿಂದಲೇ ಹೆರಿಗೆ ಮುಗಿಸಿದಳು.

ಅದು ಕಾರಣವೋ ಏನೋ ಉಮ್ಮಾತುಮ್ಮಗೆ ನನ್ನನ್ನು ಕಂಡರೆ ಬಹಳ ಪ್ರೀತಿ. ಸಣ್ಣ ಮಕ್ಕಳಿಗೆ ಬಾಟ್ಲಿ ಹಾಲನ್ನು ಕುಡಿಸುತ್ತಿದ್ದವರನ್ನು ಅವರು ಗಂಭೀರವಾಗಿ ಹೀಯಾಳಿಸುತ್ತಿದ್ದರು. "ನಿಮ್ಮ ಮೊಲೆಗಳಲ್ಲಿ ಹರಿಯುತ್ತಿರುವುದು ಅಮೃತ. ಅದನ್ನು ಬಿಟ್ಟು ಬಾಟ್ಲಿ ಹಾಲು ಕುಡಿಸುವುದು ಸ್ವಲ್ಪವೇ ಸರಿ ಅಲ್ಲ. ನಿಮ್ಮ ದೇಹದ ರಕ್ತ ಮಾಂಸದಿಂದ ಹುಟ್ಟಿದ ಮಗುವಿಗೆ ನಿಮ್ಮ ಸ್ತನಪಾನವೇ ಉತ್ತಮ ಆಹಾರ. ಸೌಂದರ್ಯ ಕೆಡುತ್ತೆ ಎಂಬ ಕಾರಣದಿಂದ ನಿಮ್ಮ ಮಗುವಿಗೆ ಅನ್ಯಾಯ ಮಾಡಬೇಡಿ ಎನ್ನುತ್ತಿದ್ದರು.

ಮಯ್ಯತ್‌ನ ಸ್ನಾನ ಮುಗಿದು ಅದನ್ನು ಸಾಗಿಸುವ ಕೊನೆಯ ಕ್ಷಣ ಹತ್ತಿರವಾದಂತೆ ಗಲಭೆ ಹಬ್ಬಿದ ಸಭೆಯಲ್ಲಿ ತುಸು ಮೌನ ಆವರಿಸಿತು. ಅದು ಕೂಡಲೇ ನಿಶ್ಯಬ್ಧವಾಗಿಬಿಟ್ಟಿತು. ಟಿ.ವಿ. ನೋಡಲು ಆಗಾಗ ಹೋಗುತ್ತಿದ್ದ ಆ ಯುವಕರಿಬ್ಬರೂ ಈಗ ಸಾವಿನ ಭೀಕರತೆ ತಟ್ಟಿದವರಂತೆ ಅಲ್ಲಿಯೇ ಗೋಡೆಗೆ ಒರಗಿ ಮೌನವಾಗಿ ನಿಂತುಬಿಟ್ಟಿದ್ದರು. ಕೊನೆಯ ಗಂಡು ಮಕ್ಕಳಿಬ್ಬರೂ ಒಂದು ಕೊನೆಯಲ್ಲಿ ಅಣ್ಣನ ಜೊತೆ ನಿಂತುಕೊಂಡು ಏನನ್ನೋ ಗುಟ್ಟೆಂಬಂತೆ ಮಾತಾಡಿ ಕೊಳ್ಳುತ್ತಿದ್ದರು. ಮೊದಲು ಒಂದು ಪಿಸುಗುಟ್ಟುವಿಕೆಯಂತೆ ಇದ್ದು ನಂತರ ಸ್ವಲ್ಪ ಗಲಭೆಯ ರೀತಿ ಕಾಣಿಸತೊಡಗಿತು. ಅದು ಕಾರಣವೋ ಏನೋ ಅತೀ ಕುತೂಹಲ

ಇದ್ದವರು ಅತ್ತ ಕಡೆ ಧಾವಿಸಿದಾಗ ನಾನೂ ಅವರನ್ನು ಹಿಂಬಾಲಿಸಿದೆ.

ಕಿರಿಯಾತ ಹೇಳುತ್ತಿದ್ದ.... ''ತಾಯ ಮೈಮೇಲೆ ಎಷ್ಟು ಒಡವೆಗಳಿವೆಯೋ ಅದು ಸಮನಾದ ಮೂರು ಪಾಲಾಗಬೇಕು.''

ದೊಡ್ಡವ : ''ಅದು ಹೇಗೆ ಸಾಧ್ಯವಾಗುತ್ತೆ. ತಾಯಿ ಹೆಚ್ಚಿನ ದಿನಗಳನ್ನು ನನ್ನ ಮನೆಯಲ್ಲಿಯೇ ಕಳೆದವಳು. ಅವರ ಊಟ ತಿಂಡಿಯ ಖರ್ಚನ್ನು ಲೆಕ್ಕಿಸಿದಾಗ ಅದೆಷ್ಟೋ ಆಗುತ್ತೆ. ಆ ಖರ್ಚಿನ ದುಡ್ಡು ನಾನು ಕೇಳುವುದಿಲ್ಲ. ಆದರೆ ಒಡವೆಯಲ್ಲಿ ಒಂದು ಚೂರನ್ನೂ ನಿಮಗೆ ಕೊಡೊಲ್ಲ.''

ಮಧ್ಯದಾತ : ''ಕೊಡೊಲ್ಲ ಎನ್ನುವ ಮಾತನ್ನು ನಾವು ಕೇಳೊಲ್ಲ. ನಾವು ತಾಯಿಗೆ ಹೇಗೆ ಮೂರು ಗಂಡು ಮಕ್ಕಳೋ ಹಾಗೇ ಸಮನಾದ ಮೂರು ಪಾಲಿನ ಅಗತ್ಯವಿದೆ.''

ದೊಡ್ಡವ : ''ನೀವೇನೂ ಬದುಕಿದ್ದಾಗ ಆಕೆಗೆ ಒಂದು ಚಿನ್ನದ ಒಡವೆ ಯನ್ನಾದರೂ ಹಾಕಿದ್ದೀರಾ ?''

ಕಿರಿಯಾತ : ''ನೀನು ಹಾಕಿದ್ದು ಏನೂ ಇಲ್ಲ. ತಾಯಿಯ ಮೈಮೇಲಿದ್ದ ಒಡವೆ ತಂದೆಯ ಕಾಲದಿಂದಲೂ ಇತ್ತು (ನಾನು ಹುಟ್ಟಿದ ಕ್ಷಣದಿಂದಲೂ).''

ಹೀಗೆ ಅವರು ವೈರಿಗಳಂತೆ ಚರ್ಚಿಸುತ್ತಿದ್ದರು. ನನಗೆ ಹೇಸಿಗೆ ಎನಿಸಿತು. ಆ ಯುವಕರಿಬ್ಬರೂ ಲಗುಬಗನೆ ಅಲ್ಲಿಗೇ ಬಂದುಬಿಟ್ಟರು.

ಅದರಲ್ಲಿ ಒಬ್ಬಾತ ಸ್ವಲ್ಪ ಲಂಬೂ ಆಗಿದ್ದಾತ ಅಮಿತಾಬ್‌ನಂತೇ ಹೇರ್ ಸ್ಟೈಲ್ ಮಾಡಿದ್ದವ ಸೊಂಟಕ್ಕೆ ಎರಡೂ ಕೈಯೂರಿ ಗಡಸು ಧ್ವನಿಯಲ್ಲಿ ಹೇಳಿದ, ''ನೀವು ಹೀಗೆ ಎಚ್ಚಾ ಜನರಂತೆ ವರ್ತಿಸಿದರೆ ನಾವು ನಮ್ಮ ತಾಯಂದಿರ ಪಾಲನ್ನು ಕೇಳಬೇಕಾಗುತ್ತೆ.''

ಆ ಮಾತಿನಿಂದ ಮೂವರೂ ಸ್ತಬ್ಧಗೊಂಡರು. ನನಗೆ ಅದರಿಂದ ಸ್ವಲ್ಪ ಹಾಯೆನಿಸಿತು. ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದ ಈ ಮೂವರೂ ತಾಯಿಯ ಹೆಣವನ್ನು ಎದುರಿಗಿಟ್ಟುಕೊಂಡು ಮೂರನೇ ದರ್ಜೆಯ ವ್ಯಕ್ತಿಗಳಂತೆ ಕೀಳಾಡುತ್ತಿದ್ದಾಗ ಆ ಯುವಕರಿಬ್ಬರೂ ನ್ಯಾಯವಾಗಿಯೇ ಛಳಕು ಮುಟ್ಟಿಸಿದರು.

ಕೆಲವು ದಿನಗಳ ಹಿಂದೆ ಒಂದು ದಿನ ಈ ಮನೆಯಲ್ಲಿ ಬಹಳಷ್ಟು ಗಲಭೆಯೆದ್ದಿತ್ತು. ಈ ಮನೆಯ ಒಬ್ಬ ಹುಡುಗ ಒಂದು ಗಾಬರಿಯ ಧ್ವನಿಯಿಂದ ಹೇಳಿದ್ದ... ''ಯಾಕೋ ಗೊತ್ತಿಲ್ಲ. ಮನೆಯಲ್ಲಿ ತುಂಬಾ ಗಲಾಟೆಯಾಗ್ತಿದೆ. ಉಮ್ಮ ಅಜ್ಜಿಗೆ ತುಂಬಾ ಬೈಯುತ್ತಿದ್ದಾಳೆ.

ನಾನು ಕೇಳಿದೆ, ''ಅಜ್ಜಿ ಏನು ಮಾಡ್ತಿದ್ದಾರೆ?''

ಆತ : ''ಹೀಗೆ ಸುಮ್ಮನೆ ಮೌನಿಯಾಗಿ ಕುಳಿತಿದ್ದಾರೆ.''

ನನ್ನ ತಾಯಿ : ''ಹೋಗಿ ನೋಡಿ ಅವಳಿಗೆ ಸ್ವಲ್ಪ ಬುದ್ಧಿ ಹೇಳಿಬಿಡ್ತೇನೆ.''

ನಾನು ಹೋಗುವುದು ಧರ್ಮವಲ್ಲವೆಂದು ಸುಮ್ಮನೆ ಚಿಂತಿಸುತ್ತಾ ಕುಳಿತುಬಿಟ್ಟೆ. ಅಜ್ಜಿ ಹೀಗೇ ಅದೆಷ್ಟೋ ಸಲ ತನ್ನ ಸೊಸೆಯಿಂದ ಘಾಸಿಗೊಂಡಿರಬಹುದು. ಆದರೆ ಹೀಗೇ ಎಂದೇ ಆಗಲಿ ಉಮ್ಮಾತುಮ್ಮ ನಮ್ಮ ಮನೆಯಲ್ಲಿ ಬಂದು ದೂರಿ ಕೊಂಡಿದ್ದಿಲ್ಲ. ನಮ್ಮಲ್ಲಿ ಎಷ್ಟೇ ಆತ್ಮೀಯತೆ ಬೆಳೆಸಿಕೊಂಡಿದ್ದರೂ ನಮ್ಮ ಮನೆಯಲ್ಲಿ ಒಂದು ರಾತ್ರಿಯನ್ನೂ ಕಳೆದ ಹೆಂಗಸಲ್ಲ. ''ಇನ್ನೊಬ್ಬರ ಋಣದಲ್ಲಿ ಬದುಕ ಬಯಸುವ ಆಸೆ ನನಗಿಲ್ಲ'' ಎನ್ನುತ್ತಿದ್ದ ಆಕೆ ಮತ್ತೆ ಮುಂದುವರಿದು ಹೇಳುತ್ತಿದ್ದರು. ''ನಾನೆಷ್ಟೋ ಸಾವುಗಳನ್ನು ಕಂಡಿದ್ದೇನೆ. ನಾನೇ ಹೆರಿಗೆ ಮಾಡಿಸಿದ ಮಕ್ಕಳು ಮುಂದೆ ಬೆಳೆದು ನನ್ನೆದುರಲ್ಲೇ ಸಾವನ್ನು ಕಂಡಿದ್ದಾರೆ. ನಾನು ಬದುಕನ್ನು ಬಹಳ ಪ್ರೀತಿಸುತ್ತೇನೆ. ಈ ನಶ್ವರ ಬದುಕಿನಲ್ಲಿ ಯಾವ ಕ್ಷಣ ಸಾವು ಅಪ್ಪಳಿಸಿಬಿಡುತ್ತೋ ತಿಳಿದವರಾರು. ಸಾಯುವ ಕ್ಷಣದಲ್ಲಿ ನಾವು ಇನ್ನೊಬ್ಬರ ಋಣ ಹೊತ್ತುಕೊಂಡರೆ ಅದರ ಪಾಪದ ಹೊಣೆ ನಮ್ಮ ಸಾವಿನ ಹಿಂದೆಯೇ ಬೆನ್ನಿಗಂಟಿಕೊಂಡು ಅಖಿರತ್‌ನಲ್ಲಿ ಸುಖ ಸಿಗಲಾರದು.''

ಅಲ್ಲಿಗೆ ಹೋದ ತಾಯಿ ಎಷ್ಟೋ ಸಮಯದ ನಂತರ ಮರಳಿ ಬಂದು ಹೇಳತೊಡಗಿದರು.

''ಎಂತಹಾ ದುಷ್ಟ ಹೆಣ್ಣು ಆಕೆ... ತನ್ನ ತಾಯಿಯೆಂದೂ ತಿಳಿದುಕೊಂಡು ಹಾಗೆ ಪೂಜ್ಯ ಭಾವನೆ ಬೆಳೆಸಿಕೊಳ್ಳಬೇಕಾಗಿದ್ದ ಆಕೆ ಮಾತಾಡಿದ್ದೇನು... ಮಗು ಜೋರು ಅಳುತ್ತಿತ್ತು. ಹೆತ್ತ ತಾಯಿ ಆಕೆ ಇರಲಿಲ್ಲ. ಉಮ್ಮಾತುಮ್ಮರಿಗೆ ಕಸಿವಿಸಿ. ಮನೆಯೆಲ್ಲಾ ಹುಡುಕಿದರೂ ಒಂದು ತೊಟ್ಟು ಹಾಲಿರಲಿಲ್ಲ. ಯೋಚಿಸಿ ಒಂದು ಕುಪ್ಪಸ ಸರಿಸಿ ತನ್ನ ಬತ್ತಿದ ಮೊಲೆಯನ್ನೇ ಮಗುವಿನ ಬಾಯಿಗಿಟ್ಟು ಅದು ಸುಮ್ಮನಾಗುವಂತೆ ಮಾಡುವ ಯತ್ನದಲ್ಲಿ ಸ್ವಲ್ಪವೇ ಗೆಲುವು ಸಂಪಾದಿಸಿದಾಗ ಧಾವಿಸಿ ಬಂದ ಆಕೆ, ಅತ್ತೆಯ ಕೈಯಿಂದ ಮಗುವನ್ನು ಕಸಿದುಕೊಂಡು ಅತ್ತೆಯನ್ನು ಕೆಳಗೆ ದೂಡಿದ್ದಳು. ತ್ರಾಣವಿಲ್ಲದ ಮುದುಕಿ ಕೆಳಗೆ ಬಿದ್ದು ಕೈಗಳಿಗೆಲ್ಲಾ ಪೆಟ್ಟು ಮಾಡಿಕೊಂಡಿತ್ತು. ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೇ ಮುದುಕಿ ಎದ್ದು ಸುಮ್ಮನೆ ಮೌನವಾಗಿ ಕುಳಿತಿತ್ತು. ನಾನು ಹೋದಾಗ ನಿರ್ಲಿಪ್ತಳಂತೆ ಕುಳಿತಿದ್ದ ಉಮ್ಮಾತುಮ್ಮ ಯಾವುದನ್ನೂ ಹೇಳಲು ಇಷ್ಟಪಡಲಿಲ್ಲ. ನಾನೇ ಹಠಹಿಡಿದ ಮೇಲೆ ಮುದುಕಿ ಬಾಯ್ಬಿಟ್ಟು ಸಂಗತಿಗಳನ್ನು ಕಡಿಮೆ ಮಾತಿನಲ್ಲಿ ಹೇಳಿತು.''

ತಾಯಿ ಹೇಳಿದ ಮಾತಿನ ನಂತರ ಇದಕ್ಕೆ ಕಾರಣವೇನಿರಬಹುದೆಂದು ನಾನು ಯೋಚಿಸತೊಡಗಿದೆ.

ಆಕೆಯ ಅಂದರೆ ಉಮ್ಮಾತುಮ್ಮರ ದೊಡ್ಡ ಸೊಸೆ ತನ್ನ ಎರಡನೆಯ ಗರ್ಭ

ಧರಿಸಿ ಹೆರಿಗೆಯ ನೋವು ಕಾಣಿಸಿಕೊಂಡಾಗ ಉಮ್ಮಾತುಮ್ಮ ತಾವೇ ಹೆರಿಗೆ ಮಾಡಲು ಮುಂದಾದರು. ಅವರಿಗೆ ಆ ಕ್ಷಣದಲ್ಲಿ ಸುಲಭವಾಗಿ ಮಾಡಬಹುದಾದ ಹೆರಿಗೆ ಯಾಕೋ ಬಹಳಷ್ಟು ಕಷ್ಟ ಉಂಟುಮಾಡಿತು. ಅವರು ಬಹಳಷ್ಟು ಗಾಬರಿಗೊಂಡರು. ಕಾರಣ ಬಸಿರಲ್ಲಿ ಮಗು ಸತ್ತಿತ್ತು. ಅದು ಹುಟ್ಟುವ ಮೊದಲೇ ನಾಶವಾಗಿತ್ತು.

ತನ್ನ ಮಗುವನ್ನು ಹೆರಿಗೆಯಲ್ಲಿ ಬೇಕಾಗಿಯೇ ಕೊಲೆ ಮಾಡಿದರೆಂಬ ಸುಳ್ಳು ಆಪಾದನೆಯನ್ನು ಉಮ್ಮಾತುಮ್ಮರ ಮೇಲೆ ಹೊರಿಸಿ ಆ ಕ್ಷಣದಿಂದ ಕೀಳಾಗಿ ದ್ವೇಷಿಸಲಾರಂಭಿಸಿದಳು ಸೊಸೆ.

ನಾನು ಮದುವೆಯಾಗಬೇಕೆಂದು ನಿರ್ಧರಿಸಿದಾಗ ಶಾಹಿದಾಳನ್ನು ಸೂಚಿಸಿದ ವ್ಯಕ್ತಿ ಉಮ್ಮಾತುಮ್ಮ ದೂರದ ಕೊಪ್ಪದ ಹುಡುಗಿ ಉಮ್ಮಾತುಮ್ಮನಿಗೆ ದೂರದ ಸಂಬಂಧಿಯೊಬ್ಬರ ಮಗಳು. ಹುಡುಗಿ ಚೆಲುವೆ, ಚುರುಕು ಮಾತಿನವಳು. ದೇವಲೋಕದಿಂದ ಬಂದ ಅಪ್ಸರೆ ಎಂದೆಲ್ಲಾ ನನ್ನನ್ನು ಕಾಡಿಸಿ, ದಿನ ನೂಕುವುದು ಕಷ್ಟವಾದ ಈ ಕಾಲದಲ್ಲಿ ಹದ ಮಿತಿಯರಿತು ಖರ್ಚು ಮಾಡುವುದರಲ್ಲಿ ಹೇಳಿ ಮಾಡಿಸಿದ ಹೆಣ್ಣು ಎಂದು ನನ್ನನ್ನು ಅವಳ ಬಗ್ಗೆಯೇ ಕಾಡುವಂತೆ ಮಾಡಿ, ಕೊನೆಯಲ್ಲಿ ಆಕೆಯೇ ನನ್ನ ಪತ್ನಿಯಾಗುವಂತೆ ಮಾಡಿದ್ದರು. ಅವಳಿಗೆ ಅಪೂರ್ವ ಚೆಲುವಿತ್ತು. ಒಂದು ಶುಭ ದಿನದಂದು ನಮ್ಮಿಬ್ಬರ ಮದುವೆಯಿತ್ತು. ಆದರೆ ಅದನ್ನು ಕಾಣುವ ಮೊದಲೇ ಆ ಅಜ್ಜಿ, ಪ್ರಾಣ ಕಳೆದುಕೊಂಡು ಶವವಾಗಿದ್ದರು.

ಉಮ್ಮಾತುಮ್ಮ ತೀರಿಕೊಂಡ ಕ್ಷಣದಲ್ಲಿ ಆಕೆಯ ದೊಡ್ಡ ಮಗ ಅಬ್ದುಲ್ಲಾ ತಾಯ, ಕಿವಿ, ಕೊರಳಲ್ಲಿದ್ದ ಒಡವೆಗಳನ್ನು ತೆಗೆದು ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟಿದ್ದ. ಅದು ತನ್ನದೇ ಆಗಿಬಿಡುವುದೆಂಬ ಧೈರ್ಯದಿಂದ. ಅನಂತರ ತಾಯಿಯ ಸಾವಿನಿಂದ ಘಾಸಿಗೊಂಡವನಂತೆ ಮೌನವಾಗಿ ಕುಳಿತುಬಿಟ್ಟಿದ್ದ.

'ಮಯ್ಯತ್ತಿನ ಕೊನೆಯ ದರ್ಶನ ಮಾಡುವವರು ಮಾಡಿಬಿಡಿ' ಎಂದು ಮೌಲ್ವಿಗಳು ಅಲ್ಲಿದ್ದವರನ್ನು ಉದ್ದೇಶಿಸಿ ಹೇಳಿದರು. ಒಮ್ಮೆ ನೋಡಿದವರು ಮತ್ತೊಮ್ಮೆ ನೋಡಲೇಬೇಕೆಂದು ಹೆಣದ ಸುತ್ತಲೂ ಮುತ್ತಿಕೊಂಡರು. ಒಳಗೆ ಹೆಂಗಸರ ಅಳು ಜಾಸ್ತಿಯಾಯ್ತು.

ಮೌಲ್ವಿಗಳು ಆಕೆಯ ಮೂವರೂ ಗಂಡು ಮಕ್ಕಳನ್ನು ಹತ್ತಿರ ಕರೆದು ''ಇನ್ನು ಹೊರಡೋಣ'' ಅಲ್ಲವೇ ? ಎಂದು ಪ್ರಶ್ನಿಸಿದರು. ದೊಡ್ಡವ ''ಆಗಲಿ'' ಎಂದ. ಆದರೆ ಫಕ್ಕನೆ ತುಟಿ ತೆರೆದು ಕಿರಿಯಾತ ''ಆದರೆ ಒಂದು ಇತ್ಯರ್ಥ ಆಗಬೇಕು ಮೌಲ್ವಿಗಳೇ'' ಅಂದ.

ಮೌಲ್ವಿಗಳು : ''ಏನದು ಈ ಸಮಯದಲ್ಲಿ.''

ಮಧ್ಯದಾತ : ''ತಾಯಿಯ ದೇಹದ ಮೇಲೆ ಇದ್ದ ಒಡವೆಗಳು ಮೂರು ಸಮಪಾಲು. ಇದನ್ನೇ ನೀವು ಇತ್ಯರ್ಥ ಮಾಡಿಬಿಡಬೇಕು.''

ದೊಡ್ಡವ : ''ಇಲ್ಲ, ಮೌಲ್ವಿಗಳೇ ಅದೆಲ್ಲ ನನ್ನದೇ.''

ಮೌಲ್ವಿ : ''ನೀವು ಮೂವರೂ ಆಕೆಯ ರಕ್ತ ಮಾಂಸ ಹಂಚಿ ಹುಟ್ಟಿದವರು. ಯಾತನೆಯ ಮೇಲೆ ಯಾತನೆಯನ್ನು ಅನುಭವಿಸಿ, ಆಕೆ ನಿಮ್ಮನ್ನು ತಲಾ ಒಂಭತ್ತು ತಿಂಗಳು ನಿಮ್ಮ ಗರ್ಭದಲ್ಲಿ ಧರಿಸಲಿಲ್ಲವೇ. ಎರಡು ವರ್ಷಗಳ ಕಾಲ ಆಕೆ ಮೊಲೆಯುಣಿಸಲಿಲ್ಲವೇ ? ಈ ಕ್ಷಣದಲ್ಲಿ ನೀವು ಹೀಗೆ ಶತ್ರುಗಳಂತೆ ವರ್ತಿಸಬಾರದು. ಇದರಿಂದ ಆಕೆ ಆತ್ಮಕ್ಕೆ ತೃಪ್ತಿ ಸಿಗೊಲ್ಲ.''

ಕಿರಿಯಾತ : ''ಆದರೂ ಮೌಲ್ವಿಗಳೇ..... ತಾಯಿಯ ಮಯ್ಯತ್ ಗೋರಿಯಾದ ನಂತರ ನೀವು ತೀರ್ಮಾನ ನೀಡುತ್ತೇವೆಂದು ಭರವಸೆ ನೀಡಿ.''

ಮೌಲ್ವಿ : ''ನಾನೊಂದು ಸತ್ಯ ಹೇಳುತ್ತಿದ್ದೇನೆ. ನಿಮ್ಮ ತಾಯಿ ಸಾಯುವ ಕ್ಷಣದಲ್ಲಿ ಆಕೆಯ ಮೈಮೇಲೆ ಇದ್ದುದು ನಿಜವಾದ ಚಿನ್ನದ ಆಭರಣಗಳಲ್ಲ. ಅದು ನಕಲಿ. ಆಕೆಗೆ ನಿಮ್ಮ ಸ್ವಭಾವ ಗೊತ್ತಿತ್ತು. ನೀವು ಯಾರೂ ಆಕೆಯನ್ನು ಹೆತ್ತ ತಾಯಿಯಂತೆ ನೋಡಲಿಲ್ಲ ಎಂಬ ಸತ್ಯ ಆಕೆಗೆ ಗೊತ್ತಿತ್ತು. ಆಕೆ ಮೊದಲೇ ನನ್ನನ್ನು ಭೇಟಿ ಮಾಡಿ ತನ್ನ ಒಡವೆಗಳನ್ನೆಲ್ಲಾ ನನ್ನ ಕೈಯಲ್ಲಿತ್ತು ಅದನ್ನು ನಾನೇ ಸ್ಥಾಪಿಸಿದ ಬಡ ಮುಸ್ಲಿಂ ಹೆಣ್ಮಕ್ಕಳ ಕಲ್ಯಾಣ ನಿಧಿಗೆ ಸೇರಿಸಿ ಆ ವಿಷಯವನ್ನು ಗುಪ್ತವಾಗಿಡುವಂತೆ ಹೇಳಿ ತಾನು ಅದೇ ರೀತಿಯ ನಕಲಿ ಒಡವೆಗಳನ್ನು ಧರಿಸಿಕೊಂಡಿದ್ದರು. ಬೇಕಾದರೆ ಆ ನಕಲಿ ಒಡವೆಗಳ ಪಾಲು ಮಾಡುವ ಭರವಸೆ ನಾ ಕೊಡುತ್ತೇನೆ.''

ಮೂವರೂ ಸ್ತಬ್ಧರಾದರು... ನಾವೆಲ್ಲ ಚಕಿತಗೊಂಡೆವು. ಹುಟ್ಟಿಕೊಂಡ ಒಂದು ಸಮಸ್ಯೆ ಅಷ್ಟೇ ವಿಚಿತ್ರವಾಗಿ ಕೊನೆಗೊಂಡಿತ್ತು.

ಮಯ್ಯತ್ತನ್ನು ತಂದು ಆ ಮೂವರೇ ಶವ ಮಂಚದಲ್ಲಿ ಮಲಗಿಸಿದಾಗ ನಾನು ಶವದ ಮಂಚಕ್ಕೆ ಒಂದು ಭುಜವಾದೆ.

# 9 ಝುಬೇದಾ

ನಾವು ನಾಲ್ವರೂ ತುಟಿ ಬಂದು ಮಾಡಿ ಬಿಮ್ಮನೆ ಕುಳಿತುಬಿಟ್ಟಿದ್ದೆವು. ಯಾರಲ್ಲೂ ಮಾತಿರಲಿಲ್ಲ. ನಾನು ಉಳಿದ ಮೂವರನ್ನು ದಿಟ್ಟಿಸಿದೆ. ಪ್ಲಾಟ್ ತಲೆಯ ವ್ಯಕ್ತಿ ಇತ್ತೀಚೆಗಷ್ಟೇ ಮಾಡಿಸಿದ್ದ ಪವರ್‌ಗ್ಲಾಸನ್ನು ಕಣ್ಣಿಂದ ಈಚೆ ತೆಗೆದು ಅಂಗಿಯ ಕೊನೆಯಿಂದ ಒರೆಸುತ್ತಿದ್ದ. ಆತನ ಕಪ್ಪು ಕಣ್ಣಿನ ಕೊನೆಯಲ್ಲಿ ಒಂದಷ್ಟು ಕಂಬನಿ ಮಡುಗಟ್ಟಿತ್ತು. ಆತ ಯಾವುದನ್ನೋ ಮಾತಾಡಲು ತುಟಿ ತೆರೆದವ ನಮ್ಮನ್ನೊಮ್ಮೆ ಗಾಢವಾಗಿ ಅಷ್ಟೇ ಗೂಢವಾಗಿ ನೋಡಿ ಮತ್ತೆ ಮಾತು ಕಳಕೊಂಡವನಂತೆ ಸುಮ್ಮನಾದ.

ಒಳಗೆ ಅಂಗಡಿಯ ಗಲ್ಲದ ಬಳಿ ಕುಳಿತ ಯುವಕ ಆಗತಾನೇ ಗಾಢವಾಗಿ ತಲೆಗೆ ಹಚ್ಚಿಕೊಂಡು ಓದುತ್ತಿದ್ದ ''ಲೈಂಗಿಕ ಪತ್ರಿಕೆ''ಯನ್ನು ಮರೆತು ಸಂಪೂರ್ಣ ಮೌನಿಯಾಗಿದ್ದ. ತೀರಾ ಅಸ್ವಸ್ಥಗೊಂಡವನಂತೆ ಕೈಯಲ್ಲಿದ್ದ ಆ ಪುಸ್ತಕವನ್ನು ಎಸೆದು ಗಲ್ಲಕ್ಕೆ ಎರಡು ಕೈಯೂರಿ ಕುಳಿತುಬಿಟ್ಟ. ಆತನ ಕಣ್ಣಲ್ಲಿ ಕಂಬನಿಯಿರದಿದ್ದರೂ ನೋವಿನ ಛಾಯೆ ಆತನ ಕಂಗಳಲ್ಲಿ ಹೆಪ್ಪುಗಟ್ಟಿತ್ತು.

ಹೊರಗೆ ನನ್ನ ಪಕ್ಕದಲ್ಲಿ ಕುಳಿತು ರೇಡಿಯೋ ಕಮೆಂಟರಿಯಲ್ಲಿ ಕುತೂಹಲಗೊಂಡಿದ್ದ, 'ಲಾ' ಕಲಿಯುತ್ತಿದ್ದ ಯುವಕ ಈಗ ರೇಡಿಯೋ ಬಂದ್ ಮಾಡಿ ಪೆಟ್ಟು ತಿಂದವನಂತೆ ಟೇಬಲ್ಲಿಗೆ ತಲೆ ಹಚ್ಚಿ ಕುಳಿತಿದ್ದ. ಆತ ದೃಷ್ಟಿದೋಷದ ಕಾರಣ ಧರಿಸಿದ್ದ ಕನ್ನಡಕ ಅಂಟಿಕೊಂಡೆ ಇತ್ತು. ಆತ ದೃಷ್ಟಿ ಮಬ್ಬಾದವನಂತೆ ಟೇಬಲ್ಲಿಂದ ಮುಖ ಎತ್ತಿ ನನ್ನ ಭುಜದ ಮೇಲೆ ಇರಿಸಿ ನಿರ್ಲಿಪ್ತ ನೋಟ ಬೀರಿದ್ದ.

ಹೊರಗೆ ಕೆಂಪು ಮಣ್ಣಿನ ರಸ್ತೆಯಲ್ಲಿ ಮಳೆ ಬಂದ ಕಾರಣ ಅಲ್ಲಲ್ಲಿ ನೀರು ನಿಂತಿತ್ತು. ಪಕ್ಕದ-ಗುಡ್ಡದಲ್ಲಿ ಮಳೆಗಾಲದ ಸಿದ್ಧತೆಗಾಗಿ ಆ ಪ್ಲ್ಯಾಟ್ ತಲೆಯ ವ್ಯಕ್ತಿ ದೊಡ್ಡ ಗೋಳಿ ಮರವೊಂದನ್ನು ತುಂಡು ಮಾಡಿಸಿ ಹಾಕಿದ್ದ. ಆ ಮರದಲ್ಲಿ ಗೂಡು ಕಟ್ಟಿದ್ದ ಕಾಗೆಗಳ ಗುಂಪೊಂದು ತಮ್ಮ ಗೂಡು ಮತ್ತು ಮೊಟ್ಟೆ ಅನಾಥವಾಗಿ ಬಿದ್ದು ಹುಡಿಯಾದುದರ ಕಾರಣ ಅಲ್ಲೇ ಕೂಗುತ್ತಾ ಹಾರಾಡುತ್ತಿದ್ದುವು.

ಸಾವು... ಆ ಸಾವಿನ ಸುದ್ದಿ ನಮ್ಮೆಲ್ಲರ ಹಠಾತ್ ಮೌನಕ್ಕೆ ಕಾರಣವಾಗಿತ್ತು. ನಾವು ಕುಳಿತಲ್ಲಿಗೆ ಕಾಣುವ ಎರಡು ಮೈಲಿಯಷ್ಟು ದೂರದ ಆ ಎತ್ತರದ ಗುಡ್ಡದಲ್ಲಿ ಕಾಣುತ್ತಿರುವ ಆ ಮನೆಯಲ್ಲಿನ ಒಂದು ಸಾವು ನಮ್ಮೆಲ್ಲರ ಮೌನವನ್ನು ತೀವ್ರವಾಗಿ ಕಲಕಿತ್ತು. ನಮಗೆ ಅದು ಮುದುಕ ಮುದುಕಿ ಅಥವಾ ಒಬ್ಬ ನಡುಪ್ರಾಯದ ಗಂಡಸು

ಅಥವಾ ಒಬ್ಬಳು ಹೆಂಗಸಿನ ಸಾವಾಗಿದ್ದರೆ ಅಷ್ಟು ನೋವಾಗುತ್ತಿರಲಿಲ್ಲ. ಅದು ಅರಳಬೇಕಾಗಿದ್ದ, ಅರಳಿ-ಬೆಳೆದು ಬದುಕಿನ ಸುಖ ಸಂತೋಷಗಳನ್ನು ಪಡೆಯ ಬೇಕಾದ ಒಂದು ಎಳೆಯ ಮುಗ್ಧ ಬಾಲೆಯ ಸಾವಾಗಿತ್ತು. ಅವಳಿಗಿನ್ನೂ ಹತ್ತರ ಎಳಸು ಪ್ರಾಯ. ಆಕೆಯ ಮುದ್ದು ಮುಖದಲ್ಲಿ ನಾವು ಕಾಣುತ್ತಿದ್ದ ಆ ಹೂ ನಗೆ ನಾವು ಅವಳನ್ನು ಅಷ್ಟು ಹಚ್ಚಿಕೊಳ್ಳಲು ಕಾರಣವಾಗಿತ್ತು. ಪುಟ್ಟ ಅರಳು ಕಂಗಳನ್ನು ಅರಳಿಸುತ್ತಾ, ತನ್ನ ಮೃದುವಾದ ತುಟಿಗಳಿಂದ ಮಾತಾಡುತ್ತಾ, ಆಕೆ ಶಾಲೆಗೆ ಹೋಗುವ ಮುನ್ನ ಬಹಳಷ್ಟು ಹೊತ್ತು ಇಲ್ಲಿ ಈ ಅಂಗಡಿಯ ಬಳಿ ನಮ್ಮ ಮನವನ್ನು ತಣಿಸುತ್ತಿದ್ದಳು. ಆಕೆಯ ಮುಗ್ಧ ಮಾತುಗಳು ಆ ನಗೆ ಇನ್ನು ಭೂಮಿಯ ಮಣ್ಣಡಿ ದಫನವಾಗಿ ನಾವು ಕಲ್ಪನೆಯಲ್ಲೇ ಆ ಹುಡುಗಿಯ ಆ ಹೂ ನಗೆಯನ್ನು ಕಲ್ಪಿಸಿಕೊಳ್ಳಬೇಕಾಗಿತ್ತು.

ಅಂಗಡಿಯೊಳಗೆ ಕುಳಿತಿದ್ದಾತ ಗಲ್ಲ ಮುಚ್ಚಿ ಹೊರಡುವ ಸೂಚನೆ ನೀಡಿದ. ನಾವೆಲ್ಲರೂ ಅದಕ್ಕೆ ತಯಾರಾದವರಂತೆ ಗಕ್ಕನೆ ಎದ್ದುನಿಂತೆವು. ಎದ್ದು ನಿಲ್ಲುವ ಆ ರಭಸದಲ್ಲಿ ಲಾ ಕಲಿಯುತ್ತಿದ್ದ ಯುವಕನ ಕನ್ನಡಕ ಜಾರಿ ಕೆಳಗೆ ಬಿದ್ದು ಗ್ಲಾಸ್ ಹುಡಿ ಹುಡಿಯಾಯಿತು. ಬರೀ ಫ್ರೇಮ್ ಮಾತ್ರ ಉಳಿಯಿತು. ಉಳಿದ ನಾವು ಮೂವರು ಒಮ್ಮೆಲೆ ಬಾಗಿ ಅದರ ಚೂರುಗಳನ್ನು ಹೆಕ್ಕತೊಡಗಿದೆವು. ಗ್ಲಾಸ್ ಕಳೆದುಕೊಂಡ ಆತ ನೋವಿನಿಂದ ಚಡಪಡಿಸಿದ. ಒಮ್ಮೆಲೆ ದೃಷ್ಟಿ ಕಳಕೊಂಡವನಂತೆ ನಮ್ಮ ಕಡೆಗೆ ವಿಷಾದದಿಂದ ನೋಡಿದ. ಕನ್ನಡಕ ಧರಿಸಿದಾಗ ಶೋಭೆ ಹೆಚ್ಚುತ್ತಿದ್ದ ಆತನ ಮುಖ ಈಗ ತೀರಾ ಕಳೆಕುಂದಿತ್ತು.

ಒಡೆದ ಚೂರುಗಳನ್ನು ದೂರ ಚೆಲ್ಲಿ ನಾವು ಆ ರಸ್ತೆಯಗುಂಟ ಆ ಸಾವಿನ ಮನೆಯತ್ತ ನಡೆಯತೊಡಗಿದೆವು. ನಮ್ಮ ಎದುರು ದಂಟೆ ಊರಿಕೊಂಡು ಒಂದು ಅಜ್ಜಿಯು ಆ ಮನೆಯತ್ತ ನಿಧಾನದ ಹೆಜ್ಜೆ ಹಾಕುತ್ತಿತ್ತು. ನಾವು ಅಜ್ಜಿಯ ಸಮೀಪ ಬಂದಾಗ ಆಕೆ ನಿಧಾನ ಕಣ್ಣಿಗೆ ಕೈ ಅಡ್ಡ ಇರಿಸಿ ನಮ್ಮನ್ನು ಗುರುತು ಹಚ್ಚಿತು. ನಾವು ಸ್ವಲ್ಪ ನಿಂತೆವು.

''ಆ ಮಗು ಸಾಯೋ ಬದಲು ನಾನಾದರೂ ಸಾಯಬಾರದಿತ್ತೇ'' ಎಂದಿತು ಮುದುಕಿ. ಆ ಮಾತಿಗೆ ನಾವು ಏನೂ ಹೇಳಲಾಗದೇ ಮುಂದಕ್ಕೆ ಹೆಜ್ಜೆ ಎತ್ತಿದೆವು. ನಾನು ದಾರಿ ತಿಳಿಯಬಾರದೆಂದು 'ಸ್ವರ್ಗಕ್ಕೆ ಹೋಗಿ ಬಂದ ಹುಡುಗನ ಕಥೆ'ಯನ್ನು ಹೇಳತೊಡಗಿದೆ.

ಬಾನಿನಲ್ಲಿ ಕೆಂಪಗೆ ಉರಿಯುತ್ತಿದ್ದ ಸೂರ್ಯ ನೆಲದ ಕಾವನ್ನು ಇನ್ನಷ್ಟು ಹೆಚ್ಚಿಸಿತ್ತು. ಮುನ್ನಾದಿನ ಮಳೆ ಬಂದ ಕಾರಣದಿಂದ ದವ ಜಾಸ್ತಿಯಾಗಿತ್ತು. ಬಂಗಾರ ಗುಡ್ಡದ ಬುಡ ತಲುಪಿದಾಗ ನಾನು ಹೇಳುತ್ತಿದ್ದ ಕತೆಗೆ ಪೂರ್ಣ ವಿರಾಮ ಹಾಕಿದ್ದೆ. ಗುಡ್ಡದ

ತುದಿಯ ಆ ಮನೆಯಿಂದ ರೋದನೆ ಬಗೆ ಬಗೆಯಾಗಿ ನಮ್ಮ ಕಿವಿ ತಟ್ಟತೊಡಗಿತ್ತು. ನಾವು ನಡಿಗೆಯ ವೇಗವನ್ನು ಸ್ವಲ್ಪ ಜಾಸ್ತಿಗೊಳಿಸಿದೆವು. ಆ ಮನೆ ತಲುಪಿದಾಗ ನಮಗೆ ಬಹಳಷ್ಟು ಬಾಯಾರಿಕೆಯಾಗಿತ್ತು. ನಾವು ಇನ್ನಿಲ್ಲದ ದಾಹದಿಂದ ನರಳುತ್ತಿದ್ದೆವು. ಮುಖದಲ್ಲಿ ಬೆವರಿನ ಸೆಲೆ ಒಡೆದಿತ್ತು.

ನಮ್ಮ ಸ್ಥಿತಿಯನ್ನು ಕಂಡ ಆ ಹುಡುಗಿಯ ತಂದೆ ತನ್ನ ನೋವಿನ ಎಡೆಯಲ್ಲಿಯೂ ಒಳ ಧಾವಿಸಿ ನಾಲ್ಕು ದೊಡ್ಡ ಸ್ಟೀಲ್ ಲೋಟದಲ್ಲಿ ಸಿಹಿಯಾದ ನೀರನ್ನು ತಂದಿತ್ತು. ''ಭಾರೀ ಬಿಸಿಲು, ಹೊರಗೆ ಕಾಲಿಡೋಕಾಗೊಲ್ಲ'' ಎಂದರು. ನಾವು ನಾಲ್ವರೂ ಏಕಕಾಲಕ್ಕೊಂದೇ ಧ್ವನಿಯೆಂಬಂತೆ, ''ಹೌದು'' ಎಂದು ತಲೆಯಾಡಿಸಿದೆವು.

ಬಾಯಾರಿಕೆ ನೀಗಿಸಿಕೊಂಡು ನಾವು ನಾಲ್ವರೂ ಒಳಬಂದು ಒಮ್ಮೆಲೆ ಸ್ತಂಭಿತರಾದೆವು. ಬಿಳಿ ಬಟ್ಟೆಯನ್ನು ಹೊದ್ದ ಎಳೆ ಜೀವದ ಮುಖದಲ್ಲಿ ಇನ್ನೂ ಅದೇ ಹೂ ನಗೆ. ಆ ನಗುವಿಗೆ ಸಾವೇ ಇಲ್ಲವೇನೋ ಅನ್ನುವಂತಿತ್ತು. ತುಟಿಗಳು ಅರೆತೆರೆದಿದ್ದುವು ನಾವೆಷ್ಟೋ ಸಲ ಪ್ರೀತಿ-ಮಮತೆಯಿಂದ ಮುದ್ದಿಸಿದ್ದ ಆ ಗಲ್ಲ ಇನ್ನೂ ಚುಂಬಿಸಲ್ಪಡುವಂತೆ ಮುದ್ದಾಗಿಯೇ ಇತ್ತು. ಆ ಪುಟ್ಟ ನಾಸಿಕದಲ್ಲಿ ಉಸಿರಿದೆಯೋ ಎನ್ನುವಂತಿತ್ತು. ಆ ಮುದ್ದಾದ ಕಂಗಳನ್ನು ಕಣ್‌ರೆಪ್ಪೆ ಮುಚ್ಚಿಹಾಕಿತ್ತು.

ಅದುವರೆಗೆ ಹೆಚ್ಚು-ಕಮ್ಮಿ ದುಃಖವನ್ನು ಹೃದಯದಲ್ಲಿಯೇ ಹೆಪ್ಪುಗಟ್ಟಿಸಿದ್ದ ನಮಗೆ ಆ ಕ್ಷಣದಲ್ಲಿ ದುಃಖ ತಡೆಯುವುದು ಸಾಧ್ಯವಾಗಲಿಲ್ಲ. ದುಃಖಾಶ್ರು ಒಮ್ಮೆಲೆ ಹೊರಗೆ ತುಳುಕಿಬಿಟ್ಟಿತು. ನಾವು ಅದನ್ನು ತಡೆಹಿಡಿಯದಾದೆವು. ನಮಗೆ ಆ ಮಗುವನ್ನು ಹೆಣದ ಸ್ಥಿತಿಯಲ್ಲಿ ಬಹಳಷ್ಟು ಹೊತ್ತು ನೋಡುತ್ತಾ ಇರುವುದು ಸಾಧ್ಯವಾಗಲಿಲ್ಲ. ನಾವು ಹೊರಗೆ ಬರಲೆಂದು ಹೆಜ್ಜೆ ಎತ್ತಿದೆವು.

''ನೀವು ಏನನ್ನೋ ನೋಡಲು ಮರೆತಿದ್ದೀರಿ ?'' ನಡುಪ್ರಾಯದ ಹೆಂಗಸಿನ ಮಾತುಗಳು ತೂರಿಬಂದಾಗ ನಮಗೆ ಆ ಹುಡುಗಿಯ ಸಾವು ಉಂಟಾದ ಕಾರಣ ನೆನಪಾಯಿತು. ಆಕೆ ಶವದ ಮೇಲಿನ ಬಿಳಿ ಬಟ್ಟೆಯನ್ನು ಜಾರಿಸಿದಳು.

''ಓ... ದೇವರೇ...'' ಪ್ಲಾಟ್ ತಲೆಯ ವ್ಯಕ್ತಿ ಒಮ್ಮೆಲೆ ದಿಗ್ಭ್ರಮೆಗೊಂಡ. ನಾವು ನೋಡುತ್ತಿದ್ದೆವು. ಬಿಟ್ಟ ಕಣ್ಣು ಮತ್ತು ಬಿಟ್ಟ ಉಸಿರಿನಿಂದ. ಹುಡುಗಿಯ ಎರಡು ತೊಡೆ ಹೊಟ್ಟೆ ಸಂಪೂರ್ಣ ಸುಟ್ಟುಹೋಗಿದ್ದುವು. ಯಾವ ಸ್ಥಳದಲ್ಲಿ ಪುಟ್ಟ ಗುಲಾಬಿ ಹೂವಿನಂತಹ ಯೋನಿ ಇರಬೇಕಾಗಿತ್ತೋ ಆ ಜಾಗ ಈಗ ಬೆಂದು ಕೆಂಪು ಮಾಂಸದ ಮುದ್ದೆಯಾಗಿತ್ತು. ನಾನು ನೋವಿನಿಂದ ಕಣ್ಣುಮುಚ್ಚಿಕೊಂಡೆ.

''ಇದು ಹೇಗಾಯ್ತು ?'' ಅಂಗಡಿಯಾತ ಕೇಳಿದ. ಶವದ ಪಕ್ಕದಲ್ಲಿ ಖುರಾನ್ ಪಠಣ ಮಾಡುತ್ತಿದ್ದ ಹರೆಯದ ಹೆಂಗಸು (ಹುಡುಗಿಯ ಅಕ್ಕ) ಖುರಾನ್ ಪುಸ್ತಕವನ್ನು ಮತ್ತೊಬ್ಬಳ ಕೈಗಿತ್ತು ಸಂಕ್ಷಿಪ್ತದಲ್ಲಿ ಹೇಳಿದಳು ;

''ಹುಡುಗಿ ಮದರಸಕ್ಕೆ ಓದಿಗೆಂದು ಹೊರಟಿತ್ತು. ಒಳಗೆ ಬಚ್ಚಲ ಒಲೆಯಲ್ಲಿ ಬೆಂಕಿಯಿತ್ತು, ಮುಖ ತೊಳೆಯಲೆಂದು ಬಂದ ಹುಡುಗಿ ಕಿರುಚಿಕೊಂಡದ್ದೊಂದೇ ಗೊತ್ತು. ನಾವು ಗಾಬರಿಯಿಂದ ಹೋದಾಗ ಬೆಂಕಿ ಆಗಲೇ ಸಾಕಷ್ಟು ಕಬಳಿಸಿಯಾಗಿತ್ತು.''

ನನ್ನ ದೃಷ್ಟಿ ಪಕ್ಕಕ್ಕೆ ಹೊರಳಿತು. ಹುಡುಗಿಯ ತಾಯಿ ಪ್ರಜ್ಞೆ ತಪ್ಪಿ ಅಲ್ಲಿ ಮಲಗಿದ್ದರು.

ನಾವು ಹೊರಗೆ ಬಂದೆವು. ಅಲ್ಲಿ ಆ ಹುಡುಗಿಯ ಮೇಸ್ಟ್ರು ಕಣ್ಣಲ್ಲಿ ವಿಷಾದ ತುಂಬಿಕೊಂಡು ಕುಳಿತಿದ್ದರು. ಅವರು ನಮ್ಮೊಡನೆ ಆ ಹುಡುಗಿ ಮೊದಲನೆ ತರಗತಿಯಲ್ಲಿದ್ದಾಗಿನ ಒಂದು ಸಂಗತಿ ಹೇಳತೊಡಗಿದರು.

### ದೃಶ್ಯ ೧

ಮೇಸ್ಟ್ರು ಕರಿಹಲಗೆಯ ಮುಂದೆ ನಿಂತಿದ್ದರು. ಅವರ ಎಡಗೈಯಲ್ಲಿ ಒಂದನೆಯ ಕ್ಲಾಸಿನ ಕನ್ನಡ ಪುಸ್ತಕವೂ, ಬಲಗೈಯಲ್ಲಿ ಸಪೂರದ ನಾಗರ ಬೆತ್ತವೂ ಇತ್ತು. ಅವರು ಹೇಳಿಕೊಡುತ್ತಿದ್ದರು. ಈ-ಈಶ್ವರ, ಗ-ಗಣಪ. ಈಶ್ವರನ ತಲೆಯ ಮೇಲೆ ಗಂಗೆ ಮತ್ತು ಚಂದ್ರನೂ, ಗಣಪತಿಗೆ ಸೊಂಡಿಲು ಇತ್ತು. ಎದುರು ಬೆಂಚಿನಲ್ಲಿ ಕುಳಿತಿದ್ದ ಆ ಹುಡುಗಿಯೂ ಹಾಗೇ ಹೇಳುತ್ತಿದ್ದಳು. ಹಿಂದಿನ ಬೆಂಚಲ್ಲಿದ್ದ ಲೂಯಿಸನೂ ಹಾಗೇ ಹೇಳುತ್ತಿದ್ದ.

ಹುಡುಗಿ ಮುಂದಿನ ಒಂದು ಕ್ಷಣದಲ್ಲಿ ಪಕ್ಕನೆ ಎದ್ದುನಿಂತು ಕೇಳಿದಳು. ''ಈಶ್ವರ ಮತ್ತು ಗಣಪತಿ ಯಾರು ?''

ಮೇಸ್ಟರಿಗೆ ಬಹಳ ಖುಷಿಯೆನಿಸಿತು.

''ಈಶ್ವರ ಮತ್ತು ಗಣಪತಿ ಇವರಿಬ್ಬರೂ ನಮ್ಮ ದೇವರು.''

''ದೇವರು ? ಹಾಗೆಂದರೇನು ?''

(ಇಷ್ಟು ಸಣ್ಣ ವಯಸ್ಸಿನವಳು ಇಂತಹ ಪ್ರಶ್ನೆ ಕೇಳಿಯಾಳೇ ಎಂದು ನನ್ನ ಆರೋಪಿಸಬೇಡಿ. ಕೆಲವೊಮ್ಮೆ ಎಳೆಯ ಮೆದುಳಲ್ಲಿ ಅಗಾಧವಾದ ಪ್ರಶ್ನೆ ಸ್ಫುರಿಸುತ್ತೆ. ಎಳೆಯತನದಲ್ಲಿ ಎಷ್ಟೋ ಮಂದಿ ವಿದ್ಯಾವಂತರನ್ನು ದಿಗ್ಭ್ರಾಂತಗೊಳಿಸುತ್ತಿದ್ದ ಎಷ್ಟೋ ಪ್ರತಿಭೆಗಳು ಇವೆ - ಲೇಖಕ)

''ನಮ್ಮನ್ನು ಹುಟ್ಟಿಸಿದಾತ ಎಲ್ಲಕ್ಕೂ ಕಾರಣನಾದವನು'' ''ಆದರೆ ನಮ್ಮ ದೇವರು ಅಲ್ಲಾಹು.''

ಮೇಸ್ಟ್ರು ಹೇಳಿದರು ''ಎಲ್ಲರಿಗೂ ದೇವರು ಒಬ್ಬನೇ. ಆದರೂ ಹೆಸರು ಬೇರೆ ಬೇರೆ.''

ಮಕ್ಕಳಿಗೆ ತಮ್ಮ ಬಳಪದಲ್ಲೇ ಬರೆಯುವಂತೆ ಹೇಳಿ ಮೇಸ್ಟ್ರು ಆ ಹುಡುಗಿ

ಬರೆಯುವುದನ್ನೇ ನೋಡ್ತಾ ಕುಳಿತರು. ಅವಳು 'ಅ-ಅಲ್ಲಾಹು' ಎಂದು ಬರೆಯ ತೊಡಗಿದ್ದಳು. ನಿಜವಾಗಿ ಮೇಸ್ಟರಿಗೆ ಕೆಟ್ಟ ಕೋಪ ಬಂದಿತ್ತು. ''ಅಧಿಕ ಪ್ರಸಂಗ ಬರೆಯೋದು ಬೇಡ. ನೀನು ಪುಸ್ತಕದಲ್ಲಿ ಇದ್ದ ಹಾಗೇ ಬರೆ'' ಎಂದು ನಾಗರಬೆತ್ತದಿಂದ ಎರಡು ಏಟು ಹಾಕಿದ್ದರು.

ನಮ್ಮೆದುರು ಇದನ್ನು ಹೇಳಿ ಮುಗಿಸಿದ ಮೇಸ್ಟ್ರು ಕಣ್ಣಿನಲ್ಲಿ ಕಂಬನಿ ಸುರಿಸುತ್ತಾ ಹೇಳಿದರು. ''ಆಕೆ ಅಂತಹಾ ಒಳ್ಳೆಯ ಹುಡುಗಿ ಇಂತಹಾ ಪ್ರಶ್ನೆಯನ್ನು ಬರೆಯುವ ಛಲವನ್ನು ತೋರಿದ್ದ ಹುಡುಗಿ: ಹೀಗೆ ಕ್ರೂರವಾಗಿ ನಮ್ಮನ್ನೆಲ್ಲಾ ಆಗಲಿ ಹೋಗಬೇಕಾಗಿ ಬಂದ ಸ್ಥಿತಿಗೆ ನನಗೆ ನಿಜವಾಗಿಯೂ ಬಹಳಷ್ಟು ನೋವಾಗ್ತಿದೆ.''

ಮೇಸ್ಟ್ರು ಮತ್ತೊಮ್ಮೆ ಹುಡುಗಿಯನ್ನು ನೋಡಲು ಹೋದಾಗ ಶಾಲೆಯ ಬಹಳಷ್ಟು ಮಕ್ಕಳು ಗುಂಪಾಗಿ ಅಲ್ಲಿಗೆ ಬಂದರು. ಮುಗ್ಧ ಎಳೆಯ ಮುಖಗಳಲ್ಲಿ ನೋವು ಮಡುಗಟ್ಟಿನಿಂತಿತ್ತು. ಆ ಮಕ್ಕಳು ಅಲ್ಲಿ ಒಂದು ಶಿಸ್ತುಬದ್ಧ ಚಲನೆಯಂತೆ ಆಗಮಿಸಿದ್ದರು.

ನಮಗಿಂತ ಸ್ವಲ್ಪ ದೂರದಲ್ಲಿ ಮದರಸದ ಮೊಯಿಲಿಯಾರರು ಕುಳಿತಿದ್ದರು. ಅವರ ತಲೆಯಲ್ಲೊಂದು ಬಿಳಿ ಮುಂಡಾಸು ಇತ್ತು. ಅವರು ಹೆಚ್ಚು-ಕಮ್ಮಿ ಮೇಸ್ಟ್ರಂತೆಯೇ ಭಾವುಕರಾಗಿದ್ದರು.

ಅವರು ಅಲ್ಲಿಂದ ಎದ್ದು ಬಂದವರು ನಮ್ಮ ಬಳಿ ಕೂರುತ್ತಾ ಹೇಳತೊಡಗಿದರು.

## ದೃಶ್ಯ ೨

ಮದರಸದಲ್ಲಿ ಬೆಳಕಿತ್ತು. ಬೆಳಕಿನ ಅಡಿಯಲ್ಲಿ ಮಕ್ಕಳು ಕುಳಿತಿದ್ದರು. ಮೊಯಿಲಿಯಾರರು ಕಿತಾಬ್ ಹಿಡಿದುಕೊಂಡು ಹೇಳುತ್ತಿದ್ದರು. ''ಅಲ್ಲಾ'' ಮೊತ್ತ ಮೊದಲಾಗಿ 'ಆದಂ' ಹಾಗೂ 'ಅವ್ವಾ' ಎಂಬ ದಂಪತಿಗಳನ್ನು ಸೃಷ್ಟಿಸಿದ ನಂತರ ಅವರಿಗೆ ಸ್ವರ್ಗವನ್ನು ವಾಸಸ್ಥಾನವನ್ನಾಗಿ, ಒಂದು ಮರದ ಫಲಗಳನ್ನು ಸೇವಿಸಬಾರದು ಎಂದು ಕಟ್ಟಾಜ್ಞೆ ಮಾಡಿದ. ಅಲ್ಲಾಹನ ಶತ್ರುವಾದ ಸೈತಾನ ಇವರನ್ನು ಹೊರದೂಡಬೇಕೆಂದು ಯೋಚಿಸಿ ಅವರಿಗೆ ಆ ಮರದ ಹಣ್ಣುಗಳನ್ನು ತಿನ್ನುವಂತೆ ಪ್ರಚೋದಿಸಿದ. ಸೈತಾನನ ಮೋಡಿಗೊಳಗಾದ ಅವರು ಅದರ ಫಲ ತಿಂದು ಸ್ವರ್ಗದಿಂದ ಉಚ್ಚಾಟಿಸಲ್ಪಟ್ಟು ನಾವಿರುವ ಈ ಭೂಮಿಯ ವಾಸಿಗಳಾದರು. ಅವರಿಗೆ ಮಕ್ಕಳು ಮೊಮ್ಮಕ್ಕಳಾದವು. ಹೀಗೆ ಮುಂದೆ ನಾವೆಲ್ಲಾ ಈ ಭೂಮಿಯ ಮೇಲೆ ಜನಿಸಿದೆವು. ಆದ್ದರಿಂದ 'ಆದಂ' ಮತ್ತು 'ಅವ್ವಾ' ನಮ್ಮೆಲ್ಲರ ತಂದೆ-ತಾಯಿ.

ಹತ್ತು ವರ್ಷದ ಹುಡುಗಿ. ತುಟಿಗೆ ಬೆರಳಿಟ್ಟು ಅವರ ಮಾತುಗಳಲ್ಲಿ ಮಗ್ನಳಾಗಿದ್ದಳು.

ಹುಡುಗಿಗೆ ಒಂದು ಸಂದೇಹ ಮೂಡಿತು. ಅವಳು ಕೇಳಿದಳು.

''ಅಣ್ಣ ತಂಗಿಯನ್ನು ಮದುವೆಯಾಗಬಹುದೇ ?''

''ಇಲ್ಲ... ಅದು ಘೋರ ಪಾಪ ಮತ್ತು ಅಪಚಾರ ಕೂಡ !''

ಆದರೆ ಆದಂ ಮತ್ತು ಅವ್ವಾರ ಮಕ್ಕಳು ಹೇಗೆ ಒಬ್ಬರನ್ನೊಬ್ಬರು ಮದುವೆಯಾದರು ಅದು ಘೋರ ಅಪಚಾರ ಅಲ್ಲವೇ ?''

''ಅಲ್ಲಾಹು ಹಾಗೇ ಆಜ್ಞೆ ಮಾಡಿದ್ದ !''

''ನನಗೆ ಇದು ಸರಿ ಕಾಣಿಸೊಲ್ಲ !''

ಮೊಯಿಲಿಯಾರರು ಹುಡುಗಿಯ ಕೆನ್ನೆಗೆ ಎರಡು ಏಟು ಹಾಕಿದರು.

ಮೊಯಿಲಿಯಾರರು ಕತೆ ನಿಲ್ಲಿಸಿ ಹೇಳಿದರು. ''ಮಕ್ಕಳಿಗೆ ಪ್ರಶ್ನೆ ಕೇಳುವ ಎದೆಗಾರಿಕೆ ಬೇಕು. ಆದರೆ ಆಕೆ ಕೇಳಿದ ಪ್ರಶ್ನೆಯಿಂದ ನನಗೆ ಕೆಟ್ಟ ಕೋಪ ಬಂದಿತ್ತು. ಆ ಮಗು ಈಗ ನನ್ನೆದುರಲ್ಲೇ ಮಯ್ಯತ್ ಆಗಿ ಮಲಗಿದೆ. ಇನ್ನು ನಾನೆಂದಿಗೂ ಯಾವ ಮಗುವಿಗೂ ಹೊಡೆಯಲಾರೆ.''

ನಿರ್ಜೀವ ದೇಹದ ಕೊನೆಯ ಸ್ನಾನ ಮುಗಿದು ಅದನ್ನು ಸಾಗಿಸುವ ಹಂತ ತಲುಪಿದಾಗ ಒಳಗೆ ರೋದನ ಜಾಸ್ತಿಯಾಗಿತ್ತು. ನಾವು ಮತ್ತೊಮ್ಮೆ ಒಳಬಂದೆವು. ಊದುಬತ್ತಿ ಲೋಬನದ ಪರಿಮಳ ವಿಚಿತ್ರ ಲೋಕವನ್ನೇ ಸೃಷ್ಟಿ ಮಾಡಿತ್ತು. ನಾವು ಭೂಮಿಯ ಮೇಲಿನ ಒಂದು ಮನೆಯ ಒಂದು ಕೋಣೆಯಲ್ಲಿ ಇದ್ದೆವೆಂಬುದನ್ನು ಮರೆತಿದ್ದೆವು. ಪೂರ್ತಿಯಾಗಿ ಬಿಳಿ ಬಟ್ಟೆಯಲ್ಲಿ ಆವರಿಸಿದ್ದ ದೇಹದ ಸನಿಹದಲ್ಲಿ ನಾವು ಯಾವುದೋ ಅದೃಶ್ಯ ಜಾಗದಲ್ಲಿ ಇರುವಂತೆ ಭಾಸವಾಗುತ್ತಿತ್ತು.

ಪ್ಲಾಟ್ ತಲೆಯ ವ್ಯಕ್ತಿ ಮತ್ತ ಅಂಗಡಿಯಾತ ಬಾಗಿ ನೆಲಕ್ಕೆ ಮಂಡಿಯೂರಿ ಆ ಹುಡುಗಿಯ ಗಲ್ಲವನ್ನು ಚುಂಬಿಸಿದರು. ಅವರು ಈಗ ನಿಜಕ್ಕೂ ದುಃಖಾತೀತ ರೀತಿಯಲ್ಲಿ ಭಾವುಕರಾಗಿದ್ದರು. ಪ್ರಜ್ಞೆ ತಿಳಿದೆದ್ದ ಹುಡುಗಿಯ ತಾಯಿ ಎದೆ ಒಡೆದುಕೊಂಡು ರೋದನ ಮಾಡುತ್ತಿದ್ದರು. ಅವರ ಅಕ್ಕ ಪಕ್ಕದಲ್ಲಿ ಕುಳಿತಿದ್ದ ಇಬ್ಬರು ಬಲಿಷ್ಠ ಹೆಂಗಸರು ಆಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು.

ಹೊರಗೆ ಬಿದಿರಿನ ಪುಟ್ಟ ಶವದ ಮಂಚ ಇತ್ತು. ನಿರ್ಜೀವ ದೇಹವನ್ನು ತಂದು ಅದರಲ್ಲಿ ಮಲಗಿಸಿ; ನಾವು ನಾಲ್ವರೂ ಒಮ್ಮೆಲೆ ಆ ಶವ ಮಂಚದ ನಾಲ್ಕು ಭುಜಗಳಾದೆವು.

ದಫನದ ಜಾಗದಲ್ಲಿ ಆಗಲೇ ಗುಂಡಿ ತೋಡಿಯಾಗಿತ್ತು. ಮನೆಯ ಮೆತ್ತನೆಯ ಹಾಸಿಗೆಯಲ್ಲಿ ಮಲಗಿ ಅನೇಕ ರಾತ್ರಿಗಳನ್ನು ಕಳೆದಿದ್ದ, ಎಳೆಯ ಬಾಲೆಗೆ ಕಲ್ಲು ಮಣ್ಣಿನ ಈ ಸಣ್ಣ ಗುಂಡಿ ಇಂದು ಮಲಗುವ ಹಾಸಿಗೆಯಾಗಿತ್ತು. ನಿರ್ಜೀವ ದೇಹದ ಮಾಂಸ ಮಣ್ಣಿನಡಿ ಮಣ್ಣಾಗಿ ಎಲುಬುಗೂಡು ಕಳಚಿಕೊಳ್ಳುವ ದೃಶ್ಯ ಕಣ್ಣೆದುರು ಮೂಡಿಬಂತು.

''ಈ ಹುಡುಗಿಯ ಆತ್ಮಕ್ಕೆ ಇನ್ನೊಂದು ಹುಟ್ಟು ಇರುವುದಾದರೆ ಆ ತಾಯಿಯ ಹೊಟ್ಟೆಯಲ್ಲಿಯೇ ಹುಟ್ಟಿ ಬರುವಂತಾಗಲಿ'' ಲಾ ವಿದ್ಯಾರ್ಥಿ ಹೇಳಿದ.

''ಅದು ಸಾಧ್ಯವಾಗಲಾರದು'' ನಾನು ಹೇಳಿದೆ.

''ಯಾಕೆ ?''

''ಆ ತಾಯಿಗೆ ಗರ್ಭ ನಿಂತುಹೋಗಿ ಎಷ್ಟೋ ವರ್ಷಗಳಾಗಿವೆ (ಈ ಹುಡುಗಿಯ ನಂತರ ಆಕೆಗೆ ಮಕ್ಕಳಾಗಿರಲಿಲ್ಲ.)

ಮುಂದಿನ ದಿನಗಳಲ್ಲಿ ನಾವೆಷ್ಟೋ ಎಳೆಯ ಬಾಲೆಯರನ್ನು ಕಾಣಬಹುದು. ಆದರೆ ಈ ಹೂ ನಗೆಯ ಹುಡುಗಿ ಮುಂದೆಂದೂ ನಮಗೆ ಕಾಣಸಿಗಳು. ನಾವು ಕಲ್ಪನೆಯಲ್ಲೇ ಆ ಹುಡುಗಿಯನ್ನು ಕಣ್ಣೆದುರು ಮೂಡಿಸಿಕೊಳ್ಳಬೇಕಾಗಿತ್ತು.

ನಾವು ಗೋರಿಯಿಂದ ದೂರ ಸಾಗುವ ಮುನ್ನ ಆ ಹುಡುಗಿಗೆ ವಿದಾಯ ಹೇಳಿದೆವು.

''ವಿದಾಯ ನಿನಗಿದೋ ಓ ಹೂ ನಗೆಯ ಪುಟ್ಟ ಹುಡುಗಿ ಝುಬೇದಾ !''

# 10 ಮಗ

ಒಂದು ದಿನದ ರಾತ್ರಿ :

ಆ ಮನೆಯ ಕೋಣೆಯ ಒಳಗೆ ಕುಳಿತುಕೊಂಡು ನಝೀಮಾ ಎದುರಿನ ಗೋಡೆಯಲ್ಲಿನ ಆ ಮಗುವಿನ ಫೋಟೋವನ್ನೇ ಎವೆಯಿಕ್ಕದೆ ನೋಡುತ್ತಿದ್ದಳು. ಎಷ್ಟು ಮುದ್ದಾಗಿದೆ. ಆ ಅರಳು ಕಂಗಳು. ಮುದ್ದಾದ ಮುಖ. ಅರಳು ಬಿರಿದಂತೆ ನಗುವಾಗಿ ಬಿರಿದ ಆ ತುಟಿಗಳು. ನೋಡುತ್ತಲೇ ಅಪ್ಪಿಕೊಂಡು ಮುದ್ದಾಡ ಬೇಕೆನಿಸುತ್ತೆ. ಯಾವ ಮಹಾತಾಯಿ ಹೆತ್ತ ಮಗುವೋ ಏನೋ. ಅಂಥಾ ಮುದ್ದಾದ ಮಗುವನ್ನು ಪಡೆವ ಭಾಗ್ಯ ತನಗಿಲ್ಲವಾಯಿತೇ ? ಈ ಬರಿದಾದ ಬಸಿರಲ್ಲಿ ಯಾವತ್ತು ಒಂದು ಕುಡಿಯೊಡೆಯುತ್ತದೆಯೋ...?

ತನಗೆ ಮದುವೆಯಾಗಿ ಅದಾಗಲೇ ಹತ್ತು ವರುಷಗಳು.

ತನ್ನೊಡನೆ ಮದುವೆಯಾದ ಜೈನಾಬಿಗೆ ಈಗ ಎರಡನೆಯ ತರಗತಿ ಕಲಿಯುವ ಮಗಳಿದ್ದಾಳೆ. ತನ್ನ ಅನಂತರ ಮದುವೆಯಾದ ಫಾತುಮ್ಮಾಳಿಗೆ ಮುದ್ದಾದ ನಾಲ್ಕು ಮಕ್ಕಳು. ಆದರೆ ತಾನು ಇನ್ನೂ ತಾಯಾಗದೇ ಬಂಜೆಯಾಗಿಯೇ ಉಳಿಯ ಬೇಕಾಯಿತೇ. ಯಾವತ್ತೂ ತನ್ನ ಬಸಿರು ತುಂಬುವುದೇ ಇಲ್ಲವೇನೋ. ತಾನು ತನ್ನ ಗಂಡನನ್ನು ಕೂಡುವಾಗಲೆಲ್ಲಾ ಅದಮ್ಯ ಉತ್ಸಾಹದಲ್ಲಿರುತ್ತೇನೆ. ಗಂಡನ ವೀರ್ಯ ತನ್ನ ಗರ್ಭದಲ್ಲಿ ಭ್ರೂಣವೊಂದನ್ನು ಹುಟ್ಟಿಸಲಿ ಎಂಬ ಇಚ್ಛೆಯಿಂದ. ಆದರೆ ಪ್ರತಿ ತಿಂಗಳು ತನ್ನ ಗರ್ಭ ಯಾವ ಫಲವತ್ತತೆಯನ್ನೂ ಹೊಂದದೆ ಸೋರಿಹೋಗುತ್ತದೆ. ಸೋರಿಹೋಗುವುದೇ ತನ್ನ ಹಣೆಯಲ್ಲಿ ಬರೆದ ಹಣೆಬರಹವೇನೋ.

ಇಂದಲ್ಲ ನಾಳೆ ತನ್ನ ಗರ್ಭ ಫಲವತ್ತತೆಯನ್ನು ಪಡೆಯಬಹುದೆಂಬ ನಿರೀಕ್ಷೆಯಲ್ಲಿ ಹತ್ತು ವರ್ಷಗಳನ್ನು ಕಳೆದಾಯ್ತು. ಎಷ್ಟೋ ಆಸ್ಪತ್ರೆಗಳನ್ನು ಸುತ್ತಿ ತಜ್ಞ ವೈದ್ಯರನ್ನು ಭೇಟಿ ಮಾಡಿದ್ದಾಯ್ತು. ಇಬ್ಬರನ್ನೂ ಪರೀಕ್ಷಿಸಿ ಅವರೆಲ್ಲ ನೀಡಿದ ಉತ್ತರ ಒಂದೇ. ನಿಮ್ಮಿಬ್ಬರಲ್ಲಿ ಯಾವ ದೋಷಗಳಿಲ್ಲ. ಮುಂದೆ ಮಕ್ಕಳಾಗಬಹುದು !

ಮುಂದೆ ಯಾವತ್ತು !? ತಾವಿಬ್ಬರು ಸತ್ತಮೇಲೆಯೇ !? ಹೀಗೆ ಮಕ್ಕಳಿಲ್ಲದೆ ತಾನು ಬಂಜೆಯಾಗಿಯೇ ಉಳಿದರೆ ಕೊನೆಗಾಲದಲ್ಲಿ ನೋಡುವವರು ಯಾರು ? ಕೈಕಾಲು ಬಿದ್ದಾಗ ತಮ್ಮಿಬ್ಬರನ್ನು ಸಾಕಿ ಸಲಹುವವರು ಯಾರು ?

ಅದಕ್ಕಿಂತಲೂ ಮುಖ್ಯವಾಗಿ ಲೋಕ ತನ್ನನ್ನು ಬಂಜೆ ಎನ್ನುವುದರಿಂದ ತನಗೆ ಮುಕ್ತಿಬೇಕು. ತನ್ನನ್ನು 'ಅಮ್ಮಾ !' ಎಂದು ಕರೆಯುವ ಒಂದು ಮಗು ಬೇಕು.

ಅವಳು ಮಗುವಿನ ಬಗ್ಗೆಯೇ ತಲೆ ಕೆಡಿಸಿಕೊಂಡು ಕುಳಿತಿರುವಾಗ, ಕೋಣೆಯ ಬಾಗಿಲಲ್ಲಿ ಆತ ಕಾಣಿಸಿಕೊಂಡ. ಅವಳು ಗೋಡೆಯ ಮಗುವಿನ ಫೋಟೋದಲ್ಲೇ ತನ್ಮಯಳಾಗಿದ್ದಳು. ಅವಳ ಹತ್ತಿರ ಬಂದು ಅವಳ ಒತ್ತಾಗಿ ಕುಳಿತು ಅನುನಯದಿಂದ ಕೇಳಿದ, 'ಏನು ಯೋಚನೆ ಮಾಡ್ತಾ ಇದ್ದೀಯಾ ?''

ಅವಳು ಎಚ್ಚತ್ತು ಗೋಡೆಯ ಮೇಲಿನ ಆ ಭಾವಚಿತ್ರವನ್ನು ತೋರಿಸುತ್ತಾ ಕೇಳಿದಳು.

''ಆ ಮಗು ಎಷ್ಟು ಮುದ್ದಾಗಿದೆ ಅಲ್ಲವೇ ?''

''ಯಾಕೇ ನಿನಗೂ ಮಗು ಬೇಕೆನಿಸುತ್ತದೆಯೇ ?''

''ಇಲ್ಲವೇ ಮತ್ತೆ. ಹತ್ತು ವರ್ಷವಾದರೂ ಒಂದು ಮಗು ಆಗಿಲ್ಲ ಎಂದರೆ ?''

''ಆಗುತ್ತೆ. ಅದಕ್ಕಾಗೆ ಯೋಚನೆ ಮಾಡುತ್ತೀಯಾ ?''

''ನೀವು ಗೊತ್ತಿದ್ದೂ ಹೀಗೆ ಹೇಳ್ತಾ ಇದೀರಾ ? ಪ್ರಾಯ ಹೀಗೆ ನಿಲ್ಲುತ್ತದೆಯೇ ನನಗೆ ಮಕ್ಕಳಾಗೋದು ಮುದುಕಿ ಆದಮೇಲೆಯೇ ?''

''ಏನು ಮಹಾ ವಯಸ್ಸಾಗಿರೋದು ನಿನಗೆ. ಇನ್ನೂ ಇಪ್ಪತ್ತೆಂಟು ?''

''ನಿಮಗೆ ಗಂಡಸರಿಗೆ ಗೊತ್ತಾಗೊಲ್ಲ. ಹೆಣ್ಣಾದ ನನಗೆ ಗೊತ್ತು ತಾಯ್ತನದ ಕೊರತೆ. ಯಾವ ಹೆಣ್ಣು ತಾಯಾಗುತ್ತಾಳೋ ಆಕೇನೆ ಪರಿಪೂರ್ಣ ಹೆಣ್ಣು. ಸುತ್ತ ಮುತ್ತಲಿನ ಜನಗಳ ನಡುವೆ ನಾ ಬದುಕೋದೇ ಕಷ್ಟವಾಗಿದೆ. ಎಲ್ಲರೂ ನನ್ನನ್ನು ಬಂಜೆ ಅನ್ನುತ್ತಾರೆ.''

''ನೋಡು ನಝೀಮಾ, ನಾವು ಲೋಕದ ಜನತೆಯ ಮಾತಿಗೇನು ಅಂಜಿ ಕೊಳ್ಳಬೇಕಾಗಿಲ್ಲ. ನೀನು ತಾಯಾಗಿಲ್ಲ. ನೀನು ಬಂಜೆ ಎಂದು ನಾನೆಂದಾದರೂ ಹೇಳಿದ್ದೇನೆಯೇ ? ನಾನೇ ನಿನ್ನನ್ನು ಒಪ್ಪಿಕೊಂಡಿರುವಾಗ ಲೋಕದ ಜನರ ಮಾತನ್ನು ಆಚೆಗೆ ಕಟ್ಟಿ ಇಡು ?''

''ಅದೆಲ್ಲ ನನಗೆ ಗೊತ್ತಿಲ್ಲ. ಮದುವೆಯಾದ ಈ ಹತ್ತು ವರ್ಷಗಳು ನನ್ನ ಬಸಿರಲ್ಲೊಂದು ಮಗು ಹುಟ್ಟುತ್ತದೆ ಎಂದು ಕಾತರಿಸಿದ್ದಾಯ್ತು. ಇನ್ನು ಕಾಯೋಕಾಗಲ್ಲ. ನನ್ನ ಬಸಿರಲ್ಲಿ ಫಲ ಹುಟ್ಟೊಲ್ಲ. ಎಲ್ಲಿಂದಾದರೂ ಮಗುವೊಂದನ್ನು ದತ್ತು ತನ್ನಿ !''

''ಏನು ಹೇಳ್ತಾ ಇದ್ದಿ ನೀನು ನಝೀಮಾ. ಯಾವುದೋ ಒಂದು ಮಗುವನ್ನು ತಂದು ಅದಕ್ಕೆ ನಾವು ತಾಯಿ-ತಂದೆಯರಾಗಬೇಕೇ ?''

''ಯಾಕಾಗೋಲ್ಲ. ಈಗಿನ ಪರಿಸ್ಥಿತಿಯಲ್ಲಿ ನಾವೊಂದು ಮಗುವನ್ನು ದತ್ತು ತೆಗೆದುಕೊಳ್ಳಲೇಬೇಕು.''

''ಯಾರಾದರೂ ತಮ್ಮ ಮಕ್ಕಳನ್ನು ಕೊಡ್ತಾರೇನು ? ಯಾವ ತಾಯಿ ತಾನೇ

ಮಗುವನ್ನು ದಾನ ಮಾಡಿಯಾಳು !?''

''ನೀವು ಗಂಡಸು, ಏನಾದರೂ ಯೋಚನೆ ಮಾಡಿ !''

ಅವನು ಅವಳ ಬಳಿಯಿಂದ ಹೊರಬಂದ. ಹೊರಬಂದು ಟೆರೇಸ್‌ನಲ್ಲಿ ಕುಳಿತುಕೊಂಡ ಹಾಗೂ ಯೋಚಿಸತೊಡಗಿದ.

ನಝೀಮಾ ಹೇಳುವುದು ಸರಿ. ಡಾಕ್ಟರು ಮಕ್ಕಳಾಗಬಹುದೆಂದು ಹೇಳಿದ್ದರು. ಆದರೆ ಹತ್ತು ವರುಷಗಳಾದರೂ ಮಗುವೊಂದು ಜನಿಸಿಲ್ಲ. ಪ್ರಾಯ ಹೀಗೇ ನಿಲ್ಲುತ್ತದೆಯೇ. ನಮ್ಮ ವಂಶ ಮಕ್ಕಳಿಲ್ಲದೆ ಹೀಗೆ ಕೊನೆಗೊಳ್ಳಬೇಕೇ. ಕೊನೆಗೊಂದು ದಿನ ನಾವು ಅನಾಥರಾಗಿ ಸಾಯಬೇಕೇ. ಆದುದರಿಂದ ಯಾವುದಾದರೂ ಮಗುವನ್ನು ದತ್ತು ತೆಗೆದುಕೊಳ್ಳಬೇಕು. ಆದರೆ ಅಂತಹ ಮಗು ಎಲ್ಲಿ ಸಿಗುತ್ತದೆ. ಯಾವುದೋ ಅನಾಥಾಶ್ರಮದಿಂದ ತರಬಹುದು. ಆದರೆ ಅದಕ್ಕಿಂತ ಯಾರಾದರೂ ಪರಿಚಿತರಲ್ಲಿ ಮಗುವೊಂದನ್ನು ದಾನವಾಗಿ ಕೇಳಿದರೆ ಹೇಗೆ. ನಮಗೆ ದೊಡ್ಡ ಮನೆಯಿದೆ. ಸಾಕಷ್ಟು ವರಮಾನವಿದೆ. ಯಾರಲ್ಲಾದರೂ ಮಕ್ಕಳನ್ನು ಸಾಕಲು ಅಸಮರ್ಥರಾದವರಲ್ಲಿ ಮಗು ಒಂದನ್ನು ಕೇಳಿದರೆ ಕೊಡದೆ ಇರಲಾರರು. ಅಂತಹವರು ಯಾರಾದರೂ ಇದ್ದಾರೆಯೇ ? ಹೀಗೆ ಬಹಳ ಯೋಚಿಸಿದ ಮೇಲೆ ಅವನ ಸುಳಿವಿಗೆ ಸಿಕ್ಕವ ಅಕ್ಬರ್. 'ಸರಿ, ಅಕ್ಬರನಲ್ಲೇ ಒಂದು ಮಗುವನ್ನು ಕೇಳಿದರಾಯ್ತು. ಅವನೇ ಸರಿಯಾದ ವ್ಯಕ್ತಿ'. ಹೀಗಂದುಕೊಂಡು ಮತ್ತೆ ಕೋಣೆಯ ಒಳಬಂದು ಹೆಂಡತಿಯೊಡನೆ ಹೇಳಿದ.

''ನಿನಗೆ ಅಕ್ಬರ್ ಗೊತ್ತಲ್ಲ. ನಾಳೇನೇ ಅವನ ಬಳಿ ಹೋಗುತ್ತೇನೆ. ಅವನು ತನ್ನ ಮೂರು ಮಕ್ಕಳಲ್ಲಿ ಒಂದನ್ನು ನನಗೆ ಕೊಟ್ಟಾನು !''

ಅವಳು ತುಂಬಿ ಬಂದ ಉತ್ಸಾಹದಲ್ಲಿ ಹೇಳಿದ್ದಳು.

''ಹಾಗೇ ಮಾಡಿ !''

## ಅಕ್ಬರ್

ಬೆಳಿಗ್ಗೆ ಆಸೀಫ್ ಬಂದು ಹೋದ ಮೇಲೆ ನನ್ನ ತಲೆ ವಿಪರೀತ ಸಿಡಿಯ ತೊಡಗಿದೆ. ನನ್ನ ಪ್ರೀತಿಯ ಗೆಳೆಯ ಬಹುದಿನಗಳ ನಂತರ ಮನೆಗೆ ಬಂದಾಗ ಆದರದಿಂದ ಬರಮಾಡಿಕೊಂಡಿದ್ದೆ. ಅವನಿಗೆ ನಾನು ಯಾವಾಗಲೂ ಚಿರ ಋಣಿ ಆಗಿರಬೇಕು. ನನ್ನನ್ನು ಒಂದು ನೆಲೆಗೆ ತಂದದ್ದು ಆತ. ನಾನು ಉದ್ಯೋಗ ಇಲ್ಲದೆ ಅಲೆದಾಡುತ್ತಿದ್ದಾಗ ಕರೆದು ಸ್ವಲ್ಪ ಬಂಡವಾಳ ನೀಡಿ ಅಂಗಡಿಯೊಂದನ್ನು ಮಾಡಿಕೊಟ್ಟಿದ್ದ. ಅದರಲ್ಲಿ ನನಗೆ ಒಳ್ಳೆಯ ಸಂಪಾದನೆ ದೊರಕಿತ್ತು. ನಾನೊಂದು ಭದ್ರವಾದ ನೆಲೆಯನ್ನು ಕಂಡುಕೊಂಡಿದ್ದೆ. ನನಗೆ ಮೂರು ಮಕ್ಕಳು. ದೊಡ್ಡವ ಹತ್ತು

ವರ್ಷದ ಅನ್ವರ್. ಚೂಟಿ ಹುಡುಗ. ನಂತರದವ ಏಳು ವರ್ಷದ ಜಾವೆದ್. ಸ್ವಲ್ಪ ಕಪ್ಪಗೆ. ಆದರೂ ಅನ್ವರ್‌ನಷ್ಟೇ ಚೂಟಿಯಾಗಿದ್ದ. ನಂತರದವಳು ಫಾತುಮಾ ಅನ್ನೋ ಮಗಳೂ.

ಅಸೀಫ್ ಬಂದವ ಸ್ವಲ್ಪ ಹೊತ್ತು ಕ್ಷೇಮ ಸಮಾಚಾರಗಳನ್ನು ಮಾತಾಡಿ ಅನಂತರ ನನ್ನ ಕೈ ಹಿಡಿದು ಹೇಳಿದ.

''ಅಕ್ಬರ್ ನೀ ನನಗೊಂದು ಉಪಕಾರ ಮಾಡಬೇಕು. ಇಲ್ಲಾಂತ ಹೇಳಬಾರದು.''

''ಹೇಳು'' ಎಂದೆ ನಾನು.

''ನೀನು ನಿನ್ನ ಮಗ ಜಾವೇದನನ್ನು ನನಗೆ ದತ್ತಕವಾಗಿ ನೀಡಬೇಕು !''

ನಾನು ಸರಕ್ಕನೆ ಕೈಯನ್ನು ಎಳೆದುಕೊಂಡು ಅವನ ಬಳಿಯಿಂದ ಎದ್ದು ಆಚೆ ನಡೆದೆ. ಒಂದು ಬದಿಗೆ ನಿಂತು ಕಂಗಾಲಾಗಿ ಅವನನ್ನೇ ಭೀತಿಯಿಂದ ನೋಡ ತೊಡಗಿದೆ. ಆತ ಹತ್ತಿರ ಬಂದು ಹೇಳಿದ.

''ನನ್ನ ಮಾತಿನಿಂದ ನಿನಗೇನಾದರೂ ನೋವಾಯಿತೇ ?''

''ನೋವಾಗುವಂತಹ ಮಾತಾಡಿದರೆ ಮನಸ್ಸಿಗೆ ಘಾಸಿಯಾಗದೇ ಇರುತ್ತದೆಯೇ ?''

''ಅಲ್ಲ ಅಕ್ಬರ್... ನನ್ನ ಪರಿಸ್ಥಿತಿ ನಿನಗೆ ಗೊತ್ತೇ ಇದೆಯಲ್ಲ. ಹತ್ತು ವರ್ಷ ಗಳಿಂದಲೂ ನಾವು ಮಕ್ಕಳಿಗಾಗಿ ಕಾತರಿಸಿ ಸೋತುಹೋಗಿದ್ದೇವೆ. ನಝೀಮಾ ತಾನು ಬಂಜೆ ಅನ್ನೋ ಜನರ ಮಾತಿನಿಂದ ತುಂಬಾ ನೊಂದುಕೊಂಡಿದ್ದಾಳೆ. ಅವಳಿಗೀಗ ಒಂದು ಮಗುವಿನ ಅಗತ್ಯವಿದೆ. ಅದಕ್ಕಾಗಿ ನಿನ್ನ ಬಳಿ ಬಂದು ಯಾಚಿಸುತ್ತಾ ಇದ್ದೇನೆ. ನೀನು ಇಲ್ಲ ಅನ್ನಬಾರದು. ಆತನನ್ನ ನನಗೆ ದತ್ತಕ ಕೊಟ್ಟ ಮೇಲೆ ನೀವು ಯಾವ ಕ್ಷಣದಲ್ಲಾದರೂ ಬಂದು ನೋಡಿಕೊಂಡು ಹೋಗಬಹುದು. ನೀವು ಯಾವ ರೀತಿ ಅವನನ್ನು ನೋಡಿಕೊಳ್ಳುತ್ತೀರೋ ಅದಕ್ಕಿಂತ ಮಿಗಿಲಾದ ಪ್ರೀತಿಯಿಂದ ನಾವು ಅವನನ್ನು ನೋಡಿಕೊಳ್ಳುವ ಭರವಸೆ ನೀಡುತ್ತೇನೆ.''

ನಾನು ಹೇಳಿದೆ, ''ನಿನಗೆ ಇಲ್ಲ ಎನ್ನಲು ಮನಸ್ಸು ಬರುತ್ತಿಲ್ಲ. ಆದರೆ ಯಾವ ತಂದೆ-ತಾಯಿ ತಾನೇ ತಾವು ಹುಟ್ಟಿಸಿದ ಮಗುವನ್ನು ಇನ್ನೊಬ್ಬರಿಗೆ ದತ್ತು ನೀಡಿಯಾರು ?''

''ಅಕ್ಬರ್, ನೀನು ಯೋಚಿಸಿ ನೋಡು. ನೀನು ಮೂರು ಮಕ್ಕಳನ್ನು ಸಾಕಲು ಎಷ್ಟು ಕಷ್ಟಪಡುತ್ತೀ ಎಂದು ನನಗೆ ಗೊತ್ತು. ಈ ಪರಿಸ್ಥಿತಿಯಲ್ಲಿ ಒಬ್ಬನನ್ನು ನನಗೆ ಕೊಡುವುದರಲ್ಲಿ ತಪ್ಪೇನಿಲ್ಲ !''

''ನನಗೆ ಯೋಚಿಸಿ ನಿರ್ಧರಿಸಲು ಒಂದಷ್ಟು ಕಾಲಾವಕಾಶ ಕೊಡು.'' ನಾನೆಂದೆ.

''ಆತ ಹೊರಟುಹೋದ ಎಷ್ಟೋ ಹೊತ್ತಿನ ತನಕ ನಾನು ಹಾಗೇ ಕುಳಿತಿದ್ದೆ. ನನಗೆ ಏನು ಮಾಡುವುದೆಂದು ತೀರ್ಮಾನಿಸಲಾಗಲಿಲ್ಲ. ಆಸೀಫ್ ನನ್ನೊಡನೆ ಜಾವೇದನನ್ನು ದತ್ತಕ ಕೇಳಿದ ಸಂಗತಿ ಆಸ್ಮಾಳಿಗೆ ಗೊತ್ತಿರಲಿಲ್ಲ. ಅದನ್ನು ಅವಳಿಗೆ ತಿಳಿಸುವುದೇ ಸರಿ ಎಂದು'' ಅವಳನ್ನು ಕರೆದು ಹೇಳಿದೆ...

''ಆಸೀಫ್ ಇಲ್ಲಿಗೆ ಯಾಕೆ ಬಂದಿದ್ದ ನಿನಗೆ ಗೊತ್ತೇನು ?''

''ಇಲ್ಲ !''

''ಜಾವೇದನನ್ನ ಆತನಿಗೆ ದತ್ತು ಕೊಡಬೇಕಂತೆ !''

ಅವಳು ಒಮ್ಮೆಲೆ ದಿಗಿಲು ಬಿದ್ದು ಕೇಳಿದಳು.

''ನೀವು ಕೊಡುತ್ತೀರೆಂದು ಒಪ್ಪಿಕೊಂಡಿರೇನು ?''

''ಸ್ವಲ್ಪ ಕಾಲಾವಕಾಶ ಕೇಳಿಕೊಂಡೆ !''

''ಕಾಲಾವಕಾಶ ಏನು ಕೇಳೋದು. ನೀವು ಜಾವೇದನನ್ನು ಏನಾದರೂ ಅವರಿಗೆ ಕೊಟ್ಟರೆ ನಾನು ಸತ್ತುಹೋಗುತ್ತೇನೆ ಅಷ್ಟೇ !''

''ಸಾಯುವ ಮಾತೇನು ಆಡಬೇಡ ನೀನು. ಅವನು ನಮಗೆ ಎಷ್ಟು ಉಪಕಾರ ಮಾಡಿದ್ದಾನೆ ಎಂದು ನಿನಗೆ ಗೊತ್ತು. ನಾವು ಇವತ್ತು ಊಟ ಮಾಡುವುದಿದ್ದರೆ ಅದಕ್ಕೆ ಕಾರಣ ಅವನು. ಅಲ್ಲದೆ ನಮಗೆ ಮೂರು ಮಕ್ಕಳನ್ನು ಸಾಕಲು ಎಷ್ಟು ಕಷ್ಟವಾಗುತ್ತಿದೆ ಗೊತ್ತಾ ? ಅವನಾದರೋ ಭಾರೀ ಶ್ರೀಮಂತ. ನಮ್ಮ ಮಗ ಅಲ್ಲಿಗೆ ಹೋಗಿ ಅವರ ಮಗನಾಗಿ ಬೆಳೆಯೋದರಿಂದ ಅವನಿಗೆ ಒಳ್ಳೆಯ ಭವಿಷ್ಯವಿದೆ. ನೀನು ಯೋಚಿಸಿ ನೋಡು.''

ಅವಳು ನನ್ನ ಕೈ ಹಿಡಿದುಕೊಂಡು ಹೊರಗೆ ಮಕ್ಕಳು ಆಡುವುದನ್ನು ತೋರಿಸಿ ಹೇಳಿದಳು.

''ನೋಡಿ, ಮಕ್ಕಳು ಹೇಗೆ ಪರಸ್ಪರ ಹೊಂದಿಕೊಂಡು ಆಡುತ್ತಾ ಇದೆ. ನಾಳೆ ಜಾವೇದನನ್ನು ಬೇರ್ಪಡಿಸಿದಾಗ ಉಳಿದ ಈ ಇಬ್ಬರು ಮಕ್ಕಳು ಹೇಗೆ ನೊಂದುಕೊಂಡಾವು ನೀವೇ ಹೇಳಿ. ಅಲ್ಲದೆ ಈತನನ್ನು ನಾವು ದತ್ತು ನೀಡಿದೆವು ಅಂದುಕೊಳ್ಳಿ. ಅಲ್ಲಿ ಆತ ಎಲ್ಲಾ ಸೌಕರ್ಯಗಳ ನಡುವೆ ಬೆಳೆಯುವಾಗ ಆತನ ಒಡಹುಟ್ಟಿದ ಇನ್ನಿಬ್ಬರು ಇಲ್ಲಿ ಅನಾಥ ಪ್ರಜ್ಞೆಯಲ್ಲಿ ಬೆಳೆಯಬೇಕೇ ?''

''ಹಾಗೇನು ಆಗುವುದಿಲ್ಲ ಆಸ್ಮಾ. ನಾವು ಮುಂದೇನಾಗುವುದೋ ಎಂಬುದನ್ನು ಮರೆತು ಇವನನ್ನು ದತ್ತು ಕೊಟ್ಟುಬಿಡೋಣ.''

ಕೊನೆಗೂ ಅವಳು ಒಂದು ನಿರ್ಧಾರಕ್ಕೆ ಬಂದು ಜಾವೇದನನ್ನು ದತ್ತು ಕೊಡಲು ಒಪ್ಪಿದಳು.

ಅಕ್ಬರ್ ತಮ್ಮ ಮಗುವನ್ನು ದತ್ತು ಕೊಡಲಿಕ್ಕಿಲ್ಲ ಎಂಬ ಸಂಶಯ ನನ್ನದಾಗಿತ್ತು. ಯಾವ ತಂದೆ-ತಾಯಿ ತಾನೇ ತಮ್ಮ ಮಗುವನ್ನು ಇನ್ನೊಬ್ಬರಿಗೆ ಸಾಕಲು ಕೊಟ್ಟಾರು ? ಅವರ ಸ್ಥಾನದಲ್ಲಿ ನಾವೇ ಇದ್ದರೆ ಕೊಡುವ ಮನಸ್ಸು ಮಾಡುತ್ತಿದ್ದೇವೆ ? ಖಂಡಿತಾ ಇಲ್ಲ, ಅಕ್ಬರ್, 'ಕಾಲಾವಕಾಶ ಕೊಡು' ಎಂದಿದ್ದರಂತೆ. 'ಕೊಡಲಾಗುವುದಿಲ್ಲ' ಎಂದರೆ ಯಾವುದೋ ಅನಾಥಾಶ್ರಮದಿಂದ ತಂದರಾಯ್ತು.

ಇವರು ಅಕ್ಬರ್ ಬಳಿ ಹೋಗಿ ಬಂದ ಎರಡು ದಿನದ ನಂತರ ಒಂದು ದಿನ ಅಕ್ಬರ್ ಮತ್ತು ಅವನ ಹೆಂಡತಿ ಆಸ್ಮಾ ಆ ಸಣ್ಣ ಹುಡುಗನೊಂದಿಗೆ ಬಂದರು. ಆ ಹುಡುಗ ಕಪ್ಪಗೆ ಇದ್ದ. ಆದರೆ ಅಷ್ಟೇನೂ ಕಪ್ಪಲ್ಲ. ಆದರೂ ಮುಖದಲ್ಲಿ ಅದೇನೋ ಕಳೆ. ನಾನು ಇವನನ್ನು ಚೆನ್ನಾಗಿ ಸಾಕಬಲ್ಲೆನೆಂಬ ನಿರ್ಧಾರ ಮಾಡಿದೆ.

ಅವರು ಒಳಬಂದರು.

ಆಸ್ಮಾ ನನ್ನ ಕೈ ಹಿಡಿದು ಹೇಳಿದಳು, ''ನೀವು ಗಂಡ-ಹೆಂಡತಿ ನಮ್ಮ ಬದುಕಿಗೆ ಒಂದು ದಾರಿಯಾಗಿದ್ದೀರಿ. ಇವತ್ತು ನಾವು ಅನ್ನ ಉಣ್ಣುವುದಾದರೆ ಅದು ನೀವು ನೀಡಿದ ಭಿಕ್ಷೆ. ಅಂದು ನಾವು ನಿಮ್ಮೊಡನೆ ಅನ್ನಕ್ಕಾಗಿ ಯಾಚಿಸುತ್ತಿದ್ದೆವು. ನೀವು ಇಲ್ಲ ಅನ್ನದೆ ನಮಗೆ ಅನ್ನ ನೀಡಿದಿರಿ. ಇಂದು ನೀವು ನಮ್ಮ ಮಗನನ್ನು ಕೇಳಿದಾಗ ನಾವು ಯಾವ ನಾಲಗೆಯಿಂದ ಇಲ್ಲ ಅನ್ನಲಿ. ಇದುವರೆಗೆ ಅವನನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕಿದ್ದೇವೆ. ನೀವು ಅದೇ ರೀತಿ ತಾಯಿ-ತಂದೆಯ ಪ್ರೀತಿಯನ್ನು ನೀಡುತ್ತೀರೆಂಬ ಭರವಸೆಯಿಂದ ಈತನನ್ನು ನಿಮಗೆ ನೀಡುತ್ತಿದ್ದೇವೆ. ಈತನನ್ನು ದೊಡ್ಡ ವ್ಯಕ್ತಿಯನ್ನಾಗಿ ಮಾಡಬೇಕೆಂಬ ಕನಸು ನಮ್ಮದಾಗಿತ್ತು. ಅಂತಹ ದೊಡ್ಡ ವ್ಯಕ್ತಿಯನ್ನಾಗಿ ಮಾಡುತ್ತೀರೆಂಬ 'ಭರವಸೆ' ನನಗಿದೆ.

ನಾನು ಏನು ಹೇಳಲಿ ? ಇಲ್ಲ ಅನ್ನಲೇ. ಮಗು ಇಲ್ಲದ ನನಗೆ ಅವರು ತಮ್ಮ ಮಗನನ್ನು ನೀಡಿದ್ದರು. ಅದಕ್ಕಿಂತ ದೊಡ್ಡ ದಾನ ಇನ್ನೇನಿದೆ.

ನಾನು ಅವಳ ಕೈಹಿಡಿದು ಹೇಳಿದೆ.

''ನೀವು ಏನೂ ಯೋಚಿಸೋದು ಬೇಡ. ನಾನು ಹೆತ್ತ ಮಗುವಿನಂತೆ ನೋಡಿಕೊಳ್ಳುತ್ತೇನೆ.''

ಆಸೀಫ್ ಒಳಹೋಗಿ ಹತ್ತು ಸಾವಿರ ರೂ.ಗಳನ್ನು ತಂದು, ಅಕ್ಬರ್‌ನಿಗೆ ಕೊಡುತ್ತಾ ಅಂದರು, ''ಇದು ನನ್ನ ಅಲ್ಪಕಾಣಿಕೆ. ನೀನು ಇಲ್ಲ ಅನ್ನದೇ ತೆಗೆದುಕೊಳ್ಳಬೇಕು !''

ಆತ ಅದನ್ನು ನಿರಾಕರಿಸುತ್ತಾ ಹೇಳಿದ. ''ನಾವು ಮಗನನ್ನು ಮಾರಾಟ

ಮಾಡಲು ಬಂದವರೇನಲ್ಲ. ನಮ್ಮ ದಾನಕ್ಕೆ ನೀವು ಬೆಲೆ ಕಟ್ಟಬಾರದು !''

''ನಾವು ಬೆಲೆ ಕಟ್ತೋದೇನಲ್ಲ. ಇದು ನೀವು ಮಾಡಿದ ಉಪಕಾರಕ್ಕೆ ಕಿಂಚಿತ್ತು ಕಾಣಿಕೆ !''

''ನಾವು ಮಾಡಿದ ಉಪಕಾರಕ್ಕೆ ನೀವು ಯೋಗ್ಯ ಬೆಲೆ ನೀಡುವುದಾದರೆ ಒಂದು ಮಾತು ನಡೆಸಿಕೊಡಬೇಕು.''

''ಹೇಳಿ'' ನಾನು ಹೇಳಿದೆ.

''ವೈದ್ಯರು ನಿಮ್ಮಿಬ್ಬರಲ್ಲೂ ಮಕ್ಕಳಾಗೋ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಮದುವೆಯಾದ ಹದಿನೈದು ವರ್ಷಗಳ ನಂತರವೂ ಮಕ್ಕಳಾದವರಿದ್ದಾರೆ. ಹಾಗೊಂದು ವೇಳೆ ನಿಮಗೆ ಮಕ್ಕಳಾದರೆ, ಜಾವೇದನ ಮೇಲೆ ನಿಮ್ಮ ಪ್ರೀತಿ ಕಡಿಮೆ ಆಗಬಹುದು.''

''ಇಲ್ಲ... ಅದು ಸಾಧ್ಯವೇ ಇಲ್ಲ. ಅಂತಹ ಸಂಶಯ ಬೇಡ. ನಮಗೊಂದು ವೇಳೆ ಮಕ್ಕಳಾದರೂ ಇವನ ಮೇಲಿನ ಪ್ರೀತಿ ಸ್ವಲ್ಪವೂ ಕಡಿಮೆಯಾಗೊಲ್ಲ.''

''ಮುಂದೆ ಹೇಗಾಗುತ್ತದೆ ಎಂದು ಹೇಗೆ ಹೇಳೋದು. ಅದಕ್ಕೆ ನನ್ನ ಮಗ ನಿಮ್ಮ ಮಗನಾಗಿ ಬೆಳೆಯೋದಕ್ಕೆ ಇನ್ನು ಮುಂದೆ ಈ ಮನೆಯಲ್ಲಿ ಮಕ್ಕಳಾಗ ಬಾರದು. ನೀವು ಯಾರಾದರೊಬ್ಬರು ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕು !''

ನಾನು ಒಮ್ಮೆಲೆ ಕಿರುಚಿದೆ. ನನ್ನ ಮುಖದಲ್ಲಿ ಬೆವರು ಹುಟ್ಟಿತು. ನಾನು ಗಡಗಡನೆ ನಡುಗತೊಡಗಿದೆ; ನಾನು ಸಿಟ್ಟಿನಿಂದಲೇ ಹೇಳಿದೆ, ''ಸಾಧ್ಯವೇ ಇಲ್ಲ !''

ಆದರೆ ಅಸೀಫ್, ಅಕ್ಬರನ ಕೈಯ ಮೇಲೆ ಕೈ ಇಟ್ಟು ದೃಢ ನಿರ್ಧಾರದಲ್ಲಿ ಹೇಳಿದರು.

''ಅಕ್ಬರ್, ನೀವಿಬ್ಬರು ಇಷ್ಟು ಸ್ವಾರ್ಥಿಗಳಾಗಬಾರದು. ಆದರೂ ನಾನು ನಿಮ್ಮ ಮಗನನ್ನು ನನ್ನ ಮಗನೆಂದು ಒಪ್ಪಿಕೊಂಡಾಗಿದೆ. ನಾನು ಅಲ್ಲಾಹನ ಮೇಲೆ ಆಣೆ ಇಟ್ಟು, ನಿಮ್ಮ ಮಗನನ್ನು ದತ್ತು ತೆಗೆದುಕೊಂಡ ಈ ಕ್ಷಣದಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ. ಇನ್ನೆಂದೂ ನನ್ನ ಹೆಂಡತಿಯ ಗರ್ಭದಲ್ಲಿ ಮಗು ಹುಟ್ತೊಲ್ಲ.''

ಅವರಿಬ್ಬರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಅವರ ಮುಖ ಅರಳಿತು. ಅವರಿಬ್ಬರೂ ಆ ಹುಡುಗನನ್ನು ಬಿಟ್ಟು ಹೊರಟುಹೋದರು.

## ಕತೆಗೊಂದು ಅಂತ್ಯ

ಅವರಿಬ್ಬರೂ ಹೊರಟುಹೋದ ಎಷ್ಟೋ ಹೊತ್ತಿನ ತನಕ ಇವರಿಬ್ಬರೂ ಹಾಗೇ ಕುಳಿತಿದ್ದರು. ಆ ಹುಡುಗ ಅವರಿಬ್ಬರನ್ನು ಪಿಳಿ-ಪಿಳಿ ನೋಡುತ್ತಿದ್ದ.

ನಝೀಮಾ ಅವನನ್ನು ಹತ್ತಿರ ಕರೆದು ಬಾಹುಗಳಲ್ಲಿ ತಬ್ಬಿಕೊಂಡು ಕೇಳಿದಳು.

''ನೀನು ನಮ್ಮ ಜತೆ ಇರುತ್ತೀಯಾ ?''

''ಹೌದು !'' ಎಂದ ಹುಡುಗ.

ಆಕೆ ಗಂಡನೊಡನೆ ಕೇಳಿದಳು.

''ಯಾಕೆ ಇಂತಹಾ ಆತುರದ ನಿರ್ಧಾರ ಕೈಗೊಂಡಿರಿ ?''

''ಇದು ಸರಿಯಾದ ನಿರ್ಧಾರ. ಅವರ ಸ್ಥಾನದಲ್ಲಿ ನಾವಿದ್ದರೂ ಇದೇ ಮಾತನ್ನು ಹೇಳ್ತಿದ್ದೆವು. ನಾಳೆ ನಿನಗೊಂದು ಮಗುವಾದರೆ ನಾವು ಈ ಹುಡುಗನನ್ನು ಯಾವ ರೀತಿ ನೋಡುತ್ತೇವೆಯೋ ಈಗಲೇ ಹೇಳಲು ಹೇಗೆ ಸಾಧ್ಯ ? ಆ ಮಗುವಿನ ಪ್ರೀತಿಯಲ್ಲಿ ಇವನ ಬಗ್ಗೆ ಪ್ರೀತಿ ಕಮ್ಮಿಯಾಗಬಹುದು. ಅದಕ್ಕೆ ನಾಳೇನೆ ನಾನು ವ್ಯಾಸೆಕ್ಟಮಿ ಮಾಡಿಸಿಕೊಳ್ಳುತ್ತೇನೆ !''

ಅವನ ಉದಾತ್ತ ಗುಣವನ್ನು ಕಂಡು ನಝೀಮಾ ಪ್ರೀತಿಯಿಂದ ತಬ್ಬಿಕೊಂಡಳು.

# 11 ಜಮೀಲಾ

ಸಾಯಂಕಾಲ, ಬಿಸಿಲು ಮಾಸಿ ಮನೆಯ ಎದುರಿಗಿನ ತೆಂಗಿನ ಮರದ ದೀರ್ಘವಾದ ನೆರಳು ಮನೆಯ ಒಳಗೆ ಚಾಚಿಕೊಳ್ಳುತ್ತದೆ. ಮಂಡಿಗೆ ಗಲ್ಲ ಊರಿ, ಯೋಚನೆಯಲ್ಲಿದ್ದ ಜಮೀಲಾ ಆ ನೆರಳಿಗೆ ಹಿಮ್ಮುಖವಾಗಿ ತನ್ನ ದೃಷ್ಟಿಯನ್ನು ಹರಿಸುತ್ತಾಳೆ. ಬಾನಿನ ಕೊನೆಯಲ್ಲಿ ಸೂರ್ಯನ ಕೆಂಪು ಹಬ್ಬಿಕೊಂಡಿದೆ. ಅದರೊಂದಿಗೆ ತಣ್ಣಗಿನ ಕೆಂಪು ಸೂರ್ಯ. ಇನ್ನೇನು ಅವನು ಬಂದು ತನ್ನನ್ನು ಆವರಿಸಿಕೊಂಡು ತನ್ನ ದೇಹವನ್ನು ಹುಡಿ ಹುಡಿ ಮಾಡುತ್ತಾನೆ. ಬೆಳಗಾಗುವವರೆಗೆ ತನ್ನ ಬೆತ್ತಲೆಯನ್ನು ನೆಕ್ಕುತ್ತಾನೆ. ಬೆಳಗಾದ ಕೂಡಲೇ ತಾನು ಅವನಿಗೆ ಏನೂ ಸಂಬಂಧವಿಲ್ಲದವನಂತೆ, ''ತಲಾಖ್, ತಲಾಖ್, ತಲಾಖ್'' ಎಂದು ತನ್ನಿಂದ ಬೇರ್ಪಟ್ಟು ಸೀದಾ ಹೊರಟುಹೋಗುತ್ತಾನೆ.

ಯೋಚಿಸುತ್ತಾ ಹಾಗೆಯೇ ಕುಳಿತಿರುತ್ತಾಳೆ ಜಮೀಲಾ - ಇನ್ನೊಂದು ಕ್ಷಣದಲ್ಲಿ ತನಗಾಗಿ ಬರುವ ಅವನ ನೆನಪಾಗುತ್ತದೆ. ಅವನ ಹೆಸರನ್ನು ''ಖಾಸಿಂ'' ಎಂದು ಬಾಪಾ ಹೇಳಿದ ನೆನಪು. ಹಿಂದಿನ ದಿನ ಕಿಟಕಿಯಲ್ಲಿ ಅವನನ್ನು ನೋಡಿದ ನೆನಪು. ತಿಳಿ ನೀಲಿ ಬಣ್ಣದ ಶರ್ಟನ್ನು ಧರಿಸಿದ್ದ ಅವನ ಬೆನ್ನು ಮಾತ್ರ ಕಾಣುತ್ತೆ. ಮುಖ ಕಾಣಿಸುವುದಿಲ್ಲ, ಅವನಿಗೆದುರಾಗಿ ನಿಂತು ಮಾತಾಡುತ್ತಿರುವ ಬಿಳಿ ಗಡ್ಡದ ಮೌಲ್ವಿ ಕಾಣಿಸುತ್ತಾರೆ. ಅವರು ಅವನೊಂದಿಗೆ ಏನೇನೋ ಮಾತಾಡ್ತಿರ್ತಾರೆ. ಅವನು ತಲೆಯಾಡಿಸುತ್ತಾ ಕೊನೆಗೆ ಎದ್ದುನಿಂತು ಮುಂದಕ್ಕೆ ಹೆಜ್ಜೆಯಿರಿಸಿದಾಗ ಮೌಲ್ವಿಯ ಮುಖದ ಗೆಲುವು. ಅಲ್ಲೇ ಕುಳಿತ ಬಾಪಾನ ಮುಖದ ನಗು ಜಮೀಲಾಳಿಗೆ ಸರಿಯಾಗಿ ಅರ್ಥವಾಗುತ್ತೆ.

ಹೌದು ! ಅವನು ಒಪ್ಪಿಕೊಂಡಿದ್ದ ! ಒಂದು ರಾತ್ರಿಗೆ ಜಮೀಲಾಳ ಎರಡನೆಯ ಗಂಡನಾಗುವುದಕ್ಕೆ ಅವನು ಒಪ್ಪಿಕೊಂಡಿದ್ದ! ಮೌಲ್ವಿಯವರು ಮತ್ತೆ ಮತ್ತೆ ಹೇಳಿದ್ದರು. ಜಮೀಲಾಳ ಬಾಪಾರಿಗೆ ''ಜಮೀಲಾ ಒಂದು ರಾತ್ರಿ ಖಾಸಿಂನನ್ನು ಗಂಡನನ್ನಾಗಿ ಪಡೆಯುವುದರಿಂದ ಗರ್ಭವತಿ ಏನಾದರೂ ಆದರೆ. ಅಂದರೆ ನಂತರದ ಮೂರು ತಿಂಗಳಲ್ಲಿ ಅವಳು ಗರ್ಭಿಣಿ ಎಂದು ಗೊತ್ತಾದರೆ ಆ ಮಗು ಹುಟ್ಟುವ ತನಕ ಜಮೀಲಾ ಉಮರ್‌ನನ್ನು ಮದುವೆಯಾಗುವುದು ಸಾಧ್ಯವಿಲ್ಲ! ಅವಳು ಹೆತ್ತ ಮಗುವಿನ ವಾರಸುದಾರ ಅವಳಿಗೆ ಗರ್ಭ ನೀಡಿದ ಖಾಸಿಂ ಆಗುತ್ತಾನೆ. ಆ ಮಗುವನ್ನು ಖಾಸಿಂಗೆ ಕೊಟ್ಟು ಅವಳು ಉಮರ್‌ನನ್ನು

ಮದುವೆಯಾಗಬಹುದು. ಒಂದು ವೇಳೆ ಗರ್ಭವತಿ ಆಗದೆ ಇದ್ದರೆ ಮೂರು ತಿಂಗಳ ಮೇಲೆ ಮತ್ತೆ ಉಮರ್‌ನನ್ನು ಮದುವೆಯಾಗಬಹುದು.''

ಉಮರ್ ! ಜಮೀಲಾಳ ಮೊದಲ ಗಂಡ ! ಎರಡು ವರ್ಷಗಳ ಹಿಂದೆ ಇಂತದ್ದೇ ಒಂದು ದಿನ ಜಮೀಲಾ ಅವನಿಗೆ ಹೆಂಡತಿಯಾಗಿದ್ದಳು. ಅವಳು ಅಂದೂ ಇದೇ ಮನೆಯ ಕತ್ತಲಲ್ಲಿ ಕುಳಿತುಕೊಂಡು ಆ ದಿನವೂ ಹೀಗೆ ಯೋಚಿಸಿದ್ದಳು. ''ಉಮರ್ ಹೇಗಿರಬಹುದು ? ಕಪ್ಪಗಾ ಅಲ್ಲ ಬೆಳ್ಳಗಾ ? ಅಥವಾ ಪಕ್ಕದ್ಮನೆಯ ಜೈನಾಬೀಯ ಗಂಡನಂತೆ ಬಿಳೀ ಗಡ್ಡ ಇರುವ ಅರವತ್ತು ವರ್ಷದ ಮುದುಕನೇ ? ಅಥವಾ ಮೊಯ್‌ದಿ ಬ್ಯಾರಿಯವರ ಮಗಳು ಪಾತುಞ್ಞಾಯ ಗಂಡನಂತೆ ಮೂರು ಮಂದಿ ಹೆಂಡತಿಯಿದ್ದವನೇ ? ಎಲ್ಲವೂ ಬಗೆಹರಿಯಲಾರದ ಸಮಸ್ಯೆಗಳು. ಜಮೀಲಾ ಹಾಗೆಯೇ ಬಗೆಹರಿಯಲಾರದ ಸಮಸ್ಯೆಯಲ್ಲಿದ್ದಾಗಲೇ ಮೌಲ್ವಿ ಯವರು ಕೋಣೆಯ ಬಾಗಿಲಲ್ಲಿ ನಿಂತು ಕೇಳಿದ್ದರು. ''ಜಮೀಲಾ ನಿನಗೆ ಉಮರ್ ನನ್ನು ಮದುವೆಯಾಗುವುದು ಇಷ್ಟವೇ ?'' ಅವಳು ಫಕ್ಕನೆ ಉತ್ತರವನ್ನು ಕೊಟ್ಟಿರಲಿಲ್ಲ. ಅವಳು ಆ ಬಗ್ಗೆ ಒಂದು ನಿರ್ಧಾರಕ್ಕೂ ಬಂದಿರಲಿಲ್ಲ. ಸ್ವಂತಿಕೆ ಇಲ್ಲದ ತನ್ನ ಮದುವೆ ! ಮದುವೆ ತನ್ನದು, ಆದರೆ ತಾನು ಇಲ್ಲಿ ಬಲಿಪಶು ! ತನ್ನ ಆಸೆ, ಆಕಾಂಕ್ಷೆ, ಹೃದಯದ ಸಂತೋಷಕ್ಕೆ ಯಾವುದೇ ಒಂದು ಒಳ್ಳೆಯ ತೀರ್ಮಾನ ಇಲ್ಲ. ತನ್ನ ಒಪ್ಪಿಗೆ ಪಡೆದೂ ಈ ಮದುವೆಯ ಏರ್ಪಾಟಾಗಿಲ್ಲ. ಎಲ್ಲಾ ಮುಗಿದ ನೂರಾರು ಜನ ಸೇರಿದ ಮದುವೆಯ ಮನೆಯಲ್ಲಿ ಸಾವಿರಾರು ರೂಪಾಯಿ ಖರ್ಚು ಮಾಡಿ ಮಾಂಸ ಅನ್ನ ಮಾಡಿ ಇಟ್ಟ ವೇಳೆಯಲ್ಲಿ ಮೌಲ್ವಿ ಬಂದು 'ಈ ಮದುವೆ ನಿನಗೆ ಒಪ್ಪಿಗೆನಾ.' ಎಂದು ಕೇಳುವಾಗ 'ಇಲ್ಲಾ' ಎಂದರೆ ಇಷ್ಟೆಲ್ಲಾ ಖರ್ಚು ಮಾಡಿದ ತಂದೆಯ ಬಾಳು ಏನಾದೀತು ? ಎಂದು ಯೋಚಿಸಿ ತನ್ನ ಬಾಳಿನ ಬಗ್ಗೆ ಯೋಚಿಸದೆ ಕಿವಿ, ಕೈ ಬೋಳು ಬೋಳಾಗಿರುವ ತಾಯಿಯ ನೋವಿನ ಕಣ್ಣುಗಳನ್ನೇ ನೋಡುತ್ತಾ 'ಹುಂ' ಅಂದಳು. ಮೌಲ್ವಿಯವರು ಒಪ್ಪಿಗೆ ಪಡೆದು ಹೊರಟುಹೋದರು.

ಜಮೀಲಾ ತನ್ನ ಮೈಮೇಲೆ ಇದ್ದ ಏಳು ಪವನು ಚಿನ್ನದ ಆಭರಣಗಳನ್ನು ನೋಡುತ್ತಾ ಮಾತಿನಂತೆ ಹೇಳಿದ ಒಟ್ಟು ಹನ್ನೆರಡು ಪವನಿನಲ್ಲಿ ಇನ್ನುಳಿದ ಐದು ಪವನಿಗೆ ಬಾಪಾ ಏನು ಮಾಡುತ್ತಾರೋ ಎಂದು ಚಿಂತೆಯಲ್ಲಿರುವಾಗಲೇ ಈ ಮನೆಗಿಂತ ಮೂವತ್ತು ಮೈಲು ದೂರದಲ್ಲಿ ಅವಳ ಮದುವೆ ಉಮರ್‌ನೊಂದಿಗೆ ಆಗಿಹೋಗಿತ್ತು.

ಮರುದಿನ ರಾತ್ರಿ ಉಮರ್‌ನನ್ನು ಕಂಡು ಬೆಚ್ಚಿಬೀಳಲಿಲ್ಲ. ತಾನೆಣಿಸಿದಂತೆ ಅವನೇನೂ ಇರಲಿಲ್ಲ. ಇಪ್ಪತ್ತೈದು ವರ್ಷದ ಬಿಳೀ ದೇಹದ ತುಂಟ ಕಣ್ಣುಗಳ

ಅವನನ್ನು ನೋಡಿ, ಅವನ ಚಂದಕ್ಕೆ ಮರುಳಾಗಿ ಸುಖದ ನಿರೀಕ್ಷೆಯಲ್ಲಿ ಕನವರಿಸಿದ್ದಳು. ಮುಚ್ಚಿದ ಬಾಗಿಲು ! ಉಮರ್ ನಗುತ್ತಲೇ ಇದ್ದಾನೆ ! ಎಂತಹಾ ಚಂದ ಆ ನಗು ! ಅಬ್ಬಾ ಆ ಕಣ್ಣುಗಳ ಸೆಳೆತವೇ, ಕಣ್ಮುಚ್ಚಿಕೊಳ್ಳುತ್ತಾಳೆ ಜಮೀಲಾ. ಅವನು ಮೆಲ್ಲನೆ ಅವಳ ಕೈ ಹಿಡಿಯುತ್ತಾನೆ. ಅವಳ ಹೃದಯ ಥಾರಿ ಬೀಳುತ್ತದೆ. ಎದೆ ಜೋರಾಗಿ ಬಡಿದುಕೊಳ್ಳುತ್ತದೆ. ಆ ರಾತ್ರಿಯಲ್ಲೂ ಅವಳ ಮುಖದಲ್ಲಿ ಬೆವರು ಒಡೆಯುತ್ತದೆ. ''ಜಮೀಲಾ'', ಆ ಸುಖವಾದ ರಾತ್ರಿಯಲ್ಲಿ ಅವನ ಮೃದುವಾದ ಕರೆ ಅವಳ ದೇಹದಲ್ಲೆಲ್ಲಾ ಚೇತನ ಉಕ್ಕೇರಿಸುತ್ತದೆ. 'ಉಮರ' ಎಂದು ಕರೆಯಬೇಕೆನಿಸುತ್ತೆ. ಆದರೆ ಅಪ್ಪಿಕೊಂಡ ನಾಚಿಕೆ ! ಅವನು ತನ್ನ ಹೆಸರನ್ನು ಹೇಳಲು ಅವಳನ್ನು ಒತ್ತಾಯಿಸುತ್ತಾನೆ. ಅವಳು ಮುಖ ಮುಚ್ಚಿಕೊಳ್ಳುತ್ತಾಳೆ. ಅವನು ಅವಳ ಕೈಗಳನ್ನು ಬೇರ್ಪಡಿಸುತ್ತಾನೆ. ''ಹೇಳು ಚಿನ್ನಾ, ನನ್ನ ಮುತ್ತೇ'' ಅನ್ನುತ್ತಾನೆ. ಕೊನೆಗೂ ಮೆಲ್ಲನೆ ಅನ್ನುತ್ತಾಳೆ ''ಉಮರ್.'' ಅಷ್ಟೇ ಅವಳ ತೆರೆದ ತುಟಿಗಳನ್ನು ಫಕ್ಕನೆ ತನ್ನ ತುಟಿಗಳಿಂದ ಮುಚ್ಚಿಕೊಳ್ಳುತ್ತಾನೆ.....

ಸುಖ ! ಹೌದು, ಆರು ತಿಂಗಳೂ ಪೂರ್ತಿ ಪಡೆದ ಸುಖ ! ಅದೇ ಕಣ್ಣು, ಅದೇ ಮುಖ, ಅದೇ ತೋಳಿನ ಪ್ರೀತಿಯ ಬಂಧನ ! ಕ್ರಮೇಣ ಪ್ರೀತಿ ಕರಗುತ್ತದೆ ! ಬಂಧನ ಸಡಿಲಾಗುತ್ತದೆ ! ಸುಖ ಕನಸಾಗುತ್ತದೆ ! ಅವಳ ಕಿವಿ, ಕುತ್ತಿಗೆ, ಕೈಗಳ ಚಿನ್ನದ ವಡವೆಗಳು ಕರಗಿಹೋಗುತ್ತವೆ !

ಒಂದು ದಿನ ! ಅದು ಆ ಮನೆಯಿಂದ ಮತ್ತೆ ಜಮೀಲಾಳನ್ನು ತವರಿನ ಮನೆಗೆ ತಳ್ಳಿದ ಆ ದಿನ ! ಸುಖ ಪೂರ್ತಿಯಾಗಿ ಸುಟ್ಟುಹೋದ ದಿನ ! ಉಮರ್ ಅವಳನ್ನು ಕರೆತಂದು ಆ ಮನೆಯೊಳಗೆ ನೂಕಿ ಹೋದ. ಜಮೀಲಾಳ ಬಾಪಾ ಉಮ್ಮ ಎದೆ ಎದೆ ಬಡಿದುಕೊಂಡರು. ''ಉಮರ್ ನಿನಗೆ ಏನಾಗಬೇಕು ಹೇಳು ? ನನ್ನ ಮೋಳು ನಿನಗೆ ಏನು ದ್ರೋಹ ಮಾಡಿದಳು ಹೇಳು'' ಜಮೀಲಾಳ ಬಾಪಾ ಉಮರ್‌ನ ಕೈ ಹಿಡಿದು ಕೇಳಿದರು. ''ನನಗೆ ಕೊಡದೇ ಉಳಿದ ಐದು ಪವನು ಬಂಗಾರ ಇದೆಯಲ್ಲಾ ! ತೆಗೆದು ಬಿಸಾಕಿ ! ಬಂಗಾರ ಇಲ್ಲವೋ ನಿಮ್ಮ ಮೋಳು ನನಗೆ ಬೇಡ. ನಿಮ್ಮ ಮೋಳು ನನ್ನ ಮೆಟ್ಟಿಲು ಹತ್ತಬೇಕಾದರೆ ಐದು ಪವನು ಚಿನ್ನ ಅವಳ ಮೇಲಿರ ಬೇಕು'' ಎಂದು ತುಕ್ಕನೆ ತುಪ್ಪಿ ಮುಂಡು ಎತ್ತಿ ಕಟ್ಟಿಕೊಳ್ಳುತ್ತಾ ಬಿರಬಿರನೆ ಹೋಗಿದ್ದ.

ಜಮೀಲಾಳ ಬಾಪಾ ಒಂದು ಕ್ಷಣ ಸ್ತಬ್ಧರಾಗಿದ್ದರು. ಅವನು ದೂರಕ್ಕೂ ಹಬ್ಬಿಕೊಂಡಿದ್ದ ದಾರಿಯಲ್ಲಿ ಕಾಣೆಸದಾಗುವವರೆಗೂ ನೋಡಿದರು. ಮತ್ತೆ ಮಗಳನ್ನು ನೋಡಿದರು. ಅವಳು ಗೋಡೆಗೆ ಒರಗಿ ಬಿಕ್ಕಿ ಅಳುತ್ತಿದ್ದಳು. ಈಗ ಅವಳು ಬದುಕಿನ ಎಲ್ಲ ಕಷ್ಟ ಸುಖ ಪಡೆದು ಮತ್ತೆ ನೋವಿನ ಕುಂಡಕ್ಕೆ ಬಿದ್ದಿದ್ದಳು. ಆರು ತಿಂಗಳ ಮೊದಲು ಅವಳು ಸುಖದ ಮದುವೆಯಾಗಿದ್ದಳು ! ಅದಕ್ಕಿಂತಲೂ ಆರು

ತಿಂಗಳ ಮೊದಲು ಅವಳು ತರುಣಿಯಾಗದ ಆಡುವ ಹುಡುಗಿಯಾಗಿದ್ದಳು !

''ಮೋಳೇ, ನನ್ನ ಮುದ್ದು ಮೋಳೆ. ಏನಾಯ್ತು ನಿನ್ನ ಬದುಕು. ಹಲವಷ್ಟು ಸುಂದರ ಕನಸುಗಳನ್ನು ಕಂಡಿದ್ದೆ ನಾನು ನಿನಗಾಗಿ. ಮುದ್ದಿನ ಅಳಿಯ ಎಂದು ಅವನನ್ನು ತಿಳಿದಿದ್ದೆ. ಅಯ್ಯೋ ಮೋಳೆ, ನಿನ್ನ ಬದುಕೇ ಹಾಳಾಗಿ ಹೋಯ್ತೇ ಯಾ ಅಲ್ಲಾಹುವೇ'' ಜಮೀಲಾಳ ಉಮ್ಮ ಎದೆ ಎದೆ ಬಡಿಯುತ್ತಾ ದುಃಖಿಸುತ್ತಿರುವಾಗ ಜಮೀಲಾಳ ಬಾಪಾ ಜಮೀಲಾಳ ಭವಿಷ್ಯತ್ತಿನ ಬಗ್ಗೆ ಯೋಚಿಸತೊಡಗಿದರು.

ಅಲೆದಾಟ ! ಆ ಎರಡು ತಿಂಗಳ ಅಲೆದಾಟ ! ಜಮೀಲಾಳ ಬಾಪಾ ಅಲೆದೂ, ಅಲೆದೂ ಸುಸ್ತಾದರು. ತನಗೆ ಗೊತ್ತಿದ್ದವರ ಕಾಲು ಕೈ ಹಿಡಿದರು. ಆದರೆ ಸಾಧ್ಯವಿರಲಿಲ್ಲ. ಏನನ್ನೂ ಗಳಿಸಲು ಸಾಧ್ಯವಿರಲಿಲ್ಲ. ಕೊನೆಗೆ ಎಲ್ಲಾ ಆಸೆಯನ್ನು ಅಲ್ಲಾಹುವಿನ ಮೇಲೆಯೇ ಇಟ್ಟು ಸುಮ್ಮನಿದ್ದುಬಿಟ್ಟರು. ಬಂದೇಬಿಟ್ಟ ! ಉಮರ್ ಕೊನೆಗೂ ಬಂದೇಬಿಟ್ಟ. ಅವಳನ್ನು ಮತ್ತೆ ಕರೆದೊಯ್ಯಲು ಅಲ್ಲ ! ಅವಳಿಗೆ ತಲಾಖ್ ನೀಡಲು. ಉಮರ್ ಕೊನೆಯ ಕೋರಿಕೆಯನ್ನು ಜಮೀಲಾಳ ಬಾಪಾ ಮುಂದಿಟ್ಟ. ''ನೋಡಿದ್ದಾಯ್ತು ! ಇಷ್ಟರವರೆಗೆ ನೋಡಿದ್ದಾಯ್ತು ! ಇನ್ನೇನೂ ನೋಡಲು ಉಳಿದಿಲ್ಲ. ನಾಳೇನೇ ನಾನು ಏರ್ಪಾಟು ಮಾಡಿದ್ದೇನೆ. ನೀವೂ ಮಸೀದಿಗೆ ಬನ್ನಿ. ನಾಳೆ ಸಂಜೆ ನಾಲ್ಕು ಗಂಟೆಗೆ ನಾನು ಜಮೀಲಾಳಿಗೆ ತಲಾಖ್ ಕೊಡ್ತೇನೆ.''

''ಉಮರ್ ಇದುವಾ ನಿನ್ನ ಮನಸ್ಸು , ನಾನು ನಿನಗೆ ಹೇಳಬೇಕಾದುದು ಬಹಳ ಇದೆ, ಕುಳಿತುಕೋ' ಜಮೀಲಾಳ ಬಾಪಾ ಕೊನೆಯ ಮಾತನ್ನು ಹೇಳಿದರು. ''ನೀವು ಹೇಳಬೇಕಾದುದನ್ನು ನಿಮ್ಮ ಮಗಳು ಜಮೀಲಾಳಿಗೆ ಹೇಳಿ, ನಾನು ತೀರ್ಮಾನ ಮಾಡಿದ ಮೇಲೆ ಮುಗಿಯಿತು'' ಎಂದವನೇ ಬಿರಬಿರನೆ ಹಿಂದಕ್ಕೆ ಹೋಗಿದ್ದ.

ಮರುದಿನ ಉಮರ್ ಮಸೀದಿಯಲ್ಲಿ ನಾಲ್ಕೈದು ಮಂದಿ ಸಾಕ್ಷಿಗಳ ಎದುರಿನಲ್ಲಿ ''ತಲಾಖ್, ತಲಾಖ್, ತಲಾಖ್'' ಎಂದು ಮೂರು ಸಲ ಹೇಳಿ ಅವಳಿಂದ ಬಿಡುಗಡೆ ಪಡೆದಿದ್ದ. ಮಸೀದಿಯಿಂದ ಹಿಂದಿರುಗಿ ಬರುವಾಗ ಜಮೀಲಾಳ ತಂದೆಯ ಕೈಲಿ ತೊಂಭತ್ತೆರಡು ರೂಪಾಯಿಗಳಿತ್ತು , ಆ ತೊಂಭತ್ತೆರಡು ರೂಪಾಯಿ 'ಮಹರ್' ರೂಪದಲ್ಲಿ ಉಮರ್‌ನಿಂದ ಅವರಿಗೆ ಸಿಕ್ಕಿತ್ತು. ಜಮೀಲಾಳಿಗೆ ಮುಂದಿನ ಬದುಕಿಗೆ ಸಾಕೇ ಈ ತೊಂಭತ್ತೆರಡು ರೂಪಾಯಿ.

''ಅಸ್ಸಲಾಂ ಅಲೈಕುಂ'' ಹೊರಗಿನಿಂದ ಗಂಡಸಿನ ಸ್ವರ ಕೇಳಿಸಿದಾಗ ಬೆಚ್ಚಿ ಬೀಳುತ್ತಾಳೆ ಜಮೀಲಾ ! ಅದುವರೆಗೆ ಮುತ್ತಿಕೊಂಡಿದ್ದ ನೆನಪುಗಳು ಸಂಪೂರ್ಣವಾಗಿ ಕರಗಿಹೋಗುತ್ತವೆ. ಪಡುವಣದಲ್ಲಿ ಬೆಳಕು ಸಂಪೂರ್ಣವಾಗಿ ಅಳಿಸಿಹೋಗಿ ಕತ್ತಲು ಮುಸುಕಿರುತ್ತದೆ. ಲಾಂಧ್ರದ ಬೆಳಕು ನೇರವಾಗಿ ಅವಳ ಮುಖಕ್ಕೆ ತಟ್ಟುತ್ತದೆ. ಹೊರಗೆ ನೆರೆದಿರುವ ಜನ. ಕಿಟಕಿಗೆ ಮುಖವಿಟ್ಟು ಹೊರಗೆ

ನೋಡುತ್ತಾಳೆ. ಬಿಳಿ ಅಂಗಿ. ಅವನು ಕಾಣಿಸುತ್ತಾನೆ. ಅವನೇ ಖಾಸಿಂ. ಮುದ್ದು ಮುದ್ದಾಗಿದ್ದಾನೆ. ತನ್ನನ್ನು ಒಂದು ದಿನಕ್ಕಾಗಿ ಹೆಂಡತಿಯನ್ನಾಗಿ ಮಾಡಿಕೊಳ್ಳಲು ಒಪ್ಪಿದವನು ! ತಾನೀಗ ಖಾಸಿಂನ ಹೆಂಡತಿ. ನಿನ್ನೆಯ ರಾತ್ರಿ ಅಪರಿಚಿತ ! ಈ ರಾತ್ರಿ ಗಂಡ ! ನಾಳೆ ರಾತ್ರಿ ಮತ್ತೆ ಅಪರಿಚತನಾಗಿಯೇಬಿಡುವವ ! ಹೆಣ್ಣಿನ ಬಾಳಿನ ವಿಚಿತ್ರ. ಅವಳ ಮನಃಪಟಲದ ಎದುರಿಗೆ ಒಂದು ದೃಶ್ಯ ಬೃಹದಾಕಾರವಾಗಿ ಬಿಚ್ಚಿಕೊಳ್ಳುತ್ತದೆ. ಅದರೊಂದಿಗೆ ಅವಳ ಎದುರು ಬಿಳೀ ಪೋಷಾಕಿನ ವ್ಯಕ್ತಿಯೊಬ್ಬ ಕುಳಿತಿದ್ದಾನೆ ! ಅವನ ಮುಖ ಭಯಂಕರವಾಗಿದೆ ! ಅವನ ಕೈಯಲ್ಲಿ ವಿಷದ ಹಾವು. ಅದು ಹೆಡೆಯೆತ್ತಿ ನಿಂತಿದೆ ! ಅವನ ಎದುರು ಒಬ್ಬಳು ಹೆಣ್ಣು ಕುಳಿತಿದ್ದಾಳೆ. ಅವಳನ್ನು ಪೂರ್ತಿಯಾಗಿ ಆವರಿಸಿಕೊಂಡ ಕಪ್ಪು ಘೋಷಾ ಅವಳ ದೇಹ ಸ್ವಲ್ಪವೂ ಕಾಣುತ್ತಿಲ್ಲ. ಅವಳ ತಲೆಯ ಮೇಲೆ ಆ ವ್ಯಕ್ತಿ ತನ್ನ ಕೈ ಇಟ್ಟು ಜೋರಾಗಿ ಒದರುತ್ತಾನೆ. ಜೊತೆಗೆ ತನ್ನ ಕೈಯಲ್ಲಿದ್ದ ವಿಷಸರ್ಪದಿಂದ ಅವಳ ಎಡ ಭುಜಕ್ಕೊಮ್ಮೆ ಬಲ ಭುಜಕ್ಕೊಮ್ಮೆ ಕಚ್ಚಿಸುತ್ತಾನೆ ! ಆ ಹೆಣ್ಣಿನ ಒಳ ರೂಪ ಗೊತ್ತಾಗದೆ ಇದ್ದು ಕ್ರಮೇಣ ಅವನು ಒದರುವುದು ಜಾಸ್ತಿಯಾಗುತ್ತದೆ ! ಬುರ್ಖಾದ ಎಡೆಯಿಂದ ಕೆಂಪು ರಕ್ತ ಜುಳು ಜುಳು ಹರಿಯುತ್ತಿದೆ. ಜಮೀಲಾಳಿಗೆ ಆ ಹೆಣ್ಣು ತನ್ನಂತೆಯೇ ಇರುವುದು ಭಾಸವಾಗುತ್ತೆ. ಕ್ರಮೇಣ ಆ ಹೆಣ್ಣು ತಾನೇ ಆದಂತೆ ಅನಿಸುತ್ತದೆ. ಅವಳು ಆ ಕೈಯನ್ನು ತನ್ನ ತಲೆಯಿಂದ ಕೀಳಲು ಯತ್ನಿಸುತ್ತಾಳೆ. ಸಾಧ್ಯವಾಗುವುದಿಲ್ಲ. ಅವನ ಬಲ ಜಾಸ್ತಿಯಾಗುತ್ತೆ. ಆ ವ್ಯಕ್ತಿಯ ಕೈಯಿಂದ ಅವಳಿಗೆ ತನ್ನನ್ನು ರಕ್ಷಣೆ ಮಾಡಿಕೊಳ್ಳಲು ಆಗುವುದೇ ಇಲ್ಲ. ತನ್ನ ಕಣ್ಣೆದುರಿಗೆ ಪರಿಶುದ್ಧವಾದ ಪವಿತ್ರಗ್ರಂಥ ತೇಲಿಬರುತ್ತೆ ! ಅದು ಎಟುಕದಷ್ಟು ದೂರದಲ್ಲಿರುತ್ತೆ.

ಹೊರಗೆ ನಗು ಕೇಳಿಸಿದಾಗ ದೃಶ್ಯ ಮಾಸಿಹೋಗುತ್ತದೆ. ಜಮೀಲಾ ಮತ್ತೆ ಕಿಟಕಿಯ ಆಚೆ ನೋಡ್ತಾಳೆ. ಖಾಸಿಂನ ಬಳಿಯೇ ನಿಂತಿದ್ದಾನೆ ಉಮರ್. ತನ್ನ ಮೊದಲನೆಯ ಗಂಡ ! ಮತ್ತೆ ತನ್ನನ್ನು ಹೆಂಡತಿಯನ್ನಾಗಿ ಪಡೆದುಕೊಳ್ಳಲು ಇಚ್ಛಿಸಿದವನು. ತಾನು ಮತ್ತೆ ಮದುವೆಯಾಗುವುದಕ್ಕೆ ಈ ನಾಟಕ ! ಯಾಕೆ ಅವನಿಗೆ ಮತ್ತೆ ತನ್ನನ್ನು ಮದುವೆಯಾಗುವ ಇಚ್ಚೆ ! ಗೊತ್ತಿಲ್ಲ. ತನಗೆ ಗೊತ್ತೇ ಇಲ್ಲ. ಮತ್ತೆ ಜಮೀಲಾಳ ಮದುವೆ ಕನಸಾಗಿರುವಾಗ ಅದೇ ಉಮರ್ ಬಂದು ತಾನು ಅವಳನ್ನು ಮರು ಮದುವೆ ಆಗ್ತೇನೆಂದಾಗ ಜಮೀಲಾಳ ಬಾಪಾ ತಟಕ್ಕಂತ ಒಪ್ಪಿಬಿಟ್ಟಿದ್ದರು. ಉಮರ್‌ನನ್ನು ಮತ್ತೆ ಗಂಡನನ್ನಾಗಿ ಪಡೆಯಲು ಅವಳು ಖಾಸಿಂನನ್ನು ಒಂದು ದಿನಕ್ಕಾಗಿ ಒಪ್ಪಿದ್ದಳು. ಮದುವೆಯಾಗಿತ್ತು ! ಖಾಸಿಂ ಆ ರಾತ್ರಿಗಾಗಿ ಅಲ್ಲಿಗೆ ಬಂದಿದ್ದ.

ಜಮೀಲಾ ರೂಮಿನೊಳಗೇ ಕುಳಿತಿದ್ದಳು. ಬಾಗಿಲ ಬಳಿ ಸಪ್ಪಳ ಕೇಳಿಸಿತು. ತೆರೆದ ಬಾಗಿಲಿನೊಂದಿಗೆ ಖಾಸಿಂ ಕಾಣಿಸಿಕೊಂಡಿದ್ದ. ಅವನ ಹಿಂದೆಯೇ ಬಾಗಿಲು

ಮುಚ್ಚಲ್ಪಟ್ಟಿತು. ಚಿಲಕ ಭದ್ರವಾಯಿತು. ಜಮೀಲಾ ತತ್ತರಿಸಿದಳು. ಅವಳ ದೇಹದಲ್ಲಿ ಬೆವರು ಒಡೆಯಿತು. ಮೈಯಲ್ಲಿ ವಿಪರೀತ ನಡುಕ !

ಖಾಸಿಂ ಅವಳಿಗೆ ಒತ್ತಾಗದೇ ದೂರವೇ ಕುಳಿತ. ಚಿಕ್ಕ ಲಾಂದ್ರವೊಂದು ಅವರಿಬ್ಬರಿಗೆ ಬೆಳಕಾಗಿ ಮಿಣುಕು ಜ್ವಾಲೆಯನ್ನು ಎಬ್ಬಿಸುತ್ತಾ ಇದೆ. ಅವಳು ನೆಲ ನೋಡ್ತಾ ಇದ್ದಳು. ತುಟಿಗಳು ಮುಚ್ಚಿಕೊಂಡಿವೆ. ಖಾಸಿಂ ಅವಳಲ್ಲೇ ದೃಷ್ಟಿ ನೆಟ್ಟ. ಅವನ ಮನದಲ್ಲಿ ನಾನಾ ವಿಧದ ತೂಫಾನು. 'ತಾನು ಎಲ್ಲೋ ಹುಟ್ಟಿದೆ. ಆದರೆ ಹೆತ್ತ ಉಮ್ಮ ಯಾರು ಎಂದು ತಿಳಿಯದಂತೆ ತನ್ನ ಹುಟ್ಟಿನಲ್ಲೇ ಉಮ್ಮ ಮಸೀದಿಯ ಹಿಂದಿನ ದಫನದ ಜಾಗದಲ್ಲಿ ಗೋರಿಯಾಗಿ ಹೋದ್ರು ! ಕೆಲವು ವರ್ಷ ಅನಾಥನಂತೆ ಬದುಕಿದೆ. ಹೊಟ್ಟೆಯ ಪಾಡಿಗಾಗಿ ಅಲೆದಾಡಿದೆ. ಬೆವರು ಸುರಿಸಿ ಕೆಲಸ ಮಾಡಿದೆ. ಆದರೆ ಅಲ್ಲಾಹು ತನ್ನ ಬಾಳಿನಲ್ಲಿ ಕಣ್ತೆರೆಯಲೇ ಇಲ್ಲ. ಕುರುಡನಂತೆ ಸುಮ್ಮನಿದ್ದುಬಿಟ್ಟ. ಎಲ್ಲೆಲ್ಲೋ ಸಾಗುತ್ತಾ, ಊರೊಂದೂರು ಅಲೆಯುತ್ತಾ ನೆಲೆಯಿಲ್ಲದ ತನಗೆ ಕೊನೆಗೊಂದು ನೆಲೆ ಸಿಕ್ಕಿತು. ಯಾರದೋ ಅಂಗಡಿಯಲ್ಲಿ ಸಾಮಾನು ಹೊರುವ ಕೆಲಸ. ತೃಪ್ತಿ ತಂದ ಜೀವನ ! ಮೊನ್ನೆ ಇಲ್ಲಿನ ಮಸೀದಿಗೆ ಬಂದೆ ! ದಯಾಮಯನಾದ ಅಲ್ಲಾಹುವಿನಲ್ಲಿ ಬೇಡಿಕೊಳ್ಳಲು. ತಾನೇನೋ ಕೇಳಿಕೊಂಡೆ. ಹೊರಡುವಾಗ ಸಿಕ್ಕಿದವರು ಜಮೀಲಾಳ ಬಾಪ, ಮೌಲ್ವಿ. ತನ್ನಲ್ಲಿ ಅವರ ಕೋರಿಕೆ ! ತಾನು ಒಂದು ದಿನಕ್ಕಾಗಿ ಜಮೀಲಾಳ ಗಂಡನಾಗಬೇಕು ! ಆ ರಾತ್ರಿ ಅವಳೊಂದಿಗೆ ಕಳೆದು ಬೆಳಗ್ಗೆದ್ದು ಮೂರು ಬಾರಿ, 'ತಲಾಖ್' ಹೇಳಿ ಅವಳಿಂದ ದೂರ ಹೊರಟುಹೋಗಬೇಕು !

ತಾನು ಒಪ್ಪಿಕೊಂಡೆ ! ಯಾತಕ್ಕಾಗಿ ! ಅವಳಿಂದ ಒಂದು ರಾತ್ರಿ ಪಡೆಯುವ ಸುಖಕ್ಕಾಗಿ ಅಲ್ಲ! ತನ್ನಂತೆಯೇ ಇರುವ ಈ ಗಂಡಸರು ಹೆಣ್ಣಿನ ಬಗ್ಗೆ ನಡೆದುಕೊಳ್ಳುವ ಹೀನಾಯವಾದ ಪದ್ಧತಿ ಕಟ್ಟುಪಾಡನ್ನು ನಿಲ್ಲಿಸುವುದಕ್ಕಾಗಿ !

ತೂಫಾನು ನಿಂತಿತು. ಖಾಸಿಂ ತನ್ನ ಕೈಗಳನ್ನು ಅವಳ ಕೈಗಳ ಮೇಲೆ ಇರಿಸಿದ. ಶೀತದಂತೆ ಕೊರೆಯುತ್ತಿತ್ತು ಕೈ. ಅವಳು ಬೆಚ್ಚಿ ಕೈ ಎಳೆದುಕೊಂಡಳು. ತಾನವನಿಗೆ ಬಲಿಯಾಗುತ್ತೇನೆ ಎಂದು ಅವಳು ಹೆದರಿದಳು. "ಯಾ ಅಲ್ಲಾಹುವೇ, ನನ್ನನ್ನು ಮಾಫು ಮಾಡು. ನನ್ನನ್ನು ಈ ವಿಪತ್ತಿನಿಂದ ಕಾಪಾಡು" ಎಂದುಕೊಂಡಳು ಮನದಲ್ಲೆ !

"ಜಮೀಲಾ" ಆ ಕರೆ ಮರಳುಗಾಡಿನಲ್ಲಿ ನೀರು ಸಿಗದೆ ಅಲೆದಾಡುತ್ತಿದ್ದವಳಿಗೆ ಓಯಸಿಸ್ ಕಾಣಸಿಕ್ಕಂತಾಯಿತು. ಹೃದಯದ ನೋವೆಲ್ಲಾ ತಟ್ಟನೆ ನಿಂತುಬಿಟ್ಟಿತು. "ಜಮೀಲಾ" ಮತ್ತೊಮ್ಮೆ ಅದೇ ಮೃದುವಾದ ಕರೆ. "ಇನ್ನೊಂದು ಕ್ಷಣದಲ್ಲಿ ತನ್ನನ್ನು ಅಪ್ಪಿ, ಹಿಂಸಿಸಿ ತನ್ನ ಮಾನವನ್ನು ರಕ್ಕಸನಂತೆ ಸೂರೆ ಮಾಡುತ್ತಾನೆ' ಎಂದು ಭಾವಿಸಿದ್ದವಳಿಗೆ, ತನ್ನ ಭಾವನೆಗಿಂತ ವಿರುದ್ಧವಾಗಿ ಕೇಳಿಸಿದ ಮಾನವೀಯತೆಯ

ಮೃದು ಕರೆ. ಧೈರ್ಯವಹಿಸಿ ತಲೆ ಎತ್ತಿದಳು. ಅವನ ಎರಡು ಕಂಗಳಲ್ಲಿ ನೋವಿದೆ! ದೃಢತೆ ಇದೆ! ಅನುಕಂಪ ಇದೆ!

''ಜಮೀಲಾ ಯಾಕೆ ಈ ಒಂದು ದಿನದ ಮದುವೆಗೆ ಒಪ್ಪಿದೆ? ಅವನು ಮೃದುವಾಗಿ ಪ್ರಶ್ನಿಸಿದ.

ಒಪ್ಪಿದೆ, ನನಗಾಗಿ ಅಲ್ಲ, ನನ್ನ ಬಾಪಾಗೋಸ್ಕರ. ನಾನು ಉಮರ್‌ರನ್ನು ಮತ್ತೆ ಮದುವೆಯಾಗಬೇಕಾದರೆ ಇನ್ನೊಬ್ಬನನ್ನು ಮದುವೆಯಾಗಿ ಅವನನ್ನು ದೈಹಿಕವಾಗಿ ತೃಪ್ತಿಪಡಿಸಿ ಅವನಿಂದಲೂ ತಲಾಖ್ ಪಡೆದುಕೊಂಡು ನಂತರ ಮದುವೆಯಾಗ ಬಹುದೆಂದು ಹೇಳಿದೆಯಲ್ಲಾ.''

''ಯಾವ ಗಂಡೂ ಕೆಟ್ಟ ಸಿಟ್ಟಿನಲ್ಲಾಗಲಿ, ವಿನಾಕಾರಣವಾಗಿ ತನ್ನ ಹೆಂಡತಿಗೆ ತಲಾಖ್ ನೀಡದಿರಲೆಂದೆ, ಗಂಡು ಹೆಣ್ಣನ್ನು ಶೋಷಣೆ ಮಾಡದಿರಲೆಂದೇ ಈ ನಿರ್ಬಂಧ ಹಾಕಿರೋದು. ಮತ್ತೆ ಅವಳನ್ನು ಸ್ವೀಕರಿಸಬೇಕಾದರೆ ಇಂತಹ ನಿರ್ಬಂಧ ಇರುವುದೆಂಬ ಸತ್ಯ ಗೊತ್ತಾದರೆ ಯಾವ ಗಂಡೂ ತನ್ನ ಪತ್ನಿಗೆ ತಲಾಖ್ ನೀಡಲಾರ'' ಎಂದವ ಮತ್ತೆ.

''ಜಮೀಲಾ, ಉಮರ್ ಮತ್ತೆ ನಿನ್ನನ್ನು ಮದುವೆಯಾಗುವನೆಂಬ ನಂಬಿಕೆ ನಿನಗಿದೆಯೇ?'' ಖಾಸಿಂ ಪ್ರಶ್ನಿಸಿದ.

''ಅವರಿಗೇ ನಂಬಿಕೆ ಇರುವಾಗ ನನಗೆ ನಂಬಿಕೆ ಇಲ್ಲದೇ ಏನು. ಅಲ್ಲಾಹು ವಿನಾಣೆಗೂ ಅವರು ನನ್ನ ಮದುವೆಯಾಗ್ತಾರೆ.'' ಅವನು ಆ ಮಂದ ಬೆಳಕಿನಲ್ಲೂ ನಕ್ಕದ್ದು ಕಾಣಿಸಿತು. ಅದು ವಿಷಾದದ ನಗುವಾಗಿತ್ತು, ಸಂತೋಷದ ನಗುವಲ್ಲ.

''ಜಮೀಲಾ ಈ ರಾತ್ರಿ ನನ್ನೊಡನೆ ಇರುವುದರ ಕಾರಣ ಗರ್ಭವತಿಯಾದರೆ ಮತ್ತೆ ಆ ಮಗು ನಿನ್ನ ಬಸಿರಿನಿಂದ ಹೊರಬರುವತನಕ ಕಾಯಬೇಕಲ್ಲಾ.''

''ಅಂದರೆ...?''

''ಜಮೀಲಾ... ಹೌದು! ಇದು ಸತ್ಯ. ನೀನು ಮಗುವನ್ನು ಹಡೆಯುವ ತನಕ ಉಮರ್ ನಿನ್ನ ಕಾಯೊಲ್ಲ. ಅಲ್ಲದೆ ನೀನು ಪರಪುರುಷನಿಗೆ ಮೈ ತೆರೆದವಳು ಎಂದು ಅವನು ನಿನ್ನನ್ನು ಮದುವೆಯಾಗದೇ ಇರಬಹುದಲ್ಲಾ'' ಖಾಸಿಂ ಮಾತು ನಿಲ್ಲಿಸಿ ಅವಳ ಉತ್ತರಕ್ಕಾಗಿ ಕಾಯ್ದ. ಜಮೀಲಾ ಸ್ತಂಭೀಭೂತಳಾದಳು.

''ಹೌದು ತಾನು ಈ ರೀತಿ ಯೋಚಿಸಿಯೇ ಇರಲಿಲ್ಲ'' ಹೀಗೆಂದು ಯೋಚಿಸಿಕೊಂಡ ಅವಳು.

''ಅಂದರೆ ನೀವು ಈ ರಾತ್ರಿ ನನ್ನನ್ನು ಮುಟ್ಟೇಬಿಡ್ತೀರಾ'' ಅವಳು ಹೆದರಿದ್ದಳು.
''ಜಮೀಲಾ, ನೀನು ಅವನನ್ನು ಮತ್ತೆ ಮದುವೆಯಾಗಬೇಕಾದರೆ ನಾನು ನಿನ್ನ ಮುಟ್ಟಲೇಬೇಕು - ನಾನು ನಿನ್ನ ಮುಟ್ಟದೇ ಇದ್ದರೆ ನೀನು ಅವನನ್ನು ಮತ್ತೆ

ಮದುವೆಯಾಗುವುದು ಸಾಧ್ಯವಿಲ್ಲ.'' ಜಮೀಲಾ ಅವನ ಮಾತುಕೇಳಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ''ಜಮೀಲಾ ನೀನೇನೂ ಹೆದರಬೇಕಾಗಿಲ್ಲ. ಆ ಅಲ್ಲಾಹುವಿ ನಾಣೆ ನಾ ನಿನಗೆ ಯಾವ ತೊಂದರೆ ಕೊಡೊಲ್ಲ... ಆದರೆ ಈ ಮುಚ್ಚಿದ ಬಾಗಿಲನ್ನು ನೋಡಿದೆಯಾ ?'' ಮತ್ತೇ ಖಾಸಿಂ ಮಾತು ಮುಂದುವರಿಸಿದ. ಜಮೀಲಾ ದೃಷ್ಟಿಯನ್ನು ಬಾಗಿಲೆಡೆ ಹರಿಸಿ ನಂತರ ಅವನ ಕಂಗಳಲ್ಲಿ ನೆಟ್ಟಳು.

''ಜಮೀಲಾ, ಈ ಮುಚ್ಚಿದ ಬಾಗಿಲಿನ ರೂಮೊಳಗೆ ನನ್ನ - ನಿನ್ನ ಮಧ್ಯೆ ಏನು ನಡೆಯುತ್ತಿದೆ ಎಂದು ಹೊರಗಿನವರಿಗೆ ಯಾರಿಗೂ ಗೊತ್ತಿಲ್ಲ ಗೊತ್ತಾಗುವುದೂ ಇಲ್ಲ. ನಾನು ನಿನ್ನನ್ನು ಲೈಂಗಿಕವಾಗಿ ಮುಟ್ಟದೇ ಇದ್ದರೆ ಈ ಸಮಾಜ ನಿನ್ನನ್ನು ಅವನೊಂದಿಗೆ ಮದುವೆಯಾಗಲು ಬಿಡೊಲ್ಲ. ಒಂದು ಸಮಯ ಮುಟ್ಟದೇ ಇದ್ದರೂ ಉಮರ್ ಹಾಗೇನೂ ತಿಳಿಯೊಲ್ಲ. ನಾನು ನಿನ್ನನ್ನು ಮುಟ್ಟಿದ್ದೇನೆಂದು ಅವನು ತಿಳಿದೇ ತಿಳಿಯುತ್ತಾನೆ... ಅವನ ದೃಷ್ಟಿಯಲ್ಲಿ ನೀನು ಅಸ್ಪೃಶ್ಯಳಾಗಿಯೇ ಬಿಡುತ್ತಿ'' ಖಾಸಿಂ ಅವಳ ಬೆವರುತ್ತಿರುವ ಮುಖವನ್ನು ನೋಡಿದ.

''ಆದರೆ ಮೂರು ತಿಂಗಳಲ್ಲಿ ನಾನು ಗರ್ಭವತಿ ಅಲ್ಲ ಎಂದು ತಿಳಿದಾಗ ಅವರಿಗೆ ನಂಬಿಕೆ ಬರಬಹುದಲ್ಲ'' ಜಮೀಲಾ ತಟಕ್ಕನೆ ಹೇಳಿದಳು. ''ಜಮೀಲಾ, ಎಂತಹ ಮಾತಾಡ್ತೀಯ: ಈಗ ಪ್ರಪಂಚ ಮುಂದುವರಿದಿರೋದು ಗೊತ್ತಿಲ್ವ. ನಿನ್ನಲ್ಲಿ ಗರ್ಭಧಾರಣೆ ಆಗದಂತೆ ನಾನು ಏನಾದರೂ ಮಾಡಿರಬಹುದಲ್ಲಾ. ಆ ರೀತಿಯಾಗಿ ಅವನು ಯೋಚಿಸಬಹುದಲ್ಲಾ. ಜಮೀಲಾ ನಾನು ಹೇಳುವುದನ್ನು ಕೇಳು. ಉಮರ್ ನಿನ್ನನ್ನು ಎಂದಿಗೂ ಪ್ರೀತಿಸೊಲ್ಲ. ನಿಜವಾಗಿ ಅವನು ನಿನ್ನನ್ನು ಪ್ರೀತಿಸುವವನಾದರೆ ನಿನಗೆ ತಲಾಖ್ ಕೊಡ್ತಿರಲಿಲ್ಲ. ಜಮೀಲಾ ! ನಿನ್ನ ಬಾಳನ್ನು ಹಾಳು ಮಾಡುವುದು ನನಗೆ ಇಷ್ಟವಿಲ್ಲ. ನೀ ಒಪ್ಪಿದರೆ ನಾ ಖಂಡಿತಾ ಕೊನೆಯವರೆಗೂ ನಿನ್ನನ್ನು ನನ್ನ ಬಾಳ ಸಂಗಾತಿಯನ್ನಾಗಿಸಿಕೊಳ್ಳಲು ಸಿದ್ಧನಿದ್ದೇನೆ'' ಖಾಸಿಂ ಜಮೀಲಾಳ ಉತ್ತರಕ್ಕಾಗಿ ನಿರೀಕ್ಷಿಸಿದ.

ಜಮೀಲಾ ಮೌನಿಯಾದಳು. ಖಾಸಿಂ ಹೇಳುವುದೆಲ್ಲಾ ನಿಜ. ತಾನು ಖಾಸಿಂನ ಮಡದಿಯಾಗಿರುವುದಕ್ಕೆ ಕೊನೆಯವರೆಗೂ ಸಿದ್ಧ. ಆದರೆ ಈ ದಿನಕ್ಕೆ ಖಾಸಿಂ ನಂತಹ ವ್ಯಕ್ತಿಯಲ್ಲದೆ ಬೇರೊಬ್ಬ ದುಷ್ಟನಾದ ಕಾಮುಕನೇನಾದ್ರೂ ಬಂದು ಅವನಿಂದ ತಾನು ಗರ್ಭವತಿ ಆಗಿ ಖಾಸಿಂ ಹೇಳಿದಂತಹ ಪರಿಸ್ಥಿತಿ ಬಂದಿದ್ರೆ, ಆಗ ತನ್ನ ಗತಿ ? ಇಂತಹ ಪರಿಸ್ಥಿತಿ ಯಾವ ಹೆಣ್ಣಿಗೂ ಬರದೇ ಇರಬೇಕಾದರೆ ಏನು ಮಾಡಬೇಕು. ಈ ಗಂಡಸರು ಎಲ್ಲಿಯವರೆಗೆ ಹೆಣ್ಣನ್ನು ಶೋಷಿಸುತ್ತಾರೋ ಅಲ್ಲಿಯವರೆಗೆ ಇದು ಸಾಧ್ಯವೇ ? ಖಂಡಿತಾ ಸಾಧ್ಯವಿಲ್ಲ.

ಖಾಸಿಂನಂತಹ ಯುವಕರು ತನ್ನಂತಹ ಹೆಣ್ಣಿಗೆ ಬೆಳಕಾಗಿ ಬರುವಂತಾಗಬೇಕು.

ಆಗಲೇ ಶೋಷಣೆಗೊಳಗಾದ ಹೆಣ್ಣು ಸುರಕ್ಷತೆಯನ್ನು ಪಡೆಯಲು ಸಾಧ್ಯ. ಈ ರೀತಿಯ ನಾನಾ ವಿಧದ ಯೋಚನೆಯಲ್ಲಿ ತೊಡಗಿ ಕೊನೆಗೆ ಖಾಸಿಂನ ಮಡಿಲಲ್ಲಿ ತಲೆ ಇಟ್ಟು ನಿದ್ರಿಸಿದಳು ಜಮೀಲಾ.

*　　*　　*

ರಾತ್ರಿ ಬೆಳಗಾಯಿತು. ಜಮೀಲಾ ಖಾಸಿಂನ ಜೊತೆಯಾಗಿ ಕೋಣೆಯಿಂದ ಹೊರಬಂದಳು. ಹೊರಗೆ ಸಣ್ಣ ಹಜಾರದಲ್ಲಿ ಮೌಲ್ವಿ. ಉಮರ್ ಖಾಸಿಂನಿಗಾಗಿಯೇ ಕುಳಿತಿದ್ದಂತೆಯೇ ಅಲ್ಲಿ ಕುಳಿತಿದ್ದರು. ಮೌಲ್ವಿ ಖಾಸಿಂನ ಬಳಿ ಬಂದರು. ಖಾಸಿಂ ಅವರನ್ನೇ ನೋಡಿದ.

''ಖಾಸಿಂ, ಮಸೀದಿಗೆ ಹೋಗೋಣ ಬಾ'' ಮೌಲ್ವಿ ಅವನನ್ನೇ ನೋಡುತ್ತಾ ಹೇಳಿದರು. 'ಯಾಕೆ ?' ಅವನು ತಟಕ್ಕನೆ ಕೇಳಿದ.

''ಏನು ಹಾಗೆ ಕೇಳ್ತೀಯಾ ? ನೀನು ಜಮೀಲಾಳಿಗೆ ತಲಾಖ್ ಕೊಡಬೇಕೆಂದು ಗೊತ್ತಿಲ್ವೇ'' ಮೌಲ್ವಿಯವರ ಮಾತು ಬಿರುಸಾಗಿತ್ತು.

''ನೋಡಿ ಮೌಲ್ವಿಯವರೇ, ಮದುವೆಯಾದ ಹೆಣ್ಣಿಗೆ ತಲಾಖ್ ಕೊಡಬೇಕೆಂದು ಕಡ್ಡಾಯ ಇಲ್ಲವಲ್ಲ. ನಾನು ಯಾವತ್ತು ಜಮೀಲಾಳಿಗೆ ಗಂಡನಾದೆನೋ ಅವಳು ಈ ಭೂಮಿಯ ಮೇಲಿರುವವರೆಗೆ ನಾನೇ ಗಂಡ. ನಾನು ಖಂಡಿತಾ ಜಮೀಲಾಳನ್ನು ಯಾರಿಗೂ ಬಿಟ್ಟುಕೊಡಲ್ಲ'' ಖಾಸಿಂ ಉಮರ್‌ನನ್ನು ತೀಕ್ಷ್ಣವಾಗಿ ನೋಡಿದ. ಉಮರ್ ಕಂಗಾಲಾದ. ಅವನು ಖಾಸಿಂನನ್ನು ದುರುದುರು ನೋಡಿದ. ಮೌಲ್ವಿಯವರ ನಾಲಗೆಯ ಪಸೆ ಆರಿತು. ಅವರು ತನ್ನ ಬಿಳೀ ಗಡ್ಡವನ್ನು ಕರ ಕರ ಕೆರೆದುಕೊಂಡರು.

ಜಮೀಲಾಳ ಬಾಪಾ ಖಾಸಿಂನ ಬಳಿ ಬಂದರು. ''ಖಾಸಿಂ ನೀನು ಜಮೀಲಾಳನ್ನು ಶಾಶ್ವತವಾಗಿ ಹೆಂಡತಿಯನ್ನಾಗಿ ಮಾಡಿಕೊಳ್ಳಲು ಸಿದ್ಧನಿದ್ದೀಯೇ''–

''ಹೌದು ಕಾಕ, ಇದಕ್ಕೆ ಜಮೀಲಾಳ ಸಮ್ಮತಿಯೂ ಇದೆ. ಅವರ ಕಣ್ಣುಗಳಲ್ಲಿ ಬೆಳಕು ತುಂಬಿತು. ಅವರು 'ಜಮೀಲಾ'' ಎಂದು ಪ್ರೀತಿಯಿಂದ ಮಗಳನ್ನು ಕರೆದರು. ಜಮೀಲಾ ಬಾಗಿಲಲ್ಲಿ ಬಂದು ನಿಂತಳು. ''ಜಮೀಲಾ ನೀನು ಖಾಸಿಂನಿಗೆ ಕೊನೆಯವರೆಗೂ ಬದುಕಿನಲ್ಲಿ ಸಂಗಾತಿಯಾಗಿರ್ತೀಯಾ ?'' - ಜಮೀಲಾ ''ಹುಂ'' ಎಂದಳು.

ಮೌಲ್ವಿಯವರಲ್ಲಿ ಮಾತಿರಲಿಲ್ಲ. ಉಮರ್ ಅವಮಾನದಿಂದ ನಡುಗುತ್ತಿದ್ದ ನಂತರ ಅವನು ಜೋರಿನ ಹೆಜ್ಜೆಯಿಡುತ್ತಾ ವೇಗವಾಗಿ ಸಾಗಿ ದೂರದ ಗುಡ್ಡದ ತುದಿಯಲ್ಲಿ ಕಣ್ಮರೆಯಾದ.

# 12 ದಾರಿ

ಮದರಸದ ಓದು ಮುಗಿಸಿ ಮಕ್ಕಳೆಲ್ಲರೂ ಹೊರಬಂದರು. ಸಿರಿವಂತಿಕೆ - ಬಡತನದ ಅರಿವಿಲ್ಲದ ಮಕ್ಕಳು ನಗುತ್ತಾ ಹಾರುತ್ತಾ ಸಾಗುತ್ತಿದ್ದರು. ಅದನ್ನು ನೋಡುತ್ತಿದ್ದಂತೆ ಮೊಯಿಲಿಯಾರರ ಕಣ್ಣಂಚಿನಲ್ಲಿ ಕಂಬನಿ ಸುರಿಯಿತು. ''ಎಂತಹಾ ಸುಂದರ ದುನಿಯಾ ಈ ಮಕ್ಕಳದ್ದು. ದ್ವೇಷ ಅಸೂಯೆ ಇಲ್ಲದ ಏನೊಂದನ್ನೂ ತಲೆಗೆ ಹಚ್ಚಿಕೊಳ್ಳದ ಈ ಎಳೆಯ ಮಕ್ಕಳು ಭವಿಷ್ಯತ್ತಿನ ಬದುಕಿನಲ್ಲಿ ಒಬ್ಬರನ್ನೊಬ್ಬರು ಕಿತ್ತು ತಿನ್ನುವ ವಿಷ ಜಂತುವಾಗ್ತಾರಲ್ಲ'' ಎನ್ನುವ ಖೇದ ತುಂಬಿದ ಕಂಬನಿ ಮೊಯಿಲಿಯಾರರ ಕಣ್ಣಿಂದ ನಿಧಾನವಾಗಿ ಒಸರುತ್ತಿತ್ತು.

ಮದರಸದ ಒಳಗೆ ತಾನೀಗ ಒಂಟಿ. ಕಳೆದ ಎಷ್ಟೋ ವರ್ಷಗಳಿಂದ ರಾತ್ರಿಯಿಡೀ ಹೀಗೆ ಒಂಟಿಯಾಗಿರುವುದು ರೂಢಿಯಾಗಿಬಿಟ್ಟಿದೆ. ಖುರಾನ್ ಪುಸ್ತಕವೊಂದೇ ತನ್ನ ಸಂಗಾತಿ. ಕೆಲವೊಮ್ಮೆ ಬಲವಾದ ಯೋಚನೆಗಳು ತೀವ್ರವಾಗಿ ತಟ್ಟಿಬಿಡುತ್ತವೆ. ಆ ಯೋಚನೆ ಕಾಡಿದಾಗ ಮನಸ್ಸು ಅಸ್ತವ್ಯಸ್ತಗೊಳ್ಳುತ್ತದೆ. ಹೃದಯಕ್ರಿಯೆ ನಿಂತ ಅನುಭವವಾಗುತ್ತದೆ.

ಸಕೀನಾ ತನ್ನ ಒಬ್ಬಳೇ ಮಗಳು. ಎಂಟು ವರ್ಷದ ಬಾಲೆಯಾದರೂ ಯಾವುದರ ಅರಿವೂ ಇಲ್ಲ. ತನ್ನ ಅಸ್ತಿತ್ವವೇ ಗೊತ್ತಿಲ್ಲದ ಉಸಿರಿರುವ ಒಂದು ಜೀವಿ ಮಾತ್ರ. ಎಲ್ಲರ ಹುಟ್ಟಿಗೂ ಕಾರಣ ಆ ದೇವರು ಅಂತೆ. ಇದೆಲ್ಲವೂ ಸುಳ್ಳು. ಜುಬೇದಾಳ ಬಸಿರಿಂದ ಹೊರಬಿದ್ದಾಗ ಯಾಕೆ ಸಕೀನಾಳಿಗೆ ಅಸ್ತಿತ್ವವೇ ಇಲ್ಲದ ಹಾಗೇ ಮಾಡಬೇಕಿತ್ತು ಈ ದೇವರು. ದೇಹದ ಎಲ್ಲ ಅಂಗಗಳು ಸರಿಯಾಗಿವೆ ಆದರೆ ಯಾವೊಂದು ಅಂಗವೂ ಸರಿಯಾಗಿ ಕಾರ್ಯ ಚಟುವಟಿಕೆ ನಡೆಸುತ್ತಿಲ್ಲ. ಕಣ್ ತೆರೆದಿದ್ದರೂ ದೃಷ್ಟಿ ಶೂನ್ಯ. ಮೆದುಳೇ ಜಡವಾಗಿದೆ.

ಇಂತಹ ವಿಚಿತ್ರ ಮಗುವಿನ ಸಂಕಟವನ್ನು ನೋಡಲಾರದೇ ಅಲ್ಲವೇ ಜುಬೇದಾ ವ್ಯಥೆಯಿಂದ ಕಣ್‌ಮುಚ್ಚಿದ್ದು. ಮಸೀದಿಯ ಹಿಂದಿನ ದಫನದ ಜಾಗದಲ್ಲಿ ಗೋರಿಯಾದದ್ದು. ತನಗೆ ಎರಡು ಸಂಕಟ ಎರಡು ಕಂಗಳಿಗೂ ಅಂಧತ್ವ ಬಂದ ಅನುಭವ. ಪ್ರೀತಿಯ ಪತ್ನಿಯ ಸಾವಿನ ಸಂಕಟ ಒಂದು. ಮುದ್ದು ಮಗಳ ರುದ್ರ ಬದುಕನ್ನು ಕಾಣುವ ಸಂಕಟ ಇನ್ನೊಂದು.

'ಉಸ್ತಾದ್' ಎಳೆಯ ಬಾಲೆಯ ಕೋಮಲ ಕಂಠದ ಸ್ವರಕ್ಕೆ ಅವರ ಯೋಚನಾ ತಂತಿ ಕಡಿದುಬಿತ್ತು. ಮೊಯಿಲಿಯಾರರು ದೃಷ್ಟಿ ಹರಿಸಿದರು. ಎಳೆಯ ಹುಡುಗಿ ಓದು

ಕಲಿಯಲು ಬಂದ ರಜಿಯಾ ಹೋಗದೆ ಹಾಗೇ ನಿಂತಿದ್ದಾಳೆ. ನಫೀಸಾಳ ಒಬ್ಬಳೇ ಮಗಳು. ತನಗೆ ಅವಳು ಅಲ್ಲಿ ನಿಂತಿರುವ ಬಗ್ಗೆ ಗಮನವೇ ಇಲ್ಲ.

''ಏನು ಮೋಳೇ ?''

''ಉಮ್ಮ ನಿಮ್ಮನ್ನು ಬರುವಂತೆ ಹೇಳಿದ್ದಾರೆ.''

''ಯಾಕೆ ಮೋಳೇ''

''ಗೊತ್ತಿಲ್ಲ...''

ಮೊಯಿಲಿಯಾರರು ಹುಡುಗಿಯನ್ನು ಬಾಚಿ ತಬ್ಬಿಕೊಂಡರು. ಈ ಬಾಲೆಗೆ ತಂದೆ ಇಲ್ಲ. ತನ್ನ ಮಗಳಿಗೆ ತಾಯಿ ಇಲ್ಲ ಎರಡೂ ತಬ್ಬಲಿಗಳು. ಮದರಸಕ್ಕೆ ಬರುವ ಉಳಿದೆಲ್ಲಾ ಮಕ್ಕಳಿಗೆ ಅಪ್ಪ, ಅಮ್ಮ ಇಬ್ಬರೂ ಇದ್ದಾರೆ. ಆದರೆ ಅಪ್ಪನ ಭಾಗ್ಯ ಇಲ್ಲದ್ದು ರಜಿಯಾಳೊಬ್ಬಳಿಗೆ. ಮೊಯಿಲಿಯಾರರಿಗೆ ಮದರಸಕ್ಕೆ ಓದು ಕಲಿಯಲು ಬರುವ ಮಕ್ಕಳೆಲ್ಲರ ಮೇಲೆ ಸಮನಾದ ಪ್ರೀತಿ. ಅವರ ಮೇಜಿನ ಮೇಲೆ ನಾಗರ ಬೆತ್ತ ಇಲ್ಲ. ಯಾವತ್ತೂ ಯಾವ ಮಕ್ಕಳಿಗೂ ಹೊಡೆದಿಲ್ಲ. ತಪ್ಪು ಮಾಡಿದಾಗ ಪ್ರೀತಿಯ ಮಾತುಗಳಿಂದಲೇ ಎಳೆಯ ಮಕ್ಕಳಿಗೆ ಬುದ್ಧಿ ಹೇಳುತ್ತಿದ್ದರು.

ಆದರೆ ಇವಳಲ್ಲಿ ಒಂದಲ್ಪ ಪ್ರೀತಿ ಜಾಸ್ತಿ. ತಂದೆಯಿಲ್ಲದ ಮಗಳನ್ನು ಕಂಡಾಗ ತನ್ನ ಮಗಳನ್ನು ಕಂಡ ಅನುಭವ.

''ಹೋಗೋಣ ಮೋಳೇ'' ಮೊಯಿಲಿಯಾರರು ರಜಿಯಾಳ ಭುಜ ಹಿಡಿದುಕೊಂಡೇ ಹೊರಬಂದರು.

ಬಾಗಿಲನ್ನು ಮುಚ್ಚುವಾಗ ಅವರಿಗೆ ಆ ವಾಕ್ಯ ಕಾಣಿಸಿತು. ತನಗೆ ಮೆಚ್ಚಿಗೆಯಾದ ಆ ವಾಕ್ಯ.

''ಜ್ಞಾನವನ್ನು ಮೂಲಧನವನ್ನಾಗಿಯೂ, ಸತ್ಯವನ್ನು ಅಸ್ತ್ರವನ್ನಾಗಿಯೂ, ನ್ಯಾಯವನ್ನು ಧರ್ಮವನ್ನಾಗಿಯೂ, ತಾಳ್ಮೆಯನ್ನು ರಕ್ಷಾಕವಚವನ್ನಾಗಿಯೂ, ವಿವೇಕ-ವಿವೇಚನೆಗಳನ್ನು ಸ್ಫೂರ್ತಿಯನ್ನಾಗಿಯೂ, ವಿಜ್ಞಾನವನ್ನು ಸಾಧನ ವನ್ನಾಗಿಯೂ ಬಳಸುವವರಿಗೆ ಅಪಜಯವೆಂಬುದೇ ಇಲ್ಲ'' ಪೈಗಂಬರರ ಅಪೂರ್ವ ನುಡಿಮುತ್ತುಗಳು.

ಹೊರಗೆ ಬರೀ ಕತ್ತಲು... ಕತ್ತಲನ್ನು ಸೀಳಿಕೊಂಡು ಮಿಣುಕು ಲಾಂದ್ರವೊಂದು ಅವರಿಗೆ ದಾರಿ ತೋರಿಸುತ್ತಿತ್ತು.

*                    *                    *

ಮುರುಕು ಗುಡಿಸಲಿಗೆ ಆ ಸಣ್ಣ ಸೀಮೆ ಎಣ್ಣೆ ಬುಡ್ಡಿಯೇ ಬೆಳಕು. ಬಲವಾಗಿ ಬೀಸುವ ಗಾಳಿಯನ್ನು ತಡೆದುಕೊಳ್ಳುವ ಶಕ್ತಿ ಆ ದೀಪಕ್ಕಿರಲಿಲ್ಲ. ನಫೀಸಾ ನಿಟ್ಟುಸಿರಿಡುತ್ತಿದ್ದಳು.

'ಆ ದಿನಕ್ಕೆ ಎರಡು ವರ್ಷ ಪೂರ್ತಿಯಾಗಿದೆ. ನಫೀಸಾಳ ಗಂಡ ಎರಡು ವರ್ಷಗಳ ಹಿಂದೆ ಇದೇ ದಿನ ಬಸ್ ಅಪಘಾತದಲ್ಲಿ ಮರಣ ಹೊಂದಿದ್ದ. ಅದು ಎಂತಹಾ ಕ್ರೂರವಾದ ಸಾವು. ಯೋಚಿಸಿದರೆ ನಫೀಸಾಳಿಗೆ ಈಗಲೂ ಮೈ ನಡುಕ ಬರುತ್ತೆ. ಸುದ್ದಿ ಸಿಕ್ಕಿದ ತಕ್ಷಣ ತಾನು ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಕಂಡುದೇನು ? ತಲೆ ಒಡೆದು ಕೆಂಪುರಕ್ತಮಯವಾದ ದೇಹ. ಜ್ಞಾನ ಇದ್ದಿರಲಿಲ್ಲ ಅವರು ಮತ್ತೆ ಬದುಕುವರೆಂಬ ಆಸೆ ತನಗೆ. ಆದರೆ ಅದು ಬರೀ ಕಲ್ಪನೆ. ತಾನು ದೃಷ್ಟಿ ಇಟ್ಟಿದ್ದಂತೆ ಅವರ ದೇಹದಿಂದ ಪ್ರಾಣ ಹಾರಿಹೋಗಿತ್ತು. ಆ ಹೊತ್ತಿಗೆ ಪ್ರಜ್ಞೆ ತಪ್ಪಿ ಬಿದ್ದಿದ್ದ ತನಗೆ ಮತ್ತೆ ಪ್ರಜ್ಞೆ ಮರುಕಳಿಸಿದ್ದು ತನ್ನ ಗಂಡ ಮಸೀದಿಯ ಹಿಂದಿನ ಜಾಗದಲ್ಲಿ ದಫನಗೊಂಡ ಎಷ್ಟೋ ಹೊತ್ತಿನ ಬಳಿಕ.

ಬಲವಾಗಿ ಗಾಳಿ ಬೀಸಿದಾಗ ನಫೀಸಾ ಇಹಸ್ಥಿತಿಗೆ ಬಂದಳು. ಎದ್ದು ನಿಧಾನವಾಗಿ ಗುಡಿಸಲ ಆ ಮೂಲೆಗೆ ನಡೆದಳು. ಅಲ್ಲೊಂದು ಹರಕಲು ಪೆಟ್ಟಿಗೆ. ಅದರ ಮುಚ್ಚಳ ತೆಗೆದು ಒಳಗೆ ಕೈಯ್ಯಾಡಿಸಿದಳು. ಅವಳಿಗೆ ಬೇಕಾದುದು ಸಿಕ್ಕಿತು. ಅದೊಂದು ಭಾವಚಿತ್ರ. ಗಂಡ ಅದರಲ್ಲಿ ನಗುತ್ತಿದ್ದ. ಅವಳದನ್ನು ಪ್ರತಿನಿತ್ಯವೂ ನೋಡುತ್ತಾಳೆ. ಅದನ್ನು ನೋಡಿದಾಗ ಅವಳ ಕಣ್ಣು ತುಂಬಿಬರುತ್ತದೆ. ಆದರೆ ಅವಳು ಎಲ್ಲವನ್ನೂ ಮರೆಯುತ್ತಾಳೆ.' ತನ್ನ ಒಬ್ಬಳೇ ಮಗಳು ರಜಿಯಾಳಿಗಾಗಿ.

ಅದೇ ಪೆಟ್ಟಿಗೆಯಲ್ಲಿ ಒಂದು ಪುಸ್ತಕ. ಅದು ಬೀಡಿಯ ಪಾಸ್ ಪುಸ್ತಕ. ಅವಳು ದಿನಕ್ಕೆ ಎಂಟು ನೂರು ಬೀಡಿ ಕಟ್ಟುತ್ತಾಳೆ. ಆದರೆ ಬೀಡಿ ತೆಗೆಯುವವ ಅದರಲ್ಲಿ ಆರುನೂರು ಬೀಡಿ ಬರೆದು ಅವಳ ಕಷ್ಟದ ದುಡಿಮೆಯಲ್ಲೂ ಮೋಸ ಮಾಡುತ್ತಿದ್ದ. ಮರುದಿನ ಬೀಡಿ ಕಾರ್ಮಿಕರ ಮುಷ್ಕರ ಇದೆ. ಮುಷ್ಕರಕ್ಕಾಗಿ ಮಂಗಳೂರಿಗೆ ಹೋಗುವ ನಿರ್ಧಾರ ಬೀಡಿ ಕಾರ್ಮಿಕರಿಂದ. ನಫೀಸಾಳಿಗೂ ಮುಷ್ಕರಕ್ಕೆ ಹೋಗುವ ಇಚ್ಛೆ. ಆದರೆ ಒಂದು ವಿಧದ ಹೆದರಿಕೆ. ಹಾಗೊಂದು ವೇಳೆ ಹೋದರೆ ತನ್ನ ಮಾನ ಮರ್ಯಾದೆ ಏನಾಗಬಹುದು. ಎಲ್ಲಾ ತನ್ನ ಕಡೆಗೇ ಬೊಟ್ಟಿಕ್ಕಿ ತನ್ನನ್ನು ಅವಹೇಳನ ಮಾಡಬಹುದು.

ಹಾಗೇ ಹೋಗಲು ಅವಳಲ್ಲಿ ಒಂದು ಬುರ್ಖಾವೂ ಇಲ್ಲ. ಘೋಷಾ ಇಲ್ಲದೆ ಹೋಗುವುದು ಆಗದ ಮಾತು. ಸಂಜೆಯೇ ಒಂದೆರಡು ಮನೆಗೆ ಹೋಗಿ ಘೋಷಾ ಕೇಳಿದಳು. ಕೊಡಲು ಸಿದ್ಧರಿದ್ದ ಹೆಂಗಸರು ಅವಳು ಮುಷ್ಕರಕ್ಕೆ ಹೋಗುವ ನಿರ್ಧಾರ ಕೇಳಿ ''ಆಗೋಲ್ಲ.... ಕೊಡುವುದಕ್ಕೆ, ನಾಳೆ ನಾವಿದ್ದರೆ ತಾನೇ... ನಮಗೆ ನೆಂಟರ ಮನೆಗೆ ಹೋಗಲಿಕ್ಕೆ ಇದೆಯಪ್ಪ'' ಎಂದು ಜಾರಿಕೊಂಡರು. ಹಾಗಾಗಿ ಅವಳ ಮುಷ್ಕರದ ಯೋಚನೆ ಗಾಳಿಯಲ್ಲಿ ತೂರಿಕೊಂಡುಹೋಯಿತು.

ಬಾಗಿಲಲ್ಲಿ ಸದ್ದಾಗುತ್ತದೆ. ಅವಳು ಗಂಡನ ಭಾವಚಿತ್ರ ಮತ್ತು ಬೀಡಿ ಪಾಸ್

ಪುಸ್ತಕ ಮತ್ತೆ ಪೆಟ್ಟಿಯಲ್ಲಿರಿಸುವ ಸಮಯಕ್ಕೆ ಮುದ್ದು ಮಗಳ ಧ್ವನಿ ಕೇಳಿಸುತ್ತದೆ.

''ಉಮ್ಮಾ ಉಸ್ತಾದ್ ಬಂದಿದ್ದಾರೆ.''

ನಫೀಸಾ ಸೆರಗನ್ನು ಮೈ ಪೂರ್ತಿ ಹೊದ್ದುಕೊಂಡು ತಲೆಗೆ ರುಮಾಲು ಧರಿಸುತ್ತಾಳೆ. ''ಅಸ್ಸಲಾಂ ಆಲೈಕುಂ'' ಧ್ವನಿಯೊಂದಿಗೆ ಮೌಲವಿ ಒಳಗೆ ಕಾಲಿರಿಸುತ್ತಾರೆ.

ನಫೀಸಾ ಮೌಲವಿಯವರನ್ನೇ ದಿಟ್ಟಿಸಿ ನೋಡುತ್ತಾಳೆ. ಮೌಲವಿ ಅಲ್ಲಿದ್ದ ಚಾಪೆಯಲ್ಲಿ ಕೂರುತ್ತಾರೆ. ಅವಳಿಗೆ ಅವರೆದುರಿನಿಂದ ಓಡಿ ಹೋಗುವಂತಹಾ ನಾಚಿಕೆ ಇಲ್ಲ. ಎಷ್ಟೋ ದಿನಗಳ ರೂಢಿ. ಅವರು ಅವಳಿಗೀಗ ಆತ್ಮೀಯರಾಗಿ ಬಿಟ್ಟಿದ್ದಾರೆ.

''ನಫೀಸಾ ನನ್ನಿಂದ ಏನಾಗಬೇಕಿತ್ತು ?'' ಅವರು ಕೇಳಿದರು.

''ಇಂದಿಗೆ ಎರಡು ವರ್ಷ - ನೀವು ಅವರ ಹೆಸರಿನಲ್ಲಿ ಒಂದು ದುವಾ ಓದಿ.''

ಮೊಯಿಲಿಯಾರರ ಕಣ್ಣೆದುರಿನಲ್ಲಿ ಅವಳ ಗಂಡನ ಮುಖ ತೇಲಿಬಂತು. ಆ ಸಾವಿನ ಘಟನೆ ! ಒಂದು ತೊಟ್ಟು ಕಣ್ಣೀರು ! ಪಾಪ ! ಎಂತಹಾ ಬದುಕು ಗಂಡ ಸತ್ತ ಅನಂತರದ ದಿನಗಳು ಬಹಳ ಕಷ್ಟದ ದಿನಗಳು ನಫೀಸಾಳಿಗೆ. ಆದರೂ ಎಂತಹ ಧೈರ್ಯದಿಂದ ಬದುಕಿದಳು. ಬೀಡಿ ಕಟ್ಟಿ ತನ್ನ ಜೀವನ ಸಾಗಿಸುವ ಜೊತೆಗೇ ತನ್ನ ಮುದ್ದು ಮಗಳನ್ನು ಶಾಲೆಗೆ ಕಳುಹಿಸುವ ತಾಕತ್ತು ತೋರಿದ್ದಳು. ಮೊಯಿಲಿಯಾರರು ದುವಾ ಓದಿ ಮುಗಿಸಿದರು. ಆ ಗುಡಿಸಲ ಮೂಲೆಯಲ್ಲಿಯೇ ಅಡಿಗೆಯ ಒಲೆ, ಅಷ್ಟು ಸಣ್ಣ ಗುಡಿಸಲದು.

ಮೊಯಿಲಿಯಾರರು ಊಟ ಮುಗಿಸಿದರು. ತೃಪ್ತಿ ಕಂಗಳಲ್ಲಿ ನೆಲೆಸಿತ್ತು. ನಫೀಸಾ ಹರಕಲು ಪೆಟ್ಟಿಗೆಯ ಮುಚ್ಚಳ ತೆಗೆದು ಅದರಿಂದ ಹತ್ತು ರೂಪಾಯಿಯ ನೋಟೊಂದನ್ನು ಮೊಯಿಲಿಯಾರರಿಗೆ ಕೊಡಲು ಬಂದಳು. ಮೊಯಿಲಿ ಯಾರರಿಗೆ ಸಂಕಟವುಂಟಾಯಿತು. ಅವರು ಅದನ್ನು ನಯವಾಗಿ ತಿರಸ್ಕರಿಸಿ ಹೇಳಿದರು.

''ನಫೀಸಾ. ನಾನು ಹಣದಿಂದಲೇ ಬದುಕುವವನಲ್ಲ. ನಾನು ನಿನ್ನಿಂದ ಹಣ ತೆಗೆದುಕೊಳ್ಳುವುದು ನ್ಯಾಯವಲ್ಲ. ನನಗೂ ಹೃದಯವಿದೆ. ಇದು ನಿನ್ನಲ್ಲಿಯೇ ಇರಲಿ.''

ನಫೀಸಾ ಕೃತಜ್ಞತೆಯಿಂದ ಅವರನ್ನು ನೋಡಿದಳು.

''ಮೊಯಿಲಿಯಾರರೇ, ನಿಮ್ಮ ಮಗಳು ಸಕೀನಾಳ ಸುದ್ದಿ ಏನಾದರೂ ಇದೆಯಾ ?''

''ಇದೆ... ನನ್ನ ತಂಗಿ ಮೈಮೂನ ಅವಳನ್ನು ಆರೋಗ್ಯವಾಗಿಯೇ ನೋಡಿ

ಕೊಳ್ಳುತ್ತಿದ್ದಾಳೆ. ತಾಯಿಯಿಲ್ಲದ ಅವಳಿಗೆ ನನ್ನ ತಂಗಿಯೇ ತಾಯಿಯಾಗಿದ್ದಾಳೆ.''

''ಮೊಯಿಲಿಯಾರರೇ, ನೀವು ಅವಳೊಬ್ಬಳನ್ನೇ ಬಿಟ್ಟು ಇಲ್ಲಿ ಯಾಕೆ ಚಿಂತೆಯಿಂದ ಕಾಲ ಕಳೆಯಬೇಕು. ನಿಮ್ಮ ಮಗಳನ್ನು ಇಲ್ಲಿಗೆ ಯಾಕೆ ಕರೆತರಬಾರದು.''

''ಇಲ್ಲಿಗೆ...! ಇಲ್ಲಿ ಆ ಮಗುವನ್ನು ನಾನು ನೋಡಿಕೊಳ್ಳುವುದು ಹೇಗೆ ಸಾಧ್ಯ ?''

''ನನ್ನ ಮನೆಯಲ್ಲಿ ನಾನು ನೋಡಿಕೊಳ್ಳುತ್ತೇನೆ. ನನ್ನ ಈ ಮಗಳಂತೇ ನಿಮ್ಮ ಈ ಮಗುವನ್ನೂ ನೋಡಿಕೊಳ್ಳುತ್ತೇನೆ.''

ಮೊಯಿಲಿಯಾರರಿಗೆ ಮಾತುಕಟ್ಟಿತು. ಕೊರಳು ತುಂಬಿ ಬಂದು ಅವರು ಮಾತಾಡಿದರು.

''ನಫೀಸಾ, ನಿನ್ನ ಈ ಕಷ್ಟದ ಬದುಕಿನ ಜೊತೆಗೆ ಮತ್ತೊಂದು ಕಷ್ಟನಾ ಯಾಕೆ ಕೊಡಲಿ.''

''ಹಾಗೆ ಹೇಳಬಾರದು ನೀವು... ಕಷ್ಟ ಬರುವುದೇ ಜೀವನ. ಯಾವುದಕ್ಕೂ ಯೋಚಿಸಿ.''

''ಅಂತಹಾ ಸಂದರ್ಭ ಬಂದರೆ ನೋಡುವ.''

ಮೊಯಿಲಿಯಾರರು ಹೊರಟು ನಿಂತರು. ನಫೀಸಾ ಬಾಗಿಲವರೆಗೆ ಬಂದಳು. ಜೊತೆಯೇ ರಜಿಯಾ, ಮೊಯಿಲಿಯಾರರು ರಜಿಯಾಳ ಕೆನ್ನೆ ತಟ್ಟಿ ಕಿಸೆಯಿಂದ ಇಪ್ಪತ್ತು ರೂಪಾಯಿಯ ನೋಟೊಂದನ್ನು ತೆಗೆದು ಅವಳ ಕೈಗಿತ್ತು.

''ಚೆನ್ನಾಗಿ ಓದಿ ಬುದ್ಧಿವಂತಳಾಗು ಮೋಳೇ'' ಎಂದು ನಫೀಸಾಳಿಂದ ಅನುಮತಿ ಪಡೆದು ಲಾಂದ್ರದ ಬೆಳಕಿನೊಂದಿಗೆ ಕತ್ತಲಲ್ಲಿ ನಡೆದರು.

* * *

ಶುಕ್ರವಾರ ಸಂಜೆ ಮದರಸದ ತುಂಬೆಲ್ಲಾ ಜಮಾತ್ ಸದಸ್ಯರು. ಆಸೀನರಾಗಿದ್ದ ಜಮಾತ್ ಅಧ್ಯಕ್ಷರು. ಅವರ ಪಕ್ಕದಲ್ಲಿ ಮೊಯಿಲಿಯಾರರು. ಊರಿನಲ್ಲಿನ ನಲವತ್ತು ಮನೆಯ ಮುಸ್ಲಿಂ ಹಿರಿಯರು ಅಲ್ಲಿ ಒಟ್ಟು ಸೇರಿದರು.

ಆ ಸಭೆ ಸೇರಲು ಒಂದು ಕಾರಣವಿತ್ತು. ಮೊದಲೇ ರೂಪುಗೊಂಡಿದ್ದ ಒಂದು ಕಾರ್ಯಕ್ರಮ ಎಲ್ಲಾ ಜನ ಸೇರಿದ ಅರಿವಾದ ಮೇಲೆ ಅದನ್ನು ಮತ್ತೊಮ್ಮೆ ವಿಶದ ಪಡಿಸಲು ಅಧ್ಯಕ್ಷರು ಎದ್ದುನಿಂತರು. ಸುತ್ತಲಿನ ಜನರನ್ನೊಮ್ಮೆ ನೋಡಿ ಒಮ್ಮೆ ಕೆಮ್ಮಿ ಗಂಟಲು ಸರಿಪಡಿಸಿಕೊಂಡು ಕಂಚಿನ ಕಂಠದಲ್ಲಿ ಹೇಳತೊಡಗಿದರು.

''ಸಹೋದರರೇ, ನಾವು ಈ ಜಮಾತ್‌ಗೆ ಒಳಪಟ್ಟವರು ನಲವತ್ತು ಮನೆಯವರು ಇದ್ದೇವೆ. ಕಳೆದ ನಾಲ್ಕು ವರ್ಷಗಳಿಂದ ನಾವೆಲ್ಲಾ ಒಗ್ಗಟ್ಟಿನಿಂದ ಈ

ಮದರಸವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಯಾವುದೇ ಭಿನ್ನಾಭಿಪ್ರಾಯ ನಮ್ಮಲ್ಲಿ ಬಂದಿಲ್ಲ. ಈ ನಾಲ್ಕು ವರ್ಷಗಳಲ್ಲೂ ನನ್ನನ್ನೇ ಪ್ರೆಸಿಡೆಂಟನನ್ನಾಗಿ ಮಾಡಿ ನನ್ನಲ್ಲಿ ಅಪಾರವಾದ ಹೊಣೆ ಇರಿಸಿದ್ದೀರಿ... ಇದಕ್ಕಾಗಿ ನಾನು ನಿಮಗೆ ಕೃತಜ್ಞ. ನಾವು ಒಂದು ನಿರ್ಣಯಕ್ಕೆ ಬಂದಿದ್ದೇವೆ. ನಮಗೊಂದು ದೊಡ್ಡ ಮಸೀದಿ ಆಗಬೇಕೆಂದು. ಈಗಿರುವ ಮಸೀದಿಯ ಕಟ್ಟಡ ಹಳೆಯದಾಗಿದೆ. ನಾವು ಸಮರ್ಥರು. ಇದಕ್ಕೆ ನೀವೆಲ್ಲಾ ಒಂದು ನಿರ್ದಿಷ್ಟವಾದ ಸಹಾಯ ನೀಡಬೇಕು. ಮತ್ತು ಹೊರಗಿನಿಂದ ಸಹಾಯ ಪಡೆಯಲು ನೀವು ಸಹಕಾರ ಕೊಡಬೇಕು.''

ಅಧ್ಯಕ್ಷರ ಮಾತಿನ ಒಡನೆಯೇ ಸೇರಿದವರಲ್ಲಿ ಕೆಲವರು ಆ ಮಾತಿಗೆ ಒಪ್ಪಿಗೆಯೆಂಬಂತೆ ಹೌದು ಹೌದೆಂದರು. ಅವರಿಗೆ ಖುಷಿಯೆನಿಸಿತು. ಅವರು ಮೊಯಿಲಿಯಾರನ್ನು ನೋಡಿದರು. ಆ ನೋಟದ ಅರ್ಥವಾಗಿ ಮೊಯಿಲಿ ಯಾರರು ಎದ್ದುನಿಂತರು. ಅವರು ಸಭೆಯನ್ನು ಸೂಕ್ಷ್ಮವಾಗಿ ದಿಟ್ಟಿಸಿದರು. ಜಮಾತ್‌ಕ್ಕೊಳಪಟ್ಟ ಮನೆಗಳಲ್ಲಿ ದಿನದ ಅನ್ನಕ್ಕೆ ಪರದಾಡುವ ಜನ ಅದೆಷ್ಟೋ ಇದ್ದರು. ಅಂತಹಾ ಮನೆಗಳ ಎಳೆಯ ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗದೇ ಮನೆಯಲ್ಲಿ ಬೀಡಿ ಕಟ್ಟಿ ಭವಿಷ್ಯತ್ತನ್ನು ಕರಾಳವಾಗಿಸುವ ದುರಂತದಲ್ಲಿ ಮುಳುಗಿಸಬೇಕಾದ ಅನಿವಾರ್ಯತೆ ಮೊಯಿಲಿಯಾರರ ಕಣ್ಣಿಗೆ ಗೋಚರಿಸಿತು.

ಅದನ್ನೆಲ್ಲಾ ಜ್ಞಾಪಿಸಿಕೊಂಡು ಅವರು ಹೇಳತೊಡಗಿದರು.

''ಸಹೋದರರೇ, ಮಸೀದಿ ಕಟ್ಟುವ ಅನಿವಾರ್ಯತೆ ಈಗ ಯಾಕೆಂದು ನನಗೆ ಅರ್ಥವಾಗುತ್ತಿಲ್ಲ. ದೇವರು ದುಬಾರಿಯಾದ, ಅಂದವಾದ ಕಾಂಕ್ರೀಟ್ ಕಟ್ಟಡಕ್ಕೆ ಮರಳಾಗಿ ನಮ್ಮ ಪ್ರೀತಿ ತೋರುತ್ತಾನೆ ಎಂಬ ಭಾವನೆ ನಿಮ್ಮಲ್ಲಿ ಇದ್ದರೆ' ಅದು ತಪ್ಪು. ಪ್ರೆಸಿಡೆಂಟರು ಶ್ರೀಮಂತರು. ಅವರಿಗೆ ದುಡ್ಡು ಕೊಡೋ ಸಾಮರ್ಥ್ಯ ಉಂಟು. ಆದರೆ ನಮ್ಮ ಜಮಾತಿನಲ್ಲಿ ಎಷ್ಟು ಮಂದಿ ಒಪ್ಪೊತ್ತಿನ ಗಂಜಿಗೂ ಪರದಾಡುತ್ತಾರೆ ಎಂಬುದು ಇಲ್ಲಿ ಸೇರಿದ ಹಲವರಿಗೆ ಗೊತ್ತು. ಎಷ್ಟು ಜನರ ಮನೆಯಲ್ಲಿ ಇನ್ನೂ ಮದುವೆಯಾಗದೇ ಉಳಿದಿರುವ ಪ್ರಾಯ ಮೀರಿದ ಹುಡುಗಿಯರಿದ್ದಾರೆ. ಅವರ ಕಣ್ಣಲ್ಲಿ ಇಂದು ಹರಿವ ಆ ದುಃಖದ ಕಂಬನಿ, ನಾಳೆ ಸಂತೋಷದ ಕಂಬನಿ ಆಗುವಂತೆ ನಾವು ಶ್ರಮಿಸಿದ್ದಲ್ಲಿ ಅದು ಈ ಮಸೀದಿ ಕಟ್ಟುವುದಕ್ಕಿಂತಲೂ ಘನವಾದ ಕಾರ್ಯ. ಮಸೀದಿ ಎಂಬುದು ಅಪಾರವಾದ ಧನದ ರಾಶಿಯಿಂದ ಮಾತ್ರ ಸಾಧ್ಯ... ನೀವೆಲ್ಲ ಉತ್ತಮರು. ಉತ್ತಮ ಜನರಿಗೆ ಉತ್ತಮ ಹೃದಯವಿರುತ್ತದೆ. ಆ ಉತ್ತಮ ಹೃದಯದಲ್ಲಿ ದೇವರ ಪ್ರೀತಿ ಇರುತ್ತದೆ. ನೀವು ನಿಮ್ಮ ಪ್ರಜ್ಞೆಯಿಂದ ತಿಳಿದುಕೊಳ್ಳಿ. ಈ ಬಡ ಹೆಣ್ಣು ಮಕ್ಕಳ ಕಲ್ಯಾಣಕ್ಕೆ ಮತ್ತು ಬಡ ಎಳೆಯಮಕ್ಕಳ ಶೈಕ್ಷಣಿಕ ಪ್ರಗತಿಗೆ ಪ್ರಯತ್ನಿಸಿ... ಅದಕ್ಕಾಗಿ ನಾವು ಮಸೀದಿಗಾಗಿ ಸಂಗ್ರಹಿಸುವ

ಹಣವನ್ನು ಇಂತಹ ಕಲ್ಯಾಣ ಕಾರ್ಯಕ್ರಮಕ್ಕೆ ವಿನಿಯೋಗಿಸಿದರೆ ಅದಕ್ಕಿಂತ ಮಹತ್ತಾದ ಕಾರ್ಯ ಮತ್ತೊಂದಿಲ್ಲ.''

ಮೊಯಿಲಿಯಾರರು ಮಾತನ್ನು ನಿಲ್ಲಿಸಿ ಕುಳಿತುಕೊಂಡರು. ಅವರ ದೃಷ್ಟಿ ಅಧ್ಯಕ್ಷರ ದೃಷ್ಟಿಯನ್ನು ಸಂಧಿಸಿತು. ಅಧ್ಯಕ್ಷರ ಕಣ್ಣುಗಳಲ್ಲಿ ಮೊದಲಿನ ಶಾಂತಿ ಇರಲಿಲ್ಲ. ನಂತರ ಸಭೆಯಲ್ಲಿ ಒಂದಷ್ಟು ಹೊತ್ತು ಗುಜುಗುಜು. ಮಾತುಕತೆ ಒಂದು ನಿರ್ದಿಷ್ಟ ನಿರ್ಣಯಕ್ಕೆ ಬರಲಿಲ್ಲ. ಸಭೆ ಚದುರಿತು. ಜಮಾತ್ ಅಧ್ಯಕ್ಷರಿಗೆ ಮೊಯಿಲಿಯಾರರ ಮೇಲೆ ದ್ವೇಷ ಹೆಡೆಯಾಡಿತು.

ಸ್ವಲ್ಪ ದಿನ ಮೌನವಾಗಿ ಕಳೆಯಿತು. ನಾಲ್ಕು ದಿನಗಳ ನಂತರ ಮದರಸದಲ್ಲಿನ ಒಂದು ಪ್ರಸಂಗ. ರಾತ್ರಿಯ ಹೊತ್ತು ಮದರಸದ ಒಳಗೆ ವಿದ್ಯುತ್ತಿನ ಪ್ರಖರ ಬೆಳಕಿನಡೆ ಕುಳಿತ ಗಂಡಸರು. ಹೊರಗೆ ಕತ್ತಲಲ್ಲಿ ನೆಲದ ಮೇಲೆ ಕುಳಿತ ಬುರ್ಖಾಧಾರಿ ಹೆಂಗಸರು. ಅಂದು ಮೊಯಿಲಿಯಾರರ ವಾಕ್ ಪ್ರವಚನವಿತ್ತು. ಇಸ್ಲಾಂ ಧರ್ಮದ ಕುರಿತು. ಅಖಿರತ್‌ನ ಕುರಿತು ಅವರು ಬಹಳಷ್ಟು ಹೇಳಬೇಕಾಗಿತ್ತು. ಆದರೆ ಅವರು ಹೀಗೆ ಹೇಳಿದರು.

''ಧರ್ಮ ಅಂದರೆ ಏನು ? ಮನುಷ್ಯ ಯಾವುದೇ ಜಾತಿಯವನಾಗಿರಲಿ ಆತನ ಕಷ್ಟಕಾಲದಲ್ಲಿ ಆತನನ್ನು ಅರ್ಥಮಾಡಿಕೊಂಡು ಮಾನವೀಯತೆಯಿಂದ ಆತನಿಗೆ ಸಹಾಯ ಮಾಡುವುದು ನಿಜವಾದ ಧರ್ಮ.

''ನಾವು ಹಿಂಸೆಯ ಯುಗದಲ್ಲಿ ಬದುಕುತ್ತಿದ್ದೇವೆ. ಸತ್ಯ ಇಲ್ಲಿ ಸತ್ತುಹೋಗಿದೆ. ಆರ್ಥಿಕದಾಸ್ಯದಿಂದ, ಸಾಮಾಜಿಕ ದಾಸ್ಯದಿಂದ, ಧಾರ್ಮಿಕ ದಾಸ್ಯದಿಂದ ನಾವು ಹೊರಬರಬೇಕಾಗಿದೆ. ನಮ್ಮ ನರನಾಡಿಗಳಲ್ಲಿ ಹರಿವ ರಕ್ತದ ಕಣದಲ್ಲಿ ಜಾತಿ ಮತ್ತು ಮೇಲು-ಕೀಳು, ಸ್ಪರ್ಶ, ಅಸ್ಪೃಶ್ಯತೆ, ಮಡಿ-ಮೈಲಿಗೆ ಇವೇ ತುಂಬಿಕೊಂಡಿದೆ. ನಿಜವಾದ ಬದುಕನ್ನು ನಾವು ಅರಿತುಕೊಂಡಿಲ್ಲ. ನಾವು ನಮ್ಮನ್ನೇ ನಂಬದೆ ಮತಧರ್ಮಗಳ ಮೌಢ್ಯಕ್ಕೆ ಬಲಿಯಾಗಿ ನಮ್ಮೊಳಗೇ ಅನಾಥರಾಗುತ್ತಿದ್ದೇವೆ. ನಾವು ಬೆಳೆಯಬೇಕು. ಮಾನವೀಯತೆಯನ್ನು ಒಗ್ಗೂಡಿಸಿಕೊಂಡು, ಸುತ್ತಲಿನ ಜನರನ್ನು ಪ್ರೀತಿಸಿ, ಆ ಜನರಲ್ಲಿರುವ ಸ್ವಾರ್ಥ, ಭಯ ಹಾಗೂ ಅಜ್ಞಾನವನ್ನು ಹೋಗಲಾಡಿಸಿ ಅವರನ್ನು ಮಾನವರನ್ನಾಗಿ ಮಾಡಬೇಕು. ಇಲ್ಲಿನ ಕೆಲ ಯುವಕರು ವಿದೇಶಕ್ಕೆ ಹೋಗಿ ಅಲ್ಲಿನ ದುಡ್ಡಿನಿಂದ ಇಲ್ಲಿ ದೊಡ್ಡ ದೊಡ್ಡ ಮಹಡಿ ಮನೆಗಳನ್ನು ಕಟ್ಟಿರುವರೇ ಹೊರತು ಇನ್ನೇನಾದರೂ ಮಾಡಿದ್ದಾರೆಯೇ. ಅವರು ದೊಡ್ಡಸ್ತಿಕೆ ತೋರಿಸಬೇಕಾದುದು ಮಹಡಿ ಮನೆಗಳಿಂದಲ್ಲ, ಮಾನವೀಯ ಹೃದಯದಿಂದ.

ನಾವು 'ಮುಸಲ್ಮಾನರು ನಿಜ. ಆದರೆ ಇದೆಲ್ಲವುಗಳಿಗಿಂತ ಮುಖ್ಯವಾಗಿ ನಾವು ಭಾರತೀಯರು, ಆದರೆ ನಾವು ಒಂದೇ ಜನಾಂಗದವರೆಂಬ ಭಾವನೆ ಇನ್ನೂ

ಮೂಡಿಲ್ಲ. ನಾವು ಇಲ್ಲಿನ ಜನರೊಡನೆ ಒಂದಾಗಿ ಬಾಳುವುದು ನಮ್ಮ ಕರ್ತವ್ಯ. ಹೀಗೆಂದು ಮಾತು ನಿಲ್ಲಿಸಿ ಅವರು ಕುಳಿತುಕೊಂಡರು.

ಮದರಸದ ಒಳಗಿನ ಜನ ಖಾಲಿಯಾದರು. ಹಾಗೇ ಹೊರಗೆ ಕತ್ತಲಲ್ಲಿ ಕುಳಿತಿದ್ದ ಹೆಂಗಸರು ಕೂಡಾ.

ಮೊಯಿಲಿಯಾರರಿಗೆ ಫಕ್ಕನೆ ಊರಿಗೆ ಹೋಗಿ ಮುದ್ದುಮಗಳ ಮುಖವನ್ನೊಮ್ಮೆ ನೋಡಿ ಬರಬೇಕೆಂದೆನಿಸಿತು. ಹಾಗೇ ಅವರು ಹೊರಟರು. ಊರಿಗೆ ಹೋಗಿ ತಂಗಿಯ ಮನೆಯಲ್ಲಿ ಎರಡು ದಿನ ಕಳೆದು ಮಗಳನ್ನು ಮುದ್ದಾಡಿ ಮತ್ತೆ ಮರಳಿ ಬಂದಾಗ ಅವರಿಗೆ ಆಘಾತವಾದ ದೃಶ್ಯವೊಂದು ಕಂಡುಬಂದಿತು.

ಮದರಸದ ಒಳಗೆ ಮಕ್ಕಳು. ಅವರಿಗೆ ಖುರಾನ್ ಪ್ರವಚನ ಮಾಡಿಸುತ್ತಿದ್ದ ಆ ವ್ಯಕ್ತಿ ಯಾರು ? ಮೊಯಿಲಿಯಾರರಿಗೆ ಗಾಬರಿಯಾಯಿತು. ಇದೇನು ಸುಳ್ಳಲ್ಲವಷ್ಟೇ. ಅಲ್ಲಿ ಇರಬೇಕಾದವನು ತಾನು. ಈ ವ್ಯಕ್ತಿಗೆ ಹೇಗೆ ಪ್ರವೇಶ ಸಿಕ್ಕಿತು ?

ಮೊಯಿಲಿಯಾರರು ಒಳಗೆ ಬಂದರು. ಎದುರಿನ ವ್ಯಕ್ತಿ ಮುಖ ಎತ್ತಿದಾಗ 'ಅಸ್ಸಲಾಂ ಆಲೈಕುಂ' ಎಂದರು ಆ ವ್ಯಕ್ತಿಯೂ ಪ್ರತಿಯಾಗಿ ವಂದಿಸಿತು. ಮೊಯಿಲಿಯಾರರು ಕೇಳಿದರು, ''ನೀವು ?''

ಆ ವ್ಯಕ್ತಿ ನಿಧಾನವಾಗಿ ಅಂದಿತು.

''ನಾನು ಇಲ್ಲಿಗೆ ಹೊಸತಾಗಿ ಬಂದ ಮೊಯಿಲಿಯಾರರು.''

ಮೊಯಿಲಿಯಾರರಿಗೆ ತಲೆ ಸುತ್ತಿ ಬಂದಿತು. ಏನೆಲ್ಲಾ ಆಗಿದೆ ಇಲ್ಲಿ ! ತಾನಿಲ್ಲದ ಈ ಕೆಲವೇ ದಿನಗಳಲ್ಲಿ ಆಗಬಾರದ್ದೆಲ್ಲಾ ಗಟ್ಟಿಯಾಗಿ ನಡೆದೇಹೋಗಿದೆ. ಅವರು ನಿಧಾನವಾಗಿ ಕುಸಿಯುವವರಿದ್ದರು. ಅಷ್ಟರಲ್ಲೇ ಪರಿಚಿತ ಧ್ವನಿ ಕೇಳಿಬಂತು.

ಅಧ್ಯಕ್ಷರು ಒಳಗೆ ಕಾಲಿರಿಸಿದರು. ಅವರ ಮುಖದಲ್ಲೋ ವಿಕಟ ನಗು. ''ಏನು ಮೊಯಿಲಿಯಾರರೇ ಯಾಕೆ ಬಂದಿರಿ ?'' ಅವರು ಅದೇ ನಗು ನಗುತ್ತಾ ಕೇಳಿದರು.

ಮೊಯಿಲಿಯಾರರಿಗೆ ಒಂದೂ ಅರ್ಥವಾಗಲಿಲ್ಲ. ಅವರು ಮೂಕರಂತೆಯೇ ನಿಂತೇ ಇದ್ದರು. ಮತ್ತೆ ಅಧ್ಯಕ್ಷರೇ ಮಾತನಾಡಿದರು.

ಮೊಯಿಲಿಯಾರರೇ ನಾವು ಯಾಕೆ ಹೀಗೆ ಮಾಡಿದೆವೆಂದು ನಿಮಗೆ ಅರ್ಥವಾಗಲಿಕ್ಕಿಲ್ಲ. ಅದಕ್ಕೆ ಕಾರಣವೂ ಇದೆ. ಕಾರಣವಿಲ್ಲದೆ ನಾವು ಯಾವುದನ್ನೂ ನಿರ್ಧರಿಸುವುದಿಲ್ಲ. ನಮಗೆ ನಿಮ್ಮಂತಹ ಮೊಯಿಲಿಯಾರರ ಅಗತ್ಯವಿಲ್ಲ. ಮಸೀದಿ ಕಟ್ಟುವಂತಹ ಪುಣ್ಯ ಕಾರ್ಯ ನೀವು ಬೇಡವೆನ್ನುತ್ತೀರಿ. ಆಖಿರತ್‌ನ ಕುರಿತು ಹೇಳಿ ಅಂದರೆ ಇಹದ ಬಗ್ಗೆ ಮಾತಾಡುತ್ತೀರಿ. ಧರ್ಮವ ಮರೆತು ಜಾತಿ ಜಾತಿ ಎಂದು ಬಡಿದಾಡುವುದು ಬೇಡ ಎನ್ನುತ್ತೀರಿ. ನಮ್ಮ ಹೆಣ್ಮಕ್ಕಳು ಲೌಕಿಕ ಶಿಕ್ಷಣ ಕಲಿತು

ಮಾಡಬೇಕಾದ್ದೇನಿದೆ. ಅವಳು ಗಂಡನ ಹಿಂದೆ ಹೋಗೋಳು. ಅವಳು ಘೋಷಾ ಕಿತ್ತೆಸೆದು ಗಂಡಸರಂತೆ ಬಾಳಬೇಕೆನ್ನುತ್ತೀರಲ್ಲ, ಈ ಮಾತೇ ನಮಗೆ ಹಿಡಿಸಲಿಲ್ಲ. ಅದಕ್ಕೆ ನಮಗೆ ನೀವು ಬೇಡವೆನಿಸಿದ್ದು.'' ಹೀಗೆಂದು ಮಾತು ನಿಲ್ಲಿಸಿ ಕಿಸೆಯಿಂದ ನೂರರ ಐದು ನೋಟನ್ನು ತೆಗೆದು ಮೊಯಿಲಿಯಾರರ ಕೈಗಿತ್ತರು. ''ನೋಡಿ, ಇದು ನಿಮ್ಮ ಸಂಬಳ. ಇನ್ನು ನಿಮ್ಮಿಂದ ನಮಗೆ ಯಾವ ಅಗತ್ಯವೂ ಇಲ್ಲ. ನೀವು ಇನ್ನು ಹೊರಡಬಹುದು. ಇನ್ನೊಂದು ಮಾತು, ನೀವು ಇನ್ನೊಂದು ಊರಿನಲ್ಲಿ ಈ ನಿಮ್ಮ ವಾದವನ್ನು ಉಳಿಸಿಕೊಂಡು ಬದುಕಲಾರಿರಿ. ನೀವು ಸಂಬಳಕ್ಕೆ ಬಾಳೋರು. ಹೇಗೆ ಬದುಕಬೇಕೆಂದು ಅರ್ಥಮಾಡಿಕೊಳ್ಳಿ. ಗುಲಾಮರಾಗಿ ಬಾಳುವುದನ್ನು ಕಲಿಯಿರಿ.''

ಕತ್ತು ಹಿಡಿದು ನೂಕಿದಂತಾಯ್ತು. ಮೊಯಿಲಿಯಾರರು ಮಕ್ಕಳನ್ನು ನೋಡಿದರು. ಮಕ್ಕಳೆಲ್ಲರ ಕಣ್ಣುಗಳಲ್ಲಿ ನೀರು. ಅವರಿಗೂ ಕಣ್‌ತುಂಬಿ ಬಂತು. ಒಬ್ಬೊಬ್ಬರ ಬಳಿ ಸಾಗಿ ಅವರ ತಲೆಸವರಿ ತಬ್ಬಿಕೊಂಡು ಮುದ್ದಿಸಿ ಸಾಂತ್ವನ ಗೊಳಿಸಿದರು. ನಫೀಸಾಳ ಮಗಳು ರಜಿಯಾಳು ಅವರ ಕೈಯನ್ನು ಬಿಡಲೇ ಇಲ್ಲ. ಮೊಯಿಲಿಯಾರರು ಮದರಸದ ಒಳಗಿಂದ ಕೊನೆಯ ಹೆಜ್ಜೆಯನ್ನು ಎತ್ತಿ ಹೊರಗೆ ಬಂದರು. ರಜಿಯಾಳು ಅವರಿಗೆ ಜೊತೆಯಾದಳು.

ರಜಿಯಾ ಅವರ ಕೈ ಹಿಡಿದಾಗ ಅವರು ಬಾಗಿ ಕುಳಿತುಕೊಂಡು ಹೇಳಿದರು. ''ಹೋಗು, ಮೋಳೆ... ನೀ ನನ್ನ ಹಿಂದೆ ಬರಬೇಡ. ಹೋಗು ನಿನಗಿನ್ನು ಅವರೇ ಗುರುಗಳು. ನನ್ನದೆಲ್ಲವೂ ಮುಗಿಯಿತು.''

ಆದರೆ ರಜಿಯಾ ಅವರ ಬಳಿಯಿಂದ ದೂರ ಸರಿಯಲಿಲ್ಲ. ಅವರಿಗೆ ಗಟ್ಟಿಯಾಗಿ ಅಂಟಿಕೊಂಡಳು. ಮದರಸ ದೂರವಾಗಿತ್ತು. ಮುಂದಿನ ದಾರಿ ಏನು ಎಂಬುದೇ ಅವರಿಗೆ ತಿಳಿಯಲಿಲ್ಲ. ಮೊಯಿಲಿಯಾರರನ್ನು ತೆಗೆದ ವಿಷಯ ಅದಾಗಲೇ ಊರು ಪೂರ್ತಿ ಹಬ್ಬಿತ್ತು. ಆದರೆ ಅದಕ್ಕಾಗಿ ಅನುಕಂಪ ತೋರಿದವರು ಬಹಳ ಕಡಿಮೆ ಮಂದಿ. ''ಛೇ... ಹೀಗಾಗಬಾರದಿತ್ತು'' ಎಂಬ ಮಾತಿನ ಹೊರತು ಅವರಿಂದ ಮತ್ಯಾವ ನುಡಿಯೂ ಹೊರಡಲಿಲ್ಲ.

''ಉಸ್ತಾದ್ ಬನ್ನಿ ನಮ್ಮನೆಗೆ ಹೋಗುವ'' ರಜಿಯಾಳ ಮಾತು ಕೇಳಿಸಿದಾಗ ಅವರು ಯಾವುದೋ ಲೋಕದಿಂದ ವಾಸ್ತವಕ್ಕೆ ಬಂದರು. ಮುಂದೆ ಮಾತಾಡದೆ ಅವಳೊಂದಿಗೆ ಆ ಗುಡಿಸಲತ್ತ ಹೆಜ್ಜೆ ಹಾಕಿದರು.

ಬಾಗಿಲಲ್ಲಿ ನೆರಳು ಕಾಣಿಸಿದಾಗ ನಫೀಸಾ ಬೆಚ್ಚಿದಳು. ತನ್ನ ಮಗಳು ರಜಿಯಾಳೊಂದಿಗೆ ಮೊಯಿಲಿಯಾರರನ್ನು ಆ ವೇಳೆಯಲ್ಲಿ ಕಂಡು ಏನೊಂದು ಅರ್ಥವಾಗದೇ ಕಂಗಾಲಾದಳು. ಮೊಯಿಲಿಯಾರರ ಕಣ್ಣಿನ ಕಂಬನಿ ಅವಳ ಹೃದಯದಲ್ಲಿ ನೋವಿನ ತರಂಗಗಳನ್ನೆಬ್ಬಿಸಿತು.

''ಯಾಕೆ ಅಳುತ್ತಿದ್ದೀರಿ.'' ಅವಳು ಕೇಳಿದಳು. ರಜಿಯಾಳ ಮಾತು ನಡುವಿನಲ್ಲೇ ತೂರಿಬಂತು.

''ನಮಗೆ ಓದಿಸಲು ಬೇರೆ ಮೊಯಿಲಿಯಾರರು ಬಂದಿದ್ದಾರೆ.''

ನಫೀಸಾಳಿಗೆ ಮುಂಜಾನೆ ಕೇಳಿಸಿದ ಗುಸು ಗುಸು ಸುದ್ದಿಯ ಸಂಪೂರ್ಣ ಅರ್ಥ ಈಗ ತಿಳಿಯಿತು. ಒಮ್ಮೆಯೇ ಹೃದಯದಾಳದಲ್ಲಿ ಅವಿತಿದ್ದ ನೋವು ಕಂಬನಿಯ ರೂಪದಲ್ಲಿ ಅವಳ ಕಣ್ಣಿಂದ ಹೊರಗೆ ತುಳುಕಿತು. ಅವಳು ಕೆಳಗೆ ಕುಸಿದು ಬಿಕ್ಕಿ ಬಿಕ್ಕಿ ಅತ್ತಳು. ನಂತರ ಪರಿಸ್ಥಿತಿಯ ಅರಿವಾಗಿ ತನ್ನನ್ನೇ ತಾನು ಸಾಂತ್ವನಗೊಳಿಸಿಕೊಂಡು ಮೊಯಿಲಿಯಾರರ ಹತ್ತಿರ ಬಂದಳು.

ಅವರು ಇನ್ನೂ ದುಃಖಿಸುತ್ತಲೇ ಇದ್ದರು. ನಫೀಸಾ ಅವರ ಕೈಗಳನ್ನು ತನ್ನ ಕೈಗಳಲ್ಲಿ ತೆಗೆದುಕೊಂಡಳು. ಅವರು ಈ ಅನಿರೀಕ್ಷಿತ ವರ್ತನೆಯಿಂದ ಗಾಬರಿಯಾಗಿ ಅವಳ ಕಣ್ಣಿಂದ ದಿಟ್ಟಿಸಿದರು. ಆ ಎರಡು ಕಣ್ಣುಗಳಲ್ಲಿ ಶಾಂತಿ, ಸಹನೆ, ಪ್ರೇಮ, ಧೈರ್ಯ ನೆಲೆ ನಿಂತಿತ್ತು. ಅಪೂರ್ವ ಕಾಂತಿ ತುಂಬಿದ್ದ ಆ ಕಣ್ಣುಗಳು ಅವರ ಭಯವನ್ನು ಒದ್ದೋಡಿಸಿತು. ಅವರು ಆ ಕೈಗಳನ್ನು ಇನ್ನಷ್ಟು ಭದ್ರವಾಗಿಸಿಕೊಂಡು ಕೇಳಿದರು.

''ನಫೀಸಾ... ನೀನು ನನ್ನ ಮಗಳು ಸಕೀನಾಳ ತಾಯಾಗಲೂ ಸಿದ್ಧಳಿದ್ದೀಯಾ ?'' ಅವಳು ತಲೆ ತಗ್ಗಿಸಿದಳು. ಅದು ಸಮ್ಮತಿ ಸೂಚಕವೆಂಬಂತೆ ಆ ಕೈಗಳನ್ನು ಕಣ್ಣಿಗೊತ್ತಿಕೊಂಡು ಧೈರ್ಯದಿಂದ ಹೇಳಿದರು.

''ನಫೀಸಾ, ನೀನು ನನಗಿಂದು ಮುಕ್ತಿ ನೀಡಿದೆ. ನಾನು ಇನ್ನು ಧೈರ್ಯದಿಂದ ಬದುಕಬಲ್ಲೆ... ನಾನು ಇನ್ನು ಸ್ವತಂತ್ರ ಜೀವನವನ್ನು ನಡೆಸುವ ದಾರಿಯನ್ನು ಹುಡುಕುತ್ತೇನೆ. ಯಾರದೇ ಗುಲಾಮನಾಗದೆ ನಾನು ನಂಬಿಕೊಂಡ ತತ್ವಗಳೊಂದಿಗೆ ಸಂತಸದಿಂದ ಬದುಕಬಲ್ಲೆ.''

ನಫೀಸಾ ಅವರ ಮುಖವನ್ನು ತನ್ನ ಎದೆಗೊತ್ತಿಕೊಂಡಳು.

# 13 ವಿದಾಯ

ಸುಲ್ತಾನ್ ಮಹಲಿನಲ್ಲಿ ಸಂಜೆಯಾಗಿತ್ತು ಕಿಟಕಿಗೆ ಮುಖವಿರಿಸಿ ದೂರದ ಏರ್‌ಪೋರ್ಟ್ಟಿನ ಸುಂದರ ರನ್‌ವೇಯನ್ನು ನೋಡುತ್ತಿದ್ದಳು ಶಹೀದಾ. ಅವಳು ದುಃಖಿತಳಂತೆ ಕಾಣುತ್ತಿದ್ದಳು. ಅವಳ ಆ ಮುಗ್ಧ ಕಾಂತಿಯುಕ್ತ ಸುಂದರ ಕಪೋಲದಲ್ಲಿ ಹರಿಯುವ ಒಂದೊಂದು ಕಣ್ಣೀರಿನ ಹನಿಗಳು ಮುತ್ತಿನಂತೆ ಕಾಣುತ್ತಿದ್ದವು. ಸುಂದರ ಮುಗ್ಧ ಹುಡುಗಿಯ (ವಿವಾಹಿತಳ) ಹೃದಯದಲ್ಲಿ ಎಷ್ಟೊಂದು ನೋವುಗಳು !

ಕಳೆದ ಮೂರು ವರ್ಷಗಳಿಂದಲೂ ಅವಳು ಅತ್ತ ನೋಡುತ್ತಲೇ ಇದ್ದಾಳೆ. ದಿನಾ ವಿಮಾನ ಬಂದು ಪ್ರಯಾಣಿಕರನ್ನು ಇಳಿಸಿ ಹೋಗುತ್ತಲೇ ಇದೆ. ಆದರೆ ಅವಳು ನಿರೀಕ್ಷೆಯ ಕಂಗಳಿಂದ ಕಾಯುವ ಅನ್ವರ್ ಈ ಮೂರು ವರ್ಷಗಳಲ್ಲಿ ಆ ವಿಮಾನದಲ್ಲಿ ಬಂದಿಳಿದೇ ಇಲ್ಲ. ಆ ಮನೆಯ ಬಾಗಿಲನ್ನು, ಅವಳ ಹೃದಯದ ಕದವನ್ನು ತಟ್ಟಲೇ ಇಲ್ಲ.

ಅನ್ವರ್ ! ಜಮಾಲುದ್ದೀನ್ ಅನ್ವರ್ ಹುಸೇನ್ ! ಅವಳನ್ನು ಮದುವೆಯಾದವ ! ಮದುವೆಯಾದ ಎರಡು ತಿಂಗಳಲ್ಲೇ ಸೌದಿ ಅರೇಬಿಯಾದ ಅಪಾರ ಸಂಪತ್ತಿನ ಆಶೆಗೆ ಹೊರಟುಹೋದವ ! ಈ ಮೂವತ್ತಾರು ತಿಂಗಳಲ್ಲಿ ಧ್ವನಿ ಮಾತ್ರವಾಗಿ ಕೇಳಿಸಿಕೊಳ್ಳುತ್ತಿದ್ದ.

ತೇಲಿ ಬರುತ್ತಿತ್ತು ಆತನ ಧ್ವನಿ ಫೋನ್ ಕರೆಯ ಮೂಲಕ ! ಆ ಫೋನ್ ಕರೆಯಲ್ಲಿ ಆತನ ಧ್ವನಿ ಕೇಳಿಸಿದಾಗ ಅವಳ ಕಂಗಳಿಂದ ಕಂಬನಿ ಉಕ್ಕಿ ಹರಿಯುತ್ತಿತ್ತು. ಆ ತುಂಬು ಕಣ್ಣಿಂದ ಹರಿಯುವ ಕಂಬನಿಯಲ್ಲಿ ಅವಳ ಬಯಕೆ, ವೇದನೆಗಳೆಲ್ಲಾ ಇವೆ.

ಅವಳು ಹಾಗೆ ಆ ದೃಶ್ಯದಲ್ಲಿ ಕಣ್ಣಿಕೀಲಿಸದೆ ನಿಂತಿದ್ದಾಳೆ ! ಬಾಗಿಲಲ್ಲಿ ಹೆಜ್ಜೆಯ ಸ್ಸದ್ದು. ಶಹೀದಾ ತಿರುಗುವಷ್ಟರಲ್ಲಿ ಅವಳ ಭುಜದಲ್ಲಿ ಮೃದುವಾಗಿ ಕೈಗಳನ್ನು ಇರಿಸಿ ಅಲೀಮಮ್ಮ ನಿಂತಿದ್ದಾರೆ. ಅಲೀಮಮ್ಮ ಅವಳ ಅತ್ತೆ. ಐವತ್ತರ ಪ್ರಾಯದವರು. ಅವರ ಮುಖದಲ್ಲಿ ಅತೀವ ವೇದನೆಯ ಭಾವನೆ. ಹೆಣ್ಣಾದ ಅವರಿಗೆ ಗೊತ್ತು ಇನ್ನೊಂದು ಹೆಣ್ಣಿನ ಸಂಕಟ.

''ಮಗು ಶಹೀದಾ, ಯಾಕಮ್ಮಾ ಕಣ್ಣಲ್ಲಿ ನೀರು ?''

''ನಿಮಗೆ ಗೊತ್ತಲ್ವೇ ಅತ್ತೆ !''

''ಗೊತ್ತು ಮಗೂ ! ಆದರೆ ನಿನ್ನ ಕಂಬನಿ ಈ ಮನೆಯ ನೆಲ ಸೋಕಬಾರದು !''

''ನಾ ಹೇಗೆ ಒಂಟಿಯಾಗಿರಲಿ ಉಮ್ಮಾ !''

ಅವರ ಹೃದಯಕ್ಕೆ ಮುಳ್ಳು ಚುಚ್ಚಿದ ಅನುಭವವಾಯಿತು. ನಾಲ್ಕು ಗೋಡೆಗಳ ಮಧ್ಯೆ ಏನಿದೆ ಬದುಕು ? ಅದೂ ಒಂಟಿಯಾಗಿ ! ತಾನು ನರಳಿದ್ದೆ. ಕೆಲವಷ್ಟು ವರ್ಷಗಳ ಹಿಂದೆ. ಆದರೆ ತಾನು ಒಂಟಿಯಾಗಿ ಇದ್ದುದು ಎರಡೇ ವರ್ಷ. ನಂತರ ತನ್ನ ಗಂಡನನ್ನು ಊರಲ್ಲೇ ಇರಗೊಳಿಸುವುದರಲ್ಲಿ ತಾನು ಸಫಲಳಾಗಿದ್ದೆ. ಆದರೆ ತನ್ನ ಮಗ ಈಗ ಈ ಹುಡುಗಿಯ ಕಣ್ಣೀರು ಒರೆಸಬಲ್ಲನೇ.

ದೂರದ ಮಸೀದಿಯಿಂದ ಮಗ್‌ರಿಬ್ ನಮಾಜಿನ ಅಝಾನ್ ಕೇಳ ಬರತೊಡಗಿತು. ಆಲೀಮಮ್ಮ ತಲೆಗೆ ಸೆರಗು ಹಾಸಿಕೊಂಡು ಸೊಸೆಯ ಪಕ್ಕದಿಂದ ಸರಿದು ಹೋದರು. ಶಹೀದಾ ಅತ್ತೆಯ ವಿಶಾಲ ಬೆನ್ನನ್ನೇ ಅವರು ಮರೆಯಾಗುವವರೆಗೂ ನೋಡುತ್ತಾ ಅನಂತರ ಹಾಸಿಗೆಯಲ್ಲಿ ಕುಸಿದು ತಡೆಹಿಡಿದಿದ್ದ ದುಃಖವನ್ನೆಲ್ಲಾ ಹರಿಯಬಿಟ್ಟಳು.

ರಾತ್ರಿ ಅದೊಂದೇ ರಾತ್ರಿಯಲ್ಲ! ಎಷ್ಟೋ ರಾತ್ರಿಗಳು ! ಹೀಗೆ ಒಂಟಿಯಾಗಿ ! ನಿದ್ರೆಯಿಲ್ಲದೆ ವಿರಹ ವೇದನೆಯಿಂದ ! ಮನಸ್ಸಿನಲ್ಲಿ ಏಳುವ ಸುಪ್ತ ಬಯಕೆಗಳು ಯಾವಾಗಲಾದರೂ ಸಿಡಿದುಬಿಡಬಹುದೇನೋ ಎಂಬ ಭಯ ! ತಡೆಹಿಡಿಯಲಾಗದಷ್ಟು ಕೆರಳಿಸುವ ಬಯಕೆಗಳು. ಈ ಮೂರು ವರ್ಷಗಳಲ್ಲಿ ತನ್ನ ಉದ್ವೇಗ, ಉದ್ರೇಕಗಳಲ್ಲಿ ಬೆಂದು, ಬೆಂದು ತಾನೊಂದು ಜಡ ವಸ್ತುವಾಗಿದ್ದೇನೋ ಎಂಬ ಸಂಶಯ.

ಶಹೀದಾ ಮಹಡಿಯಿಂದ ಕೆಳಗಿಳಿದು ಬಂದಳು. ವಿಶಾಲವಾದ ದೊಡ್ಡ ತಾರಸಿ ಮನೆಯಲ್ಲಿ ವೈಭೋಗಕ್ಕೇನೂ ಕೊರತೆ ಇಲ್ಲ. ಕೈಗೊಂದು ಆಳು. ಕಾಲಿಗೊಂದು ಆಳು. ವಿ.ಸಿ.ಆರ್. ಟಿ.ವಿ. ನೋಡಲು. ಏನಿದ್ದರೇನೂ ? 'ವಿರಹ ಗೀತೆ ತಣಿಸಲ್ಲು ತನ್ನ ಒಡೆಯನೇ ಇಲ್ಲ !

ಪಕ್ಕದ ರೂಮಿನಲ್ಲಿ ಏನೋ ಕಿಲಕಿಲ ! ಕಿವಿಯಾನಿಸಿ ಕೇಳಿದಳು. ಮೈ ಎಲ್ಲಾ ಬಿಸಿಯಾದ ಅನುಭವ ! ಅತ್ತೆ - ಮಾವಂದಿರ ಸರಸ ಸಲ್ಲಾಪ ಬೇಡವೆಂದರೂ ಕಿವಿಗೆ ಬಂದು ತಟ್ಟುತ್ತಿತ್ತು.

ಅವಳು ಅಲ್ಲೇ ತಟಸ್ಥಳಂತೆ ನಿಂತುಕೊಂಡಳು ! ಮರುಕ್ಷಣದಲ್ಲಿ ಕೋಣೆಯಿಂದ ನಾಚಿಕೊಂಡು ಹೊರಬಂದ ಅತ್ತೆ ಅಲ್ಲಿ ಅವಳನ್ನು ಕಂಡು ಗಲಿಬಿಲಿಗೊಂಡು ನೇರವಾಗಿ ಹೊರಹೋದಾಗ ಹೃದಯದಲ್ಲಿ ಎದ್ದಿದ್ದ ದುಃಖದ ಅಲೆಗಳು ಚಿಮ್ಮಿ - ಚಿಮ್ಮಿ ಹೊರ ಧುಮುಕಿತು ಕಂಬನಿಯಾಗಿ.

ಸುಂದರ ನೆನಪುಗಳು ! ಮದುವೆಯಾದ ಆ ಎರಡು ತಿಂಗಳಲ್ಲಿ ಅನುಭವಿಸಿದ ಸುಖ ! ಎಷ್ಟೊಂದು ಸುಂದರ ! ಮಧ್ಯಮ ವರ್ಗದ ಹುಡುಗಿ ಶಹೀದಾ ಆ ಭವ್ಯ

ಸುಲ್ತಾನ್ ಮಹಲಿಗೆ ಕಾಲಿರಿಸಿದಾಗ ಅವಳಿಗೆ ಎಲ್ಲವೂ ಸ್ವರ್ಗ ಸುಖವೇ.. ಪ್ರೀತಿಸುವ ಅತ್ತೆ-ಮಾವ. ಬಿಗಿದಪ್ಪಿ ಸ್ವರ್ಗ ತೋರಿಸುವ ಗಂಡ, ಬೇಸರವಾದಾಗ ಮನಸ್ಸಿಗೆ ಮುದಕೊಡುವ ಟಿ.ವಿ., ವಿ.ಸಿ.ಆರ್. - ಬದುಕು ಹೀಗೇ ಇರಬಾರದೇ ಎನ್ನುವ ಭ್ರಮೆಯಲ್ಲಿ ಎರಡು ತಿಂಗಳು ಸರಿದುಹೋಗಿ, ಅನ್ವರ್ ವಿದೇಶಕ್ಕೆ ಹೊರಟುಹೋದ ಮೇಲೆ ಆ ಮನೆಯ ಒಂಟಿತನ ಬೇಸರವೆನಿಸಿ, ಆ ದೊಡ್ಡ ಮನೆಯ ಕೋಣೆಯ ಒಳಗೆ ತಾನು ಗೋರಿಯಾಗಿಬಿಡುತ್ತೇನೆ ಎಂಬ ಸ್ಥಿತಿ ಅವಳ ಪಾಲಿಗೆ ಒದಗಿಬಂತು.

ಮೂರು ವರ್ಷಗಳು ! ಮೂವತ್ತಾರು ತಿಂಗಳು ! ಚುರುಕು ಮಾತಿನ ಹುಡುಗಿ ಈಗ ಮೂಕಿಯಂತೆ ಸ್ಥಿತಪ್ರಜ್ಞಳಂತೆ ಕೋಣೆಯ ಕಿಟಕಿಗೆ ಮುಖವಿರಿಸಿ ನೋಡುತ್ತಾಳೆ. ದೂರದಲ್ಲಿ ಕಾಣುವ ಆ ವಿಮಾನ ನಿಲ್ದಾಣವನ್ನು. ಎಂದಾದರೂ ಆತ ಬರುವನೆಂಬ ನಿರೀಕ್ಷೆಯಿಂದ. ತನ್ನಲ್ಲಿ ಹೆಪ್ಪುಗಟ್ಟಿದ ಭಾವನೆ ಬಯಕೆಗಳನ್ನು ಮತ್ತೆ ಜೀವಂತಗೊಳಿಸುವನೆಂಬ ಆಶೆಯಿಂದ.

*　　*　　*

ಅದು ಹೊಸದಿನ! ಶಹೀದಾಳ ಪಾಲಿಗೆ! ಅನ್ವರ್ ವಿದೇಶದಿಂದ ಹಾರಿಬಂದಿದ್ದ! ಬೆಳ್ಳಬೆಳ್ಳಗೆ ತುಂಬಿಕೊಂಡು ! ಅವಳಿಗಾಗಿ ಏನೆಲ್ಲಾ ತಂದಿದ್ದ. ಆದರೆ ಅವಳಿಗೆ ಅದಾವುದರಲ್ಲೂ ಆಸಕ್ತಿಯಿರಲಿಲ್ಲ. ಅವನ ಮುಖವನ್ನೇ ತದೇಕಚಿತ್ತದಿಂದ ನೋಡುತ್ತಾ ಕೂರುತ್ತಿದ್ದಳು. ಮರಳಿ ತನ್ನವನು ಹೊರಟು ಹೋಗಬಾರದೆಂದು ತನ್ನನ್ನೇ ನೋಡುತ್ತಿರುವ ಅವಳನ್ನು ತಬ್ಬಿಕೊಂಡು ಕೇಳುತ್ತಿದ್ದ.

''ಶಹೀದಾ ಯಾಕೆ ಹಾಗೆ ಮುಖವನ್ನೇ ನೋಡ್ತಾ ಇದೀಯಾ ?''

''ನೀವು ಮರಳಿ ಸೌದಿಗೆ ಹೋಗುವಿರಾ ?''

''ಹುಂ.''

''ಯಾಕೆ ಹೋಗಬೇಕು. ಇಲ್ಲೇ ಇರಬಾರದೇನು ?''

''ಇಲ್ಲಿ ಏನಿದೆ ಶಹಿದಾ ? ಅಲ್ಲಿ ಒಂದು ವರ್ಷದಲ್ಲಿ ಸಂಪಾದಿಸೋದನ್ನು ಇಲ್ಲಿ ಸಂಪಾದಿಸಲು ನಾಲ್ಕೈದು ವರ್ಷ ಬೇಕು.''

''ನೀವು ಈ ತನಕ ಗಳಿಸಿದ್ದು ಸಾಕಾಗೋಲ್ಲವೇ ? ಇಲ್ಲೇ ಯಾವುದಾದರೂ ಉದ್ಯೋಗ ಮಾಡಬಾರದೇ''

''ಹಾಗೆ ಆಗೋಲ್ಲ, ಶಹೀದಾ, ನಾನು ಹೋಗೇ ಹೋಗ್ತೇನೆ.''

''ನೀವು ಇಲ್ಲದೆ ನಾನು ಇಲ್ಲಿ ಸಾಯುತ್ತೇನೆ ಅಷ್ಟೇ. ನನಗೆ ನಿಮ್ಮ ಪ್ರೀತಿ ಬೇಕು. ನಿಮ್ಮ ಸನಿಹ ಬೇಕು.''

''ನೀನು ಸುಮ್ಮನೆ ಪ್ರೀತಿ-ಪ್ರೀತಿ ಎಂದು ನನ್ನನ್ನು ಇಲ್ಲೇ ನಿನ್ನ ಬಳಿಯೇ

ಇರುವಂತೆ ಮಾಡಿದರೆ ನಾನು ಕಾರು ಕೊಳ್ಳೋದು ಯಾವಾಗ ? ಈ ಮನೆಯನ್ನು ಇನ್ನಷ್ಟು ವಿಸ್ತಾರಗೊಳಿಸೋದು ಯಾವಾಗ ?''

ಕಂಬನಿ ತುಳುಕಿತು! ತುಂಬಿದ ಎದೆಯಲ್ಲಿ ಹರಿದು ನೆಲ ಸೋಕಿತು ಕಂಬನಿ ! ಇದೇ ಏನು ತನ್ನ ಬದುಕು ! ಈ ಭೂಮಿಯ ಮೇಲೆ ಬಾಳುವುದಕ್ಕೆ ಯಾವ ಅರ್ಥವಿದೆ ? ಬದುಕು ಎಂದರೆ ಬರೇ ಹಣ ಗಳಿಸುವುದೇ. ತಾನು ಅಂದುಕೊಂಡ ಬಯಕೆ. ನಿರ್ಧಾರಗಳು ಏನಾಗುತ್ತಿದೆ. ತನ್ನ ಗಂಡ ಕಾಣದ ಹೊರದೇಶದಲ್ಲಿ ಸಂಪತ್ತನ್ನು ಗಳಿಸುವ ಹುಚ್ಚು ಆಸೆಯಲ್ಲಿರುವಾಗ ನಾನಿಲ್ಲಿ ಒಂಟಿಯಾಗಿ 'ಯಾ ಅಲ್ಲಾ' ಎಂದು ಬದುಕನ್ನು ವ್ಯರ್ಥಗೊಳಿಸಲೇ...

* * *

ಅನ್ವರ್ ಬಂದವ ಮೂರು ತಿಂಗಳಲ್ಲೇ ಹೊರಟುಹೋದ. ಸುಲ್ತಾನ್ ಮಹಲಿನ ಆ ಕೋಣೆಯಲ್ಲಿ ಮರಳಿ ಒಂಟಿಯಾದಳು ಶಹೀದಾ. ಅದೇ ಏಕಾಂಗಿತನ. ಪ್ರೀತಿಸುವ ಅತ್ತೆ-ಮಾವ ಅದೇ ಪ್ರೀತಿ ತೋರಿಸುತ್ತಿದ್ದಾರೆ. ಆದರೆ ಏನು ?

ಅದೊಂದು ದಿನ, ಸುಲ್ತಾನ್ ಮಹಲಿನ ಒಂಟಿತನ ಬೇಸರವೆನಿಸಿ ತನ್ನ ಹುಟ್ಟೂರಿಗೆ ಬಂದಳು ಶಹೀದಾ. ಯಾವಾಗಲೂ ಕೋಣೆಯಲ್ಲಿ ಒಂಟಿಯಾಗಿ ಕುಳಿತು ಮೌನಿಯಾಗಿರುತ್ತಿದ್ದ ಸೊಸೆಯನ್ನು ಕಂಡು ಅವಳು ತಾನು ಹುಟ್ಟಿದ ಮನೆಯಲ್ಲಾದರೂ ಸ್ವಲ್ಪ ದಿನ ಇದ್ದರೆ ಗೆಲುವಾಗುವಳೆಂಬ ಭರವಸೆ ಅತ್ತೆ ಅಲೀಮಮ್ಮ ಅವಳನ್ನು ತವರಿಗೆ ಕಳುಹಿಸಿದರು.

ತಾನು ಹುಟ್ಟಿದ ಮನೆ ! ತನ್ನ ಪ್ರೀತಿಯ ಊರು ! ಅದೇ ಸಣ್ಣ ಹೆಂಚಿನ ಮನೆ ! ನಾಲ್ಕು ಮಂದಿ ತಂಗಿಯರು ! ಇಬ್ಬರು ತಮ್ಮಂದಿರು ! ಮನೆಯ ಹಿಂದೆ ಹರಿಯುವ ನದಿ. ಗುಡ್ಡದ ಮೇಲಿನ ಮದರಸ. ನದಿಯ ಆಚೆಗಿರುವ ಶಾಲೆ ಎಳ್ಳಷ್ಟೂ ಬದಲಾಗಿಲ್ಲ. ಎಲ್ಲಾ ಹಾಗೇ ಇವೆ !

ಸಂಜೆಯಾಗಿತ್ತು ಸುಂದರವಾದ ಮನ ಸೆಳೆಯುವ ಹಳ್ಳಿ ದೃಶ್ಯ ! ಶಹೀದಾ ಮನೆಯಿಂದ ಹೊರಬಂದು ನದಿಯ ಬಳಿ ಬಂದಳು. ಸ್ವಚ್ಛವಾದ ನೀರು ಮಂದವಾಗಿ ಹರಿಯುತ್ತಿತ್ತು. ಕರಿ ಬಂಡೆಯ ಮೇಲೆ ಕುಳಿತು ಸೀರೆ ಸ್ವಲ್ಪ ಮೇಲೆತ್ತಿ ಪಾದವನ್ನು ನೀರಿಗೆ ಇಳಿಯಬಿಟ್ಟಳು. ಅವಳ ಬೆಳ್ಳನೆಯ ಪಾದವನ್ನು ಅಲಂಕಾರ ಗೊಳಿಸಿತ್ತು ಬೆಳ್ಳಿಯ ಗೆಜ್ಜೆ! ಕಾಲನ್ನು ಆಡಿಸುತ್ತಾ ಕುಳಿತ ಅವಳು ಯಾರದೋ ದನಿಗೆ ಎಚ್ಚತ್ತಳು. ಅವಳ ಎದುರು ಒಬ್ಬ ಯುವಕ ನಿಂತಿದ್ದ. ಪರಿಚಯ ಹತ್ತಿದಾಗ ಅವಳ ಮುಖ ಅರಳಿತು. ತಾನು ಬಾಲ್ಯದಲ್ಲಿ ಜೊತೆಯಾಗಿ ಆಡುತ್ತಿದ್ದ ಮನ್ಸೂರ್. ದೋಣಿ ಅಬ್ಬುಕಾರನ ಮಗ.

ಹೇಗಿದ್ದೀ ಶಹೀದಾ ?''

''ನನಗೇನು ಕಮ್ಮಿ. ನನ್ನ ಕೊರಳು ಕೈಗಳನ್ನೇ ನೋಡು ಎಷ್ಟೊಂದು ಚಿನ್ನದ ಒಡವೆಗಳಿವೆ.''

''ಚಿನ್ನದ ಒಡವೆಗಳು ಸುಖವನ್ನು ಕೊಡಲಾರದು ಶಹೀದಾ ?''

''ಅಂದರೆ ?''

''ನನಗ್ಗೊತ್ತು ನೀನು ಎಷ್ಟು ಸುಖವಾಗಿದ್ದೀಯಾಂತ ! ನಿನ್ನ ಆ ಸಿರಿವಂತಿಕೆಯ ಸುಲ್ತಾನ್ ಮಹಲಿನಲ್ಲಿ ನೀನು ಏಕಾಂಗಿ ಎಂಬುವುದು ನನಗೆ ಗೊತ್ತು. ನಿನ್ನ ಹೃದಯದಲ್ಲಿ ಎಷ್ಟೊಂದು ನೋವು ಹೆಪ್ಪುಗಟ್ಟಿದೆ ಎಂಬುವುದು ನನಗ್ಗೊತ್ತು !''

ಅವಳ ಕಣ್ಣಲ್ಲಿ ಕಂಬನಿ ಒಸರಿತು ! ಅವಳ ಆ ತುಂಬಿದ ಕಂಬನಿಯನ್ನೇ ನೋಡುತ್ತಾ ಆತ ಮತ್ತೆ ಹೇಳಿದ.

''ಈ ಬದುಕು ಎಷ್ಟೊಂದು ಕ್ರೂರವಾಗಿದೆ ಗೊತ್ತಾ? ನಾವು ಏನನ್ನೋ ಬಯಸುತ್ತೇವೆ ಅದು ಎಟುಕುವುದೆಂಬ ಆಸೆಯಿಂದ ಕೈ ಚಾಚುತ್ತೇವೆ. ಆ ವಸ್ತುವಾದರೋ ನಮ್ಮಿಂದ ತಪ್ಪಿಸಿಕೊಂಡು ದೂರ ದೂರ ಸಾಗುತ್ತೆ. ಮತ್ತು ತನಗೆ ಗೊತ್ತಾಗದ ರೀತಿಯಲ್ಲಿ ಫಕ್ಕನೆ ಬಿದ್ದು ನಾಶವಾಗಿಬಿಡುತ್ತವೆ. ಇದುವೇ ನೋಡು ಬದುಕಿನ ಕ್ರೌರ್ಯ.''

ಅವಳು ಹೇಳಿದಳು.

''ಮನ್ಸೂರ್ ನನ್ನ ಕತೆ ಬಿಡು. ನಾನೊಂದು ದಿನ ವೇದನೆಯಿಂದ ನರಳಿ ನರಳಿ ಸಾಯುವ ವಸ್ತುವಾಗಿಬಿಡುವ ಮುಗಿದುಹೋದ ಕತೆಯ ನಾಯಕಿ. ನೀನು ಇನ್ನೂ ಯಾಕೆ ಮದುವೆಯಾಗದೇ ಹಾಗೇ ಇದ್ದೀಯಾ ?''

''ನಾನು ಆ ಆಸೆಯನ್ನು ಎಂದೋ ತೊರೆದುಬಿಟ್ಟಿದ್ದೇನೆ ಶಹೀದಾ. ಯಾವ ದಿನ ನೀನು ಮದುಮಗಳಾಗಿ ಆ ಸುಲ್ತಾನ್ ಮಹಲನ್ನು ಪ್ರವೇಶಿಸಿದೆಯೋ ಆ ದಿನ ನಾನು ನನ್ನ ಕನಸಿಗೆ ಸಮಾಧಿ ಕಟ್ಟಿಕೊಂಡಿದ್ದೇನೆ.''

ಅವಳು ಅವನನ್ನೇ ನೋಡಿದಳು. ಮುಗ್ಧ ಯುವಕನ ನಿಷ್ಕಲ್ಮಷ ಮುಖಭಾವ.

ನದಿಯ ಬಳಿ ಕತ್ತಲು ತುಂಬತೊಡಗಿತ್ತು. ಹತ್ತಿರದ ಮಸೀದಿಯಿಂದ ಮಗ್ ರಿಬ್ ನಮಾಜಿನ ಬಾಂಗ್ ಕೇಳಿಸಿದಾಗ ಅವಳು ಮನೆಯ ಕಡೆ ಹೆಜ್ಜೆ ಹಾಕಿದಳು.

* * *

ದಿನಗಳು ಅವಳ ಪಾಲಿಗೆ ಮೌನವಾಗಿ ಸಾಗುತ್ತಿದ್ದವು. ಒಂದೆರಡು ಸಲ ಅವಳು ಸುಲ್ತಾನ್ ಮಹಲಿನಿಂದ ತವರಿಗೆ ಬಂದು ಏಳೆಂಟು ದಿವಸ ಇದ್ದು ಹೋಗುತ್ತಿದ್ದಳು. ಅನ್ವರ್ ಫೋನ್ ಕರೆಯ ಮೂಲಕ ಧ್ವನಿ ಮಾತ್ರವಾಗಿ ಕೇಳಿಸಿಕೊಳ್ಳುತ್ತಿದ್ದ. ತವರಿನಲ್ಲಿ ಮನ್ಸೂರ್ ಅವಳ ಹೆಪ್ಪುಗಟ್ಟಿದ ಹೃದಯದ ಚೇತನವನ್ನು ಬಡಿದೆಬ್ಬಿಸತೊಡಗಿದ.

ಶಹೀದಾ, ಸುಲ್ತಾನ್ ಮಹಲಿನ ಏಕಾಂಗಿತನದಿಂದ ಬೇಸತ್ತವಳು. ಮರಳಿ ಬಾಲ್ಯದ ಕನಸಿನ ಲೋಕಕ್ಕೆ ಜಾರತೊಡಗಿದ್ದಳು. ನಿಧಾನವಾಗಿ ಅವಳ ಮುಖದಲ್ಲಿ ಕಾಂತಿ ತುಂಬತೊಡಗಿದವು. ಮನ್ಸೂರ್ ಅವಳ ಹೃದಯವನ್ನು ಆಕ್ರಮಿಸತೊಡಗಿದ.

''ಯಾ ಅಲ್ಲಾಹ, ತಾನೇನು ಮಾಡುತ್ತಿದ್ದೇನೆ ಇದು ಗೃಹಿಣಿಯಾದ ತಾನು ಒಬ್ಬಾತನ ಪತ್ನಿಯಾಗಿದ್ದುಕೊಂಡು ಇನ್ನೊಬ್ಬಾತನೊಡನೆ ಸಂಯಮ ಮೀರಿ ನಡೆಯುತ್ತಿದ್ದೇನೆಯೇ. ಅದು ತಪ್ಪೆಂದಾದರೆ ತಾನು ಅದೇ ಒಂಟಿತನದಲ್ಲಿ ದಿನ ಕಳೆಯುತ್ತಾ ಸಮಾಧಿಯಾಗಲೇ. ಯಾವುದಾಗಲೀ ತನಗೆ ಹೊಸ ಬದುಕು ಬೇಕು.

ತವರೂರಿನಲ್ಲಿದ್ದ ಆ ಸಂಜೆ ಶಹೀದಾ ಒಂದು ದೃಢ ನಿಶ್ಚಯದಲ್ಲಿ ನದಿ ಬಳಿಗೆ ಬಂದಳು. ದೂರದಲ್ಲಿ ದೋಣಿ ನಡೆಸುತ್ತಿದ್ದ ಮನ್ಸೂರ್ ಹತ್ತಿರ ಬಂದ.

''ಮನ್ಸೂರ್. ನೀನು ಆಗೋಲ್ಲ ಎನ್ನೋಲ್ಲ ತಾನೇ ?''

''ಏನು ವಿಷಯ ?'' ದೋಣಿಯಿಂದ ಇಳಿಯುತ್ತಾ ಆತ ಕೇಳಿದ.

''ನೀ ನನ್ನ ಮದುವೆಯಾಗುತ್ತೀಯಾ ?''

ಆತ ಬೆಚ್ಚಿಬಿದ್ದ. ತದೇಕಚಿತ್ತದಿಂದ ಅವಳ ಮುಖವನ್ನೇ ನೋಡಿದ. ಆ ಸುಂದರ ಕಂಗಳಲ್ಲಿ ಕಂಬನಿ ಮಡುಗಟ್ಟಿತ್ತು.

''ಶಹೀದಾ ನೀ ಏನು ಹೇಳುತ್ತಿದ್ದೀ ?''

''ಹೌದು ಮನ್ಸೂರ್. ನಾ ಸತ್ಯವನ್ನೇ ಹೇಳುತ್ತಿದ್ದೇನೆ. ನನಗೆ ಆ ಮಹಲಿನ ಒಂಟಿತನ ಸಾಕಾಗಿಹೋಗಿದೆ. ನನಗೆ ನನ್ನನ್ನು ಪ್ರೀತಿಸುವ ಹೃದಯ ಬೇಕು.''

ಆತ ಒಂದು ಕ್ಷಣ ಮಾತಾಡಲಿಲ್ಲ. ಹರಿವ ನೀರಿನ ತಟದಲ್ಲಿ ನಿಂತ ದೋಣಿಯನ್ನೇ ನೋಡಿದ. ಮತ್ತೆ ಆ ಹರಿವ ನೀರನ್ನು ನೋಡಿದ. ಕ್ಷಣ ಕಾಲ ಬಿಟ್ಟು ಆತ ಹೇಳಿದ.

''ನನಗೆ ಯೋಚಿಸಲು ಒಂದಷ್ಟು ದಿನದ ಅವಕಾಶ ಕೊಡು.''

* * *

ಕೊನೆಗೂ ಒಂದು ನಿರ್ಧಾರದಲ್ಲಿ ಮನ್ಸೂರ್ ಅವಳನ್ನು ಮದುವೆಯಾಗುವುದಕ್ಕೆ ಒಪ್ಪಿಕೊಂಡ. ಆತ ಒಪ್ಪಿಕೊಂಡದ್ದಕ್ಕೆ ಸಮಸ್ಯೆ ಏನೂ ನಿವಾರಣೆಯಾಗುವುದು ಸಾಧ್ಯವಿರಲಿಲ್ಲ. ಶಹೀದಾ ಸುಲ್ತಾನ್ ಮಹಲಿಗೆ ವಿದಾಯ ಹೇಳಬೇಕಿತ್ತು. ಆಕೆ 'ಅನ್ವರ್'ನಿಗೆ 'ಖುಲ್ ಆ' ಕೊಟ್ಟು ಆತನಿಂದ ಬೇರ್ಪಡಬೇಕಿತ್ತು.

ಸುಲ್ತಾನ್ ಮಹಲಿಗೆ ಬಂದ ಶಹೀದಾ ದೃಢ ನಿರ್ಧಾರದಲ್ಲಿದ್ದಳು. ನನ್ನನ್ನು ಪ್ರೀತಿಸುವ ಅತ್ತೆ ಮಾವರನ್ನು ತಾನು ಅಗಲಿಹೋಗಬೇಕೆಂದು ತಿಳಿದಿದ್ದರೂ. ಈ ಒಂಟಿತನದಿಂದ ಮುಕ್ತಳಾಗುವ ಯೋಚನೆಯಲ್ಲೇ ಇದ್ದಳು.

ಶಹೀದಾ ಕೋಣೆಯಲ್ಲಿ ಅದೇ ಗಾಢವಾದ ಯೋಚನೆಯಲ್ಲಿ ಕುಳಿತಿದ್ದಳು. ಬಾಗಿಲಲ್ಲಿ ಹೆಜ್ಜೆಯ ಸದ್ದು ಕೇಳಿಸಿತು. ತಿರುಗಿ ನೋಡಿದಳು. ಅತ್ತೆ - ಮಾವ

ಇಬ್ಬರೂ ನಿಂತಿದ್ದರು. ಅತ್ತೆ ನಿಧಾನ ಅವಳ ಬಳಿ ಬಂದು ಆಕೆಯ ಬೆನ್ನ ಮೇಲೆ ಕೈಯಿರಿಸಿ. ಅನುನಯದಿಂದ ಕೇಳಿದರು.

''ಏನಮ್ಮಾ ಶಹೀದಾ ಹಾಗೆ ಮೌನವಾಗಿ ಕುಳಿತಿದ್ದೀ ?...''

''ನಿಮಗೆ ಗೊತ್ತಲ್ವೇ ಅತ್ತೇ.''

''ಅದಕ್ಕೇ ನಾವೊಂದು ನಿರ್ಧಾರಕ್ಕೆ ಬಂದಿದ್ದೇವೆ ಮಗೂ! ನಿನ್ನನ್ನು ಈ ಒಂಟಿತನದ ಕಷ್ಟದಿಂದ ಮುಕ್ತಗೊಳಿಸಬೇಕೆಂದು.''

ಅವಳು ಅರ್ಥವಾಗದೆ ಅವರ ಮುಖವನ್ನೇ ನೋಡಿದಳು.

''ಹೌದಮ್ಮಾ ಶಹೀದಾ. ನಿನ್ನನ್ನು ಈ ಸುಲ್ತಾನ್ ಮಹಲಿನಿಂದ ದೂರ ಮಾಡಬೇಕೆಂದು ನಾವು ನಿರ್ಧರಿಸಿದ್ದೇವೆ'' ಮಾವ ಹೇಳಿದರು.

''ಯಾಕೆ ಮಾವ, ನಾನು ನಿಮಗೆ ಭಾರವಾಗಿಬಿಟ್ಟೆನೇ ?'' ಅವಳು ಗಾಬರಿಯಾಗಿ ಕೇಳಿದಳು.

''ಹಾಗಲ್ಲಾ ಶಹೀದಾ! ಎಷ್ಟು ದಿನಾಂತ ನೀನು ಕಣ್ಣೀರಿನಲ್ಲಿ ಕೈ ತೊಳೆಯುತ್ತೀ... ನೀನು ನೆಮ್ಮದಿಯಾಗಿ ನಗುನಗುತ್ತಾ ಇರಬೇಕೆನ್ನೋದೇ ನಮ್ಮ ಆಸೆ: ಅದೇ ನಮ್ಮ ಹಂಬಲ. ನೀನು ಅನ್ವರ್‌ನಿಂದ ಬಿಡುಗಡೆ ಪಡೆದು ಬೇರೆ ಯಾರನ್ನಾದರೂ ಮದುವೆಯಾಗಿ ಸುಖವಾಗಿ ಸಂಸಾರ ನಡೆಸು !''

''ನೀವು ಏನು ಹೇಳ್ತಾ ಇದ್ದೀರಿ ?'' ನಿಬ್ಬೆರಗಾಗಿ ಕೇಳಿದಳು.

''ನಾವು ಹೇಳುತ್ತಿರೋದು ನಿನ್ನ ಒಳಿತಿಗೆ. ಈ ಮನೆಯಲ್ಲಿ ನೀನು ಒಂಟಿಯಾಗಿ ಪಡುತ್ತಿರುವ ಕಷ್ಟ ನಮಗೆ ಗೊತ್ತಿದೆ. ಬದುಕಿನಲ್ಲಿ ಸುಖ ಪಡಬೇಕಾದ ಕಾಲದಲ್ಲಿ ಸಿಗದ ಸುಖ; ಪ್ರಾಯ ಮೀರಿದ ಮೇಲೆ ದೊರಕಿದರೆ ಏನು ಪ್ರಯೋಜನವಿಲ್ಲ ಮಗೂ. ಹಣ ಪ್ರತಿಯೊಬ್ಬ ಮನುಷ್ಯನೂ ಗಳಿಸುತ್ತಾನೆ: ಆದರೆ ದಾಂಪತ್ಯ ಜೀವನದಲ್ಲಿ ಹತ್ತಿರವಿದ್ದುಕೊಂಡು ಗಂಡ-ಹೆಂಡತಿ ಸಾಮರಸ್ಯದಿಂದ ಬಾಳುವುದೇ ನಿಜವಾದ ಬದುಕು. ಹಾಗಾಗಿ ನೀನು ನಾವು ಹೇಳಿದಂತೆ ಮಾಡುವುದೇ ಒಳ್ಳೆಯದು.''

ಅವಳು ಒಂದು ಕ್ಷಣ ಅವರಿಬ್ಬರ ಮುಖವನ್ನೇ ನೋಡಿದಳು. ಅಲ್ಲಿ ನಿಷ್ಕಲ್ಮಷ ಮುಖಮುದ್ರೆ ಇದೆ. ತಾನು ಈ ಮನೆಗೆ ಇಷ್ಟು ವರ್ಷಗಳಲ್ಲಿ ಇವರು ತನ್ನನ್ನು ತಮ್ಮ ಮಗಳಂತೆ ಯಾವ ಕೊರತೆಯೂ ಬಾರದಂತೆ ನೋಡಿಕೊಂಡಿದ್ದಾರೆ-

''ಆದರೆ ಮಾವ, ಅವರನ್ನು ಇಲ್ಲಿ ಬಂದು ಇರುವಂತೆ ನೀವೇಕೆ ಪ್ರಯತ್ನಿಸಬಾರದು, ನನಗೆ ನಿಮ್ಮನ್ನು ಬಿಟ್ಟುಹೋಗಲು ಮನಸ್ಸಿಲ್ಲ ಮಾವ.''

''ಅದು ಆಗದು ಶಹೀದಾ. ಮೊನ್ನೆ ಬಂದ ಕಾಗದ ನೋಡಿದೆಯಾ ನೀನು ? ಅದರಲ್ಲಿ ಏನೂಂತ ಬರೆದಿದ್ದಾನೆ ಗೊತ್ತಾ. ಇನ್ನು ಹತ್ತು ವರ್ಷಗಳು ನಾನು ಇಲ್ಲೇ

ಇರುತ್ತೇನೆಂದು ಬರೆದಿದ್ದಾನೆ. ಬೇರೆ ಕಂಪನಿಯಲ್ಲಿ ಕೆಲಸ ಸಿಕ್ಕಿದೆಯಂತೆ. ಎರಡು ವರ್ಷಗಳಿಗೊಮ್ಮೆ ಬಂದು ಒಂದು ತಿಂಗಳಿದ್ದು ಹೋಗ್ತಾನಂತೆ.''

ಅವಳು ಮಾತಾಡಲಿಲ್ಲ. ಕಿಟಕಿಯಾಚೆ ಕಣಿವೆ ಆ ಏರ್‌ಪೋರ್ಟನ್ನೇ ನೋಡಿದಳು ತಾನು ಮೊದಲೇ ನಿರ್ಧಾರ ಮಾಡಿದ್ದೇನೆ. ಮನ್ಸೂರ್ ಪತ್ನಿಯಾಗಲು - ಇನ್ನು ಮುಂದೆ ತನಗೆ ಈ ಕಿಟಕಿಯ ಮೂಲಕ ಆ ಏರ್‌ಪೋರ್ಟನ್ನು ನೋಡುವ ಅವಕಾಶ ಇಲ್ಲ. ಈ ದೊಡ್ಡ ಮನೆಯಲ್ಲಿ ಆರಾಮವಾಗಿ ಕುಳಿತು ಟಿ.ವಿ. ವಿ.ಸಿ.ಆರ್. ನೋಡುವ ಅವಕಾಶವೂ ಇಲ್ಲ. ಮನ್ಸೂರ್‌ನ ಸಣ್ಣ ಮನೆಯಲ್ಲಿ ಕಷ್ಟಪಟ್ಟು ದುಡಿಯಬೇಕಾದ, ಆದರೂ ನೆಮ್ಮದಿಯ, ಸುಖ ಸಂತೃಪ್ತಿಯ ಬದುಕನ್ನು ಅರಸಿಕೊಂಡು ತಾನು ಹೋಗುತ್ತಿದ್ದೇನೆ - ಇದುವರೆಗೆ ತಾಯಾಗದ ತಾನು ಮನ್ಸೂರನ ಹೆಂಡತಿಯಾಗಿ ಮಗುವೊಂದನ್ನು ಹೆತ್ತು ಅಲ್ಲೇ ಬದುಕಿನ ಕೊನೆಯವರೆಗೂ ಅಲ್ಲೇ ಬಾಳುತ್ತೇನೆ -

ಅವಳು ಜನ್ನತ್ ಮಹಲಿನಲ್ಲಿ ದೊರಕಿದ ಚಿನ್ನದ ಒಡವೆಗಳನ್ನು ಕಳಚಿದಳು - ಅದನ್ನು ತೆಗೆದು ಅತ್ತೆಯ ಕೈಗಿತ್ತು ಹೇಳಿದಳು. ''ಇದು ಇಲ್ಲಿ ದೊರಕಿದ ಒಡವೆಗಳು ಅತ್ತೆ, ಇದನ್ನು ಇಲ್ಲೇ ಬಿಟ್ಟುಹೋಗುತ್ತೇನೆ.''

ಅವರು ಅದನ್ನು ತೆಗೆದುಕೊಳ್ಳದೇ ಹೇಳಿದರು. ''ಇದು ನಿನ್ನಲ್ಲೇ ಇರಲಿ ಶಹೀದಾ. ನಮ್ಮ ಪ್ರೀತಿಯ ಕಾಣಿಕೆಯೆಂದೇ ನಿನ್ನಲ್ಲಿರಲಿ. ಇದನ್ನು ನೀನು ಬಿಟ್ಟು ಹೋದರೆ ನಮ್ಮ ಮನಸ್ಸಿಗೆ ನೋವಾಗುತ್ತೆ.''

''ಬೇಡ ಅತ್ತೇ - ನಿಮ್ಮ ಆಶೀರ್ವಾದವೊಂದೇ ನನಗೆ ಸಾಕು. ಈ ಜನ್ನತ್ ಮಹಲನ್ನು ಬಿಟ್ಟುಹೋದರೂ ನಿಮ್ಮ ನೆನಪನ್ನು ನಾನೆಂದು ಮರೆಯೊಲ್ಲ.''

ದೂರದಲ್ಲಿ ಕತ್ತಲು ಆವರಿಸತೊಡಗಿತು. ಅವಳು ಹೊರಡುವ ಯತ್ನ ನಡೆಸಿದಳು - ಮಾವ ಅವಳನ್ನು ಕರೆದುಕೊಂಡು ತವರಿಗೆ ಬಿಡಲು ತಯಾರಾಗಿ ನಿಂತಿದ್ದರು. ಅತ್ತೆಯ ಕಂಗಳಲ್ಲಿ ಕಂಬನಿ ಇತ್ತು ಇದುವರೆಗೆ ಈ ಮನೆಯಲ್ಲೇ ಇದ್ದ ಸೊಸೆಯನ್ನು ತಾವೇ ದೂರ ಮಾಡುತ್ತಾ ಇದ್ದೇವೆ ಎಂಬ ನೋವಿನಲ್ಲಿ, ಆದರೂ ಒಂದು ರೀತಿಯ ಸಂತೃಪ್ತಿ, ಅವಳು ಸುಖವಾಗಿ ಇರುತ್ತಾಳೆ ಎಂಬ ಸಂತೃಪ್ತಿ.

ಶಹೀದಾ ಅತ್ತೆಯ ಕಾಲು ಮುಟ್ಟಿ ನಮಸ್ಕರಿಸಿ ನಿಧಾನ ಮನೆಯ ಮೆಟ್ಟಿಲು ಇಳಿದು ಹೊರಬಂದಳು. ಮಾವನೊಂದಿಗೆ ಕಾರಲ್ಲಿ ಕುಳಿತು ಒಮ್ಮೆ ಜನ್ನತ್ ಮಹಲನ್ನು ನೋಡಿದಳು. ಜನ್ನತ್ ಮಹಲಿನ ಬಾಗಿಲಲ್ಲಿ ನಿಂತ ಅತ್ತೆಯನ್ನು ನೋಡಿದಳು. ನಂತರ ಧೈರ್ಯ ಮಾಡಿ ದಿಟ್ಟಿ ಬದಲಿಸಿ ಎದುರಿನ ರಸ್ತೆಯತ್ತ ನೆಟ್ಟು ಸರಿಯಾಗಿ ಕುಳಿತಳು. ಎಲ್ಲವನ್ನೂ ಮರೆತವಳಂತೆ ಮನ್ಸೂರ್‌ನ ಮನೆಯನ್ನು ಸೇರುವ ಯೋಚನೆಯಲ್ಲೇ ಮಗ್ನವಾದಳು.

# 14 ಯಾತ್ರಿಕ

ಮತ್ತದೇ ಮನೆ.

ಕಾಣುವುದು ಹದಿನೈದು ವರುಷಗಳ ಅನಂತರ.

ಆತ ಅಷ್ಟು ದೂರದಲ್ಲಿ ನಿಂತು ಕ್ಷಣಕಾಲ ಆ ಮನೆಯನ್ನೇ ದಿಟ್ಟಿಸಿದ. ಈ ಹದಿನೈದು ವರುಷಗಳಲ್ಲಿ ಏನೂ ಬದಲಾವಣೆ ಆಗದೆ ಹಾಗೇ ಉಳಿದುಬಿಟ್ಟಿದೆ, ಈ ನೆಲ, ಈ ಊರು. ಮನೆಯ ಸ್ವಲ್ಪ ದೂರ ಇರುವ ಮದರಸ ಮಾತ್ರ ಬೆಳೆದುಬಿಟ್ಟಿದೆ. ಆ ಮದರಸ ಈಗ ದೊಡ್ಡ ಮಸೀದಿಯಾಗಿದೆ. ಆತನ ಅಂದಾಜಿನ ಪ್ರಕಾರ ಒಂದೆರಡು ಲಕ್ಷವಾದರೂ ಖರ್ಚಾಗಬಹುದು.

ನಿಂತ ದಾರಿಯ ಕೊನೆಯಲ್ಲಿ ಯಾರೋ ಒಬ್ಬ ಇಪ್ಪತ್ತು - ಇಪ್ಪತ್ತೆರಡರ ಯುವಕ ವಿಶಿಷ್ಟವಾದ ಶೈಲಿಯಲ್ಲಿ ನಡೆದುಬರುತ್ತಿದ್ದ. ಇತ್ತೀಚಿನ ಸಿಟಿಯ ಯುವಕರ ಫ್ಯಾಶನ್ನೂ ಆ ಯುವಕನನ್ನು ಅಪ್ಪಿಕೊಂಡುಬಿಟ್ಟಿದೆ. ಮೂಗಿನ ಕೆಳಗೆ ಇರಬೇಕಾದ ಮೀಸೆಯನ್ನು ಬೋಳಿಸಿದ್ದ. ತಲೆಯ ಹಿಂದುಗಡೆ ಕೊರಳನ್ನು ಚಾಚಿ ಇಳಿದಿದ್ದ ಕೂದಲು.

ಯುವಕ ಹತ್ತಿರ ಬಂದಾಗ ಈತ ಥಕ್ಕನೆ ಕೇಳಿದ,

''ನೀನು ಯಾರ ಮಗ ?''

ಆ ಯುವಕ ಸಿಡಿದು ನಿಂತಂತೆ ಸೆಟೆದು ನಿಂತ. ತನ್ನ ಎರಡೂ ಕೈಗಳನ್ನು ಜೀನ್ಸ್ ಪ್ಯಾಂಟಿನ ಜೋಬುಗಳಿಗೆ ಇಳಿಬಿಟ್ಟು ತನ್ನೆದುರು ನಿಂತಿರುವ ಐವತ್ತರ ಬಿಳೀ ಗಡ್ಡ ಮೀಸೆಯ, ಬಿಳೀ ಪೈಜಾಮ, ಖಾದೀ ಜುಬ್ಬಾದ, ಹೆಗಲಲ್ಲಿ ನೇತುಹಾಕಿದ್ದ ವಯಸ್ಕನನ್ನು ದುರುಗುಟ್ಟಿ ನೋಡಿ ಕೇಳಿದ.

''ನಾನು ಯಾರಾದರೆ ನಿಮಗೇನು ?''

ಈತ ತಬ್ಬಿಬ್ಬಾದ. ಇಪ್ಪತ್ತನೆಯ ಶತಮಾನದ ಹೊಸಿಲಲ್ಲಿರುವ ಯುವಕ ಎಷ್ಟೊಂದು ಸಂಸ್ಕೃತಿ ಹೀನನಾಗಿದ್ದಾನೆ. ಈ ವ್ಯವಸ್ಥೆ ಹೇಗೆ ಯುವ ಜನಾಂಗವನ್ನು ಕೆಡಿಸುತ್ತಾ ಇದೆ.

''ನಿನಗೆ ಅಕ್ಬರ್ ಬರೆದ ಧಾರವಾಹಿ ಇಷ್ಟಾನಾ ?''

ಆ ಹುಡುಗ ಒಮ್ಮೆಲೆ ಜೀನ್ಸ್‌ನ ಜೇಬಿನಿಂದ ಕೈಗಳನ್ನು ಈಚೆ ತೆಗೆದು ಅನುನಯದ ಭಂಗಿಯಲ್ಲಿ ನಿಂತ. ದುರುಗುಟ್ಟುವ ಕಂಗಳು ಕಾಂತಿಯುಕ್ತವಾದವು. ಅತೀ ವಿನಯದಿಂದ ತುಸು ಬಾಗಿ ಕೇಳಿದ.

''ಅಕ್ಬರ್ ನಿಮಗೆ ಗೊತ್ತಾ ?''

ವಯಸ್ಕ ಉತ್ತರಿಸಲಿಲ್ಲ. ಎದುರು ಕಾಣುವ ಮನೆಯನ್ನೇ ನೋಡಿದ. ''ನಾನು ಓದದ ಅಕ್ಬರ್ ಕಾದಂಬರಿಗಳೇ ಇಲ್ಲ.'' ಆ ಯುವಕ ಉತ್ಸಾಹದಿಂದ ಹೇಳಿ ಮುಗಿಸಿ ನಂತರ ಮತ್ತೆ ಹೇಳಿದ.

''ನನಗೊಮ್ಮೆ ಅಕ್ಬರ್‌ರನ್ನು ಕಂಡು ಮಾತಾಡಬೇಕು.''

ವಯಸ್ಕ ಯುವಕನ ಹೆಗಲ ಮೇಲೆ ಕೈಯಿರಿಸಿ ಹೇಳಿದ : ''ಆ ಅಕ್ಬರ್ ನಾನೇ !''

ಯುವಕ ಅವಾಕ್ಕಾದ. ನಂತರ ತಡಮಾಡಲಿಲ್ಲ. ವಯಸ್ಕನ ಕೈಹಿಡಿದು ಆತುರ ಮಾಡತೊಡಗಿದ.

''ನೋಡಿ ಅಲ್ಲಿ ಕಾಣುವುದೇ ನನ್ನ ಮನೆ. ನೀವು ಕೇಳಿದಿರಲ್ಲ ನನ್ನನ್ನು. ನಾನು ಶಫಿ ಅಹಮದ್.''

ಈತ ಒಮ್ಮೆಲೆ ತಬ್ಬಿಬ್ಬಾದ. ತನ್ನದೇ ಛಾಪು. ಈತನಕ ತಾನು ಗಮನಿಸೇ ಇರಲಿಲ್ಲ. ತಾನು ಮನೆ ಬಿಟ್ಟು ಹೋದಾಗ ಏಳರಷ್ಟಿದ್ದ ಆ ಸಣ್ಣ ಹುಡುಗ ಈಗ ಬೆಳೆದು ಇಪ್ಪತ್ತೆರಡರ ಯುವಕನಾಗಿಬಿಟ್ಟಿದ್ದಾನೆ. ಅಂದು ತಲೆಗೊಂದು ಬಿಳೀ ಟೋಪಿ. ಸೊಂಟವನ್ನು ಸುತ್ತಿದ ಒಂದು ಲುಂಗಿ ಉಡುತ್ತಿದ್ದ ಈ ಹುಡುಗ, ತಾನದನ್ನು ವಿರೋಧಿಸಿದ್ದೆ. ಆದರೆ ಈ ಹುಡುಗನ ಜವಾಬ್ದಾರಿಯಲ್ಲಿ ಅಜ್ಜನದೇ ಕಾರುಬಾರು. ಜೊತೆಗೆ ಈತನ ಅಮ್ಮನ ಕುಮ್ಮಕ್ಕು. ಹುಟ್ಟಿನಿಂದ ತಾನು ಒಂದು ನೆಪಮಾತ್ರ.

''ಬನ್ನಿ ಹೋಗೋಣ''. ಅಕ್ಬರ್ ಎಚ್ಚತ್ತು ಆತನೊಂದಿಗೆ ಹೆಜ್ಜೆಹಾಕಿದರು. ಸ್ವಲ್ಪ ದೂರ ನಡೆದಾಗ ಮತ್ತೆ ಅವನೊಂದಿಗೆ ಕೇಳಿದರು. ''ನಿನಗೊಬ್ಬಳು ತಂಗಿ ಇರಬೇಕಲ್ಲವೇ ?''

ಆತ ಶಾಕ್ ಹೊಡೆಸಿಕೊಂಡವನಂತೆ ಕೇಳಿದ, ''ನಿಮಗೆ ಹೇಗೆ ಗೊತ್ತು ?''

ಅಕ್ಬರ್ ಮಾತಾಡಲಿಲ್ಲ. ಮನೆಯ ಅಂಗಳದಲ್ಲಿ ಹೆಜ್ಜೆ ಇರಿಸಿದಾಗ ಅವರ ಹೆಜ್ಜೆ ಕಂಪಿಸಿತು. ಹೃದಯದಲ್ಲಿ ಯಾವುದೋ ಕಂಪನ. ಅದು ಆನಂದದ್ದೋ, ದುಃಖದ್ದೋ ತಿಳಿಯಲಿಲ್ಲ.

ಶಫಿ ಅವರನ್ನು ಮನೆಯೊಳಗೇ ಕರೆದೊಯ್ದ. ತನ್ನದೇ ಮನೆ. ತಾನು ಬೆಳೆದು ಮದುವೆಯಾದ ಮನೆ. ಹೊರಗಿನ ಹಜಾರ ಸ್ವಲ್ಪ ಅಲಂಕೃತವಾಗಿದೆ. ತಾನಿದ್ದಾಗ ಗೋಡೆಯಲ್ಲಿದ್ದ ಅದೇ ಹಳೆಯ ಗಡಿಯಾರ ಅದೇ ಟಿಕ್ ಟಿಕ್ ಸದ್ದು. ಆಗ ಲ್ಯಾಂಪಿನ ಬೆಳಕಿತ್ತು. ಈಗ ವಿದ್ಯುತ್ತಿನ ತೀವ್ರ ಬೆಳಕು. ಅಷ್ಟೇ ಬದಲಾವಣೆ.

ಯುವಕ ಒಳಗಿನಿಂದ ಬಂದು ಅವರ ಹತ್ತಿರ ನಿಂತು ಹೇಳಿದ. ''ಅಮ್ಮ ಬರುತ್ತಿದ್ದಾರೆ'' ಅವರು ಕುಳಿತಲ್ಲೇ ನೆಟ್ಟಗಾದರು. ಕಣ್ಣಂಚಿನ ಕೊನೆಯಲ್ಲಿ ಒಂದು

ತೊಟ್ಟು ಕಂಬನಿ ಜಿನುಗಿತು. ಈತ 'ಅಮ್ಮ' ಅನ್ನುತ್ತಿದ್ದಾನೆ. ತನಗೆ ? ಎಂಟು ವರ್ಷಗಳ ಕಾಲ ಸಂಸಾರ ನಡೆಸಿದ ತನ್ನ ಪತ್ನಿ. ಸಹಧರ್ಮಿಣಿ ತನ್ನದೇ ವೀರ್ಯದ ಎರಡು ಮಕ್ಕಳನ್ನು ಹೆತ್ತಾಕೆ. ಒಂದು ಗಂಡು, ಒಂದು ಹೆಣ್ಣು. ಗಂಡು ಮಗ ಎದುರಲ್ಲಿ ನಿಂತಿದ್ದಾನೆ. ಆ ಮಗಳೆಲ್ಲೋ -

ದಿಟ್ಟಿ ಹರಿಸಿ ಒಳಗಿನ ಬಾಗಿಲೆಡೆ ನೋಡಿದರು. ಬಾಗಿಲಲ್ಲಿ ಬಂದು ನಿಂತ ಹೆಂಗಸಿನಲ್ಲೇ ದಿಟ್ಟಿ ನೆಟ್ಟರು. ಅದೇ ಹೆಂಗಸು ಫಾತುಮ್ಮಾ. ಎಂಟು ವರ್ಷ ತನ್ನ ಸುಖದಲ್ಲಿ ಪಾಲುದಾರಳಾಗಿ ಜೊತೆಯಾಗಿದ್ದ ಹೆಣ್ಣು. ಈಗಲೂ ಅದೇ ರೂಪ. ಆದರೆ ವಯಸ್ಸು ಸ್ವಲ್ಪ ಸ್ವಲ್ಪವೇ ಆಕ್ರಮಿಸಿಕೊಳ್ಳುತ್ತಾ ಬರುತ್ತಿದೆ. ಅವಳನ್ನು ಬಿಟ್ಟು ಹೋದ ನಂತರದ ಹದಿನೈದು ವರ್ಷ ತಾನು ಯಾವ ಹೆಣ್ಣಿನ ಸಂಗವನ್ನೂ ಮಾಡಲಿಲ್ಲ. ಅದೊಂದು ಆತ್ಮತೃಪ್ತಿ.

ಆ ಹೆಂಗಸು ಒಮ್ಮೆಲೆ ಮಗನಿರುವನೆಂಬ ಭಯವೂ ಇಲ್ಲದೆ ಹೊರಗೆ ಧಾವಿಸಿ ಬಂದಳು. ತನ್ನ ದಿಟ್ಟಿ ತನಗೆ ಮೋಸ ಮಾಡುತ್ತಿಲ್ಲತಾನೆ. ಅದೇ ವ್ಯಕ್ತಿ, ಸ್ವಲ್ಪವೂ ಸಂಶಯವಿಲ್ಲ. 'ಕ್ರಾಂತಿ ಕ್ರಾಂತಿ' ಎಂದು ಏನೋ ಪತ್ರಿಕೆಗಳಲ್ಲಿ ಬರೆಯುತ್ತಿದ್ದ ವ್ಯಕ್ತಿ. ತನ್ನ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ತನಗೊಂದು ಗಂಡು, ಹೆಣ್ಣು ಮಕ್ಕಳನ್ನು ಕೊಟ್ಟ ಪತಿ. ಪತ್ರಿಕೆಯಲ್ಲಿ 'ದೇವರು ಜಗತ್ತಿನ ಅತೀ ದೊಡ್ಡ ಸುಳ್ಳು' ಎಂದು ಪ್ರತಿಪಾದಿಸಿ ಜಮಾತಿನ ಜನರಿಂದ, ಮಸೀದಿಯ ಮೌಲ್ವಿಯ ಸ್ಥಾನದಿಂದ, ಕಡೆಗೆ ತನ್ನ ತಂದೆ ಯಿಂದಲೂ, ತನ್ನಿಂದಲೂ ತುಚ್ಛೀಕರಿಸಲ್ಪಟ್ಟು ಮನೆಬಿಟ್ಟು ಹೊರಟುಹೋದ ವ್ಯಕ್ತಿ.

ಆಕೆ ಫಕ್ಕನೆ ಕೇಳಿದಳು, ''ಹೇಗಿದ್ದೀರಿ ?''

ಎಷ್ಟೋ ವರ್ಷಗಳ ಬಳಿಕ ಕೇಳಿಸಿದ ಮಾತು. ಏನೆಂದು ಉತ್ತರಿಸಲಿ ? ಯುವಕ ತಬ್ಬಿಬ್ಬಾಗಿದ್ದ 'ಈ ವ್ಯಕ್ತಿ ಅಮ್ಮನಿಗೆ ಪರಿಚಿತರೇ' ಆತ ಇಬ್ಬರನ್ನೂ ಎವೆಯಿಕ್ಕದೆ ದಿಟ್ಟಿಸುತ್ತಿದ್ದಂತೆ ಅಕ್ಬರ್ ಹೇಳಿದರು.

''ಹದಿನೈದು ವರ್ಷಗಳ ಕಾಲ ಅಕ್ಬರ್ ಅನ್ನೋ ಹೆಸರಿನಲ್ಲಿ ಬರೆಯುತ್ತಿದ್ದೇನೆ''.

''ಓ... ನನಗೊತ್ತಿತ್ತು ನೀವೇ ಅಕ್ಬರ್ ಎನ್ನುವುದು !''

ಯುವಕನ ಕಡೆ ನೋಡಿ ಆಕೆ ಹೇಳಿದಳು. ''ಇವರೇ ನಿನ್ನ ತಂದೆ.''

ಶಫಿ ಕುಸಿದು ಕುಳಿತ. ಆತ ಕಣ್ಣನ್ನು ಕಿರಿದಾಗಿಸಿ ಅವರಿಬ್ಬರನ್ನೂ ದಿಟ್ಟಿಸಿದ. ಒಂದರನ್ನೊಂದು ಬೆರೆತ ಆ ನಾಲ್ಕು ದಿಟ್ಟಿಗಳನ್ನು ಎವೆಯಿಕ್ಕದೆ ದಿಟ್ಟಿಸಿದ. ತನ್ನ ತಾಯಿಯೊಡನೆ ಬೆರೆತು ಸಂಸಾರ ನಡೆಸಿ ತನ್ನ ಹುಟ್ಟಿಗೆ ಕಾರಣರಾದ ಆ ಬಿಳಿಗಡ್ಡದ ವ್ಯಕ್ತಿಯನ್ನು 'ತಂದೆ'ಯ ಸ್ಥಾನದಲ್ಲಿ ನಿಲ್ಲಿಸಿ ಅದನ್ನು ಒಪ್ಪಿಕೊಳ್ಳಲಾಗದೇ ಕಂಗಾಲಾದ. ತನ್ನ ದೇಹದಲ್ಲಿ ಹರಿಯುತ್ತಿರುವುದು ಇದೇ ವ್ಯಕ್ತಿಯ ರಕ್ತ ಎಂದರಿವಾದಾಗ ಕಂಪಿಸಿದ.

ಅಕ್ಬರ್ ಆಕೆಯನ್ನು ಕೇಳಿದರು.

''ನೀನು ಹೆತ್ತ ಹುಡುಗಿ ಎಲ್ಲಿದ್ದಾಳೆ ?''

ಹುಡುಗ ಗದ್ಗದಿತನಾದ. ಆಕೆ ತನ್ನ ಕಣ್ಣಂಚಿನ ಕೊನೆಯಲ್ಲಿ ಒಸರಿದ ಕಂಬನಿಯನ್ನು ಬೆರಳಂಚಿನಿಂದ ತೊಡೆಯುತ್ತಾ ಹೇಳಿದಳು.

''ಆಕೆ ಅಪಘಾತದಲ್ಲಿ ಸತ್ತು ಏಳೆಂಟು ವರ್ಷಗಳಾದುವು.''

ಅಕ್ಬರ್ ಜ್ಞಾಪಿಸಿಕೊಳ್ಳಲೆತ್ನಿಸಿದರು. ಪುಟ್ಟದಾದ ಹುಡುಗಿ, ಹಾರುತ್ತಾ ಮನೆಯ ತುಂಬ ಓಡಾಡುತ್ತಿದ್ದ ಐದು ವರ್ಷದ ಹುಡುಗಿ, ತನ್ನ ಪ್ರೀತಿಯ ಮಗಳು. ತಲೆಗೆ ರುಮಾಲು ಕಟ್ಟಿಕೊಂಡು ಮದರಸಕ್ಕೆ ಹೋಗುತ್ತಿದ್ದಾಗಿನ ಸಂದರ್ಭ. ಕಣ್ಣು ಮಂಜಾಯಿತು.

ಯುವಕ ಎದ್ದು ಒಳಹೋಗಿದ್ದ. ಕ್ಷಣದಲ್ಲೇ ಆತ ಭಾವಚಿತ್ರವೊಂದನ್ನು ತಂದು ಅವರ ಕೈಗಿಡುತ್ತಾ ಹೇಳಿದ ''ಅವಳು ತೀರಿಕೊಂಡ ವರ್ಷದಲ್ಲಿ ತೆಗೆಸಿದ ಫೋಟೋ.''

ಲಂಗ-ದಾವಣಿ ಉಟ್ಟ ಮುತ್ತಿನ ಹುಡುಗಿ, ಅರಳಿದ ನಗು, ಅವರು ಅದನ್ನು ತಕ್ಷಣವೇ ಮರಳಿಕೊಟ್ಟರು.

ಮನೆಯೊಳಗೆ ಹನ್ನೆರಡರ ಪ್ರಾಯದ ಒಬ್ಬ ಹುಡುಗ ನುಗ್ಗಿ ಬಂದ. ಆತ ಏದುಸಿರುಬಿಡುತ್ತಿದ್ದ. ಮುಖದಲ್ಲಿ ಬೆವರು. ಫಾತುಮ್ಮಾಳದೇ ರೂಪು. ಫಾತುಮ್ಮಾಳದೇ ಮಗನಿರಬಹುದೇ.

''ಉಮ್ಮಾ ಅಪ್ಪನಿಗೆ ಸೀರಿಯಸ್ಸಾಗಿದೆ. ಆಪರೇಷನ್ ಮಾಡಬೇಕೆಂದು ವೈದ್ಯರು ಹೇಳಿದ್ದಾರೆ.''

ಅಕ್ಬರ್ ತಬ್ಬಿಬ್ಬಾದರು. ಈ ಹುಡುಗ ತಂದೆಗೆ ಸೀರಿಯಸ್ ಅನ್ನುತ್ತಿದ್ದಾನೆ. ಹಾಗಾದರೆ ತಾನು ಹೇಳಿದ ಊರು ಬಿಟ್ಟ ಬಳಿಕ ಫಾತುಮ್ಮಾ ಬೇರೊಂದು ಮದುವೆ ಯಾಗಿದ್ದಾಳೆ. ಆಸ್ಪತ್ರೆಯಲ್ಲಿರುವ ಆ ವ್ಯಕ್ತಿಗೆ ಹುಟ್ಟಿದ ಹುಡುಗ ಈತ. ಎದೆಯಲ್ಲಿ ತೀವ್ರತರವಾದ ನೋವು ಹುಟ್ಟಿಕೊಂಡು ಇಡೀ ದೇಹವನ್ನು ವ್ಯಾಪಿಸತೊಡಗಿತು. ಇದು ಸತ್ಯವಾದರೆ ತಾನೀ ಬದುಕಿನಲ್ಲಿ ಕೊನೆಯವರೆಗೂ ಒಂಟಿ. ಈ ಫಾತುಮ್ಮಾ ತನ್ನ ಮಗ ಶಫಿ. ಇವರೆಲ್ಲಾ ತನಗೆ ಏನೂ ಅಲ್ಲದವರು.

ಹೆಂಗಸು ಗಾಬರಿಗೊಂಡಳು ಆಕೆ ಒಮ್ಮೆಲೆ ಧಾವಿಸಿ ಚಪ್ಪಲಿಯನ್ನು ಧರಿಸಿಕೊಂಡು ಹೊರಬಂದು ಶಫಿಯನ್ನು ನೋಡುತ್ತಾ ಹೇಳಿದಳು. ''ಬಹುಶಃ ಈ ರಾತ್ರಿಯಲ್ಲಿ ನಾನು ಆಸ್ಪತ್ರೆಯಲ್ಲಿ ಇರಬೇಕಾಗಿಬರಬಹುದು, ಇವರಿಗೆ ನಿನ್ನ ಕೋಣೆಯನ್ನು ಬಿಟ್ಟುಕೊಡು. ಈ ರಾತ್ರಿ ಅವರು ಇಲ್ಲೇ ಉಳಿಯಲಿ ?''

ಹೀಗೆಂದು ಆಕೆ ಆ ಹುಡುಗನ ಜೊತೆ ಬಿರುಸಿನ ಹೆಜ್ಜೆ ಹಾಕಿ ಮನೆಯಿಂದ

ಹೊರನಡೆದಳು. ಆಕೆ ''ಈ ರಾತ್ರಿ ಇವರು ಇಲ್ಲೇ ಉಳಿಯಲಿ'' ಎಂದು ಹೇಳಿದ್ದಳು. ಆದರೆ ನಾಳೆ ? ತನ್ನ ಯಾತ್ರೆ ಎಲ್ಲಿಗೆ ? ಎತ್ತಲೋ ಬಂದ ಊರಿಗೋ.

ಶಫಿ ಅವರಿಗೆ ಕೋಣೆಯೊಂದನ್ನು ತೋರಿಸಿದ. ಕೋಣೆಯಲ್ಲಿ ಕುಳಿತ ನಂತರ ಅವರು ಕೇಳಿದರು.

''ನಿನ್ನ ತಾಯಿ ಆಸ್ಪತ್ರೆಯಲ್ಲಿರುವ ವ್ಯಕ್ತಿಯ ಹೆಂಡತಿಯಾಗಿ ಎಷ್ಟು ವರ್ಷಗಳಾದುವು''

''ಸರಿಯಾಗಿ ಈ ತಿಂಗಳ ಹನ್ನೆರಡಕ್ಕೆ ಹದಿಮೂರು ವರ್ಷಗಳು''. ಯುವಕ ಅವರ ಕೈಚೀಲದಲ್ಲಿದ್ದ ಕಾದಂಬರಿಯೊಂದನ್ನು ಪಡೆದು ನಿಧಾನದ ಹೆಜ್ಜೆ ಹಾಕುತ್ತಾ ಹೊರಹೋದ. ಗೋಡೆಯ ಮೇಲೆ ಅಂಟಿಸಿದ್ದ ದರ್ಪದ ಮೂರ್ತಿಯಂತಿದ್ದ ತನ್ನ ತಂದೆಯ ಭಾವಚಿತ್ರವನ್ನು ಅವರು ಕಣ್ಣು ಬಿಟ್ಟು ನೋಡಿದರು.

ನೆನಪು ಮರುಕಳಿಸತೊಡಗಿತು.

ಹದಿನೈದು ವರ್ಷಗಳ ಹಿಂದಿನ ಕತೆಯಿದು.

ಪುಟ್ಟ ಬಿಳಿ ಟೋಪಿ, ಬಿಳೀ ಮುಂಡು, ಕೈಯಲ್ಲೊಂದು ಖುರಾನ್ ಪುಸ್ತಕ ಹಿಡಿದು ಬೆಳಿಗ್ಗೆ ಸ್ವಲ್ಪ ಹೊತ್ತು ಮತ್ತೆ ಸಾಯಂಕಾಲದ ಸ್ವಲ್ಪ ಹೊತ್ತು ಮದರಸದ ಧಾರ್ಮಿಕ ಶಿಕ್ಷಣ; ಇವುಗಳ ನಡುವೆ ಬಹಳಷ್ಟು ಹೊತ್ತು ಐಹಿಕ ಬದುಕಿನ ಲೌಕಿಕ ಶಿಕ್ಷಣ. ಮದರಸ, ಮನೆಯಲ್ಲಿ ತಂದೆ ಬೋಧಿಸುತ್ತಿದ್ದ ದೇವರ ಬಗೆಗಿನ ನಂಬಿಕೆಗಿಂತ ಮುಂದೆ ಕಾಲೇಜನ್ನು ಹತ್ತಿ ಲೋಕಜ್ಞಾನ ಅರಿವಾದಾಗ, ದೇವರು ಸುಳ್ಳು ಎನ್ನುವ ನಂಬಿಕೆ ಹೆಚ್ಚಾಗಿ ಹೃದಯದಲ್ಲಿ ಮೆದುಳಿನಲ್ಲಿ ಛಾಪು ಹೊಡೆಯತೊಡಗಿತ್ತು. ಡಿಗ್ರಿ ಪಡೆದು ಹೊರಬಿದ್ದಾಗ ತಂದೆ ತನಗಂಟಿಸಿದ ಮೊಯಿಲಿಯಾರರ ಸ್ಥಾನ ನನಗೆ ಮಕ್ಕಳ ಮೇಲೆ ಧಾರ್ಮಿಕ ಶಿಕ್ಷಣ ಬೋಧಿಸುವ ಇಚ್ಛೆ ಇದ್ದರೂ ದೇವರಿದ್ದಾನೆಂಬ ಮಾತನ್ನು ಒತ್ತಿ ಹೇಳಲಾಗಲಿಲ್ಲ. ಮುಂದೆ ಮೌಲವಿ ಆದ ಮೇಲೂ ಹೃದಯದಲ್ಲಿ ತುಡಿಯುತ್ತಿದ್ದ ಭಾವನೆಗಳು, ನಂಬಿಕೆಗಳಿಗೆ ಚಾಲನೆ ದೊರಕಿದ್ದು ಮದುವೆಯಾದ ಎಂಟನೇ ವರ್ಷದಲ್ಲಿ.

ಆ ದಿನ,

ರಾತ್ರಿಯ ಹೊತ್ತು,

ಮಸೀದಿಯ ಮೌಲವಿಯ ಉಡುಪುಗಳನ್ನೆಲ್ಲಾ ಕಳಚಿ ತನ್ನ ಮಿತ್ರರು ಕಲೆತು ಹುಟ್ಟುಹಾಕಿದ್ದ ಕಛೇರಿಯೊಂದಕ್ಕೆ ಪಯಣ ಬೆಳೆಸಿದ್ದೆ. ಎಲ್ಲರೂ ತನ್ನದೇ ಪ್ರಾಯದವರು. ಎಲ್ಲರೂ ಕ್ರಾಂತಿಯ ಕನಸನ್ನು ಕಂಡವರು. ಜನಜೀವನದ ಮೇಲೆ ಪಟ್ಟಭದ್ರ ಹಿತಾಸಕ್ತಿಗಳು ಮಾಡುವ ಅನ್ಯಾಯದ ವಿರುದ್ಧ, ಧಾರ್ಮಿಕ ಮುಖಂಡರು ದೇವರ ಹೆಸರಿನಲ್ಲಿ ಜನಸಾಮಾನ್ಯರನ್ನು ವಂಚಿಸುವ ವಿರುದ್ಧ ಹೋರಾಡಲು

ಶ್ರಮಿಸುತ್ತಿದ್ದವರು ಆ ಯುವಕರು.

ಒಬ್ಬ ಹೇಳಿದ,

''ನೀನು ಬಂದೇ ಬರುತ್ತೀಯೆಂದು ನನಗೆ ಗೊತ್ತಿತ್ತು'' ತಾನು ಹೇಳಿದ್ದೆ, ''ನಾಳೆಯಿಂದ ನಾನು ಜನರ ಹಿತಕ್ಕಾಗಿ ಕಮ್ಯುನಿಸ್ಟನಾಗಿ ನಿಮ್ಮ ಜೊತೆಯಾಗುತ್ತೇನೆ.''

ಮರುದಿನದಿಂದ ತಾನೊಂದು ಲೇಖನ ಬರೆಯತೊಡಗಿದ್ದೆ. ತನ್ನ ನಂಬಿಕೆಗೆ ಇಂಬುಕೊಡುವಂತೆ, 'ದೇವರು ಜಗತ್ತಿನ ಅತೀ ದೊಡ್ಡ ಸುಳ್ಳು'' - ಇದು ಲೇಖನಕ್ಕೆ ಆಯ್ದುಕೊಂಡ ವಿಷಯ.

ಪ್ರೀತಿಸುವ ಮಡದಿ ಫಾತುಮ್ಮಾ, ತನ್ನ ದುಃಖದಲ್ಲಿ ಸುಖದಲ್ಲಿ ಸಮಾನ ಪಾಲುಗಾರಳಾದ ಹೆಣ್ಣು, ಅಂದು ಅವಳ ತೋಳ್ತೆಕ್ಕೆಯಲ್ಲಿದ್ದಾಗ ದಢಾರನೆ ಬಾಗಿಲು ತೆರೆದು ತಂದೆ ಒಳಬಂದಿದ್ದರು. ತಾನು ಬೆದರಿದ್ದೆ. ಅವರು ಕೈಯಲ್ಲಿದ್ದ ಪತ್ರಿಕೆಯನ್ನು ತನ್ನ ಮುಖಕ್ಕೆ ಎಸೆದಿದ್ದರು.

ಆ ರಾತ್ರಿ ತಾನು ಎಲ್ಲರಿಂದಲೂ ತಿರಸ್ಕೃತನಾಗಿದ್ದೆ. ತಂದೆ ಜನಗಳ ಎದುರಿಗೇ ತನ್ನ ಮುಖದ ಮೇಲೆ ಅಪ್ಪಳಿಸಿದ್ದರು. ಕೈ ಹಿಡಿದ ಫಾತುಮ್ಮಾ, ''ನೀವು ಇಷ್ಟು ದೊಡ್ಡ ಕೆಟ್ಟ ಕೆಲಸ ಮಾಡುತ್ತೀರಿ ಎಂದು ನಾನು ಭಾವಿಸಿರಲಿಲ್ಲ. ದೇವರನ್ನು ನಿಂದಿಸಿದ ನಿಮ್ಮ ಜೊತೆ ನಾನು ಇನ್ನು ಹೇಗೆ ಬದುಕಲಿ. ನಿಮ್ಮನ್ನು ಯಾಕೆ ಮದುವೆಯಾದೆನೋ ಎಂದು ಸಂಕಟವಾಗ್ತಿದೆ'' ಎಂದು ಹೇಳಿದಾಗ ತಾನು ಎಲ್ಲರಿಂದಲೂ ತುಚ್ಛನಾದಂತಾಗಿದ್ದೆ. ತಾನು ನಂಬಿರುವ ಆದರ್ಶಕ್ಕೆ ತನ್ನ ಮನೆಯಲ್ಲೇ ಬೆಲೆಯಿರಲಿಲ್ಲ.

ಒಂದು ಧೈರ್ಯದ ನಿರ್ಧಾರದಲ್ಲಿ ಆ ರಾತ್ರಿ ಮನೆಯಿಂದ ಹೊರಬಿದ್ದವ ಮತ್ತೆ ಈ ಮನೆಯಲ್ಲಿ ಕಾಣಿಸಿಕೊಂಡದ್ದು ಹದಿನೈದು ವರ್ಷಗಳ ಅನಂತರ.

ಯೋಚನೆ ಹರಿದಾಗ ಬೆಳ್ಳನೆ ಬೆಳಕಿನ ಮತ್ತೊಂದು ಹಗಲು.

ಆಸ್ಪತ್ರೆಯಿಂದ ಶಫಿ ಬಂದಿದ್ದ. ಆತ ರಾತ್ರಿ ಸುಮಾರು ಹೊತ್ತಿನ ಮೇಲೆ ಆಸ್ಪತ್ರೆಗೆ ಹೋಗಿದ್ದ. ಆತ ಬಂದು ಕೋಣೆ ಹೊಕ್ಕು ಹತ್ತಿರ ನಿಂತವ ಹೇಳಿದ.

''ನೀವು ಈ ಕ್ಷಣ ಆಸ್ಪತ್ರೆಗೆ ನನ್ನೊಂದಿಗೆ ಬನ್ನಿ.''

ಅವರು ಗಲಿಬಿಲಿಗೊಂಡರು. ತನ್ನ ಸ್ಥಾನದಲ್ಲಿರುವವನನ್ನು ತಾನು ಕಾಣಲು ಹೋಗುತ್ತಿದ್ದೇನೆಯೇ. ಒಂದು ಕಾಲದಲ್ಲಿ ಆಕೆ ತನ್ನ ಬಳಿ ಕುಳಿತು ಆರೈಕೆ ಮಾಡುತ್ತಿದ್ದಳು. ಈಗ ಆಸ್ಪತ್ರೆಯಲ್ಲಿ ಆತನ ಪಕ್ಕದಲ್ಲಿ ಕುಳಿತು ಆತನ ಎದೆ ನೀವಿ ಆರೈಕೆ ಮಾಡುತ್ತಿರಬಹುದು.

ಆಸ್ಪತ್ರೆಯ ಕಾರಿಡಾರಿನಲ್ಲಿ ನಡೆದು ಕೋಣೆಯೊಂದನ್ನು ಹೊಕ್ಕಿ ಬಿಳಿ ಬೆಡ್ಡಿನಲ್ಲಿ

ಹತಾಶನಾಗಿ ಮಲಗಿದ್ದ ಆ ವ್ಯಕ್ತಿಯನ್ನು ಕಂಡು ಕಂಪಿಸಿದರು. ಆತನ ಪಕ್ಕದಲ್ಲಿ ಕುಳಿತು ಕಣ್ಣಲ್ಲಿ ಕಂಬನಿ ಸುರಿಸುವ ಫಾತುಮ್ಮಾಳನ್ನು ನೋಡಿ ಮಾತು ಬಾರದೆ ಗದ್ಗದಿತರಾದರು. ಇನ್ನೊಂದು ಪಕ್ಕದಲ್ಲಿರುವ ಆ ಹುಡುಗ ಮೂಕನಾಗಿ ಕುಳಿತಿದ್ದ. ಫಾತುಮ್ಮಾ ಜಾಗ ಮಾಡಿಕೊಟ್ಟಳು. ವ್ಯಕ್ತಿ ಎದ್ದು ಕೂರುವ ವಿಫಲ ಯತ್ನ ನಡೆಸಿ ನಿಧಾನವಾದ ಸ್ವರದಲ್ಲಿ ಹೇಳತೊಡಗಿದರು. ''ನೀವು ಯಾರೆಂದು ನನಗೆ ಗೊತ್ತಾಯಿತು. ನೀವು ಅಂದು ನಂಬಿಕೊಂಡ ಆದರ್ಶ ತತ್ವಗಳನ್ನು ನಾನು ಎಂದೆಂದೂ ಮೆಚ್ಚುತ್ತಲೇ ಬಂದಿದ್ದೇನೆ. ದೇವರಿದ್ದಾನೆಂಬ ಕಲ್ಪನೆ ನನಗೆ ನಂಬಲೂ ಆಗುತ್ತಿಲ್ಲ. ಆದರೆ ದೇವರಿಲ್ಲ ಎಂಬುದನ್ನು ನಾನು ಸಿದ್ಧಾಂತ ಮಾಡಿ ತೋರಿಸಲಾರೆ. ಜನ ನೆಮ್ಮದಿಯ ಬದುಕನ್ನು ಬದುಕಲು ನಾವೆಲ್ಲರೂ ಸೆಕ್ಯೂಲರ್ ಆಗುವುದು ಒಳಿತು.

ನಾನು ಇನ್ನು ಎರಡು ದಿನ ಬದುಕುತ್ತೇನೆ ಎಂದಷ್ಟೇ ಡಾಕ್ಟರರು ಹೇಳಿದ್ದಾರೆ. ನಂತರ ಈ ಫಾತುಮ್ಮಾ ಈ ಮಕ್ಕಳನ್ನು ಬದುಕಿನಲ್ಲಿ ಮುನ್ನಡೆಸುವ ಚಾಲಕಶಕ್ತಿ ಯಾರೂ ಇರುವುದಿಲ್ಲ. ಈ ಹದಿನೈದು ವರ್ಷಗಳಲ್ಲಿ ನಡೆದುಹೋಗಿರುವುದು ಕನಸೆಂದು ತಿಳಿದು, ನಾನು ನಿಮ್ಮ ಈ ಬದುಕಿನಲ್ಲಿ ಪ್ರವೇಶಿಸಿಯೇ ಇಲ್ಲ ಎಂಬ ಕಲ್ಪನೆಯಲ್ಲಿ ನೀವು ಮತ್ತೆ ಆ ಮನೆಯ ಯಜಮಾನರಾಗಿ ಈ ಫಾತುಮ್ಮಳಿಗೆ ಹೊಸ ಬದುಕನ್ನು ಕೊಡಿರಿ. ಆ ನಂಬಿಕೆ ನನಗಿದೆ.''

ಅಕ್ಬರ್ ದಿಟ್ಟಿ ಚಲಿಸಿ ಫಾತುಮ್ಮಾ - ಹುಡುಗರನ್ನು ನೋಡಿದರು. ಯುವಕ ಶಫಿ ಮಲಗಿದ್ದ ವ್ಯಕ್ತಿಯೆಡೆ ಧಾವಿಸಿ ಬಂದ. ''ಅಬ್ಬಾ, ನೀವು ಎಂತಹ ಮಾತಾಡುತ್ತಿದ್ದೀರಿ. ತಾಯಿ ಮತ್ತೆ ಅಪವಿತ್ರಳಾಗುವುದನ್ನು ನಾನು ಸಹಿಸಲಾರೆ. ಈ ಲೇಖಕ ವ್ಯಕ್ತಿ ನಮ್ಮನ್ನು ಹುಟ್ಟಿಸಿದರೇ ಹೊರತು ನಮಗೆ ತಂದೆಯ ಪ್ರೀತಿಯನ್ನು ನೀಡಲೇ ಇಲ್ಲ. ಈ ವ್ಯಕ್ತಿ ಹೇಳದೆ ಹೊರಟು ನಾಪತ್ತೆಯಾದ ವರ್ಷದಲ್ಲಿ ತಾಯಿ ಅದೆಷ್ಟು ಸಂಕಟಪಟ್ಟರು. ಈ ವ್ಯಕ್ತಿಗೆ ತನ್ನ ಆದರ್ಶ, ಹುಚ್ಚು ಬರವಣಿಗೆ ಬೇಕಿತ್ತೇ ಹೊರತು ಕೈಹಿಡಿದ ಪತ್ನಿ ಮಕ್ಕಳ ಭವಿಷ್ಯವಲ್ಲ. ತಾಯಿ ವಿಧವೆಯಾದರೂ ಚಿಂತೆ ಇಲ್ಲ. ಆದರೆ ಈ ವ್ಯಕ್ತಿಯನ್ನು ಮರಳಿ ನನ್ನ ತಂದೆಯೆಂದು ಒಪ್ಪಿಕೊಳ್ಳಲಾರೆ''.

ಅಕ್ಬರ್ ಫಾತುಮ್ಮಾಳನ್ನು ನೋಡಿದರು. ಆಕೆ ಗಂಡನ ಎದೆ ನೀವುತ್ತಿದ್ದಳು. ಮೌನವೇ ನೆಲಸಿದ್ದ ಆ ಜಾಗದಿಂದ ಎದ್ದು ನಿಧಾನವಾಗಿ ವಾರ್ಡಿನಿಂದ ಹೊರಬಿದ್ದು ಅವರು ನಡೆಯತೊಡಗಿದರು.

# 15 ಪರಾಜಿತ

ಖಾಸಿಂ... ಖಾಸಿಂ ಸರದಾರ.

ಸಾಯಂಕಾಲ ಹೊತ್ತು ಮುಳುಗಿದಾಗ ಆತ ಮನೆಗೆ ಬಂದ. ಮನೆಯ ಅಂಗಳಕ್ಕೆ ಬಂದಾಗ ಅವನಿಗೆ ಒಳಗಿಂದ 'ಖೊಕ್ ಖೊಕ್' ಎಂದು ಕೆಮ್ಮುತ್ತಿರುವುದು ಕೇಳಿಸಿತು. ಅದು ತನ್ನ ಹೆಂಡತಿ ಶಾಕೀರಾ ಎಂದು ಅವನಿಗೆ ಗೊತ್ತಿತ್ತು. ಅವಳಲ್ಲದೇ ಇನ್ಯಾರು ಇರಲು ಸಾಧ್ಯ ? ಕಳೆದ ಒಂದೆರಡು ತಿಂಗಳಿಂದ ಅವಳು ಹೀಗೇ ಕೆಮ್ಮುತ್ತಿದ್ದಾಳೆ. ಅವಳ ಆರೋಗ್ಯ ಸರಿ ಇಲ್ಲ. ಒಂದೆರಡು ಕಡೆ ತೋರಿಸಿ ಮದ್ದು ಮಾಡಿದ್ದಾಯ್ತು. ಆದರೆ ಗುಣವಾಗಲೇ ಇಲ್ಲ. ಆದರಿಂದ ಅವನಿಗೇನೂ ಅಷ್ಟು ಬೇಸರವಿಲ್ಲ. ಅವಳ ಬಗ್ಗೆ ಅಷ್ಟೇನು ಪ್ರೀತಿ ಇಲ್ಲ. ಅವನಿಗೆ ಮದುವೆಯಾಗಿ ನಾಲ್ಕು ವರುಷವಾದರೂ ಅವಳಿಂದ ಮಕ್ಕಳಾಗಿರಲಿಲ್ಲ.

ಆತ ಹೊಸ್ತಿಲು ದಾಟಿ ಒಳಗೆ ಬಂದ. ಚಿಮಣಿ ದೀಪದ ಎದುರು ಅವಳು ಬಾಯಿಗೆ ಕೈ ಅಡ್ಡ ಇಟ್ಟು ಕೆಮ್ಮುತ್ತಿದ್ದಳು. ಸುಮಾರು ಇಪ್ಪತ್ತೈದರ ವಯಸ್ಸು. ಕಪ್ಪಗಿನ ದೇಹ. ಕೋಲು ಮುಖ, ಕುಳಿ ಬಿದ್ದ ಕಂಗಳು. ಅವಳ ಎದುರಿನಲ್ಲಿ ಬೀಡಿಯ ಮೊರವಿತ್ತು.

ಗಂಡ ಬಂದುದನ್ನು ಕಂಡು ಶಾಕೀರಾ ಅಲ್ಲಿಂದ ಎದ್ದಳು.

''ಕೆಮ್ಮು ಇನ್ನೂ ಜೋರಾಗಿದೆಯೇ ?'' ಆತ ಕೇಳಿದ.

''ಹೌದು, ಈ ಕೆಮ್ಮು ಗುಣವಾಗುವಂತೆ ಕಾಣುತ್ತಿಲ್ಲ.''

''ನಿನ್ನ ಅವಸ್ಥೆ ನೋಡಲಾಗುವುದಿಲ್ಲ! ಒಂದೆರಡು ವಾರ ನಿನ್ನ ಅಮ್ಮನ ಮನೆಗೆ ಹೋಗಿ ಇದ್ದು ಬಾ !''

ಅವಳು ಅಚ್ಚರಿಯಿಂದ ಗಂಡನ ಮುಖ ನೋಡಿದಳು. ಇಷ್ಟು ದಿನವೂ ಒಂದೆರಡು ದಿನ ಅಮ್ಮನ ಮನೆಗೆ ಹೋಗಿ ಬರುತ್ತೇನೆಂದರೆ ಬೇಡ ಅನ್ನುತ್ತಿದ್ದವರು, ಈಗ ತಾವಾಗಿಯೇ ತವರಿಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಲು ಹೇಳುತ್ತಲಿದ್ದಾರೆ ! ಏನಾಗಿದೆ ಇವತ್ತು ತನ್ನ ಗಂಡನಿಗೆ ?

''ಏನು ತಮಾಷೆ ಮಾಡ್ತೀರಾ ನನ್ನ ?''

''ತಮಾಷೆ ಅಲ್ಲ... ನಿಜಕ್ಕೂ ಹೇಳ್ತಿದ್ದೇನೆ... ನಾಳೇನೇ ಹೋಗಿ ಒಂದೆರಡು ವಾರ ಇರು !''

ಎಂದೂ ನಗು ಕಾಣದ ಅವಳಲ್ಲಿ ಅತ್ಯದ್ಭುತವಾದ ಮುಗಳ್ನಗೆ ಮಿಂಚಿತು.

ಒಂದು ಕ್ಷಣ ಅವನಿಗೆ ಅನ್ನಿಸಿತು - ಈ ಕೋಲು ಮುಖದಲ್ಲೂ ಅಂದವಿದೆ ಎಂದು ! ಅವಳಿಗೆ ಮರುಭೂಮಿಯಲ್ಲಿ ಮರೀಚಿಕೆ ಸಿಕ್ಕಂತೆ ಅನಿಸಿತು.

''ನಡೆದು ತುಂಬಾ ಆಯಾಸ ಆಗಿರಬೇಕಲ್ವೇ ? ಕುಡಿಯಲು ಏನಾದರೂ ತರುತ್ತೇನೆ,'' ಎಂದು ಆಕೆ ಒಳಹೋದಳು, ಈತ ತನ್ನ ನಟನೆಗೆ ತಾನೇ ನಕ್ಕ. ನಾಲ್ಕು ವರ್ಷಗಳ ಕಾಲ ಒಂದಿಷ್ಟೂ ಮೋಸ, ವಂಚನೆ ಮಾಡದೆ ಅವನೊಂದಿಗೆ ಸಂಸಾರ ನಡೆಸಿದ್ದವಳಿಗೇ ಅವನು ವಂಚನೆ ಮಾಡಲು ಹೊರಟಿದ್ದ:

ಆಕೆ ಒಳಗಿಂದ ತಂಪಾದ ಲಿಂಬೆಹಣ್ಣಿನ ಶರಬತ್ತು ತಂದು ನೀಡಿದಳು. ಆತ ಅದನ್ನು ಕುಡಿದು ಕಿಸೆಯಿಂದ ನೂರರ ಎರಡು ನೋಟುಗಳನ್ನು ಅವಳಿಗಿತ್ತು ಹೇಳಿದ.

''ನಿನ್ನ ತವರಿನಲ್ಲಿ ನಿನಗೆ ಬೇಕಾಗಬಹುದು; ಇಟ್ಟುಕೋ.''

ಅವಳು ಒಳಗೆ ಹೋದ ಮೇಲೆ ತನ್ನಲ್ಲೇ ಯೋಚಿಸತೊಡಗಿದ. ಬಹುಶಃ ಇವತ್ತು ನನ್ನೊಂದಿಗೆ ಅವಳ ಕೊನೆಯ ರಾತ್ರಿ. ನಾಲ್ಕು ವರುಷಗಳ ಅನಂತರ ನಾನು ಅವಳಿಂದ ಬೇರ್ಪಡುತ್ತಾ ಇದ್ದೇನೆ. ಆದರೆ ಅವಳಿಗದು ಗೊತ್ತಿರಲಿಕ್ಕಿಲ್ಲ. ಈ ರಾತ್ರಿ ಅವಳಿಗೆ ಸಂತೃಪ್ತಿಯಾಗುವಷ್ಟು ಸುಖವನ್ನು ನೀಡಬೇಕು. ಇನ್ನೆಂದೂ ಬೆರೆಯುವ ಪ್ರಸಂಗ ಬರುವುದಿಲ್ಲ. ನಾಳೆ ಇವಳನ್ನು ತವರಿಗೆ ಅಟ್ಟಿದ ಮೇಲೆ ನಾನು ಯೋಚಿಸಿದಂತೆ ಆ ಹೆಣ್ಣನ್ನು ತಂದು ಮದುವೆಯಾಗೋದು ಮತ್ತು ಇವಳಿಗೆ ತಲಾಖ್ ನೀಡೋದು !''

ಹೌದು ! ಖಾಸಿಂ ಸರದಾರ ಮರು ಮದುವೆಯಾಗಲು ಯತ್ನಿಸಿದ್ದ. ಅಲ್ಲಿಂದ ಹದಿನೆಂಟು ಮೈಲಿ ದೂರದ ಹಸನ್‌ಕಾಕನ ಮಗಳು ನಫೀಸಾಳನ್ನು ನೋಡಿದಂದಿನಿಂದ ಅವಳನ್ಯಾಕೆ ತಾನು ಮದುವೆಯಾಗಬಾರದು ಅನ್ನಿಸಿತು. ತನ್ನ ಗೂರಲು ಕೆಮ್ಮಿನ ಮತ್ತು ಕೋಲು ಮುಖದ ಶಾಕೀರಾಳ ಜಾಗದಲ್ಲಿ ನಫೀಸಾಳನ್ನು ತಂದು ಇಟ್ಟುಕೊಳ್ಳುವುದು ! ಆದರೆ ಅದು ಸಾಧ್ಯವೇ ? ಯಾಕೆ ಸಾಧ್ಯವಿಲ್ಲ ? ಯಾವುದಾದರೂ ಒಂದು ಕಾರಣ ಕೊಟ್ಟು ಶಾಕೀರಾಳನ್ನು ಅವಳ ತವರಿಗೆ ಅಟ್ಟಿ ನಂತರ ಅವಳಿಗೆ ತಲಾಖ್ ಕೊಡೋದು ! ಯಾವುದಾದರೂ ಕಾರಣವೇಕೆ ? ಕಾರಣವಿದೆಯಲ್ಲ. 'ಅವಳು ತಾಯಾಗದಿರುವ ಕಾರಣ ನಿಮ್ಮ ಮಗಳಿಂದ ನನ್ನ ವಂಶ ಬೆಳೆಯುವ ಸಾಧ್ಯತೆ ಇಲ್ಲ. ಅವಳು ಜೀವನ ಪರ್ಯಂತ ಬಂಜೆಯಾಗಿಯೇ ಇರಬೇಕಾಗುತ್ತದೆ. ನನಗೆ ಒಂದೆರಡು ಮಕ್ಕಳು ಬೇಕು. ನಮ್ಮದು ಉತ್ತಮ ಸರದಾರ ಕುಟುಂಬ. ತಲೆತಲಾಂತರದಿಂದಲೂ ಬೆಳೆದು ಬಂದ ವಂಶ ನನ್ನದು. ಇದು ನಿಮ್ಮ ಮಗಳಿಂದಾಗಿ ಇಲ್ಲಿಗೆ ಕೊನೆಯಾಗುವುದು ಬೇಡ. ಅದಕ್ಕಾಗಿ ನಿಮ್ಮ ದಾರಿ ನಿಮಗೆ. ತಾನು ಬೇರೆ ಮದುವೆಯಾಗುತ್ತೇನೆ' ಎಂದು ಹೇಳಿಬಿಡುವುದು ಎಂದುಕೊಂಡ.

ಅದು ದೃಢ ನಿಶ್ಚಯವಾಗಿ ಆತ ಹದಿನೆಂಟು ಮೈಲಿಯಾಚೆಯ ಆ ಹುಡುಗಿ

ನಫೀಸಾಳನ್ನು ನಿಕಾ ಮಾಡಿಕೊಳ್ಳಲು ಮಾತುಕತೆಯಾಡಲು ಹೋಗಿದ್ದ. ಅವರದೋ ಮಧ್ಯಮ ಕುಟುಂಬ. ಖಾಸಿಂ ಸರದಾರನಿಗೆ ಆ ಊರಲ್ಲಿ ಒಳ್ಳೆ ಹೆಸರಿತ್ತು. ಅಲ್ಲಿನ ವ್ಯಾಪಾರ ವಹಿವಾಟು ಉತ್ತಮವಿತ್ತು. ಇವನಿಗೊಂದು ಮದುವೆ ಯಾಗಿದೆ ಎಂದು ಗೊತ್ತಿದ್ದರೂ ಹತ್ತು ಪವನು ಬಂಗಾರ ಹತ್ತು ಹದಿನೈದು ಸಾವಿರ ರೂಪಾಯಿಗೆ ಮಾತಾಯಿತು. ಚೆಲುವಿನ ಆ ಹುಡುಗಿ ನಫೀಸಾ ಈತ ನೋಡಿದಾಗ ಒಂದು ಸುಂದರ ಪೋಸ್‌ಕೊಟ್ಟಳು. ಆ ಪೋಸ್‌ನಿಂದ ಇವನಲ್ಲಿ ಛಳಕು ಹುಟ್ಟಿ ಯಾವಾಗ ಶಾಕೀರಾಳನ್ನು ಹೊರತಳ್ಳಿ ಇವಳನ್ನು ಮದುವೆಯಾದೇನು ಎಂದು ಕಾತರಿಸತೊಡಗಿದ.

ಮದುವೆಗೆ ಗುಟ್ಟಾಗಿ ಒಂದು ದಿನ ನಿಶ್ಚಯ ಮಾಡಿ ಮನೆಗೆ ಬಂದವ ಹೀಗೆ ಶಾಕೀರಾಳನ್ನು ತವರಿಗೆ ಅಟ್ಟುವ ಯೋಜನೆ ಹಾಕಿದ್ದ.

ರಾತ್ರಿ ಗಂಡನ ಅದಮ್ಯ ಉತ್ಸಾಹ ಕಂಡು ಅವಕ್ಕಾಗಿ, ಗಂಡನ ಪ್ರೀತಿ ಹೀಗೆಯೇ ಸದಾ ಕಾಲ ಇರಲಿ ಎಂದು ಆಶಿಸುತ್ತಾ ಆತನ ಬೆಚ್ಚನೆಯ ಎದೆಯಲ್ಲಿ ಮುಖವಿರಿಸಿ ಮಲಗಿದಳು. ನಾಲ್ಕು ವರ್ಷದಿಂದ ಹೀಗೆ ಹಲವಷ್ಟು ಸಲ ಅದಮ್ಯ ಉತ್ಸಾಹದಲ್ಲಿ ಬೀಜ ಬಿತ್ತಿದರೂ ಅದು ಮೊಳಕೆಯೊಡೆಯಲೇ ಇಲ್ಲ. ಅದೆಷ್ಟು ಆಸೆ ತನಗೆ, ತನ್ನ ಗರ್ಭದಲ್ಲೊಂದು ಭ್ರೂಣ ಬೆಳೆದು ಅದಕ್ಕೆ ಕೈಕಾಲು, ಕಣ್ಣು, ಕಿವಿ, ಮೂಗು, ಬಾಯಿ ಎಲ್ಲಾ ಮೂಡಿ ಒಂದು ಸುಂದರ ಶಿಶುವಾಗಿ, ಮುಂದೊಂದು ದಿನ ಏಳು ತಿಂಗಳು ತುಂಬಿದ ನಂತರ ಚಂದದಲ್ಲಿ ಸೀಮಂತ ಮಾಡಿಸಿಕೊಂಡು, ಗಂಡನ ಪಾದ ಮುಟ್ಟಿ ನಮಸ್ಕರಿಸಿ, ತಾಯಿಯ ಮನೆಗೆ ಹೋಗುವುದು. ಅಲ್ಲಿ ಹೆರಿಗೆಯ ಕ್ಷಣಗಳನ್ನು ಎಣಿಸುತ್ತಾ ದಿನ ತುಂಬಿ ಒಂದು ದಿನ ಮುದ್ದಾದ ಮಗುವನ್ನು ಹಡೆಯುವುದು. ಆದರೆ ಅದೆಲ್ಲಾ ಬರೀ ಕನಸು. ತನ್ನ ಗರ್ಭದಲ್ಲಿ ಭ್ರೂಣದ ಕುಡಿ ಒಡೆಯುವ ಸಾಧ್ಯತೆಯೇ ಇಲ್ಲ. ತನ್ನದು ಬರಡು ಗರ್ಭ ! ತಾನೆಂದಿಗೂ ಬಂಜೆ !!

ಅವಳಿಗೆ ಕೆಮ್ಮು ಒತ್ತರಿಸಿ ಬಂತು. ಖೊಕ್ ಖೊಕ್ ಕೆಮ್ಮು, ನಿದ್ರೆಯ ಆಳಕ್ಕೆ ಇಳಿಯುತ್ತಿದ್ದ ಖಾಸಿಂ ಸರದಾರ ಒಮ್ಮೆಲೆ ನಿದ್ದೆಯಲ್ಲಿ ಬೆಚ್ಚಿದ. ನಿದ್ದೆ ಹಾಳಾದುದಕ್ಕೆ ಅಸಾಧ್ಯ ಸಿಟ್ಟು ಬೇರೆ. ಆದರೆ ಕೋಪಿಸಿಕೊಳ್ಳುವಂತಿಲ್ಲ. ಇದೊಂದು ರಾತ್ರಿ ತಾನೇ. ನಾಳೆಯಿಂದ ನಾನೊಬ್ಬನೇ ಹಾಯಾಗಿ ನಿದ್ರಿಸಬಹುದು. ಕೆಲವು ದಿನಗಳ ನಂತರ ಆ ಎಳೆಯ ಹುಡುಗಿ ನಫೀಸಾಳ ಸುಂದರ ಬಾಹುಗಳಲ್ಲಿ ಮಲಗಬಹುದು. ಹೀಗೆಂದುಕೊಂಡ ಆತ ನಿದ್ರೆಯ ಆಳಕ್ಕೆ ಇಳಿದ.

ಮರುದಿನ ಮುಂಜಾವಿನಲ್ಲಿ ಅವನು ಏಳುವುದಕ್ಕೆ ಮೊದಲು ಅವಳು ಎದ್ದು ಚಹಾ ತಿಂಡಿ ತಯಾರಿಸಿ ಅವನನ್ನು ಎಬ್ಬಿಸಿದಳು. ಅಲ್ಲಿಂದ ಇಪ್ಪತ್ತೆಂಟು ಮೈಲಿ ದೂರದ ಅವಳ ತವರಿಗೆ ಹೋಗಲು ಮುಂಜಾನೆ ಏಳಕ್ಕೆ ಒಂದು ಬಸ್ಸು. ಬಸ್ಸು

ಬರುವಷ್ಟರಲ್ಲಿ ರೆಡಿಯಾಗಿ ಮನೆಗೆ ಬೀಗ ಹಾಕಿ ಅವನು ಅವಳೊಂದಿಗೆ ಹೊರಟ.

ಇಪ್ಪತ್ತೆಂಟು ಮೈಲಿ ದೂರದ ಅವಳ ತವರನ್ನು ಸೇರಿದಾಗ ಅವಳ ಅಪ್ಪ ಅಮ್ಮರಿಗೆ ಸಂಭ್ರಮವೋ ಸಂಭ್ರಮ. ಮಗಳ ಮುಖದಲ್ಲಿನ ಸಂಭ್ರಮ, ಜತೆಗೆ ಅಳಿಯ ತಮಗಾಗಿ ತಂದ ಸೀರೆ, ಶರ್ಟು, ಲುಂಗಿ ಕಂಡು ಇನ್ನಷ್ಟು ಖುಷಿ.

ಅವಳನ್ನು ಅಲ್ಲಿ ಬಿಟ್ಟ ಖಾಸಿಂ ಸರದಾರ ಹೇಳಿದ, ''ಇವಳು ಸ್ವಲ್ಪ ದಿನ ನಿಮ್ಮಲ್ಲಿರಲಿ. ಇಲ್ಲಿ ಸ್ವಲ್ಪ ಆರಾಮ ದೊರೆಯಬಹುದೆಂಬ ನಂಬಿಕೆ ನನ್ನದು !''

ಅವಳನ್ನು ಬಿಟ್ಟು ಬರುವಾಗ ಶಾಕೀರಾ ಹೇಳಿದಳು, ''ಬೇಗ ಬನ್ನಿ... ನಿಮ್ಮನ್ನು ಬಿಟ್ಟು ಇರೋಕಾಗೋಲ್ಲ.''

ಅವನು ತುಟಿಯಂಚಿನಲ್ಲೇ ನಕ್ಕ.

* * *

ಖಾಸಿಂ ಸರದಾರ ಶಾಕೀರಾಳನ್ನು ಬಿಟ್ಟು ಬಂದು ಒಂದು ವಾರ ಹಾಯಾಗಿ ಕಳೆದು. ಬೇಗನೇ ಅವಳಿಗೆ ತಲಾಖ್ ಕಳುಹಿಸಬೇಕು. ತಾನು ನಫೀಸಾಳನ್ನು ಮದುವೆಯಾಗಲು ಇನ್ನೂ ಹತ್ತು ದಿನ ಇದೆ. ಅಷ್ಟರಲ್ಲಿ ಎಲ್ಲವೂ ಮುಗಿದು ಬಿಡಬೇಕು. ತನಗೆ ಸಿಗುವ ಹತ್ತು ಸಾವಿರ ರೂಪಾಯಿಗಳಿಗಿಂತಲು ಮುಖ್ಯ ತನಗೆ ಬರಬಹುದಾದ ಸುಖ ಮತ್ತು ತನಗೊಬ್ಬ ವಾರಸುದಾರ.

ಒಂದು ದಿನ ಬಾಗಿಲಲ್ಲಿ ಯಾರೋ ಬಂದು ನಿಂತಿರುವುದು ಗೋಚರವಾಯಿತು. ನೋಡುತ್ತಾನೆ ಶಾಕೀರಾಳ ಬಾಬಾ. ಆತ ಅವರನ್ನು ಒಳಗೇ ಕರೆಯದೇ ಹೊರಗೆ ಬಂದು ಕೇಳಿದ - ''ಏನು ಬಂದಿರಿ ನೀವು ?''

''ನೀನು ಶಾಕೀರಾಳನ್ನು ಬಿಟ್ಟು ಹೋಗಿ ಹತ್ತು ದಿನವಾಯಿತು. ಆದರೆ ನಿನ್ನ ಸುದ್ದಿಯೇ ಇಲ್ಲ.''

''ನಾನು ಇನ್ನು ಅಲ್ಲಿಗೆ ಬರೋದಿಲ್ಲ !''

ಅವರು ಒಮ್ಮೆಲೆ ಅವಾಕ್ಕಾದರು.

''ಏನು ನೀನು ಹೇಳುತ್ತಿರೋದು ?''

''ನಾನು ಹೇಳುತ್ತಿರೋದೇ ಅದನ್ನು. ನಾನಿನ್ನು ಶಾಕೀರಾಳನ್ನು ಸಾಕಿಕೊಳ್ಳಲಾ ಗುವುದಿಲ್ಲ ! ಅವಳನ್ನು ನೀವಿನ್ನು ನಿಮ್ಮ ಮನೆಯಲ್ಲಿಯೇ ಇಟ್ಟುಕೋಬಹುದು !''

''ಎಂತಹಾ ಮಾತನಾಡುತ್ತೀ ನೀನು ? ನಿನಗೇನು ಸ್ವಯ ಇಲ್ಲವೇ ?''

''ಸ್ವಯ ತಪ್ಪಿರೋದು ನನಗಲ್ಲ, ನಿಮ್ಮ ಮಗಳಿಗೆ.''

''ಏನಾಗಿದೆ ಅವಳಿಗೆ ?''

''ಈ ನಾಲ್ಕು ವರುಷದಲ್ಲಿ ಒಂದು ಪಿಂಡವನ್ನೂ ಹೆತ್ತು ಕೊಡಲಾಗಲಿಲ್ಲ ಅವಳಿಂದ.''

''ಅದು ಅಲ್ಲಾಹನ ನಿಯಮ! ಅದಕ್ಕೆ ಮನುಷ್ಯರಾದ ನಮಗೇನು ಮಾಡಲಾಗುತ್ತೆ ?''

''ಅದೆಲ್ಲಾ ನನಗೆ ಗೊತ್ತಿಲ್ಲ. ನನ್ನದು ಸರದಾರರ ಕುಟುಂಬ. ವಂಶಪಾರಂಪರ್ಯವಾಗಿ ಬೆಳೆದುಬಂದದ್ದು. ಅದು ನಿಮ್ಮ ಮಗಳಿಂದಾಗಿ ಕೊನೆಗೊಳ್ಳೋದು ಬೇಡ. ಅದಕ್ಕಾಗಿ ನಾನು ಇನ್ನೊಂದು ಮದುವೆಯಾಗುತ್ತೇನೆ.''

''ನಿನಗೆ ಹುಚ್ಚು ಹಿಡಿದಿದೆ. ನನ್ನ ಮಗಳ ಸ್ಥಾನದಲ್ಲಿ ನೀನು ಇನ್ನೊಬ್ಬಳನ್ನು ತಂದರೆ ನಿನಗೆ ಬರ್ಖಾತ್ತಾಗೋಲ್ಲ!''

''ನಿಮ್ಮ ಕೆಟ್ಟ ಉಪದೇಶ ನನಗೆ ಬೇಡ! ನಾನಂತೂ ಆ ಹುಡುಗಿಯನ್ನು ಮದುವೆಯಾಗೋದು ಗ್ಯಾರಂಟಿ! ಹಾಗೆಯೇ ಇನ್ನು ಕೆಲವೇ ದಿನಗಳಲ್ಲಿ ನಿಮ್ಮ ಮಗಳಿಗೆ ತಲಾಖ್ ಕಳುಹಿಸುತ್ತೇನೆ,'' ಎಂದವ ಬಾಗಿಲಿಗೆ ಬೀಗ ಹಾಕಿ ಎತ್ತಲೋ ಹೊರಟುಹೋದರು.

ಹೊಸ್ತಿಲಲ್ಲೇ ಅವಾಕ್ಕಾಗಿ ನಿಂತ ಶಾಕೀರಾಳ ಬಾಬಾ ನಂತರ ನಿಧಾನದ ಹೆಜ್ಜೆ ಹಾಕುತ್ತಾ ಅಲ್ಲಿಂದ ಹೊರಟುಹೋದರು.

ನಫೀಸಾ ಹದಿನೆಂಟರ ಹರೆಯದ ಹುಡುಗಿ. ತುಂಬಾ ಚೆಲುವೆ. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವಂತಹ ಸೌಂದರ್ಯ. ಗುಟ್ಟಿನಲ್ಲಿ ಮದುವೆ ನಿಶ್ಚಯವಾದ ನಂತರ ಹೀಗೆ ಪಕ್ಕದೂರಿನ ಅಜ್ಜಿ ಮನೆಗೆ ಹೋದಳು. ಅರವತ್ತೆಂಟರ ಅಜ್ಜಿ ಉಮ್ಮಾತುಮ್ಮ ಕೇಳಿದಳು.

''ಹೌದೇನೇ ನಫೀಸಾ ನಿನಗೆ ಮದುವೆಯಂತೆ ?''

''ಹೌದು ಅಜ್ಜೀ''.

''ಅಯ್ಯೋ ಗಂಡೆ ಮೋಳೆ, ನೀ ಯಾಕೆ ಈ ಮದುವೆಗೆ ಒಪ್ಪಿಕೊಂಡೆ ?''

''ಯಾಕಜ್ಜೀ, ನನಗೇನು ಮದುವೆಯಾಗುವ ಪ್ರಾಯವಾಗಿಲ್ವೆ ?''

''ಅದಕ್ಕಲ್ಲ ಮೋಳೇ, ಅವನಿಗೀಗಾಲೇ ಇನ್ನೊಂದು ಮದುವೆಯಾಗಿದೆ.''

ಅವಳು ಒಮ್ಮೆಲೆ ಬೆಚ್ಚಿದಳು.

''ಇಲ್ಲ ಅಜ್ಜೀ, ನಿನಗೆ ಯರೋ ಸುಳ್ಳು ಹೇಳಿದ್ದಾರೆ. ಅವರನ್ನು ನೋಡಿದಾಗ ಹಾಗೆ ಕಾಣುವುದಿಲ್ಲ. ತುಂಬಾ ಒಳ್ಳೆಯ ವ್ಯಕ್ತಿಯಂತೆ ಕಾಣುತ್ತಾರೆ !''

''ನಿನ್ನ ಪ್ರಾಯವೇ ಹಾಗೆ, ಮೋಳೇ, ಈ ಪ್ರಾಯದಲ್ಲಿ ಹಾಗೇನೇ. ಎಲ್ಲಾ ಹರೆಯದ ಗಂಡಸರು ಚಂದವಾಗೇ ಕಾಣಿಸುತ್ತಾರೆ. ಅವನಿಗೆ ಮದುವೆಯಾಗಿ ನಾಲ್ಕು ವರುಷವಾಗಿದೆ. ನಿನ್ನ ಬಾಬಾನೆ ನನಗೆ ಎಲ್ಲಾ ತಿಳಿಸಿದ. ಇಂತಹ ಚೆಂದುಳ್ಳಿ ಹುಡುಗಿಯನ್ನು ಮದುವೆಯಾದ ಗಂಡನಿಗೆ ಯಾಕೆ ಕೊಡುತ್ತಾನೋ ?''

ನಫೀಸಾ ತಬ್ಬಿಬ್ಬಾದಳು. ಏನೆಲ್ಲಾ ನಡೆದಿದೆ! ತನಗೆ ಎಷ್ಟು ಸುಂದರ

ಕನಸುಗಳಿದ್ದುವು. ಒಂದೇ ಎರಡೇ ? ಹಲವಷ್ಟು, ಎಲ್ಲಾ ಹೆಣ್ಣುಗಳಿಗಿರುವಂತೆ. ಆದರೆ ತಂದೆ ಎಂತಹ ತಪ್ಪು ಮಾಡುತ್ತಿದ್ದಾರೆ. ತಾನು ಮದುವೆಯಾಗಿ ಹೋದರೆ ಆ ಮೊದಲ ಹೆಣ್ಣಿನ ಗತಿ ಏನಾಗಬಹುದು. ಆಗುವುದೇನು ? ಆಕೆ ಈತನಿಂದ ತಲಾಖ್‌ಗೊಳಪಟ್ಟು ಕಣ್ಣೀರು ಸುರಿಸುತ್ತಾ ಸಾಯಬೇಕು. ಇದಕ್ಕೆ ತಾನು ಅವಕಾಶ ಕೊಡಲೇಬಾರದು ! ಈ ಮದುವೆಯನ್ನು ನಿಲ್ಲಿಸಲೇಬೇಕು. ಆಕೆ ದೃಢ ನಿರ್ಧಾರ ತಾಳಿದಳು.

*　　　*　　　*

ನಫೀಸಾಳನ್ನು ಮದುವೆಯಾಗುವ ಉತ್ಕಟೇಚ್ಛೆ ಇಟ್ಟುಕೊಂಡು ಮನೆಗೆ ಬಂದ ಖಾಸಿಂಗೆ ಹದಿನೆಂಟು ಮೈಲಿ ದೂರದ ನಫೀಸಾಳ ತಂದೆಯಿಂದ ಕಾಗದ ಬಂದಿತ್ತು:

''ಖಾಸಿಂ ಸರದಾರನಿಗೆ,

ನಿನ್ನ ಎರಡನೆಯ ಹೆಂಡತಿಯಾಗಲು ನಫೀಸಾ ಒಪ್ಪುವುದಿಲ್ಲ. ಅವಳಿಗೆ ಬೇರೆ ಮದುವೆ ನಿಶ್ಚಯವಾಗಿದೆ. ನೀನು ಮೊದಲ ಹೆಂಡತಿಗೆ ದ್ರೋಹ ಬಗೆಯದೇ ಅವಳೊಂದಿಗೇ ಸಂಸಾರ ನಡೆಸು...''

ಖಾಸಿಂ ಸರದಾರನಿಗೆ ಕಣ್ಣು ಕತ್ತಲಿಟ್ಟು ಬಂತು. ಅಲ್ಲೇ ಕುಸಿದ. ಕೈಯಲ್ಲಿದ್ದ ಪತ್ರ ಗಾಳಿಯಲ್ಲಿ ಎಲ್ಲೋ ಹಾರಿಹೋಯಿತು.

## 16 ಪರಿವರ್ತನೆ

ನಂಬಿಕೊಂಡಂತೆ ಬದುಕು ನಡೆಯುವುದಿಲ್ಲ. ಅದಕ್ಕೆ ಬೇರೆ ಬೇರೆ ತಿರುವುಗಳಿರುತ್ತವೆ.

ನಾನು ಅವರ ಎದುರಿನಲ್ಲಿ ಕುಳಿತಿದ್ದೆ.

ಎತ್ತರವಾದ ಸಿಂಹಾಸನದ ಮೇಲೆ ಕುಳಿತಿದ್ದವರು ನನ್ನನ್ನೇ ನೋಡುತ್ತಿದ್ದರು. ಅವರ ದೇದೀಪ್ಯಮಾನವಾದ ಕಂಗಳಲ್ಲಿ ಉಜ್ವಲ ಬೆಳಕಿತ್ತು. ತುಟಿಗಳಲ್ಲಿ ಮಂದಹಾಸವಿತ್ತು, ಮುಖದಲ್ಲಿ ಬಿಳೀ ಗಡ್ಡವಿತ್ತು.

ನಾನು ಅವರನ್ನು ಏನೋ ಕೇಳಬೇಕೆಂದಿದ್ದೆ. ಒಂದು ಕಠಿಣ ಪ್ರಶ್ನೆ ಬಹುಶಃ ಅದು ಅವರಿಗೆ ಕೋಪ ಅಥವಾ ಉದ್ರೇಕವುಂಟುಮಾಡಬಹುದು. ಅವರನ್ನು ಉದ್ರೇಕಗೊಳಿಸುವ ಇಚ್ಛೆ ನನ್ನದಲ್ಲ. ಅವರು ಮಾಡುತ್ತಿರುವ ತಪ್ಪನ್ನು ಎತ್ತಿ ತೋರಿಸಿ ಅವರನ್ನು ಸರಿಪಡಿಸುವುದು ನನ್ನ ಉದ್ದೇಶವಾಗಿತ್ತು.

ಅವರು ನನ್ನನ್ನೇ ನೋಡುತ್ತಿದ್ದರು. ನಾನು ಕಠಿಣವಾದ ಆ ದಿಟ್ಟಿಗೆ ಸೋತು ನನ್ನ ದೃಷ್ಟಿಯನ್ನು ಹೊರಗೆ ಚೆಲ್ಲಿದೆ. ದೂರದಲ್ಲಿ ನದಿಯೊಂದು ಹರಿಯುತ್ತಿತ್ತು. ಆ ನದಿಯ ನೀರಲ್ಲಿ ದೋಣಿಯೊಂದು ಮುಂದೆ ಸಾಗುತ್ತಿತ್ತು. ಕಟ್ಟುಮಸ್ತಿನ ಯುವ ಅಂಬಿಗ ಹಾಡುತ್ತ ದೋಣಿ ನಡೆಸುತ್ತಿದ್ದ. ನದಿಯ ಮೇಲಿನಿಂದ ತೀಡಿ ಬಂದ ತಂಗಾಳಿ ನನ್ನನ್ನು ಎಚ್ಚರಿಸಿತು.

''ನೀವು ಇನ್ನೊಂದು ಮದುವೆಯಾಗುತ್ತೀರಿ...? ಕೊನೆಗೂ ನಾನು ಪ್ರಶ್ನಿಸಿದೆ. ಅವರು ನಿರಾಳವಾಗಿ ಉಸಿರೆಳೆದುಕೊಂಡರು. ಕಾಲುಗಳನ್ನು ಮುಂದು ಚಾಚಿ ಸಿಂಹಾಸನದಿಂದ ಎದ್ದು ನನ್ನ ಬಳಿ ಬಂದು ಹೆಗಲ ಮೇಲೆ ಕೈಯಿರಿಸಿ ಹೇಳಿದರು.

''ಹೌದು, ಆದರೆ ಅದರಲ್ಲಿ ತಪ್ಪೇನೀಗ...?''

ನಾನು ಕುಸಿದು ಬೀಳುವವನಿದ್ದೆ. ಆದರೂ ಸಾವರಿಸಿಕೊಂಡು ಕೇಳಿದೆ.

''ನಿಮಗೀಗ ವಯಸ್ಸೆಷ್ಟಾಗಿರಬಹುದು ?''

''ಅರವತ್ತು'' ನೇರವಾಗಿ ತಡವರಿಸದೆ ಹೇಳಿದರವರು. ''ವಯಸ್ಸು ವಿವಾಹಕ್ಕೆ ಎಂದೂ ಅಡ್ಡಿಯಾಗೊಲ್ಲ.''

''ಆದರೂ ಅದು ತಪ್ಪು'' ನಾ ಹೇಳಬೇಕೆಂದಿದ್ದನ್ನು ಧೈರ್ಯವಾಗಿ ಹೇಳತೊಡಗಿದೆ.

''ನಿಮಗೆ ಗೊತ್ತಿಲ್ಲದಿರಬಹುದು. ನೀವು ಮದುವೆಯಾಗುವ ಈ ಹೆಣ್ಣು ನಿಮ್ಮ ಮೊಮ್ಮಗಳ ಪ್ರಾಯದವಳು.''

''ಹೌದು ಅದು ನನಗೆ ತಿಳಿದಿದೆ. ಇದರಲ್ಲಿ ನನ್ನ ಬಲಾತ್ಕಾರವೇನಿಲ್ಲ. ಆಕೆಯ ಹೆತ್ತವರೇ ಇದಕ್ಕೆ ಸಂಪೂರ್ಣ ಸಮ್ಮತಿ ನೀಡಿದ್ದಾರೆ. ಅದೂ ಅಲ್ಲದೆ ಒಬ್ಬ ಮುಸ್ಲಿಂಗೆ ನಾಲ್ಕು ಮಂದಿ ಹೆಣ್ಣುಗಳನ್ನು ವರಿಸುವ ಸಾಧ್ಯತೆ ಇದೆ''.

''ಇದು ಸಾಧ್ಯ - ಅಸಾಧ್ಯತೆಯ ಪ್ರಶ್ನೆಯಲ್ಲ. ಒಂದು ಹೆಣ್ಣಿನ ಬದುಕಿನ ಪ್ರಶ್ನೆ ಮತ್ತು ಈ ದುನಿಯಾದಲ್ಲಿ ರಾತ್ರಿ ಹಗಲುಗಳನ್ನು ಕಳೆಯಬೇಕಾದ ಅವಳ ಪರಿಸ್ಥಿತಿಯ ಪ್ರಶ್ನೆ.''

''ನೋಡು, ನೀನು ನನಗೆ ಯಾವ ರಕ್ತಸಂಬಂಧಿಯೂ ಅಲ್ಲ. ಈ ಜಮಾತಿನ ನನ್ನಂತೆಯೇ ಇರುವ ಒಬ್ಬ ವ್ಯಕ್ತಿ ನಿನ್ನ ಮಾತಿನಿಂದ ನನಗೆ ಕೆಟ್ಟ ಕೋಪ ಬರಬೇಕಿತ್ತು. ಆದರೆ ನನ್ನಂತಹ ವ್ಯಕ್ತಿಗೆ ಅದು ಸಾಧುವಲ್ಲ. ನಾನು ಈಗಾಗಲೇ ಎರಡು ಮದುವೆಯಾಗಿದ್ದೇನೆ. ಅವರಿಬ್ಬರೂ ಜೀವಂತವಾಗಿದ್ದಾರೆ. ಅವರು ಎಂದೂ ನನ್ನ ಬಗ್ಗೆ ಮುನಿಸಿಕೊಂಡವರಲ್ಲ.''

''ಆದರೆ ಕಾಕ, ನೀವೆಂದಾದರೂ ಅವರಿಗೆ ಮಕ್ಕಳ ಫಲವನ್ನು ನೀಡಲು ಸಾಧ್ಯವಾಯಿತೇ, ನಿಮಗೊಂದು ಮಗುವೇನಾದರೂ ಹುಟ್ಟಿದೆಯೇ ? ಇಲ್ಲ. ಒಬ್ಬಳು ಹೆಣ್ಣು ತನ್ನ ಬಾಳಿನಲ್ಲಿ ಬಯಸುವುದು ತಾಯ್ತನವನ್ನು. ಅದು ಈಡೇರದಿದ್ದರೆ ಅವಳು ಮಾನಸಿಕವಾಗಿ ಎಷ್ಟು ನೊಂದುಕೊಳ್ಳುತ್ತಾಳೆ ಎಂಬುವುದರ ಅರಿವು ನಿಮಗಾಗದು.''

ಅವರು ಭಾರವಾಗಿ ಉಸಿರೆಳೆದುಕೊಂಡು ಮತ್ತೆ ಆ ಸಿಂಹಾಸನವನ್ನು ಏರಿ ಕುಳಿತರು. ಬಹುಶಃ ನನ್ನ ಮಾತಿನಿಂದ ಅವರು ಬೆವೆತಿದ್ದರು. ಹೆಗಲಿನಲ್ಲಿದ್ದ ಶಾಲನ್ನು ತೆಗೆದು ಮುಖವನ್ನು ಒರೆಸಿದರು. ದೇದೀಪ್ಯಮಾನವಾಗಿ ಬೆಳಗುತ್ತಿದ್ದ ಕಂಗಳು ಒಮ್ಮೆಲೆ ಕಾಂತಿಹೀನವಾದವು. ಏದುಸಿರುಬಿಡುತ್ತಾ ಅವರು ಮಾತಿಗಾಗಿ ತಡವರಿಸಿದರು.

ಬಹುಶಃ ಅವರು ಜ್ಞಾಪಿಸಿಕೊಳ್ಳಲು ಯತ್ನಿಸಿರಬಹುದು. ತಮ್ಮ ಇಬ್ಬರು ಹೆಂಡತಿಯಂದಿರ ಬಗ್ಗೆ. ಅಲೀಮಮ್ಮ ಮತ್ತು ಭೀಫಾತುಮ್ಮರ ಸುಖ ಎಂದರೇನೆಂದು ಅರಿಯದವರು. ಗಂಡನ ಗತ್ತು - ಗೈರತ್ತಿಗೆ ಹೆದರಿ ಬೆರಗಾಗಿ ಸದಾಕಾಲ ತಮ್ಮ ಬೇಗುದಿಯನ್ನು ನುಂಗಿಕೊಂಡು ಜೀವನ ಕಳೆಯುತ್ತಿದ್ದರು. ದಿನಕ್ಕೊಂದು ಪಾಳಿ ಒಬ್ಬೊಬ್ಬರಿಗೆ ಗಂಡನ ಸನಿಹ. ರಾತ್ರಿಯೇನೋ ದೇಹದಲ್ಲಿ ಬಿಸಿ ಹತ್ತಿಕೊಳ್ಳುತ್ತಿತ್ತು. ಬಿಸಿಯ ಕಾವು ಏರುತ್ತಿತ್ತು. ಗಂಡನ ಅಪ್ಪುಗೆಯಲ್ಲಿ ಕಾವು ಇಳಿದ ಮೇಲೆ ಫಲಿತಾಂಶ ಸೊನ್ನೆ. ಕಾಲ ಚಲಿಸಿದಂತೆ ಎಷ್ಟೋ ರಾತ್ರಿಗಳು ಬೆವರು ಹುಟ್ಟಿ, ಬಯಕೆ ಬತ್ತಿದರೂ ಗರ್ಭದಲ್ಲೊಂದು ಕುಡಿ ಮೂಡದೆ ನಿರಾಶರಾಗಿ ತಮ್ಮ ಬದುಕೇ ಇಷ್ಟೇ ಎಂದು ಹಲುಬಿ ಅದರಲ್ಲೇ ಸಂತೃಪ್ತರಾದವರು ಅವರಿಬ್ಬರು.

ಸಿಂಹಾಸನ ತೂಗಾಡುತ್ತಿತ್ತು. ಅವರು ಕಣ್ಣು ಮುಚ್ಚಿದರು. ನಾನು ಎದ್ದು ನಿಂತೆ.

''ನೀವು ಇನ್ನೊಂದು ತಪ್ಪಿಗೆ ಅವಕಾಶ ಕೊಡಬೇಡಿ.''

ನಾನು ಅವರನ್ನು ಹಾಗೇ ಬಿಟ್ಟು ಹೊರಟು ಬಂದೆ.

* * *

ಈ ಪ್ರಕೃತಿಯಲ್ಲಿ ಮಾನವ ಸೃಷ್ಟಿ ಶ್ರೇಷ್ಠವಾದುದು. ಮನುಷ್ಯ ತನ್ನ ಬಾಳನ್ನು ಸಾರ್ಥಕಪಡಿಸಿಕೊಂಡಾಗಲೇ ಆತನ ಬದುಕಿಗೊಂದು ಅರ್ಥ. ವ್ಯಕ್ತಿ ತನ್ನ ಬದುಕನ್ನು ಹೆಚ್ಚು ಪ್ರೀತಿಸುತ್ತಾನೆ. ತನ್ನ ಹುಟ್ಟನ್ನು ಪ್ರಯೋಜನಕಾರಿಯನ್ನಾಗಿ ಮಾಡಲು ಯತ್ನಿಸುತ್ತಾನೆ.

ನಾನು ಯೋಚಿಸತೊಡಗಿದೆ. ಅವರು ತನ್ನ ಬದುಕಿನಲ್ಲಿ ಮೂರನೆ ಮದುವೆಯಾಗಿ ಹಾತೊರೆಯುತ್ತಿದ್ದರು. ಮತ್ತೊಂದು ದೊಡ್ಡ ತಪ್ಪನ್ನು ಮಾಡಲು ಯತ್ನಿಸುತ್ತಿದ್ದರು. ಪ್ರಾಯ ಮೀರಿದ ಇಂದೋ ನಾಳೆಯೋ ಮೃತ್ಯುವಶವಾಗ ಬಹುದಾದ ವ್ಯಕ್ತಿಗೆ ಮತ್ತೊಂದು ಮದುವೆ. ಅದೂ ಸುಖದ ನಿರೀಕ್ಷೆಯಲ್ಲಿರುವ ಸಣ್ಣ ಬಾಲೆಯೊಡನೆ. ಹೆಣ್ಣು ಸದಾಕಾಲ ಸುಖವನ್ನು ಬಯಸುತ್ತಾಳೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಆತ್ಮತೃಪ್ತಿ ಇದರಲ್ಲಿ ಸಿರಿ ಸಂಪತ್ತು ಬಯಸೊಲ್ಲ. ಬೆಳ್ಳಿ ಬಂಗಾರ ಬಯಸೊಲ್ಲ. ಬಲಿಷ್ಠ ಗಂಡನೊಬ್ಬನ ಆಸರೆಯಲ್ಲಿ ಸುಂದರವಾದ ಸಂಸಾರ ಸುಖವನ್ನು ಕಾಣಲು ಯತ್ನಿಸುತ್ತಾಳೆ.

ನಾನು ಆ ಹುಡುಗಿಯನ್ನು ನೋಡಿರಲಿಲ್ಲ. ಯಾರೋ ಹೇಳುವುದನ್ನು ಕೇಳಿದ್ದೆ. ಇನ್ನೂ ಜಗತ್ತಿನ ಬಗ್ಗೆ ಸರಿಯಾಗಿ ತಿಳಿಯದ ಹುಡುಗಿ. ಕೆನ್ನೆಗಳಲ್ಲಿ ಕೆಂಪು ಈಗ ತಾನೆ ಹುಟ್ಟುತ್ತಿರುವ ಹುಡುಗಿ. ನನಗೆ ತಿಳಿದಿತ್ತು ಈಕೆ ಮೂವರು ಹುಡುಗಿಯರ ಸಂಸಾರದಲ್ಲಿ ಕೊನೆಯವಳು.

ನಾನು ಅದೇ ಗುಂಗಿನಲ್ಲಿ ತಲೆಕೆಡಿಸಿಕೊಂಡು ಮಸೀದಿಯ ಕಡೆ ಹೆಜ್ಜೆ ಹಾಕಿದೆ. ಕತ್ತಲು ಬೆಳಕಿನೊಂದಿಗೆ ಚೆಲ್ಲಾಟವಾಡುತ್ತಿತ್ತು. ಆಗೊಮ್ಮೆ ಈಗೊಮ್ಮೆ ಮಿಂಚುತ್ತಿರುವ ಮಿಂಚು ಗುಡುಗುಗಳ ಮಧ್ಯೆ ನಾನು ಮಸೀದಿಯನ್ನು ಸೇರಿಕೊಂಡೆ. ನಾನು ಅಲ್ಲಿ ಸೇರಿಕೊಳ್ಳುವ ಹೊತ್ತಿಗೆ ವಿದ್ಯುತ್ ಹೋಗಿತ್ತು. ಮೌಲ್ವಿಗಳು ಮೊಂಬತ್ತಿಗೆ ಬೆಳಕು ಹಚ್ಚುವ ಯತ್ನ ನಡೆಸುತ್ತಿದ್ದರು.

ನಾನು ಕತ್ತಲಲ್ಲೇ ಅವರಿಗೆ ವಂದಿಸಿದೆ.

ಮೊಂಬತ್ತಿ ಬೆಳಕು ಚೆಲ್ಲಿತು.

ನಾನು ಅವರೆದುರಾಗಿ ಕುಳಿತುಕೊಂಡೆ. ಸ್ವಲ್ಪ ಹೊತ್ತು ಅಲ್ಲಿ ಮೌನ ನೆಲೆಸಿತು. ಮಾತನ್ನು ಹೇಗೆ ಪ್ರಾರಂಭಿಸಬೇಕೆಂಬುದೇ ತಿಳಿಯಲಿಲ್ಲ. ಅವರು ನನ್ನನ್ನೇ ದಿಟ್ಟಿಸುತ್ತಿದ್ದರು. ಹಲವು ವರುಷಗಳಿಂದ ಈ ಮಸೀದಿಯಲ್ಲೇ ತನ್ನ ಆಯಸ್ಸನ್ನು ಸವೆಸಿದ್ದರು.

''ಅದಂಕಾಕ ಇನ್ನೊಂದು ಮದುವೆಯಾಗುತ್ತಾರೆ ?''

''ಹೌದು ಅದು ನನಗೆ ತಿಳಿದಿದೆ. ಅವರಿಗೆ ಈ ಪ್ರಾಯದಲ್ಲಿ ಏನು ಹುಚ್ಚು ಬುದ್ಧಿಯೋ ಏನೋ. ತನ್ನ ಮೊಮ್ಮಗಳ ಪ್ರಾಯದವಳ ಬದುಕಿನೊಂದಿಗೆ ಚೆಲ್ಲಾಟವಾಡಲು ಯತ್ನಿಸಿ ಆ ಮುಗ್ಧ ಹೆಣ್ಣಿನ ಬಾಳನ್ನೇ ಹಾಳುಮಾಡುತ್ತಾನೆ.''

''ನೀವು ಈ ಜಮಾತಿನ ಗೌರವಾನ್ವಿತ ವ್ಯಕ್ತಿಗಳು. ಅವರಿಗೆ ನೀವು ಒಂದು ಮಾತು ಹೇಳಬಹುದು.''

''ಅದು ಆಗೋ ಮಾತಲ್ಲ. ಅದು ಬಲಾತ್ಕಾರದ ಮದುವೆ ಅಲ್ಲ. ಆ ಹೆಣ್ಣಿನ ತಂದೆ ಇದಕ್ಕೆ ಸಂಪೂರ್ಣ ಒಪ್ಪಿದ್ದಾರೆ.''

'ಪರಿಸ್ಥಿತಿ ಹಾಗೇ ಇರಬಹುದು. ಆದರೆ ಆ ಹುಡುಗಿಯ ಮನಸ್ಸಿನಲ್ಲಿ ಏನಿದೆ ಎಂದು ಯಾರಿಗೆ ಗೊತ್ತು ?''

ಅವರು ವಿಷಾದದ ನಗೆ ನಕ್ಕು ಹೇಳಿದರು.

''ಯಾವ ಹೆಣ್ಣು ತಾನೇ ಇಂತಹ ಮುದುಕನನ್ನು ಒಪ್ಪಿಯಾಳು ?''

''ನಿಮ್ಮಿಂದ ಇದಕ್ಕೊಂದು ಪರಿಹಾರ ಹುಡುಕಲು ಸಾಧ್ಯವಿಲ್ಲವೇ ?''

ಅವರು ಕುಳಿತಲ್ಲಿಂದ ಎದ್ದರು.

''ಬಾ ನಮಾಜಿಗೆ ಹೊತ್ತಾಯ್ತು'' ಅವರು ನೀರಿನ ಬಳಿಗೆ ಹೋಗಿ ವಝೂ ಮಾಡತೊಡಗಿದರು. ನಾನು ಕೇಳಿದೆ ''ನನ್ನ ಪ್ರಶ್ನೆಗೆ ಉತ್ತರ.''

''ಉತ್ತರ ನನ್ನಲಿಲ್ಲ. ಉತ್ತರ ಅದಂಕಾಕನಲ್ಲಿದೆ.''

ನಮಾಜು ಮುಗಿಸಿ ಹೊರಬಂದೆ.

* * *

ಇಂತಹ ಸಂದಿಗ್ಧ ಸಮಯದಲ್ಲೇ ನನಗೆ ಅಕಸ್ಮಾತಾಗಿ ಊರಿಗೆ ಹೋಗಬೇಕಾಗಿ ಬಂತು. ಮನುಷ್ಯ ಯೋಚಿಸಿದಂತೆ ಒಂದೂ ನಡೆಯೋದಿಲ್ಲ. ಬಾಳಿನಲ್ಲಿ ಕೆಲವು ಆಕಸ್ಮಿಕಗಳು ನಡೆದುಬಿಡುತ್ತವೆ. ಘಟನೆಗಳು ಮನುಷ್ಯನ ಯೋಚನೆಗೆ ಸಿಲುಕದೆ ಜಾರಿಹೋಗುತ್ತವೆ. ಒಂದೆರಡು ದಿನಕ್ಕೆಂದು ಊರಿಗೆ ಹೋದವ ಮರಳಲು ಹತ್ತು ದಿನಗಳೇ ಹಿಡಿಯಿತು.

ಆ ಹತ್ತು ದಿನಗಳಲ್ಲಿ ಇಲ್ಲಿ ಏನು ನಡೆಯಬಾರದಿತ್ತೋ ಅದು ನಡೆದುಹೋಯ್ತು ನನ್ನ ನಿರೀಕ್ಷೆಗೂ ಮೀರಿ ಅದಂಕಾಕ ಆ ಹುಡುಗಿಯನ್ನು ನಿಖಾಹವಾಗಿಬಿಟ್ಟರು. ನಾನು ಯಾವುದು ನಡೆಯಬಾರದೆಂದು ನಿರ್ಧರಿಸಿದ್ದೇನೋ ಅದು ನಡೆದುಹೋಗಿತ್ತು.

ನಾನು ನನ್ನ ಕೋಣೆಯಲ್ಲೇ ಕುಳಿತು ಆ ದೊಡ್ಡ ಮನೆಯತ್ತ ದಿಟ್ಟಿಸಿ ನೋಡುತ್ತಿದ್ದೆ. ಗಾಢಾಂಧಕಾರವಾದ ಕತ್ತಲಲ್ಲಿ ಆ ಮನೆಯಿಂದ ಹೊರಟು ಬೆಳಕು ನನ್ನ ಕಣ್ ಚುಚ್ಚತೊಡಗಿತ್ತು. ಆ ಕೋಣೆಯ ಕತ್ತಲಲ್ಲಿ ಕುಳಿತು ಆ ತರುಣಿ

ನಝೀಮಾ ಇನ್ನೊಂದು ಕ್ಷಣದಲ್ಲಿ ತನ್ನ ಬಳಿ ಬರುವ ಆ ಮುದುಕನ ಬಗ್ಗೆ ಯೋಚಿಸುತ್ತಿರಬಹುದು. ತನ್ನನ್ನು ಅಪ್ಪಿಕೊಂಡು ತನ್ನನ್ನು ಬಲವಾದ ಆಸರೆಯಲ್ಲಿರಿಸಿ ಕೊಳ್ಳಲು ಯುವಕನೊಬ್ಬ ಬರುವ ಕನಸಿನಲ್ಲಿರಬಹುದು. ಆದರೆ ಅವಳಿಗೆ ಗೊತ್ತು ತನ್ನ ಯೋಚನೆ ತಪ್ಪು. ತಾನೊಬ್ಬಳು ಮುದುಕನ ಹೆಂಡತಿಯೆಂದು. ಏನೆಲ್ಲಾ ಕನಸುಗಳಿರ ಬಹುದು ಆ ಮುಗ್ಧ ಬಾಲೆಯ ಯೋಚನೆಯಲ್ಲಿ.

ನಾನು ಹಾಗೆಯೇ ಕುಳಿತಿದ್ದೆ. ಆ ಮನೆಯ ಬೆಳಕನ್ನು ನೋಡುತ್ತಾ ಅದಂಕಾಕರ ಮೊದಲ ಇಬ್ಬರು ಪತ್ನಿಯರು ಈಗ ಗಂಡನ ಕೋಣೆ ಬಿಟ್ಟು ಹೊರಗೆ ಎಲ್ಲೋ ಮಲಗಿರಬಹುದು. ಆ ಹೆಂಗಸರೂ ತಮ್ಮ ಮಗಳ ಪ್ರಾಯದ ಹುಡುಗಿಯನ್ನು ತಮ್ಮ ಗಂಡನಿಗೆ ಮದುವೆ ಮಾಡಿಸುವಲ್ಲಿ ಎಷ್ಟು ಉತ್ಸುಕರಾಗಿರಬಹುದು. ಅಥವಾ ಗಂಡನ ದರ್ಪಕ್ಕೆ ಹೆದರಿ ಏನೂ ಮಾಡಲಾಗದೆ ಮೂಕರಾಗಿ ಉಳಿದುಬಿಟ್ಟಿರಬಹುದು. ಸುಮಾರು ಹೊತ್ತು ಬೆಳಗುತ್ತಿದ್ದ ಬಂಗ್ಲೆಯಲ್ಲಿನ ಬೆಳಕು ಮತ್ತೊಂದು ಕ್ಷಣದಲ್ಲಿ ನಂದಿ ಹೋಯ್ತು. ಆ ಕ್ಷಣದಲ್ಲಿ ಆ ಮುದುಕ ಆ ತರುಣಿಯ ಬೆತ್ತಲಲ್ಲಿ ಕೈಯಾಡಿಸುತ್ತಿರಬಹುದು.

ನಾನು ಇನ್ನೇನು ದೀಪ ಆರಿಸಿ ಮಲಗುವವನಿದ್ದೆ. ಯಾರೋ ಬಾಗಿಲಲ್ಲಿ ಬಂದು ನಿಂತ. ಬಂದಾತ ಅದಂಕಾಕನ ಸಾಕು ಮಗ ಸಲೀಂ. ಅವನು ಯೋಚನಾ ಗ್ರಸ್ತನಾಗಿದ್ದ. ಇಪ್ಪತ್ತೆರಡರ ಕುಡಿಮೀಸೆಯ ಹುಡುಗ. ಬಾಗಿಲಲ್ಲೇ ನಿಂತವನನ್ನು ಒಳ ಕರೆದೆ. ಒಳ ಹೆಜ್ಜೆ ಇರಿಸಿ ಬಂದು ನನ್ನೆದುರಿನಲ್ಲೆ ಕುಳಿತ.

ಆತ ಹೇಳಿದ.

''ಅಬ್ಬಾಜಾನ್ ಕೊನೆಗೂ ತನ್ನ ಹಠ ಸಾಧಿಸಿ ಆ ಹುಡುಗಿಯ ಬಾಳನ್ನು ಹಾಳು ಮಾಡಿಬಿಟ್ಟರು.''

''ಹೌದು ಸಲೀಂ. ಅದನ್ನು ನನ್ನ ನಿನ್ನಂತವರಿಂದ ತಡೆಯಲು ಸಾಧ್ಯವಿರಲಿಲ್ಲ.''

''ಅಂಕಲ್ ನೀವು ನೋಡಿದ್ದೀರಾ ಆ ಹುಡುಗಿಯನ್ನು? ಆಕೆಯನ್ನು ನೋಡುವಾಗ ಕರುಳು ಕಿತ್ತುಬರುತ್ತದೆ. ಆ ಕೋಮಲ ಮುದ್ದು ಮುಖದಲ್ಲಿ ಆ ಎರಡು ಮುಗ್ಧವಾದ ಕಂಗಳು. ಎಷ್ಟು ಸೊಗಸು ಆ ಕಂಗಳು. ಅವಳನ್ನು ನೋಡುತ್ತಿದ್ದರೆ ನನಗೆ ಅವಳು ಅಬ್ಬಾಜಾನ್‌ನ ಪತ್ನಿಯೆಂದು ಒಪ್ಪಿಕೊಳ್ಳಲು ಕಷ್ಟವಾಗುತ್ತದೆ. ಇನ್ನೂ ಸುಂದರ ಕನಸಿನಲ್ಲಿ ತೇಲಾಡುತ್ತಿರುವ ಹುಡುಗಿ. ಬದುಕಿನ ಬಗ್ಗೆ ಸುಂದರ ಕನಸುಗಳನ್ನು ಹೆಣೆದುಕೊಳ್ಳುತ್ತಿರುವ ಹುಡುಗಿ.''

''ಸಲೀಂ ನಾನು ನೋಡಿಲ್ಲ ಆ ಹುಡುಗಿಯನ್ನು... ಆದರೂ ಆಕೆಯ ಸ್ಥಿತಿಯನ್ನು ನಾ ಕಲ್ಪಿಸಿಕೊಳ್ಳಬಲ್ಲೆ. ಅವಳು ಹೀಗೆ ಉಳಿದುಬಿಟ್ಟರೆ ದುರಂತದ ಕತೆಯಾಗುತ್ತಾಳೆ.''

''ಅವಳ ಕಣ್ಣೀರನ್ನು ನೋಡುತ್ತಾ ನನಗೆ ಆ ಮನೆಯಲ್ಲಿ ಇರಲು ಸಾಧ್ಯವಾಗುತ್ತಿಲ್ಲ. ಅವಳನ್ನು ಚಿಕ್ಕಮ್ಮ ಎಂದು ಕರೆಯುವುದಕ್ಕೆ ನನ್ನಿಂದ ಆಗುತ್ತಿಲ್ಲ.''

ನಾನು ಮೌನಿಯಾದೆ. ನನ್ನಿಂದ ಏನೂ ಮಾತಾಡುವುದು ಸಾಧ್ಯವಾಗಲಿಲ್ಲ. ಇದಕ್ಕೆ ಪರಿಹಾರ ಏನು ? ನಾನು ಅವನನ್ನೇ ನೋಡುತ್ತಾ ನಿಂತೆ.

''ಆ ಮುದುಕನ ಕತ್ತು ಹಿಸುಕಿ ಕೊಲೆ ಮಾಡಿದರೆ ಹೇಗೆ ?'' ನಾ ತಬ್ಬಿಬ್ಬಾದೆ. ನನ್ನ ಮೈಯಲ್ಲಿ ಬೆವರು ಹುಟ್ಟಿತು.

''ಹಾಗೆ ವಿಪರೀತವಾದುದನ್ನು ಮಾಡಬೇಡ. ಅವರಿಗೆ ತಪ್ಪಿನ ಬಗ್ಗೆ ಅರಿವಾದೀತು.''

''ಅವರು ತನ್ನ ತಪ್ಪನ್ನು ಅರಿತುಕೊಳ್ಳುವಷ್ಟರಲ್ಲಿ ಅವಳ ಅಂತ್ಯವಾಗಿರುತ್ತದೆ.''

''ಅದಕ್ಕೆ ನಿನ್ನಿಂದ ಏನಾದರೂ ಮಾಡಲು ಸಾಧ್ಯವಾದೀತೇ ?''

''ಸಾಧ್ಯವಿದೆ. ನಾನು ಅವಳನ್ನು ಆ ಮನೆಯಿಂದ ದೂರವಾಗುವಂತೆ ಮಾಡುತ್ತೇನೆ.''

''ಅದರಿಂದ ಏನೂ ಪ್ರಯೋಜನವಿಲ್ಲ. ಆ ಹುಡುಗಿಯ ಬಾಳು ಎಲ್ಲೋ ಹಾಳಾಗುವುದು ಬೇಡ.''

ಅವನಿಗೆ ಏನೂ ಹೇಳಲು ತೋಚಲಿಲ್ಲ. ತೀರಾ ಮೌನಿಯಾದ. ರಾತ್ರಿ ತುಂಬಾ ಮೀರುತ್ತಿತ್ತು. ನನಗೆ ನಿದ್ರೆ ಅವರಿಸುತ್ತಿತ್ತು. ಅದು ಅವನಿಗೆ ತಿಳಿಯಿತೋ ಏನೋ. ''ನಾನು ಆ ಹುಡುಗಿಯ ಬಗ್ಗೆ ಒಂದು ನಿರ್ಧಾರಕ್ಕೆ ಬರುತ್ತೇನೆ. ನೀವು ನಿದ್ರಿಸಿ'' ಎಂದವ ಮೆಟ್ಟಿಲಿಳಿದು ಕತ್ತಲಲ್ಲಿ ಮಾಯವಾದ.

* * *

ನಾನು ಆ ದೊಡ್ಡ ಮನೆಯ ಹಾದಿಯಲ್ಲಿದ್ದೆ. ಹೊರ ಹಜಾರದ ತೂಗು ಮಂಚದಲ್ಲಿ ಅದಂಕಾಕ ತೂಗುತ್ತಿದ್ದರು. ತೂಗುವುದನ್ನು ನಿಲ್ಲಿಸಿ, ''ಬಾ.. ಇಲ್ಲಿ ಕುಳಿತುಕೋ'' ಎಂದು ತೂಗುಮಂಚದಲ್ಲಿ ಜಾಗ ತೋರಿಸಿದರು. ನಾನು ಕುಳಿತು ಕೊಂಡೆ. ನನ್ನ ದೃಷ್ಟಿ ಒಳಹರಿಯಿತು. ಕಿಟಕಿಯಲ್ಲಿ ಒಂದು ಮುಖ ಮಿಂಚಿತು. ಸುಂದರವಾದ ಮುಖ, ಬೊಗಸೆಕಂಗಳು. ಬಹುಶಃ ನಝೀಮಾಳದ್ದಿರಬಹುದು. ನನ್ನನ್ನು ಕಂಡಾಕ್ಷಣ ಕಿಟಕಿಯಿಂದ ಆ ಮುಖ ಮರೆಯಾಗಿಹೋಯ್ತು.

ಅವರು ಹೇಳಿದರು.

''ನನ್ನ ಮದುವೆಯ ಸಮಯದಲ್ಲಿ ನೀನು ಊರಲ್ಲಿ ಇರಲಿಲ್ಲ.''

''ಕೊನೆಗೂ ನಿಮ್ಮ ಹಠ ಸಾಧಿಸಿಯೇಬಿಟ್ಟಿರಿ.''

ಅವರು ಒಮ್ಮೆ ಬಾಗಿಲತ್ತ ದೃಷ್ಟಿ ಹರಿಸಿ ಜೋರಾಗಿ ನಕ್ಕರು. ತೂಗುಮಂಚ ಒಮ್ಮೆ ಜೋರಾಗಿ ತೂಗಾಡಿತು.

''ನನಗೀಗ ಎಷ್ಟು ಖುಷಿಯಾಗಿದೆ ಗೊತ್ತಾ. ಆ ಹುಡುಗಿ ನನ್ನ ಪತ್ನಿಯೆಂದು ಕೊಳ್ಳಲು ಎಷ್ಟು ಮಜವಾಗಿರುತ್ತೆ.'' ಅವರು ಯಾವುದೇ ಸಂಕೋಚವಿಲ್ಲದೆ ಆ ಮಾತುಗಳನ್ನು ಹೇಳಿದರು. ನಾನು ಕಿಟಕಿಯಾಚೆ ನೋಡಿದೆ. ಅಲ್ಲಿ ಅದೇ ಎರಡು ಕಣ್ಣುಗಳು. ಆದರೆ ಈ ಬಾರಿ ಆ ಕಣ್ಣುಗಳಲ್ಲಿ ಒಸರಿದ ಕಂಬನಿ ಗೋಚರವಾಯ್ತು.

''ನೀವು ಬಹಳ ದೊಡ್ಡ ತಪ್ಪು ಮಾಡಿದ್ದೀರಿ ಅದಂಕಾಕ. ನೀವು ಎಂದಾದರೊಂದು ದಿನ ಅದಕ್ಕಾಗಿ ಪಶ್ಚಾತ್ತಾಪ ಪಡಬೇಕು.''

ನನಗೆ ಬಹಳ ಹೊತ್ತು ಅಲ್ಲಿ ನಿಲ್ಲಲಾಗಲಿಲ್ಲ. ಎದ್ದು ಈಚೆ ಬಂದೆ. ಬಾಗಿಲಲ್ಲಿ ಸಲೀಂ ನಿಂತಿದ್ದ.'' ''ನೋಡಿದಿರಾ ಅವರ ಅಟ್ಟಹಾಸ.'' ಆತ ಮೆಲ್ಲಗೆ ಹೇಳಿದ. ನಾನು ತಿರುಗಿ ನೋಡಿದೆ. ತೂಗುಮಂಚ ಜೋರಾಗಿ ತೂಗುತ್ತಿತ್ತು. ಅವರು ವಿಕಟ ಅಟ್ಟಹಾಸದಿಂದ ಜೋರಾಗಿ ನಗುತ್ತಿದ್ದರು. ಅವರ ಬಿಳೀ ಗಡ್ಡ ಅವರ ಮುಖಕ್ಕೆ ಈಗ ಕೆಟ್ಟ ಶೋಭೆಯನ್ನುಂಟುಮಾಡುತ್ತಿತ್ತು. ಒಳಗೆ ಬಿಕ್ಕಿ ಬಿಕ್ಕಿ ಅಳುತ್ತಿರುವ ನರ್ಘೀಮಾಳ ಅಳು. ಸಲೀಂ ಅಂದ.

''ಕೇಳಿದಿರಾ ಆಕೆಯ ಅಳುವನ್ನು ?''

''ಧಡ್.''

ತೂಗುಮಂಚದಿಂದ ಅದಂಕಾಕ ಕೆಳಗೆ ಬಿದ್ದಿದ್ದರು. ''ಅಬ್ಬಜಾನ್'' ಈತ ಅವರ ಬಳಿ ಓಡಿದ. ನಾನು ಅಲ್ಲಿರುವೆನೆಂಬ ಪರಿವೆಯೇ ಇಲ್ಲದೆ ನರ್ಘೀಮಾ ಒಳಗಿನಿಂದ ಓಡಿಬಂದಳು. ನಾನು ನೋಡಿದೆ. ನೋಡುತ್ತಲೇ ಇದ್ದೆ. ''ಅಬ್ಬಾ... ಏನು ಸೌಂದರ್ಯ ಎಂತಹ ಮುಗ್ಧ ರೂಪ'' ಅವಳ ಜೊತೆಗೆ ಬಂದ ಅಲೀಮಮ್ಮ, ಛಿಫಾತುಮ್ಮ ಕೆಳಗೆ ಬಿದ್ದಿದ್ದ ಇವರನ್ನು ಎತ್ತಿ ಕುಳ್ಳಿರಿಸಿದರು. ಇವರಿಗೆ ಸ್ಮೃತಿ ತಪ್ಪಿತ್ತು.

ಮತ್ತೊಂದು ಕ್ಷಣದಲ್ಲಿ ಆಸ್ಪತ್ರೆಯ ಆ್ಯಂಬುಲೆನ್ಸ್ ಅವರನ್ನು ಆಸ್ಪತ್ರೆಗೆ ಹೊತ್ತೊಯ್ದಿತು.

* * *

ಕೆಲವೊಂದು ಸನ್ನಿವೇಶಗಳು ಮನುಷ್ಯನಲ್ಲಿ ಅದ್ಭುತ ಪರಿಣಾಮ ಉಂಟು ಮಾಡುತ್ತದೆ. ಒಬ್ಬ ಕೆಟ್ಟ ವ್ಯಕ್ತಿ ತೀರಾ ಒಳ್ಳೆಯವನಾಗಿಬಿಡುತ್ತಾನೆ.

ನನಗೆ ಅದಂಕಾಕ ಬುಲಾವ್ ಬಂತು. ನನ್ನನ್ನು ಕರೆಯಲು ಬಂದ ಸಲೀಂ ಅಂದ.

''ಅಬ್ಬಾಜಾನ್ ತೀರಾ ಬದಲಾದಂತೆ ಕಾಣುತ್ತಿದೆ.''

''ಅಂದರೆ.''

''ಆಸ್ಪತ್ರೆ ಸೇರಿದ ಮೇಲೆ ನನ್ನನ್ನು ಹತ್ತಿರ ಕರೆದು ಬಹಳಷ್ಟು ಅತ್ತರು. ತಾವು ಮಾಡಿದ ತಪ್ಪುಗಳಿಗೆ ಪ್ರಾಯಶ್ಚಿತ್ತ ಕೇಳಿಕೊಂಡರು.''

''ಒಳ್ಳೆಯ ಪರಿಣಾಮ'' ನಾನೆಂದೆ.

''ಅದಕ್ಕಾಗಿ ಇರಬೇಕು ನಿಮ್ಮನ್ನು ಬರಹೇಳಿದ್ದಾರೆ.''

ನಾನು ಅವನೊಂದಿಗೆ ಆಸ್ಪತ್ರೆಗೆ ಧಾವಿಸಿದೆ. ಅದಂಕಾಕ ಮಲಗಿದ್ದರು. ಅವರ ಕಂಗಳಲ್ಲಿ ಪ್ರೀತಿ ವಾತ್ಸಲ್ಯದ ಛಾಯೆಯಿತ್ತು. ಅವರ ಕಾಲ ಪಕ್ಕದಲ್ಲಿ ಕುಳಿತಿದ್ದ ನಝೀಮಾ ಎದ್ದುನಿಂತು ಬದಿಗೆ ಸರಿದಳು. ನನ್ನನ್ನು ಕಂಡು ಅವರು ಎದ್ದು ಕುಳಿತು ಕೊಳ್ಳುವ ಯತ್ನ ನಡೆಸಿದರು. ಆದರೆ ಅದು ಸಾಧ್ಯವಾಗಲಿಲ್ಲ.

''ಬಾ... ನಿನ್ನೊಡನೆ ಒಂದು ವಿಷಯ ಹೇಳುವುದಿದೆ.''

''ಹೇಳಿ.''

''ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ. ನಝೀಮಾಳಿಗೆ ತಲಾಖ್ ನೀಡಿ ಆಕೆಯ ಮದುವೆಯನ್ನು ಸಲೀಂನೊಂದಿಗೆ ಮಾಡುವುದೆಂದು ನಿರ್ಧರಿಸಿದ್ದೇನೆ.''

ನನಗೆ ವಿಚಿತ್ರವಾದ ಅಚ್ಚರಿಯೆನಿಸಿತು. ನಾನು ಏನು ಆಗಬೇಕೆಂದು ಯೋಚಿಸಿದ್ದೆನೋ ಅದು ನಡೆದಿತ್ತು. ನಾನು ಸಲೀಂನ ಮುಖ ನೋಡಿದೆ. ಆತನ ಮುಖದಲ್ಲಿ ಬೆಳಕಿತ್ತು. ನಝೀಮಾ ನಾಚಿಕೆಯಿಂದ ಕೆಂಪು ಕೆಂಪಾಗಿದ್ದಳು.

# ನವಕರ್ನಾಟಕ ಸಾಹಿತ್ಯ ಕೃತಿಗಳು

## ಕಾದಂಬರಿ

| | | |
|---|---|---|
| ಬೇಡಿ ಕಳಚಿತು ದೇಶ ಒಡೆಯಿತು | *ಕೋ. ಚೆನ್ನಬಸಪ್ಪ* | 600.00 |
| ದಂಗೆ | *ಗೀತಾ ನಾಗಭೂಷಣ* | 65.00 |
| ಮೌನಕ್ರಾಂತಿ | *ದು. ನಿಂ. ಬೆಳಗಲಿ* | 28.00 |
| ಈಶ್ವರ ಅಲ್ಲಾ (2ನೇ ಮುದ್ರಣ) | *ಜಿ. ಕೆ. ಗೋವಿಂದ ರಾವ್* | 20.00 |
| ತಿರುಗಿ ನರಜನ್ಮ | *ಮುದ್ದೂರು ಗೋಪಾಲಕೃಷ್ಣ ನಾಯಕ್* | 70.00 |
| ಬದಿ | *ಇಂದಿರಾ ಹೆಗ್ಗಡೆ* | 50.00 |
| ಸರಕುಗಳು | *ಫಕೀರ್ ಮುಹಮ್ಮದ್ ಕಟ್ಪಾಡಿ* | 15.00 |
| ವ್ಯಾಳಿ | *ಮಲಯಾಳಂ ಮೂಲ : ಜಿ. ಕೆ. ಬಾಲಚಂದ್ರನ್* | 28.00 |
| ಕಡಲ ತೀರದ ಒಂದು ಗ್ರಾಮದ ಕಥೆ | *ತಮಿಳು ಮೂಲ : ತೋಪ್ಪಿಲ್ ಮುಹಮ್ಮದ್ ಮೀರಾನ್* | 80.00 |
| ತಮಸ್ (3ನೇ ಮುದ್ರಣ) | *ಹಿಂದಿ ಮೂಲ : ಭೀಷ್ಮ ಸಾಹನಿ* | 110.00 |
| ಗವಾಕ್ಷಿ | *ಹಿಂದಿ ಮೂಲ : ಭೀಷ್ಮ ಸಾಹನಿ* | 20.00 |
| ಜಯ ಯೌಧೇಯ | *ಹಿಂದಿ ಮೂಲ : ರಾಹುಲ ಸಾಂಕೃತ್ಯಾಯನ* | 70.00 |
| ದಿವೋದಾಸ | *ಹಿಂದಿ ಮೂಲ : ರಾಹುಲ ಸಾಂಕೃತ್ಯಾಯನ* | 30.00 |

## ಕಥಾ ಸಂಕಲನ

| | | |
|---|---|---|
| ಅಮೆರಿಕದ ಕಥೆಗಳು | *ಶಾಂತಾರಾಮ ಸೋಮಯಾಜಿ* | 55.00 |
| ಅರ್ಥಮಂತ್ರಿ ಮತ್ತು ಹಂದಿಗಳು | *ಶಾಂತಾರಾಮ ಸೋಮಯಾಜಿ* | 50.00 |
| ಬಣ್ಣದ ಕಾಲು | *ಜಯಂತ ಕಾಯ್ಕಿಣಿ* | 48.00 |
| ಉರಿದ ಬದುಕು | *ಶಾಂತರಸ* | 60.00 |
| ಮೋಡಗಳಲ್ಲಿ ಮೊದಲ ಹೆಜ್ಜೆ | *(ಸಂಪಾದನೆ, ಅನು: ವೆಂಕಟರಾಜ ಪಾನಸೆ)* | 40.00 |
| ಕುಟ್ಯಕ್ಕ ಮತ್ತು ಇತರ ಕಥೆಗಳು | *ಮಲಯಾಳಂ ಮೂಲ : ಎಂ. ಟಿ. ವಾಸುದೇವನ್ ನಾಯರ್* | 65.00 |
| ಕೃಷ್ಣಚಂದರ ಕಥೆಗಳು | *(ಅನು : ಪಂಚಾಕ್ಷರಿ ಹಿರೇಮಠ)* | 40.00 |
| ಆಲೀಮಾ ಅಕ್ಷರ ಕಲಿತದ್ದು | *ಫಕ್ರುದ್ದೀನ್ ಇರುವೈಲ್* | 55.00 |

## ವೈಜ್ಞಾನಿಕ ಕಾಲ್ಪನಿಕ ಸಾಹಿತ್ಯ

| | | |
|---|---|---|
| ಸೂಪರ್‌ಕ್ಲೋನ್ | *ಮರಾಠಿ ಮೂಲ : ಡಾ|| ಪಂಡಿತ ವಿದ್ಯಾಸಾಗರ* | 45.00 |
| ಭೂಮಿಗೆ ವಿದಾಯ | *ಮರಾಠಿ ಮೂಲ : ಡಾ|| ಬಾಳ ಫೋಂಡ್ಕೆ* | 45.00 |

| | | |
|---|---|---|
| ನೀಲಿ ಕಂದರ | ಡಾ॥ ವಿರೂಪಾಕ್ಷ ಕೆ. ಬಣಕಾರ | 25.00 |
| ವಜ್ರ ವ್ಯಾಮೋಹ | ಡಾ॥ ವಿರೂಪಾಕ್ಷ ಕೆ. ಬಣಕಾರ | 55.00 |

## ಮನೋವೈಜ್ಞಾನಿಕ ಪ್ರಕರಣಗಳು

| | | |
|---|---|---|
| ಅನನ್ಯ ನೆನಪು (2ನೇ ಮುದ್ರಣ) | ಡಾ॥ ಸಿ. ಆರ್. ಚಂದ್ರಶೇಖರ್ | 40.00 |
| ಆರನೆಯ ಇಂದ್ರಿಯ | ಡಾ॥ ಸಿ. ಆರ್. ಚಂದ್ರಶೇಖರ್ | 30.00 |
| ಕಥೆಗಳಾದ ಮನೋವ್ಯಥೆಗಳು | ಡಾ॥ ಸಿ. ಆರ್. ಚಂದ್ರಶೇಖರ್ | 30.00 |
| ಅಗಲಿಕೆಯ ದುಃಖ | ಡಾ॥ ಸಿ. ಆರ್. ಚಂದ್ರಶೇಖರ್ | 30.00 |

## ಆತ್ಮಕಥೆ

| | | |
|---|---|---|
| ಮನೋರೋಗ ಗೆಲ್ಲಬಹುದೇ ? (2ನೇ ಮುದ್ರಣ) | ಸ್ನೇಹಾ | 75.00 |
| ಕುಣೆಯೇ ಘುಮಾ | ಮರಾಠಿ ಮೂಲ : ಮಾಧವಿ ದೇಸಾಯಿ | 55.00 |
| ಉಚಲ್ಯಾ (2ನೇ ಮುದ್ರಣ) | ಮರಾಠಿ ಮೂಲ : ಲಕ್ಷ್ಮಣ ಗಾಯಕವಾಡ | 45.00 |
| ಗಬಾಳ | ಮರಾಠಿ ಮೂಲ : ದಾದಾಸಾಹೇಬ ಮಲ್ಹಾರಿ ಮೋರೆ | 45.00 |
| ಅಕ್ರಮ ಸಂತಾನ (2ನೇ ಮು.) | ಮರಾಠಿ ಮೂಲ : ಶರಣಕುಮಾರ ಲಿಂಬಾಳೆ | 50.00 |

## ಕವನ

| | | |
|---|---|---|
| ತೊಟ್ಟಿಕ್ಕುವ ಪದ್ಯಗಳು | ಡಾ॥ ಆರ್ಕೆ, ಮಣಿಪಾಲ | 25.00 |
| ಭಾನುವಾರವೆಂದರೆ | ಸುಕನ್ಯಾ ಕಳಸ | 20.00 |
| ಗೋದಿಯ ತೆನೆಗಳು | ಸು. ರಂ. ಎಕ್ಕುಂಡಿ | 28.00 |
| ಹೊಕ್ಕಳಲ್ಲಿ ಹೂವಿದೆ (2ನೇ ಮುದ್ರಣ) | ರಂಜಾನ್ ದರ್ಗಾ | 25.00 |
| ಮಿಂಚು-ಗುಡುಗು-ಮಳೆ | ಉಪ್ಪುಂದ ಗಣೇಶ ವೈದ್ಯ | 25.00 |
| ಮುಮ್ತಾಜಳ ಮಹಲು | ಕೆ. ಷರೀಫಾ | 35.00 |

## ನಾಟಕ

| | | |
|---|---|---|
| ಬರ್ಟೋಲ್ಟ್ ಬ್ರೆಖ್ಟ್‌ನ ನಾಟಕ 'ಗೆಲಿಲಿಯೊ' (4ನೇ ಮುದ್ರಣ) (ಅನು : ಡಾ॥ ಎಚ್. ಕೆ. ರಾಮಚಂದ್ರಮೂರ್ತಿ, ಪ್ರೊ॥ ಜೆ. ಆರ್. ಲಕ್ಷ್ಮಣರಾವ್) | | 28.00 |
| ಪೂರ್ಣಚಂದ್ರ ತೇಜಸ್ವಿಯವರ 'ಕಿರಿಗೂರಿನ ಗಯ್ಯಾಳಿಗಳು' | ಆ. ನಾ. ರಾವ್ ಜಾದವ್ | 28.00 |
| ದಲಿತಲೋಕ | ಎಸ್. ಮಾಲತಿ | 10.00 |
| ಮಹಾಚೈತ್ರ (7ನೇ ಮುದ್ರಣ) | ಎಚ್. ಎಸ್. ಶಿವಪ್ರಕಾಶ್ | 28.00 |
| ಹಾನೂಶ್ | ಹಿಂದಿ ಮೂಲ : ಭೀಷ್ಮ ಸಾಹನಿ | 25.00 |
| ಪರಿಹಾರ | ಹಿಂದಿ ಮೂಲ : ಭೀಷ್ಮ ಸಾಹನಿ | 50.00 |

''ನೋಡು ನನ್ನ ಪುಟ್ಟ ಮೋಳೇ, ಇದು ನಿನ್ನ ಅಪ್ಪನ ಹೆಸರು, ಮತ್ತು ನಿನ್ನ ಅಮ್ಮನ ಹೆಸರು! ಈಗ ನಿನ್ನ ಹೆಸರನ್ನು ಬರೆಯುತ್ತೇನೆ'' ಎಂದು 'ನಸೀಮಾ' ಎಂದು ಬರೆದಳು. ಮಗು ಕೇಕೆ ಹಾಕಿತು.

ಅಲೀಮಾ ಅಕ್ಷರ ಲೋಕದ ಪರಿಚಯ ಮಾಡಿಕೊಂಡು ಅನುಭವಿಸಿದ ರೋಮಾಂಚನವನ್ನು ಇಷ್ಟು ಸರಳವಾಗಿ, ಪರಿಣಾಮಕಾರಿಯಾಗಿ ಹೇಳುವ ಕಥೆ 'ಅಲೀಮಾ ಅಕ್ಷರ ಕಲಿತದ್ದು!'

ಈ ಸಂಕಲನದಲ್ಲಿ ಬ್ಯಾರಿಗಳ ಬದುಕಿನ ಸುತ್ತ ಹೆಣೆದ ಇಂಥವೇ ಹಲವು ಪರಿಣಾಮಕಾರಿ ಕಥೆಗಳಿವೆ. ಒಂದು ಹುಡುಗಿಯ ಕಥೆ, ಇಸ್ಲಾಮೀಪುರದಲ್ಲೊಂದು ಯಕ್ಷಗಾನ, ಗರ್ಭ, ವರದಕ್ಷಿಣೆ, ತಾಯಿ, ವಾರಸುದಾರರು, ಝುಬೇದಾ, ದಾರಿ ಮುಂತಾದ ಕಥೆಗಳನ್ನು ಹೆಸರಿಸಬಹುದು. ಲೇಖಕರು ತಮ್ಮ ದಟ್ಟ ಅನುಭವಗಳನ್ನು ಈ ಕಥೆಗಳಲ್ಲಿ ಚಿತ್ರಿಸಿದ್ದಾರೆ.

ಈ ಸಂಕಲನದ ಲೇಖಕರಾದ ಶ್ರೀ ಪಕ್ರುದ್ದೀನ್ ಇರುವೈಲ್ ಹಲವು ವರ್ಷಗಳಿಂದಲೂ ಪತ್ರಿಕೆಗಳಲ್ಲಿ ಸಣ್ಣ ಕಥೆಗಳನ್ನು ಪ್ರಕಟಿಸುತ್ತ ಓದುಗರಿಗೆ ಸಾಕಷ್ಟು ಪರಿಚಿತರಾಗಿದ್ದಾರೆ.

ರೂ. 55

ISBN 81-7302-476-6